ಶನಿವಾರ, ಸೆಪ್ಟೆಂಬರ್ 10, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ನವದೆಹಲಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಜಹಾ ಚಾರ್ ಯಾರ್' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಸ್ವರ ಭಾಸ್ಕರ್ ಪಾಲ್ಗೊಂಡಿದ್ದರು

080 4568 1155

RERA Registered: Karnataka RERA Registration Number:
PARKWEST-CEDAR-TOWER 8-PRM/KA/RERA/1251/310/PR/180122/004645
For more details, visit: https://rera.karnataka.gov.in

Buying a home at Cedar in Parkwest 2.0 is now a BIGGER deal.

2.5 BHK	₹1.62CR.*	3 BHK	₹1.96CR.*

onwards

Shapoorji Pallonji
PARKWEST 2.0
Binnypet, Bengaluru

ಪಾರ್ಕ್‌ವೆಸ್ಟ್ 2.0

CREDAI BENGALURU

Note: Note: The project development and marketing is managed by Shapoorji Pallonji Development Managers Pvt. Ltd. (RERA Karnataka Registration Number PRM/KA/RERA/1251/310/PR/180122/004645) in collaboration with the promoter, Relationship Properties Pvt. Ltd. This material does not constitute an offer and/or contract of any type. Any prospective sale shall be governed by the terms and Agreement for Sale to be entered into between the parties. Before making a decision to purchase, customers are requested to independently, either directly or through customers' legal/financial advisors, thoroughly verify all details/documents pertaining to the project. Images used are stock images or artist's impressions and are for reference purpose only. Images are digitally enhanced, unless otherwise mentioned. No photos have been shot at site unless mentioned otherwise. Products, features, equipment, furniture, furnishings, light fittings etc. shown in the render are illustrations for reference only and are not part of the flat to be sold to the customers. The colors, shades of walls, tiles etc. shown in the images are for the purpose of representation only and may vary upon actual construction. Appearance of landscape will depend on seasonal changes and weather conditions. The representation of plants/trees/plantation/flowers in the image are shown as fully grown in healthy conditions. The growing time of the plantation may vary depending upon the type and species. Please note that the project is being developed in phases and hence a few of the common amenities and facilities shown, will be completed along with the completion of all phases in the project, subject to approval from the relevant authorities. This project is a part of the proposed larger development, and the entire development will be carried out in a phased manner by the promoter. The promoter is not the manufacturer/supplier of the security & home automation products and electric vehicle charging systems mentioned herein and makes no representation in relation to the same. These products are subject to standard warranties as may be provided by the applicable manufacturer/supplier. *The starting price mentioned is for a 2.5 BHK Series 3 on the 19th floor and 3 BHK – Series 1 on the first floor of Cedar Tower (T8) and is based on the Construction Linked Payment plan. Other charges like clubhouse development, advance building maintenance charges, corpus fund building maintenance, campus maintenance corpus fund, clubhouse corpus fund towards association, reimbursement of legal expenses incurred and Government levies/taxes are extra. Other Terms & Conditions apply. Please contact the sales office to know more. #This is a flexi pay and construction linked Bank Subvention Scheme offered by Yes Bank having Pre-EMI holiday till 30th September 2026. This scheme is for select units in Cedar Tower (T8) for a limited period and is subject to eligibility. The customer contribution of 20% in addition to the initial contribution of 5% will be payable based on payment schedule/plan. Other Terms & Conditions apply. Please contact us to know more. Calls may be recorded and used for record-keeping, quality assurance and training purposes.

ಶನಿವಾರ, ಸೆಪ್ಟೆಂಬರ್ 10, 2022 | ₹ 6.00

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಣ್ಣದೋಕುಳಿ

ದೆಹಲಿಯಲ್ಲಿ ಶುಕ್ರವಾರ ನಡೆದ ಗಣೇಶ ಮೂರ್ತಿ ವಿಸರ್ಜನಾ ಕಾರ್ಯಕ್ರಮದಲ್ಲಿ ಬಾಲಕಿಯೊಬ್ಬಳು ಬಣ್ಣದೋಕುಳಿಯಲ್ಲಿ ಕಾಣಿಸಿದ್ದು ಹೀಗೆ

ಸರ್ವರ ವಿಕಾಸ, ಸಮೃದ್ಧ ಕರ್ನಾಟಕದತ್ತ ದೃಢ ಹೆಜ್ಜೆಗಳು



ಕೃಷಿ ಹಾಗೂ ತೋಟಗಾರಿಕೆ

- ರೈತರ ಬಲವರ್ಧನೆಗಾಗಿ ಸೆಕಂಡರಿ ಕೃಷಿ ನಿರ್ದೇಶನಾಲಯ ಸ್ಥಾಪನೆ
- ರೈತ ಶಕ್ತಿ ಯೋಜನೆ: ಕೃಷಿ ಯಂತ್ರೋಪಕರಣಗಳ ಬಳಕೆ ಪ್ರೋತ್ಸಾಹಿಸಲು ಎಕರೆಗೆ 250/– ರೂ.ಗಳಂತೆ ಡೀಸಲ್‌ಗೆ ಸಹಾಯಧನ. ರೂ. 500 ಕೋಟಿ ಅನುದಾನ.
- ಪಿಎಂ ಕಿಸಾನ್ ಸಮ್ಮಾನ್ ನಿಧಿ (ರಾಜ್ಯ ಸರ್ಕಾರ): 2021–22ನೇ ಸಾಲಿನಲ್ಲಿ 50.35 ಲಕ್ಷ ರೈತರಿಗೆ ರೂ.1,975.12 ಕೋಟಿ ವಿತರಣೆ. 2022–23ನೇ ಸಾಲಿನಲ್ಲಿ 47.83 ಲಕ್ಷ ರೈತರಿಗೆ ರೂ.956.71 ಕೋಟಿ ಡಿಬಿಟಿ ಮೂಲಕ ವರ್ಗಾವಣೆ
- ಕೇಂದ್ರ ಸರ್ಕಾರದಿಂದ ಒದಗಿಸುವ ರೂ.6,000 ಸಹಾಯಧನದ ಜೊತೆಗೆ ರಾಜ್ಯ ಸರ್ಕಾರದಿಂದ ರೂ.4,000 ಸಹಾಯಧನ
- ಕೃಷಿ ಯಾಂತ್ರೀಕರಣ, ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳಿಗೆ ರೂ.483.56 ಕೋಟಿಗಳ ಸಹಾಯಧನ ವಿತರಣೆ. 4.54 ಲಕ್ಷ ರೈತರಿಗೆ ಪ್ರಯೋಜನ.
- ದ್ರಾಕ್ಷಿ ಅಭಿವೃದ್ಧಿ ಮತ್ತು ದ್ರಾಕ್ಷಾರಸ ಮಂಡಳಿ ಸ್ಥಾಪನೆ

ವಿದ್ಯಾನಿಧಿ ಯೋಜನೆ

ರೈತರು, ಮೀನುಗಾರರು, ಹಳದಿ ಬೋರ್ಡ್ ಟ್ಯಾಕ್ಸಿ ಚಾಲಕರು, ಭೂರಹಿತ ಕೃಷಿ ಕಾರ್ಮಿಕರು ಹಾಗೂ ನೇಕಾರರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ರೈತ ವಿದ್ಯಾನಿಧಿ ಯೋಜನೆ

ಯೋಜನೆ	ಫಲಾನುಭವಿಗಳ ಸಂಖ್ಯೆ	ಅನುದಾನ (ರೂ.ಕೋಟಿ)
ರೈತರ ಮಕ್ಕಳು	10,03,738	441
ಭೂಮಿರಹಿತ ಕಾರ್ಮಿಕರ ಮಕ್ಕಳು	6,00,000	360
ಮೀನುಗಾರರ ಮಕ್ಕಳು	79,440	40
ನೇಕಾರರ ಮಕ್ಕಳು	11,000	5
ಟ್ಯಾಕ್ಸಿ ಚಾಲಕರ ಮಕ್ಕಳು	2,50,000	129
ಆಟೋ ಚಾಲಕರ ಮಕ್ಕಳು	1,00,000	73
ಒಟ್ಟು	**20,44,178**	**1,047**

ಸ್ತ್ರೀ ಸಾಮರ್ಥ್ಯ ಯೋಜನೆ

- 33,333 ಸ್ವಸಹಾಯ ಗುಂಪುಗಳಿಗೆ ಉದ್ಯಮಶೀಲತೆಯನ್ನು ಮತ್ತಷ್ಟು ವೃದ್ಧಿಪಡಿಸಲು ತಲಾ ರೂ.1.5 ಲಕ್ಷದಂತೆ ಒಟ್ಟು ರೂ.500 ಕೋಟಿ ಸಮುದಾಯ ಬಂಡವಾಳ ನಿಧಿ ಬಿಡುಗಡೆ. ಸುಮಾರು 3.9 ಲಕ್ಷ ಮಹಿಳೆಯರಿಗೆ ಅನುಕೂಲ.

ಪರಿಶಿಷ್ಟ ಜಾತಿ–ಪಂಗಡಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರ ಕಲ್ಯಾಣ

- SCSP/TSP ಯೋಜನೆಗಳಿಗೆ ರೂ. 28,234 ಕೋಟಿ ಮೀಸಲು
- ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಅಭಿವೃದ್ಧಿ ನಿಗಮಗಳ ಯೋಜನೆಗಳಿಗೆ ಮೂಲ ಅನುದಾನ ರೂ.580.19 ಕೋಟಿ. ಹೆಚ್ಚುವರಿ ಅನುದಾನ. ರೂ.410 ಕೋಟಿ. ಒಟ್ಟು ರೂ.990.19 ಕೋಟಿ
- ಬಡತನ ರೇಖೆಗಿಂತ ಕೆಳಗಿರುವ ಪ.ಜಾತಿ/ಪಂಗಡಗಳಿಗೆ 75 ಉಚಿತ ವಿದ್ಯುತ್ ಯೂನಿಟ್‌ಗಳು
- ಲೋಕೋಪಯೋಗಿ ಇಲಾಖೆ SCSP/TSP ಯೋಜನೆಯಡಿ ಒದಗಿಸಿದ ಅನುದಾನದಿಂದ ರೂ. 750 ಕೋಟಿ ವೆಚ್ಚದಲ್ಲಿ 100 ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಲಯ ಹಾಗೂ 10 KREIS (ವಸತಿ ಶಾಲೆಗಳ) ಕಟ್ಟಡಗಳ ನಿರ್ಮಾಣ.

ಹಿಂದುಳಿದ ವರ್ಗಗಳ ಕಲ್ಯಾಣ

- ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಗೆ 2022–23ನೇ ಸಾಲಿಗೆ ರೂ.2,249.66 ಕೋಟಿ ಹಂಚಿಕೆ
- ಎಲ್ಲಾ ನಿಗಮಗಳಿಗೆ 2022–23ನೇ ಸಾಲಿಗೆ ರೂ.478.09 ಕೋಟಿ ಹಂಚಿಕೆ
- 165 ಕೋಟಿ ರೂ. ವೆಚ್ಚದಲ್ಲಿ ಬಾಡಿಗೆ ಕಟ್ಟಡಗಳಲ್ಲಿರುವ ಹಿಂದುಳಿದ ವರ್ಗಗಳ 50 "ಕನಕದಾಸ" ವಿದ್ಯಾರ್ಥಿನಿಲಯಗಳಿಗೆ ಸುಸಜ್ಜಿತ ಕಟ್ಟಡ ನಿರ್ಮಾಣ.

ಮಹಿಳಾ–ಮಕ್ಕಳ ಕಲ್ಯಾಣ

- ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ರೂ.42.5 ಕೋಟಿ ವೆಚ್ಚ.
- ಸ್ವಂತ ಕಟ್ಟಡಗಳಿಲ್ಲದಿರುವ 1,000 ಅಂಗನವಾಡಿಗಳಿಗೆ ಕಟ್ಟಡ ನಿರ್ಮಿಸಲು ಅನುಮೋದನೆ. ರೂ.60 ಕೋಟಿ ಹಂಚಿಕೆ.

ಸಾಮಾಜಿಕ ಭದ್ರತೆ

- ಸಂಧ್ಯಾ ಸುರಕ್ಷಾ, ಮನಸ್ವಿನಿ ಮತ್ತು ಮೈತ್ರಿ ಯೋಜನೆ, ವಿಧವೆಯರು ಹಾಗೂ ವಿಶೇಷಚೇತನರು, ಮಂಗಳಮುಖಿಯರು ಹಾಗೂ ವಿಚ್ಛೇದಿತ/ಅವಿವಾಹಿತ ಮಹಿಳೆಯರ ಮಾಸಿಕ ಪಿಂಚಣಿ/ಮಾಸಾಶನ ಮೊತ್ತ ರೂ.200 ರಷ್ಟು ಹೆಚ್ಚಳ.
- ಒಟ್ಟಾರೆ 74.22 ಲಕ್ಷ ಜನರಿಗೆ ಅನುಕೂಲ
- ಆಶಾ, ಅಂಗನವಾಡಿ ಕಾರ್ಯಕರ್ತೆಯರು /ಸಹಾಯಕರು, ಬಿಸಿಯೂಟ ತಯಾರಕರು/ ಸಹಾಯಕರು, ಗ್ರಾಮ ಸಹಾಯಕರ ಗೌರವಧನ ರೂ.1,000 ರಷ್ಟು ಹೆಚ್ಚಳ.

ಶಿಕ್ಷಣ

- ದೇಶದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 ಅನುಷ್ಠಾನಗೊಳಿಸಿದ ಮೊದಲ ರಾಜ್ಯ
- ರಾಜ್ಯದ 7 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜುಗಳಾಗಿ ಉನ್ನತೀಕರಣ
- ರಾಜ್ಯದ 150 ಐಟಿಐಗಳನ್ನು ತಂತ್ರಜ್ಞಾನ ಸಂಸ್ಥೆಗಳಾಗಿ ಉನ್ನತೀಕರಣ. ರೂ.4,736 ಕೋಟಿ
- 1,240 ಪ್ರಾಧ್ಯಾಪಕರು, 15,000 ಶಾಲಾ ಶಿಕ್ಷಕರ ನೇಮಕಾತಿ
- 8101 ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ತರಗತಿಗಳನ್ನು ನಿರ್ಮಾಣ ಮಾಡಲು ಕ್ರಮ. ರೂ.1,412 ಕೋಟಿ. 3 ಲಕ್ಷ ಮಕ್ಕಳಿಗೆ ಲಾಭ.

ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ

- ದ್ವಿತಳಿ ಬಿತ್ತನೆ ಗೂಡಿಗೆ ಕೆಜಿಗೆ ರೂ. 50 ಪ್ರೋತ್ಸಾಹಧನ ಹೆಚ್ಚಳ; ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಪ್ರೋತ್ಸಾಹಧನ.
- ಪ್ರತಿ ಟನ್ ದ್ವಿತಳಿ ರೇಷ್ಮೆ ಗೂಡಿಗೆ ರೂ. 10,000 ಪ್ರೋತ್ಸಾಹಧನ.
- ದ್ವಿತಳಿ ಮೊಟ್ಟೆ ಉತ್ಪಾದಿಸಿ ಶೈತೀಕರಿಸಲು ಮದ್ದೂರು, ರಾಣೆಬೆನ್ನೂರು, ದೇವನಹಳ್ಳಿಯಲ್ಲಿ ರೂ. 15 ಕೋಟಿ ವೆಚ್ಚದಲ್ಲಿ ಶೈತ್ಯಾಗಾರ ನಿರ್ಮಾಣ.

ಆರೋಗ್ಯ–ಕುಟುಂಬ ಕಲ್ಯಾಣ

- ಕೋವಿಡ್ ನಿಯಂತ್ರಣಕ್ಕಾಗಿ ವಿಶೇಷ ಕ್ರಮ. 11.56 ಕೋಟಿ ಕೋವಿಡ್ ಲಸಿಕೆಗಳ ಪೂರೈಕೆ
- ಪ್ರಮುಖ ನಗರಗಳಲ್ಲಿ 438 'ನಮ್ಮ ಕ್ಲಿನಿಕ್'ಗಳ ಆರಂಭ
- ಸಮುದಾಯ ಆರೋಗ್ಯ ಕೇಂದ್ರಗಳಾಗಿ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳ (71 ಉತ್ತರ ಕರ್ನಾಟಕ ಭಾಗದಲ್ಲಿ) ಉನ್ನತೀಕರಣ.

ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ

- ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ: ಪ್ರತಿ ಗ್ರಾಮ ಪಂಚಾಯತಿಗೊಂದರಂತೆ ಒಟ್ಟು 27,395 'ಸ್ವಾಮಿ ವಿವೇಕಾನಂದ ಸ್ವಸಹಾಯ ಗುಂಪು'ಗಳನ್ನು ರಚಿಸಿ ಸ್ವಯಂ ಉದ್ಯೋಗ ಹಾಗೂ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಯುವಕರನ್ನು ಪ್ರೋತ್ಸಾಹಿಸುವುದು.
- 65 ಲಕ್ಷ ಗ್ರಾಮೀಣ ಯುವಕರಿಗೆ ಕೌಶಲ್ಯ ತರಬೇತಿ ಗುರಿ.

ಸಹಕಾರ ಸಮೃದ್ಧಿ

- ಸಹಕಾರ ಸಂಘಗಳ ಮೂಲಕ 30.85 ಲಕ್ಷ ರೈತರಿಗೆ ರೂ. 20,810 ಕೋಟಿ ಸಾಲ ವಿತರಣೆ ಗುರಿ. ಈವರೆಗೆ 28.42 ಲಕ್ಷ ರೈತರಿಗೆ ರೂ.20,971.79 ಕೋಟಿ ಸಾಲ ವಿತರಣೆ. ಶೇ.101 ರಷ್ಟು ಪ್ರಗತಿ ಸಾಧನೆ.
- "ಯಶಸ್ವಿನಿ" ಯೋಜನೆ ಪರಿಷ್ಕರಿಸಿ ಮರು ಜಾರಿಗೆ ನಿರ್ಧಾರ. ರಾಜ್ಯ ಸರ್ಕಾರದಿಂದ ರೂ. 300 ಕೋಟಿ
- ಕ್ಷೀರಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸುವ ಯೋಜನೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

- 750 ಗ್ರಾಮ ಪಂಚಾಯತಿಗಳಲ್ಲಿ ಅಮೃತ ಗ್ರಾಮ ಪಂಚಾಯತಿ ಯೋಜನೆ ಜಾರಿ.
- ಪಿ.ಎಂ.ಜಿ.ಎಸ್.ವೈ. ಯೋಜನೆಯಡಿ ರೂ.1,500 ಕೋಟಿಗಳ ವೆಚ್ಚ ಭರಿಸಿ, 2,229 ಕಿ.ಮೀ. ರಸ್ತೆಗಳ ಅಭಿವೃದ್ಧಿ. 30 ಸೇತುವೆಗಳ ನಿರ್ಮಾಣ.
- 'ಮನೆ ಮನೆಗೆ ಗಂಗೆ' ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದಲ್ಲಿ ಒಟ್ಟಾರೆಯಾಗಿ 52.78 ಲಕ್ಷ ಮನೆಗಳಿಗೆ ನಳ ಸಂಪರ್ಕ ಒದಗಿಸಲಾಗಿದ್ದು, ಕಳೆದ ಒಂದು ವರ್ಷದ ಅವಧಿಯಲ್ಲಿ 22.85 ಲಕ್ಷ ಮನೆಗಳಿಗೆ ನಳ ಸಂಪರ್ಕ ಒದಗಿಸಲಾಗಿದೆ.

ಪುಣ್ಯಕೋಟಿ ದತ್ತು ಯೋಜನೆ

- ಗೋಶಾಲೆಗಳಲ್ಲಿನ ಜಾನುವಾರುಗಳನ್ನು ಸಾರ್ವಜನಿಕರು, ಖಾಸಗಿ ಸಂಸ್ಥೆಗಳು ವಾರ್ಷಿಕ ರೂ.11,000 ಮೊತ್ತಕ್ಕೆ ದತ್ತು ಪಡೆಯುವ ಪುಣ್ಯಕೋಟಿ ದತ್ತು ಯೋಜನೆ ಜಾರಿ.

ಶಾಲೆ–ಕಾಲೇಜುಗಳಲ್ಲಿ ಶೌಚಾಲಯಗಳ ನಿರ್ಮಾಣ

ರೂ. 250 ಕೋಟಿ ವೆಚ್ಚದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆ, ಕಾಲೇಜುಗಳಲ್ಲಿ ಶೇ.100 ರಷ್ಟು ಶೌಚಾಲಯಗಳ ನಿರ್ಮಾಣ

ವಸತಿ

- ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) – ಸರ್ವರಿಗೂ ಸೂರು ಯೋಜನೆಯಡಿ ರೂ.10,975.98 ಕೋಟಿ ಮೊತ್ತದಲ್ಲಿ 1,80,253 ಮನೆಗಳ ನಿರ್ಮಾಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುಮೋದನೆ

ಚಿಕ್ಕಬಳ್ಳಾಪುರ ಜಿಲ್ಲೆ

- ರೂ.600 ಕೋಟಿ ವೆಚ್ಚದಲ್ಲಿ ಚಿಕ್ಕಬಳ್ಳಾಪುರದಲ್ಲಿ ನಿರ್ಮಾಣವಾಗುತ್ತಿರುವ ವೈದ್ಯಕೀಯ ಕಾಲೇಜು ಕಾಮಗಾರಿಗಳು ಪ್ರಗತಿಯಲ್ಲಿ
- ಚಿಕ್ಕಬಳ್ಳಾಪುರ ಮತ್ತು ಮಂಚೇನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ 4,500 ಎಕರೆ ಭೂಪ್ರದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ರೂ.2,988.46 ಕೋಟಿ ಬಂಡವಾಳ ಹೂಡಿಕೆಗೆ ಅನುಮೋದನೆ. 3686 ಜನರಿಗೆ ಉದ್ಯೋಗಾವಕಾಶ
- ಕೈಗಾರಿಕಾ ಟೌನ್‌ಷಿಪ್ ನಿರ್ಮಾಣಕ್ಕೆ ಕ್ರಮ
- ಹೆಚ್.ಎನ್. ವ್ಯಾಲಿ ನೀರಾವರಿ ಯೋಜನೆ ಮೂಲಕ ಜಿಲ್ಲೆಯ 44 ಕೆರೆಗಳನ್ನು ತುಂಬಿಸಲು ಯೋಜನೆ
- ಜಿಲ್ಲೆಯ ಹೈನು ರೈತರ ಶ್ರೇಯೋಭಿವೃದ್ಧಿಗಾಗಿ ಜೂನ್ 22, 2022 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ಚಿಮುಲ್) ಸಹಕಾರ ಸಂಘಗಳ ಕಾಯ್ದೆಯಡಿ ಅಧಿಕೃತವಾಗಿ ನೋಂದಣಿ.
- ನಂದಿ ಬೆಟ್ಟದಲ್ಲಿ ರೂ. 93 ಕೋಟಿ ವೆಚ್ಚದಲ್ಲಿ ರೋಪ್‌ವೇಗೆ ಅನುಮೋದನೆ.
- ಚಿಕ್ಕಬಳ್ಳಾಪುರ ನಗರಕ್ಕೆ ಹೊಂದಿಕೊಂಡಿರುವ ಕಂದವಾರ ಕೆರೆ ಬಳಿ ಕೆ.ಆರ್.ಎಸ್ ಬೃಂದಾವನ ಮಾದರಿಯಲ್ಲಿ ಎಕೋ ಥೀಮ್ ಪಾರ್ಕ್‌ನ್ನು ರೂ.8.10 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಅತೀ ಶೀಘ್ರದಲ್ಲೇ ಲೋಕಾರ್ಪಣೆಯಾಗಲಿದೆ.
- ಚಿಕ್ಕಬಳ್ಳಾಪುರ ಜಿಲ್ಲೆ ಪ್ರವಾಸೋದ್ಯಮ ಅಭಿವೃದ್ಧಿಗೆ ಅಂದಾಜು ರೂ.5.00 ಕೋಟಿ ಮೊತ್ತದ ಕಾಮಗಾರಿಗಳು ಪೂರ್ಣ
- 2018–19ನೇ ಸಾಲಿನಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿ ಪ್ರತಿಷ್ಠಿತ ಸೀಮ್ಯಾಕ್ ಸಂಸ್ಥೆ ನೀಡುವ ವಿಶೇಷ ಪ್ರಶಸ್ತಿ. 2019–20ನೇ ಸಾಲಿನಲ್ಲಿ ದ್ವಿತೀಯ ಬಹುಮಾನ ಹಾಗೂ ರೂ.75,000 ನಗದು ಪುರಸ್ಕಾರ.

ಕೋಲಾರ ಜಿಲ್ಲೆ

- ಬಿಜಿಎಮ್‌ಎಲ್‌ನ 900 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಟೌನ್‌ಷಿಪ್ ನಿರ್ಮಾಣಕ್ಕೆ ಯೋಜನೆ
- ಕೋಲಾರ ಜಿಲ್ಲೆಯ ಕೆರೆಗಳನ್ನು ತುಂಬಿಸುವ ಕೆ.ಸಿ. ಕಣಿವೆ (ಕೋರಮಂಗಲ–ಛಲ್ಲಘಟ್ಟ) ಯೋಜನೆ ಎರಡನೇ ಹಂತದ ಕಾಮಗಾರಿಗಳಿಗೆ ರೂ.455 ಕೋಟಿ ಅನುಮೋದನೆ
- ಶಿಡ್ಲಘಟ್ಟ ತಾಲ್ಲೂಕಿನ ಅಮರಾವತಿ ಗ್ರಾಮದ ಬಳಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ನಿರ್ಮಾಣ ಮಾಡಲು ರೂ.23 ಕೋಟಿ.
- ಶ್ರೀನಿವಾಸಪುರ, ಮಾಲೂರು, ಕೆಜಿಎಫ್‌ಗಳಲ್ಲಿ "ನಮ್ಮ ಕ್ಲಿನಿಕ್"ಗಳು ಕಾರ್ಯನಿರ್ವಹಿಸುತ್ತಿವೆ

ಬೆಂಗಳೂರು ಗ್ರಾಮಾಂತರ

- 2022ರ ಜೂನ್ ಅಂತ್ಯಕ್ಕೆ 527 ಹಳ್ಳಿಗಳಲ್ಲಿ 14,125 ಎಕರೆಗಳಲ್ಲಿ 6396 ರೇಷ್ಮೆ ಬೆಳೆಗಾರರಿಂದ ರೇಷ್ಮೆ ಕೃಷಿ. ಹೊಸದಾಗಿ 374 ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ನಾಟಿ ಮಾಡಲಾಗಿದೆ.
- 2022ರ ಜುಲೈ 15ರ ಅಂತ್ಯಕ್ಕೆ ದ್ವಿತಃ ಚಾಕಿ ಸಾಕಾಣಿಕಾ ಕಾರ್ಯಕ್ರಮದಡಿ 639 ರೇಷ್ಮೆ ಬೆಳೆಗಾರರಿಗೆ ರೂ.10.65 ಲಕ್ಷ ಪ್ರೋತ್ಸಾಹಧನ
- ಒಂದು ಜಿಲ್ಲೆ, ಒಂದು ಉತ್ಪನ್ನ ಯೋಜನೆಯಡಿ 'ಕೋಳಿ ಉತ್ಪನ್ನ' ಕಿರು ಸಂಸ್ಕರಣಾ ಉದ್ದಿಮೆಗಳಿಗೆ ಪ್ರೋತ್ಸಾಹ. ಈವರೆಗೆ ಒಟ್ಟು 22 ಅರ್ಜಿದಾರರಿಗೆ ರೂ.4.14 ಕೋಟಿ ಬ್ಯಾಂಕ್‌ನಿಂದ ಮಂಜೂರು.

ತುಮಕೂರು ಜಿಲ್ಲೆ

- ವಸಂತನರಸಾಪುರ ಕೈಗಾರಿಕಾ ಪ್ರದೇಶ 4ನೇ ಹಂತದಲ್ಲಿ 1722 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿ ಪಡಿಸಲು ಸಿ.ಬಿ.ಐ.ಸಿ ವತಿಯಿಂದ ರೂ.800.00 ಕೋಟಿ ಟೆಂಡರ್ ಪ್ರಗತಿಯಲ್ಲಿರುತ್ತದೆ.
- 2021–22ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ 7830 ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳು ನೋಂದಣಿಯಾಗಿದ್ದು, ರೂ.1751.81 ಕೋಟಿ ಬಂಡವಾಳದಲ್ಲಿ 87376 ಉದ್ಯೋಗವಕಾಶವನ್ನು ಒದಗಿಸಲಾಗಿರುತ್ತದೆ.
- ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಹಾಗೂ ಕುಡಿಯುವ ನೀರಿನ ಸಲುವಾಗಿ 250 ಕೋಟಿ ರೂ. ವೆಚ್ಚದಲ್ಲಿ ತಾಲ್ಲೂಕಿನಲ್ಲಿ ಹಾದು ಹೋಗಿರುವ ಎತ್ತಿನಹೊಳೆ ಯೋಜನೆಯಿಂದ 108 ಕೆರೆಗಳು ಹಾಗೂ ಭದ್ರಾ ಮೇಲ್ದಂಡೆಯಿಂದ 23 ಕೆರೆಗಳನ್ನು ತುಂಬಿಸಲು ಉದ್ದೇಶಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲಿರುತ್ತದೆ.
- ತೆಂಗು ಆಧಾರಿತ ಹಾಗೂ ತೆಂಗಿನ ನಾರಿನ ಆಧಾರಿತ ಕೈಗಾರಿಕೆಗಳಿಗೆ ಕರ್ನಾಟಕ ಸರ್ಕಾರದ ಕಲ್ಪವೃಕ್ಷ ಕಾಯಕ ಯೋಜನೆ ಜಾರಿಗೆ ತಂದಿದ್ದು, ಈ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಹೆಚ್ಚು ಒತ್ತು ನೀಡಲಾಗುತ್ತಿದೆ.

ಎತ್ತಿನಹೊಳೆ ಯೋಜನೆಗೆ ವೇಗದ ಸ್ಪರ್ಶ

ಚಿಕ್ಕಬಳ್ಳಾಪುರ, ಕೋಲಾರ, ಬೆಂ.ಗ್ರಾಮಾಂತರ ಸೇರಿದಂತೆ ಬಯಲುಸೀಮೆ ಜಿಲ್ಲೆಗಳಿಗೆ ಶಾಶ್ವತ ಕುಡಿಯುವ ನೀರು ಒದಗಿಸುವ ಎತ್ತಿನಹೊಳೆ ಯೋಜನೆಗೆ ರಾಷ್ಟ್ರೀಯ ಯೋಜನೆ ಸ್ಥಾನಮಾನ ಒದಗಿಸಲು ಕೇಂದ್ರಕ್ಕೆ ಮನವಿ ಮಾಡಿದ್ದು, ಶೀಘ್ರದಲ್ಲಿ ದೊರೆಯುವ ವಿಶ್ವಾಸವಿದೆ.

ಬಿಜೆಪಿ–ಕರ್ನಾಟಕ

ಕಲಬುರಗಿ, ಬೀದರ್, ಉಡುಪಿ, ಉತ್ತರ ಕನ್ನಡದಲ್ಲಿ ಮುಂದುವರಿದ ಮಳೆ • ಸಂತ್ರಸ್ತರ ಪರದಾಟ

ಮಳೆ: ಇಬ್ಬರು ಸಾವು, ಯುವತಿ ನೀರುಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಳೆ ಅವಘಡದಿಂದ ಶುಕ್ರವಾರ ಮಹಿಳೆ ಸೇರಿ ಇಬ್ಬರು ಮೃತಪಟ್ಟಿದ್ದು, ಯುವತಿಯೊಬ್ಬರು ಹಳ್ಳದಲ್ಲಿ ಕೊಚ್ಚಿಹೋಗಿದ್ದಾರೆ. ಕಲಬುರಗಿ, ಉಡುಪಿ, ಉತ್ತರ ಕನ್ನಡ ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಮಳೆ ತುಸು ಬಿಡುವು ನೀಡಿದೆ.

ಉಳಿದ ಜಿಲ್ಲೆಗಳಲ್ಲಿ ಮಳೆ ಬಿಡುವು ನೀಡಿದ್ದು, ಧಾರಾಕಾರ ಮಳೆ ಹಾಗೂ ಪ್ರವಾಹದಿಂದಾದ ಅಧ್ವಾನಗಳ ಹಿನ್ನೆಲೆಯಲ್ಲಿ ಸಂತ್ರಸ್ತರು ನೆರವಿಗಾಗಿ ಪರದಾಡುವ ಸ್ಥಿತಿ ಇದೆ.

ಬಾಗಲಕೋಟೆ ಜಿಲ್ಲೆ ಜಮಖಂಡಿಯಲ್ಲಿ ಮರ ಉರುಳಿ ರುಕ್ಮಿಣಿ ಮರನೂರ (38) ಅವರು, ಬೀದರ್ ಜಿಲ್ಲೆಯ ಬೆಳಕೇರಾದಲ್ಲಿ ಹಳ್ಳದಲ್ಲಿ ಕೊಚ್ಚಿಹೋಗಿದ್ದ ದತ್ತು ಶರಣಪ್ಪ (33) ಅವರ ಶವ ಶುಕ್ರವಾರ ಪತ್ತೆಯಾಗಿದೆ. ಕಲಬುರಗಿ ಜಿಲ್ಲೆ ಕಮಲಾಪುರ ತಾಲ್ಲೂಕಿನ ಮುಗಳಿಯಲ್ಲಿ ಧಾನೇಶ್ವರಿ ಸಿದ್ದಪ್ಪ ಕ್ಯಾಸರ್ (18) ಹಳ್ಳದಲ್ಲಿ ಕೊಚ್ಚಿಹೋಗಿದ್ದು, ಅವರ ಪತ್ತೆಗಾಗಿ ತೀವ್ರ ಶೋಧ ನಡೆದಿದೆ.

ಮರಬಿದ್ದು ಮಹಿಳೆ ಸಾವು,

ಬಾಗಲಕೋಟೆ: ಜಿಲ್ಲೆಯ ಜಮಖಂಡಿಯಲ್ಲಿ ಮಳೆಯಿಂದ ರಕ್ಷಣೆಗೆ ಮರದ ಕೆಳಗೆ ನಿಂತಿದ್ದಾಗ ಮರ ಉರುಳಿ ಮುಧೋಳ ತಾಲ್ಲೂಕಿನ ಕುಳಲಿ ಗ್ರಾಮದ ರುಕ್ಮಿಣಿ ಮರನೂರ (38) ಮೃತ ಪಟ್ಟಿದ್ದು, ಅವರ ಪತಿ ಶ್ರೀಶೈಲ ಮರನೂರ ಗಾಯಗೊಂಡಿದ್ದಾರೆ.

ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದ ಗಂಜಿಹಾಳದ ರೈತ ದೇವಾನಂದ ಕಮ್ಮಾರ ಅವರ ಮೃತದೇಹ ಶುಕ್ರವಾರ ದೊರೆತಿದೆ. ಜಿಲ್ಲೆಯಲ್ಲಿ ಮಳೆ ತಗ್ಗಿದೆ. ಕಜಗಲ್ಲ, ವರಗೋಡದಿನ್ನಿ, ಹೂವನೂರ ಸೇರಿ ವಿವಿಧ ಗ್ರಾಮಗಳ ಜನರಹ ಮನೆಗಳತ್ತ ಮುಖಮಾಡಿದ್ದಾರೆ.

ಅಂಕೋಲಾ ತಾಲ್ಲೂಕಿನಲ್ಲಿ ರಾಷ್ಟ್ರೀಯ ಹೆದ್ದಾರಿ 63ರ ಕಂಚಿನಬಾಗಿಲು ಕಿರು ಸೇತುವೆ ಬಳಿ ರಸ್ತೆ ಭಾಗಶಃ ಕುಸಿದಿರುವುದು

ಬೀದರ್: ಮಳೆ, ಮನೆ ಜಲಾವೃತ

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮಳೆಯಾಯಿತು. ರಾಯಚೂರು ಜಿಲ್ಲೆಯ ಟಣಮನಕಲ್ ಗ್ರಾಮದ ಹಿರೇಹಳ್ಳದಲ್ಲಿ ಮೇಕೆ ಕೊಚ್ಚಿಹೋಗಿದೆ.

ಕಲಬುರಗಿ ಜಿಲ್ಲೆ ಕಮಲಾಪುರ ತಾಲ್ಲೂಕಿನ ಲಾಡ ಮುಗಳಿಯಲ್ಲಿ ಹಳ್ಳ ದಾಟುತ್ತಿದ್ದ ವೇಳೆ ದಾನೇಶ್ವರಿ ಸಿದ್ದಪ್ಪ ಕ್ಯಾಸರ್ (18) ಕೊಚ್ಚಿಕೊಂಡು ಹೋದರು.

ತಾಯಿ ಗುರುಬಾಯಿ ಸಿದ್ದಪ್ಪ ಕ್ಯಾಸರ ಜೊತೆ ಕೃಷಿ ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದರು.

ಬೀದರ್ ಜಿಲ್ಲೆಯಲ್ಲಿ ಕಾರಂಜಾ ಜಲಾಶಯದಿಂದ ನೀರು ಹೊರಬಿಡಲಾಗಿದ್ದು, ಖಟಕಚಿಂಚೋಳಿ ಹೋಬಳಿಯ ಬರದಾಪುರ, ಡಾವರಗಾಂವ್ ಸೇರಿ ಇತರ ಗ್ರಾಮಗಳಲ್ಲಿ ಹಲವು ಮನೆ, ಬೆಳೆಗಳು ಜಲಾವೃತವಾಗಿವೆ.

ಐವರ ರಕ್ಷಣೆ

ಕೊಪ್ಪಳ: ತಾಲ್ಲೂಕಿನ ಹಿರೇಹಳ್ಳ ಜಲಾಶಯದ ಹೊರಹರಿವು ಹೆಚ್ಚಿದೆ. ಕೋಳೂರು ಬಳಿ ಹಳ್ಳದಲ್ಲಿ ಶುಕ್ರವಾರ ಬೆಳಿಗ್ಗೆ ಸಿಲುಕಿದ್ದ ಐವರು ರೈತರನ್ನು ಅಗ್ನಿಶಾಮಕದ ದಳ ಸಿಬ್ಬಂದಿ ರಕ್ಷಿಸಿದರು.

'ದಡದಲ್ಲಿದ್ದ ಕೃಷಿ ಪಂಪ್‌ಸೆಟ್ ತೆಗೆದಿರಿಸಲು ಐವರು ಕುರಬರ ಹಳ್ಳಕ್ಕೆ ಇಳಿದಿದ್ದರು. ಏಕಾಏಕಿ ನೀರಿನ ಹರಿವು ಹೆಚ್ಚಾಗಿ, ಅಪಾಯಕ್ಕೆ ಸಿಲು ಕಿದ್ದರು' ಎಂದು ಸ್ಥಳೀಯರು ತಿಳಿಸಿದರು.

ನಂದಿ ಗಿರಿಧಾಮದಲ್ಲಿ ಭೂ ಕುಸಿತ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿ ಗಿರಿಧಾಮದ ಮಿರ್ಜಾ ಸರ್ಕಲ್ ಬಳಿಯ ತಿರುವಿನಲ್ಲಿ ಶುಕ್ರವಾರ ಭೂ ಕುಸಿತ ಸಂಭವಿಸಿದೆ. ಗಿರಿಧಾಮದ ರಸ್ತೆಯಲ್ಲಿ ರಾಶಿ ಮಣ್ಣು ಬಿದ್ದಿದೆ.

ಭೂ ಕುಸಿತವಾದ ಸ್ಥಳದ ಮೇಲೆ ಬೃಹತ್ ಬಂಡೆ ಇದ್ದು, ಮತ್ತಷ್ಟು ಮಣ್ಣು ಕುಸಿದರೆ ಬಂಡೆ ಮುಡುಕು ಹೊಸಹಳ್ಳಿ ಗ್ರಾಮದತ್ತ ಉರುಳುವ ಸಂಭವವಿದೆ. ಮಳೆಯ ಕಾರಣದಿಂದ ನಂದಿ ಗಿರಿಧಾಮದ ಅಲ್ಲಲ್ಲಿ ಸಣ್ಣ ಮಟ್ಟದಲ್ಲಿ ಭೂ ಕುಸಿತ ಸಂಭವಿಸಿದೆ. ಗಿರಿಧಾಮದ ಹಿಂಬದಿಯ ಕಣಿವೆಯಲ್ಲಿ ಭೂ ಕುಸಿತವಾದ ಪರಿಣಾಮ ನಂದಿ ಗ್ರಾಮದಿಂದ ಸುಲ್ತಾನ್ ಪೇಟೆ ಮಾರ್ಗವಾಗಿ ದೊಡ್ಡಬಳ್ಳಾಪುರ ಸಂಪರ್ಕಿಸುವ ರಸ್ತೆಯಲ್ಲಿ ಸಂಚಾರ ಬಂದ್ ಮಾಡಲಾಗಿದೆ. ಕಳೆದ ವರ್ಷವೂ ಭೂಕುಸಿತ ವಾಗಿತ್ತು.

ನಂದಿಗಿರಿಧಾಮದಲ್ಲಿ ಸಂಭವಿಸಿರುವ ಭೂ ಕುಸಿತ

ಉಡುಪಿ: ಭಾರಿ ಮಳೆ

ಉಡುಪಿ ವರದಿ: ಜಿಲ್ಲೆಯಾದ್ಯಂತ ಭಾರಿ ಮಳೆಯಾಗಿದೆ. ಕಾರ್ಕಳ, ಬ್ರಹ್ಮಾವರ, ಕುಂದಾಪುರ ತಾಲ್ಲೂಕುಗಳಲ್ಲಿ ಮಳೆ ಪರಿಣಾಮ ಹೆಚ್ಚಿದ್ದು, ವಿವಿಧ ಗ್ರಾಮಗಳಲ್ಲಿ ಮನೆಗಳಿಗೆ ಹಾನಿಯಾಗಿದೆ. ಮಾಳದಲ್ಲಿ 4.2 ಸೆಂ.ಮೀ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.19	22,031	20,933
ಹಾರಂಗಿ	2,859	2,856.67	2,640	1,700
ಕಬಿನಿ	2,284	2,283.35	12,843	15,000
ಹೇಮಾವತಿ	2,922	2,921.82	8,267	9,100
ಲಿಂಗನಮಕ್ಕಿ	1,819	1,814	6,703	5,403
ಸೂಪಾ (ಮೀ)	564	551.03	2,619	632
ಮಾಣಿ	595	589	751	-
ತುಂಗಭದ್ರಾ	1,633	1,632.14	45,799	79,899
ಮಲಪ್ರಭಾ	2079.50	2,079.50	4,194	4,194
ಘಟಪ್ರಭಾ	2,175	2,175	3,134	3,134
ಭದ್ರಾ	186	185	10,691	14,025
ಆಲಮಟ್ಟಿ (ಮೀ)	519.60	519.60	26,701	25,000
ನಾರಾಯಣಪುರ (ಮೀ)	492.25	491.37	81,000	820

* ನೆಲಮಟ್ಟದಿಂದ

ನಾಲ್ಕು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್

ಬೆಂಗಳೂರು: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಭಾರಿ ಮಳೆ ಮುಂದು ವರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕಲಬುರಗಿ ಜಿಲ್ಲೆಗಳಿಗೆ ಇದೇ 10ರಂದು 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಇದೇ 11ರಂದು ಕಲಬುರಗಿ, ಯಾದಗಿರಿ, ವಿಜಯಪುರ, ಬೆಳಗಾವಿ, ಧಾರವಾಡ, ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಯೆಲ್ಲೊ ಅಲರ್ಟ್ ನೀಡಲಾಗಿದೆ.

ಅಂಕೋಲಾ: ಕುಸಿದ ರಸ್ತೆ

ಅಂಕೋಲಾ ವರದಿ: ಉತ್ತರ ಕನ್ನಡ ಜಿಲ್ಲೆ ಅಂಕೋಲಾದಲ್ಲಿ ರಾಷ್ಟ್ರೀಯ ಹೆದ್ದಾರಿಯ 63ರ ಕಂಚಿನ ಬಾಗಿಲು ಕಿರು ಸೇತುವೆ ಬಳಿ ಶುಕ್ರವಾರ ರಸ್ತೆ ಭಾಗಶಃ ಕುಸಿದಿದೆ. ಸಂಚಾರ ವ್ಯತ್ಯಯವಾಗುವ ಆತಂಕವಿದೆ. ಹುಬ್ಬಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಇದಾಗಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್ ಭೇಟಿ ನೀಡಿದ್ದು, ಕುಸಿದ ಪ್ರದೇಶದಲ್ಲಿ ಬ್ಯಾರಿಕೇಡ್ ಅಳವಡಿಸಿ, ಕಂದಕದ ಸಮೀಪ ವಾಹನಗಳು ಚಲಿಸದಂತೆ ನಿರ್ಬಂಧಿಸಲಾಗಿದೆ.

ಸುದ್ದಿ 2 ನಿಮಿಷ

ಬಿಲ್ಕಿಸ್ ಬಾನು ಪ್ರಕರಣ: ದಾಖಲೆ ಸಲ್ಲಿಸಲು 'ಸುಪ್ರೀಂ' ಸೂಚನೆ

ನವದೆಹಲಿ: 2002ರ ಗುಜರಾತ್ ಗಲಭೆಯಲ್ಲಿ ಬಿಲ್ಕಿಸ್ ಬಾನು ಮೇಲಿನ ಸಾಮೂಹಿಕ ಅತ್ಯಾಚಾರ ಮತ್ತು ಬಾನು ಕುಟುಂಬದ ಸದಸ್ಯರ ಹತ್ಯೆ ಪ್ರಕರಣದಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಎಲ್ಲ 11 ಅಪರಾಧಿಗಳಿಗೆ ಯಾವ ಆಧಾರದ ಮೇಲೆ ಕ್ಷಮಾದಾನ ನೀಡಿ, ಬಿಡುಗಡೆ ಮಾಡಲಾಗಿದೆ ಎನ್ನುವುದರ ಎಲ್ಲ ದಾಖಲೆ ಸಲ್ಲಿಸಲು ಗುಜರಾತ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠ, ಅಪರಾಧಿಗಳ ಬಿಡುಗಡೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳಿಗೆ ಪ್ರತಿಕ್ರಿಯೆ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಎರಡು ವಾರಗಳ ಕಾಲಾವಕಾಶ ನೀಡಿದೆ.

ಸಿಪಿಐಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೌಲ್ ಮತ್ತು ಸಾಮಾಜಿಕ ಕಾರ್ಯಕರ್ತೆ ರೂಪ್ ರೇಖಾ ರಾಣಿ ಅವರ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸಲು ಅಪರಾಧಿಗಳಿಗೂ ಪೀಠ ಅವಕಾಶ ಕಲ್ಪಿಸಿದೆ.

ಅಪರಾಧಿಗಳ ಬಿಡುಗಡೆ ಪ್ರಶ್ನಿಸಿ ತೃಣ ಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಕೂಡ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ.



ಮಾರ್ಗದರ್ಶಕ ಮಂಡಳಿಯತ್ತ ಗಡ್ಕರಿ: ಸುರ್ಜೇವಾಲ ಲೇವಡಿ

ಬೆಂಗಳೂರು: 'ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಅವರ ಮಾತನ್ನು ಕೇಂದ್ರ ಸರ್ಕಾರದಲ್ಲಿ ಯಾರೂ ಕೇಳುವುದಿಲ್ಲ. ಅವರೀಗ ಬಿಜೆಪಿ ಮಾರ್ಗದರ್ಶಕ ಮಂಡಳಿಯತ್ತ ಹೊರಟಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುರ್ಜೇವಾಲ, 'ನಿತಿನ್ ಗಡ್ಕರಿ ಅವರ ಮಾತಿಗೆ ಬಿಜೆಪಿಯಲ್ಲಿ ಬೆಲೆಯೇ ಇಲ್ಲವಾಗಿದೆ. ಬಿಜೆಪಿ ಸಂಸದೀಯ ಮಂಡಳಿಯಿಂದಲೂ ಗಡ್ಕರಿಯವರನ್ನು ಕೈಬಿಡಲಾಗಿದೆ. ಈಗ ಬೆಂಗಳೂರಿಗೆ ಬಂದು, ಕೆಲಸವನ್ನೇ ಮಾಡದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲಹೆಯನ್ನು ನೀಡುತ್ತಿದ್ದಾರೆ' ಎಂದು ಟೀಕಿಸಿದರು.

'ನಿತಿನ್ ಗಡ್ಕರಿ ಅವರಿಂದ ಯಾವ ಕೆಲಸವೂ ಆಗುವುದಿಲ್ಲ. ಅವರು ಎಲ್ಲಿಯವರೆಗೆ ಸಚಿವರಾಗಿರುತ್ತಾರೆ ಎಂಬುದೂ ಗೊತ್ತಿಲ್ಲ' ಎಂದು ಸುರ್ಜೇವಾಲ ಮೂದಲಿಸಿದರು.

12ಕ್ಕೆ ವಿಧಾನಸೌಧ ಮುತ್ತಿಗೆ

ಬೆಂಗಳೂರು: 'ರೈತರ ಹಾಗೂ ಕೃಷಿ ಕ್ಷೇತ್ರದಲ್ಲಿನ ಸಮಸ್ಯೆಗಳ ನಿವಾರಣೆಗೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ, ಇದೇ 12ರಂದು ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಬಿಜೆಪಿ ಸರ್ಕಾರ ರೈತ ವಿರೋಧಿ ಕ್ರಮಗಳನ್ನು ಕೈಗೊಳ್ಳುವ ಮೂಲಕ ರೈತರನ್ನು ನಾಶ ಮಾಡಲು ಹೊರಟಿದೆ' ಎಂದು ಆರೋಪಿಸಿದರು.



ಶಿವಮೊಗ್ಗ: ಅಮೀರ್ ಅಹಮದ್ ವೃತ್ತದಲ್ಲಿ ಸಾವರ್ಕರ್ ಮಹಾದ್ವಾರ

ಗೋಡ್ಸೆ ಭಾವಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಹಿಂದೂ ಮಹಾಸಭಾದಿಂದ ಕೋಟೆ ಭೀಮೇಶ್ವರ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ವಿಸರ್ಜನಾ ಪೂರ್ವ ರಾಜಬೀದಿ ಉತ್ಸವದ ವೇಳೆ ಶುಕ್ರವಾರ ಕೆಲವರು ಮಹಾತ್ಮಾ ಗಾಂಧಿ ಹತ್ಯೆ ಮಾಡಿರುವ ನಾಥೂರಾಮ್ ಗೋಡ್ಸೆ ಭಾವಚಿತ್ರ ಪ್ರದರ್ಶಿಸಿದರು.

ನಗರದ ಪ್ರಮುಖ ಬೀದಿಗಳಲ್ಲಿ ಸಾಗಿಬಂದ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ಈ ವೇಳೆ ವೀರ ಸಾವರ್ಕರ್, ಡಾ.ಬಿ.ಆರ್. ಅಂಬೇಡ್ಕರ್, ಸಂಗೊಳ್ಳಿ ರಾಯಣ್ಣ, ಸುಭಾಷ್‌ಚಂದ್ರ ಬೋಸ್, ಭಗತ್‌ಸಿಂಗ್ ಜೊತೆಗೆ ಶಿವಮೊಗ್ಗದಲ್ಲಿ ದುಷ್ಕರ್ಮಿಗಳಿಂದ ಇತ್ತೀಚೆಗೆ ಕೊಲೆಗೀಡಾದ ಬಜರಂಗದಳದ ಕಾರ್ಯಕರ್ತ ಹರ್ಷ ಅವರ ಭಾವಚಿತ್ರಗಳಲ್ಲದೆ, ನಾಥೂರಾಮ್ ಗೋಡ್ಸೆಯ ಭಾವಚಿತ್ರವನ್ನೂ ಪ್ರದರ್ಶಿಸಲಾಯಿತು.

ಗಣಪತಿಯ ರಾಜಬೀದಿ ಉತ್ಸವದ ಕಾರಣ ಇಲ್ಲಿನ ಅಮೀರ್ ಅಹಮದ್ ವೃತ್ತದ ಬಳಿ ವೀರಸಾವರ್ಕರ್ ಹೆಸರಿನಲ್ಲಿ ಬೃಹತ್ ಮಹಾದ್ವಾರ ನಿರ್ಮಿಸಲಾಗಿತ್ತು. ಕೆಲವು ದಿನಗಳ ಹಿಂದಷ್ಟೇ ಅಲ್ಲಿ ಸಾವರ್ಕರ್ ಫ್ಲೆಕ್ಸ್ ಹಾಕಿದ್ದ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿತ್ತು.

ಮೆರವಣಿಗೆಯಲ್ಲಿ ಸಾಗಿ ಬಂದ ಗಣಪತಿ ಮೂರ್ತಿ ಹಿಂಭಾಗದಲ್ಲಿ ವೀರ ಸಾವರ್ಕರ್ ಭಾವಚಿತ್ರ ಅಳವಡಿಸಲಾಗಿತ್ತು. ಅಮೀರ್ ಅಹಮದ್ ವೃತ್ತ ಹಾಗೂ ಬಸ್ ನಿಲ್ದಾಣದ ಎದುರು ಅಶೋಕ ಸ್ತಂಭದ ಮೇಲಿನ ರಾಷ್ಟ್ರ ಲಾಂಛನದ ಮೇಲೆ ಕೇಸರಿ ಧ್ವಜ ಹಾರಾಡಿದವು. ನಂತರ ಪೊಲೀಸರು ಅವುಗಳನ್ನು ತೆರವುಗೊಳಿಸಿದರು. ಮೆರವಣಿಗೆಯಲ್ಲಿ ಡಿ.ಜೆ ಹಾಕಲು ಜಿಲ್ಲಾಡಳಿತ ಮೊದಲು ಅವಕಾಶ ನಿರಾಕರಿಸಿತ್ತು. ನಂತರ ಸಂಘಟಕರ ಒತ್ತಡಕ್ಕೆ ಮಣಿದು ಗೋಪಿ ವೃತ್ತದಲ್ಲಿ ಡಿ.ಜೆ.ಗೆ ಅವಕಾಶ ಕಲ್ಪಿಸಲಾಯಿತು. 'ಭಾರತ್ ಮಾತಾ ಕೀ ಜೈ', 'ವಂದೇ ಮಾತರಂ' ಘೋಷಣೆ ಮೂಲಕ ಮೆರವಣಿಗೆಯಲ್ಲಿ ಪಾಲ್ಗೊಂಡವರನ್ನು ಶಾಸಕ ಕೆ.ಎಸ್.ಈಶ್ವರಪ್ಪ ಹುರಿದುಂಬಿಸಿದರು.

ಶಿವಮೊಗ್ಗದಲ್ಲಿ ಶುಕ್ರವಾರ ನಡೆದ ಹಿಂದೂ ಮಹಾಸಭಾ ಗಣೇಶ ಮೂರ್ತಿ ವಿಸರ್ಜನಾ ಪೂರ್ವ ಮೆರವಣಿಗೆಯಲ್ಲಿ ನಾಥೂರಾಮ್ ಗೋಡ್ಸೆಯ ಭಾವಚಿತ್ರ ಪ್ರದರ್ಶಿಸಲಾಯಿತು

ಕಾಡಾನೆ ತಿವಿದು ಕಾರ್ಮಿಕ ಸಾವು: ಶವವಿಟ್ಟು ಪ್ರತಿಭಟನೆ

ಅರಣ್ಯ ಕಚೇರಿಗೆ ಮುತ್ತಿಗೆ ಯತ್ನ; ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮೂಡಿಗೆರೆ ತಾಲ್ಲೂಕಿನ ಊರುಬಗೆ ಸಮೀಪ ಕಾಡಾನೆ ತಿವಿದು ಮೃತಪಟ್ಟ ಕಾರ್ಮಿಕ ಅರ್ಜುನ್ ಎಂಬುವವರ ಶವವನ್ನು ಶುಕ್ರವಾರ ಅರಣ್ಯ ಇಲಾಖೆ ಕಚೇರಿ ಮುಂದೆ ಇಟ್ಟು, ಕಚೇರಿಗೆ ಮುತ್ತಿಗೆ ಹಾಕಲು ಮುಂದಾದ ಪ್ರತಿಭಟನಕಾರರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದರು.

ಕಾರ್ಮಿಕನ ಸಾವಿಗೆ ಕಾರಣವಾದ ಆನೆಯನ್ನು ಹಿಡಿದು ಸ್ಥಳಾಂತರಿಸಬೇಕು ಎಂದು ಪ್ರತಿಭಟನಕಾರರು, ಮೂಡಿಗೆರೆ– ಬೇಲೂರು ರಸ್ತೆಯ ಅರಣ್ಯ ಕಚೇರಿ ಬಳಿ ಮಧ್ಯಾಹ್ನ ಜಮಾಯಿಸಿದರು.

ಈ ಸಂದರ್ಭದಲ್ಲಿ ಕೆಲಕಾಲ ಸಂಚಾರ ಬಂದ್ ಆಗಿತ್ತು. ಸ್ಥಳೀಯರು, ರೈತ ಸಂಘ, ಬೆಳೆಗಾರರ ಸಂಘದವರು ಪಾಲ್ಗೊಂಡಿದ್ದರು. ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿದರು. ಅರಣ್ಯ ಕಚೇರಿ ಆವರಣದ ಗೇಟು ತೆರೆದು ಒಳಕ್ಕೆ ನುಗ್ಗಿದರು.

ಪೊಲೀಸರು ಪ್ರತಿಭಟನಕಾರರನ್ನು ತಡೆಯಲು ಮುಂದಾದಾಗ, ಮಾತಿನ ಚಕಮಕಿ ನಡೆಯಿತು. ಇದರಿಂದಾಗಿ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಪ್ರತಿಭಟನಕಾರರು ಕಚೇರಿಗೆ ಮುತ್ತಿಗೆ ಹಾಕದಂತೆ ತಡೆಯಲು ಪೊಲೀಸರು ಅಡ್ಡಲಾಗಿ ವಾಹನ ನಿಲ್ಲಿಸಿದರು. ವಾಹನವನ್ನು ದಾಟಿಕೊಂಡು ಕಚೇರಿಗೆ ಮುತ್ತಿಗೆ ಹಾಕಲು ಮುಂದಾದಾಗ ಪೊಲೀಸರು ಲಾಠಿ ಪ್ರಹಾರ ನಡೆಸಿ ಪ್ರತಿಭಟನಕಾರರನ್ನು ಚದುರಿಸಿದರು.

ಕಾರ್ಮಿಕ ಅರ್ಜುನ್ ಅವರು ಗುರುವಾರ, ಕೂಲಿ ಕೆಲಸ ಮುಗಿಸಿ ಸಂಜೆ ಮನೆಗೆ ವಾಪಸಾಗುವಾಗ ಕಾಡಾನೆ ಅಟ್ಟಿಸಿಕೊಂಡು ಹೋಗಿ ತುಳಿದು, ಹೊಸಕಿ ಹಾಕಿತ್ತು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯ ಅರಣ್ಯ ಕಚೇರಿ ಬಳಿ ಪ್ರತಿಭಟನಕಾರರ ಮೇಲೆ ಪೊಲೀಸರು ಲಾಠಿ ಬೀಸಿದರು

ಕ್ಷಯ ನಿರ್ಮೂಲನೆಗೆ ಸಾಂಘಿಕ ಪ್ರಯತ್ನ ಅಗತ್ಯ: ಮುರ್ಮು

ನವದೆಹಲಿ: '2025ರ ವೇಳೆಗೆ ದೇಶದಿಂದ ಕ್ಷಯರೋಗವನ್ನು ನಿರ್ಮೂಲನೆ ಮಾಡಲು ಎಲ್ಲರೂ ಸಮರೋಪಾದಿಯಲ್ಲಿ ಸಾಂಘಿಕ ಪ್ರಯತ್ನ ನಡೆಸಬೇಕು' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶುಕ್ರವಾರ ಕರೆ ನೀಡಿದ್ದಾರೆ.

'ಪ್ರಧಾನಮಂತ್ರಿ ಕ್ಷಯಮುಕ್ತ ಭಾರತ ಅಭಿಯಾನ'ಕ್ಕೆ ವರ್ಚುವಲ್ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, 'ನಿ– ಕ್ಷಯ್ 2.0' ಪೋರ್ಟಲ್ ಅಡಿಯಲ್ಲಿ ಸರ್ಕಾರವು ಕ್ಷಯರೋಗಿಗಳಿಗೆ ಸಮುದಾಯದ ಬೆಂಬಲವನ್ನು ನೀಡುವ ಕ್ರಮವನ್ನು ಶ್ಲಾಘಿಸಿದರು.

'ಸರ್ಕಾರ ರೂಪಿಸಿರುವ ಪೋರ್ಟಲ್ ಅಡಿಯಲ್ಲಿ ಒಬ್ಬ ವ್ಯಕ್ತಿ, ಚುನಾಯಿತಿ ಪ್ರತಿನಿಧಿ ಇಲ್ಲವೇ ಸಂಘ–ಸಂಸ್ಥೆಗಳು ದತ್ತು ಪಡೆದು ಆರೈಕೆ ಮಾಡಬಹುದಾಗಿದೆ. ಈ ಅಭಿಯಾನವನ್ನು ಜನಾಂದೋಲನವನ್ನಾಗಿ ಮಾಡಲು ಎಲ್ಲರೂ ಪ್ರಯತ್ನಿಸಬೇಕು' ಎಂದರು.

ಕೆರೆಗಳ ಸಂಖ್ಯೆ 35 ಸಾವಿರದಿಂದ 40 ಸಾವಿರಕ್ಕೆ ಹೆಚ್ಚಳ

ಕೆರೆ ಒಡಲು: 50 ಸಾವಿರ ಎಕರೆ ಒತ್ತುವರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ 40 ಸಾವಿರ ಕೆರೆಗಳಿಗೆ ಸೇರಿದ 50 ಸಾವಿರಕ್ಕೂ ಹೆಚ್ಚು ಎಕರೆ ಜಮೀನು ಒತ್ತುವರಿಯಾಗಿದೆ. 21 ಸಾವಿರ ಕೆರೆಗಳಲ್ಲಿ ಒತ್ತುವರಿಯ ಅಳತೆಯನ್ನೇ ಮಾಡಿಲ್ಲ. 13 ಸಾವಿರ ಕೆರೆಗಳು ಒತ್ತುವರಿಯಿಂದ ಮುಕ್ತವಾಗಿವೆ. 8 ಸಾವಿರಕ್ಕೂ ಹೆಚ್ಚು ಕೆರೆಗಳು ಕಲುಷಿತವಾಗಿವೆ....

ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಜಿಲ್ಲೆವಾರು ರಾಜ್ಯದ ಕೆರೆಗಳ ಮಾಹಿತಿಯನ್ನು ಸಂಗ್ರಹಿಸಿದಾಗ ಈ ಅಂಶ ಬಹಿರಂಗವಾಗಿದೆ.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ರಾಜ್ಯಮಟ್ಟದ 10ನೇ ಸಮಿತಿ ಸಭೆಯಲ್ಲಿ ಕೆರೆಗಳ ಒತ್ತುವರಿ ತೆರವು ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಒಂದು ತಿಂಗಳಲ್ಲಿ ವರದಿ ಸಲ್ಲಿಸಬೇಕು ಎಂದೂ ನಿರ್ದೇಶನ ನೀಡಲಾಗಿದೆ.

ಈ ಹಿಂದೆ 35 ಸಾವಿರ ಕೆರೆಗಳಿರುವುದಕ್ಕೆ ದಾಖಲೆ ಇತ್ತು. ಜಿಲ್ಲಾ ಮಟ್ಟದ ಮಾಹಿತಿಗಳನ್ನು ಪಡೆದು ಒಟ್ಟುಗೂಡಿಸಿದಾಗ ಕೆರೆಗಳ ಸಂಖ್ಯೆ 40 ಸಾವಿರ ಮೀರಿದೆ. 'ಕೆರೆಗಳ ಸಂಖ್ಯೆ ಹೆಚ್ಚಾಗಿರುವುದು ಒಳ್ಳೆಯ ಬೆಳವಣಿಗೆ. ಕಂದಾಯ ಇಲಾಖೆಯ ದಾಖಲೆಗಳನ್ನು ಹೊಂದಾಣಿಕೆ ಮಾಡಿಕೊಂಡು ಮಾಹಿತಿ ಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಸರ್ವೆ ಇಲಾಖೆ ಹಾಗೂ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ನೀಡಿರುವ ಅಂಕಿ–ಅಂಶಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಹೀಗಾಗಿ ಎಲ್ಲವನ್ನೂ ಸ್ಪಷ್ಟವಾಗಿ ನಮೂದಿಸಲು ಹೇಳಲಾಗಿದೆ' ಎಂದು ಪ್ರಾಧಿಕಾರದ ಮೂಲಗಳು ಹೇಳಿವೆ.

ಕೆರೆ ಅಭಿವೃದ್ಧಿ ಸೆಸ್ ಎಂದು ಎಲ್ಲ ಪುರಸಭೆ, ನಗರ ಸಭೆಗಳಲ್ಲಿ ಆಸ್ತಿ ತೆರಿಗೆಯ ಶೇ 1ರಷ್ಟು ಸಂಗ್ರಹ ಮಾಡುತ್ತಿದ್ದು, ಅದನ್ನು ಕೂಡಲೇ ಬಳಸಿಕೊಳ್ಳಬೇಕು ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸೂಚಿಸಿದ್ದಾರೆ. ತಂತಿಬೇಲಿ, ಏರಿ ಬಲಪಡಿಸುವುದು, ಹೂಳು ತೆಗೆಯುವ ಸಿವಿಲ್ ಕಾಮಗಾರಿಗಳಿಗೆ ಮಾತ್ರ ಈ ಸೆಸ್ ಹಣವನ್ನು ಬಳಕೆ ಮಾಡಲಾಗುತ್ತಿದೆ. ಅದರ ಜೊತೆಗೆ ಕೆರೆಗಳ ರಕ್ಷಣೆ ಹಾಗೂ ಗುಣಮಟ್ಟ ಕಾಪಾಡುವುದಕ್ಕೆ, ಕೆರೆ ನೀರನ್ನು ಸಂಸ್ಕರಣೆ ಮಾಡಲು ಬಳಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿರುವ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಕೆರೆಗಳ ರಕ್ಷಣೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರತಿ ತಿಂಗಳೂ ಜಿಲ್ಲಾಧಿಕಾರಿ ಮಟ್ಟದಲ್ಲಿ ಸಭೆ ನಡೆಯಬೇಕು. ಪುನರ್‌ರಚಿಸಿರುವ ಸಮಿತಿ ವಿವರ ಹಾಗೂ ಪ್ರತಿ ತಿಂಗಳು ಕೈಗೊಳ್ಳಲಾಗುತ್ತಿರುವ ಮಾಹಿತಿಯನ್ನು ಪ್ರಾಧಿಕಾರಕ್ಕೆ ಕಳುಹಿಸಬೇಕು. ಹೈಕೋರ್ಟ್ ಕೆರೆಗಳ ಅಭಿವೃದ್ಧಿ ಹಾಗೂ ರಕ್ಷಣೆ ಕ್ರಮಗಳ ಬಗ್ಗೆ ನಿಗಾವಹಿಸುತ್ತಿದೆ. ಹೀಗಾಗಿ ಎಲ್ಲೂ ವ್ಯತ್ಯಾಸವಾಗದಂತೆ ಜಿಲ್ಲಾಧಿಕಾರಿ ಕ್ರಮ ಕೈಗೊಳ್ಳಬೇಕು. ಮೂರು ತಿಂಗಳಿಗೊಮ್ಮೆ ಎಲ್ಲ ಇಲಾಖೆ ಅಧಿಕಾರಿಗಳ ರಾಜ್ಯಮಟ್ಟದ ಅಪೆಕ್ಸ್ ಸಮಿತಿ ನಡೆಸಬೇಕು ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಸೂಚಿಸಿದ್ದಾರೆ.

ಅತಿಹೆಚ್ಚು ಒತ್ತುವರಿ

ಜಿಲ್ಲೆ	ಒತ್ತುವರಿ	ತೆರವು	ಬಾಕಿ (ಎಕರೆಯಲ್ಲಿ)
ಚಿಕ್ಕಮಗಳೂರು	3,523	47	3,476
ಬೆಂಗಳೂರು ನಗರ	4,551	2,145	2,366
ಶಿವಮೊಗ್ಗ	2,249	567	1684
ಮೈಸೂರು	1,900	788	1,135
ಬೆಂಗಳೂರು ಗ್ರಾಮಾಂತರ	6,252	5,182	1,070
ದಾವಣಗೆರೆ	1,515	446	1,069
ಬಳ್ಳಾರಿ	2,415	792	1,052
ಚಿಕ್ಕಬಳ್ಳಾಪುರ	3,127	2,777	350
ಮಂಡ್ಯ	2,496	2,369	127

ಎಇಇಗೆ ರಕ್ಷಣೆ ಹೊಣೆ

ಕೆರೆಗಳ ರಕ್ಷಣೆ ಹೊಣೆಯನ್ನು ಆಯಾ ಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಪ್ರಾಧಿಕಾರ ವಹಿಸಿದೆ. ಯಾವುದೇ ರೀತಿಯ ಒತ್ತುವರಿ ಅಥವಾ ಇತರೆ ಅಕ್ರಮ ನಿರ್ಮಾಣಗಳು ಕಂಡುಬಂದರೆ ಎಇಇ ಮೇಲೆ ಕ್ರಮ ಕೈಗೊಳ್ಳಲು ರಾಜ್ಯ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆದೇಶಿಸಿದ್ದಾರೆ.

ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ಲಕ್ಷ್ಯ

ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ) ನೀಡಿರುವ ವರದಿಯಂತೆ ರಾಜ್ಯದಲ್ಲಿ 8,579 ಕೆರೆಗಳು ಕಲುಷಿತವಾಗಿವೆ. ಇವುಗಳನ್ನು ರಕ್ಷಿಸುವ ಉದ್ದೇಶದಿಂದ ಯಾವ ರೀತಿಯ ಮಾಲಿನ್ಯವಿದೆ, ಯಾವ ಪ್ರಮಾಣದಲ್ಲಿದೆ ಎಂಬುದನ್ನು ಗುರುತಿಸಿ ವರದಿ ನೀಡಬೇಕೆಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕೆರೆ ಅಭಿವೃದ್ಧಿ ಪ್ರಾಧಿಕಾರ ಸೂಚಿಸಿತ್ತು. ಆದರೆ, ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ಮಂಡಳಿಯಿಂದ ಬಾರದ್ದರಿಂದ ಪ್ರಾಧಿಕಾರ ಈ ಜವಾಬ್ದಾರಿಯನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಿದೆ.

ಮಾಲಿನ್ಯವಿರುವ ಕೆರೆಗಳ ಪಟ್ಟಿಯಲ್ಲಿ ಶಿವಮೊಗ್ಗ ಜಿಲ್ಲೆ ಮೊದಲ ಸ್ಥಾನದಲ್ಲಿದ್ದು, ಇಲ್ಲಿ 1021 ಕೆರೆಗಳು ಕಲುಷಿತವಾಗಿವೆ. ಬೆಂಗಳೂರು ನಗರದಲ್ಲಿರುವ 837 ಕೆರೆಗಳೂ ಕಲುಷಿತ. ತುಮಕೂರು (827), ಹಾಸನ (756), ಕೋಲಾರ (664), ಹಾವೇರಿ (565), ಮೈಸೂರು (488), ಧಾರವಾಡ (470), ಬೆಂಗಳೂರು ಗ್ರಾಮಾಂತರ (308), ಚಿಕ್ಕಮಗಳೂರು (301), ಚಿಕ್ಕಬಳ್ಳಾಪುರ (282), ಮಂಡ್ಯ (253) ನಂತರದ ಸ್ಥಾನಗಳಲ್ಲಿವೆ.

'ಧಾರ್ಮಿಕ ಫರ್ಮಾನು ಪ್ರಜಾಪ್ರಭುತ್ವ ವಿರೋಧಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ವ್ಯಕ್ತಿಯ ಮನಸ್ಸಿಗೆ ವಿರುದ್ಧವಾಗಿ ಧಾರ್ಮಿಕ ಫರ್ಮಾನು ಹೇರುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಧಾರ್ಮಿಕ ನಂಬಿಕೆಗಳ ಮೇಲೆ ರೂಪಿಸುವ ಕಾನೂನು ಕೋಮುವಾದಕ್ಕೆ ಎಡೆಮಾಡಿಕೊಡುತ್ತದೆ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಹೇಳಿದರು.

ಸಂತ ಮದರ್ ತೆರೇಸಾ ವಿಚಾರ ವೇದಿಕೆ ಆಶ್ರಯದಲ್ಲಿ ಶುಕ್ರವಾರ ಇಲ್ಲಿ ನಡೆದ ಮದರ್ ತೆರೇಸಾ ಅವರ 25ನೇ ಸಂಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಾವು ಧರ್ಮ ವಿರೋಧಿಗಳಾಗಬೇಕಿಲ್ಲ. ಆದರೆ, ಧರ್ಮವನ್ನು ಅಪ್ರಜಾಪ್ರಭುತ್ವಗೊಳಿಸುವ ಪ್ರಕ್ರಿಯೆಯನ್ನು ವಿರೋಧಿಸಬೇಕಾಗಿದೆ. ರಾಜಕಾರಣದ ಜತೆ ಧರ್ಮವನ್ನು ಸೇರಿಸುವ ಪ್ರಕ್ರಿಯೆ ನಿಲ್ಲಿಸಿ, ಕೋಮುವಾದವನ್ನು ಅರ್ಥೈಸಿಕೊಂಡರೆ, ಸಂವಿಧಾನದಲ್ಲಿರುವ ಜಾತ್ಯತೀತ ನಿಲುವು ಸ್ಪಷ್ಟಗೊಳ್ಳುತ್ತದೆ. ದುರದೃಷ್ಟವಶಾತ್, ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇದನ್ನು ನಾವು ಅರಿತುಕೊಂಡಿಲ್ಲ' ಎಂದು ವಿಷಾದಿಸಿದರು.

'ಹಿಂಸೆ, ಕ್ರೋಧ, ನೋವು ಜಗತ್ತನ್ನು ಕಾಡುತ್ತಿದೆ. ಆಹಾರ, ಬಟ್ಟೆ, ಬಣ್ಣ ಎಲ್ಲದರಲ್ಲೂ ಅಸಹಿಷ್ಣುತೆ ಕಾಣುತ್ತಿರುವ ಸಂದರ್ಭದಲ್ಲಿ, ನಮ್ಮ ಹಿರಿಯರು ಬಿಟ್ಟು ಹೋಗಿರುವ ಸಹಿಷ್ಣುತೆಯ ಪರಂಪರೆಯು ಪ್ರತಿಮನೆಯಲ್ಲಿ ಮೊಳೆತರೆ, ಸಂಘರ್ಷ ಕರಗಿ ಭಾವೈಕ್ಯತೆ ಬೆಳಗುತ್ತದೆ' ಎಂದರು.

ಸಂತ ಮದರ್ ತೆರೇಸಾ ವೇದಿಕೆಯ ಅಧ್ಯಕ್ಷ ರಾಯ್ ಕ್ಯಾಸ್ತಲಿನೊ ಅಧ್ಯಕ್ಷತೆ ವಹಿಸಿದ್ದರು. ಚಿಂತಕಿ ಪಲ್ಲವಿ ಇಡೂರು 'ಬಹುತ್ವದ ಭಾರತದಲ್ಲಿ ಮಾನವೀಯ ಸೇವೆಗಳು' ವಿಷಯದ ಮೇಲೆ ಮಾತನಾಡಿದರು.

'ಪರಿಶ್ರಮ ಅಕಾಡೆಮಿ' ವಿದ್ಯಾರ್ಥಿ ಸಾತ್ವಿಕ್‌ಗೆ ರಾಜ್ಯದಲ್ಲಿ ಎರಡನೇ ಸ್ಥಾನ

ನೀಟ್‌ನಲ್ಲಿ 'ಪರಿಶ್ರಮ'ದ ಸಾಧನೆ

ಪ್ರಜಾವಾಣಿ ವಾರ್ತೆ

ಪರಿಶ್ರಮ ನೀಟ್ ಅಕಾಡೆಮಿ

ಬೆಂಗಳೂರು: ನೀಟ್ ಫಲಿತಾಂಶದಲ್ಲಿ ನಗರದ 'ಪರಿಶ್ರಮ ನೀಟ್ ಅಕಾಡೆಮಿ'ಯ ವಿದ್ಯಾರ್ಥಿ ಸಾತ್ವಿಕ್ ಅವರು ರಾಜ್ಯದಲ್ಲಿ ಎರಡನೇ ಹಾಗೂ ದೇಶದಲ್ಲಿ 10ನೇ ಸ್ಥಾನ ಪಡೆದಿದ್ದಾರೆ ಎಂದು ಅಕಾಡೆಮಿ ಸಂಸ್ಥಾಪಕ ಪ್ರದೀಪ್ ಈಶ್ವರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಕಳೆದ ವರ್ಷಕ್ಕಿಂತ ಈ ಬಾರಿ ನಮ್ಮ ಅಕಾಡೆಮಿ ಉತ್ತಮ ಸಾಧನೆ ತೋರಿದೆ. 700 ವಿದ್ಯಾರ್ಥಿಗಳು ದೀರ್ಘಾವಧಿ ಕೋರ್ಸ್‌ಗೆ ಸೇರಿದ್ದರು. ಇದರಲ್ಲಿ 580ರಿಂದ 600 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸುಮಾರು 60 ವಿದ್ಯಾರ್ಥಿಗಳು ಏಮ್ಸ್‌ನಲ್ಲಿ ಸೀಟು ಪಡೆಯುವುದು ನಿಶ್ಚಿತ' ಎಂದು ಹೇಳಿದರು.

'ದಕ್ಷಿಣ ಭಾರತದ ಸಾವಿರಾರು ವಿದ್ಯಾರ್ಥಿಗಳಿಗೆ ಕಬ್ಬಿಣ ಕಡಲೆಯಾಗಿರುವ ನೀಟ್ ಪರೀಕ್ಷೆ, 'ಪರಿಶ್ರಮ ವಿದ್ಯಾರ್ಥಿಗಳಿಗೆ ಸುಲಭದ್ದಾಗಿದೆ. 2019ರಲ್ಲಿ 60 ವಿದ್ಯಾರ್ಥಿಗಳಿಂದ ಆರಂಭವಾದ ಅಕಾಡೆಮಿ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಮುಂದಿನ ನೀಟ್‌ಗೆ ತಯಾರು ಮಾಡುವ ಗುರಿ ಹೊಂದಿದೆ. ವರ್ಷದಿಂದ ವರ್ಷಕ್ಕೆ ಅಕಾಡೆಮಿಯ ವಿದ್ಯಾರ್ಥಿಗಳ ಸಾಧನೆ ಹೆಚ್ಚಾಗುತ್ತಿದೆ. ಈ ಬಾರಿ ಸಾತ್ವಿಕ್– 700, ಪ್ರಜ್ವಲ್– 680, ಸಂಜನಾ– 670, ಯಶಸ್– 660, ವಿಕಾಸ್– 655 ಅಂಕ ಗಳಿಸಿ ಅಕಾಡೆಮಿಯ ಅಗ್ರ ಐದು ಸ್ಥಾನ ಪಡೆದಿದ್ದಾರೆ' ಎಂದರು.

'ಈ ಸಾಧನೆ ಕೇವಲ ಪರಿಶ್ರಮ ಅಕಾಡೆಮಿಯದ್ದು ಎನ್ನುವುದಕ್ಕಿಂತ, ಕನ್ನಡಿಗರದ್ದು. ಕನ್ನಡದ ಹುಡುಗನೊಬ್ಬ ಸ್ಥಾಪಿಸಿದ ಸಂಸ್ಥೆ ಇಂದು ರಾಷ್ಟ್ರಮಟ್ಟದಲ್ಲಿ ಹೆಸರಾಗುವುದಕ್ಕೆ ಕರ್ನಾಟಕದ ಜನ ನೀಡಿದ ಸಹಕಾರ ಕಾರಣ. ಪರಿಶ್ರಮ ನೀಟ್ ಅಕಾಡೆಮಿ ಬೆಂಗಳೂರಿನ ಕೆಂಗೇರಿಯಲ್ಲಿ ಮಾತ್ರವಿದೆ. ರಾಜ್ಯದ ಯಾವ ಭಾಗದಲ್ಲಿಯೂ ಶಾಖೆ ಹೊಂದಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

'ಇಲ್ಲಿಗೆ ಬರುವ ವಿದ್ಯಾರ್ಥಿಗಳು ಅದಾಗಲೇ ಎರಡು ವರ್ಷ ಶ್ರಮಪಟ್ಟು ಓದಿರುತ್ತಾರೆ. ಆದರೆ ವೈದ್ಯಕೀಯ ಸೀಟು ಸಿಕ್ಕಿರುವುದಿಲ್ಲ. ಅಂತಹವರು ನಮ್ಮಲ್ಲಿ 10 ತಿಂಗಳು ಶ್ರದ್ಧೆಯಿಂದ ಓದುತ್ತಾರೆ. ಹಾಸ್ಟೆಲ್‌ನಲ್ಲಿ ಸಕಲ ಸೌಲಭ್ಯವಿದೆ.

ಆದರೆ, ಮೊಬೈಲ್ ಮುಕ್ತವಾಗಿರುತ್ತದೆ. ಅತ್ಯುತ್ತಮ ಬೋಧಕ ಸಿಬ್ಬಂದಿ, ಶಿಸ್ತುಬದ್ಧ ಶೈಕ್ಷಣಿಕ ವ್ಯವಸ್ಥೆಯಿಂದ ಉತ್ತಮ ಫಲಿತಾಂಶ ಸಿಗುತ್ತಿದೆ. ಈ ಬಾರಿ ನಾವು ಮೊದಲ ರ‍್ಯಾಂಕ್ ಪಡೆಯುವ ವಿಶ್ವಾಸದಲ್ಲಿದ್ದೆವು. ಆದರೆ ಕೇವಲ 10 ಅಂಕಗಳಲ್ಲಿ ತಪ್ಪಿಸಿಕೊಂಡೆವು. ಮುಂದಿನ ಬಾರಿ ನಿಶ್ಚಿತವಾಗಿ ನಾವು ಮೊದಲ ರ‍್ಯಾಂಕ್ ಪಡೆಯುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಕಾಡೆಮಿ ಡೀನ್ ಹನುಮಂತ ರಾವ್, ಪ್ರೊ. ಮಾಧವರಾವ್, ಪ್ರೊ. ಶ್ರೀನಿಧಿ ಇದ್ದರು.

ಶನಿವಾರ, ಸೆಪ್ಟೆಂಬರ್ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 251 | ಪುಟ 26
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪತ್ನಿಯನ್ನು ಪರಸ್ತ್ರೀಯೊಂದಿಗೆ ಹೋಲಿಸಿ, ಮೂದಲಿಸುವುದು ಒಂದು ರೀತಿಯ ಮಾನಸಿಕ ಕ್ರೌರ್ಯ. ಹೋಲಿಕೆ ಮೂದಲಿಕೆಯಾಗದಂತೆ ಪತಿ–ಪತ್ನಿಯರು ಪರಸ್ಪರ ಎಚ್ಚರವಹಿಸುವುದು ಅಗತ್ಯ.



ಅಕ್ಕಿ ಉತ್ಪಾದನೆ 70 ಲಕ್ಷ ಟನ್ ತಗ್ಗುವ ಸಂಭವ 10
ಚರ್ಚೆ – ಗುಡ್ಡಕ್ಕೆ ಗುಡ್ಡ 'ಮರೆ ಮಾಡುವ' ಆಟ
ಮುಡಾ ಅಕ್ರಮ: ತಲಾ ₹ 1ಕೋಟಿ ದಂಡ 5D

ಸೆನ್ಸೆಕ್ಸ್	ನಿಫ್ಟಿ	₹/$
59,793	17,833	79.57

CAT 99th RANK
SPSM -NEET & IIT ACADEMY, DAVANAGERE
(Smt. Pushpa Shamanur Mahalingappa Residential CBSE, ICSE School & PU Science College)
RUCHITHA NEET-2022
PRATHAMESH 650 NEET-2021
BASAVARAJ HINDIHULI AIR-25TH RANK NEET -2020
MOHITH D. AIR-804th RANK NEET -2020
(Success Repeats year on year) Success Repeated in Long Term in 2nd Batch itself !!!
Out of 60 Students '30' Students are getting Free "Medical Seats"
Students who scored 450+ Marks in 2022 can avail Free Coaching.
Enjoy & Experience 15 days, Free Demo Classes of 25+ years of Experienced NEET Faculties.
Call : 72592 22250, 95136 30606, 89700 71100

ಸಂತ್ರಸ್ತೆಗಾಗಿ ನ್ಯಾಯ ಕೇಳುವುದು ಅಪರಾಧವೇ: ಸುಪ್ರೀಂ ಕೋರ್ಟ್ ಪ್ರಶ್ನೆ

ಪತ್ರಕರ್ತ ಕಪ್ಪನ್‌ಗೆ ಜಾಮೀನು

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಪ್ರದೇಶದ ಹಾಥರಸ್‌ನಲ್ಲಿ ಗಲಭೆ ಸೃಷ್ಟಿಸಲು ಸಂಚು ರೂಪಿಸಿದ ಆರೋಪ ಎದುರಿಸುತ್ತಿರುವ ಕೇರಳದ ಪತ್ರಕರ್ತ ಸಿದ್ದಿಕ್ ಕಪ್ಪನ್ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಜಾಮೀನು ನೀಡಿದೆ. ಸಂತ್ರಸ್ತರ ಪರವಾಗಿ ನ್ಯಾಯ ಕೇಳುವುದು ಅಪರಾಧವೇ ಎಂದು ಸುಪ್ರೀಂ ಕೋರ್ಟ್ ಪೀಠವು ಪ್ರಶ್ನಿಸಿದೆ. ವ್ಯವಸ್ಥೆಯಲ್ಲಿನ ಕೊರತೆಗಳನ್ನು ಎತ್ತಿತೋರಿಸಲು ಪ್ರತಿಭಟನೆಗಳು ಅನಿವಾರ್ಯ ಎಂದು ಪೀಠವು ಹೇಳಿದೆ.

ಸಿದ್ದಿಕ್ ಅವರ ವಿರುದ್ಧ ಹಣ ಅಕ್ರಮ ವರ್ಗಾವಣೆ ಕಾಯ್ದೆ ಅಡಿಯೂ ಪ್ರಕರಣ ದಾಖಲಿಸಲಾಗಿದೆ. ಆ ಪ್ರಕರಣದಲ್ಲಿ ಜಾಮೀನು ಪಡೆಯುವ ಸಂಬಂಧ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಗೆ ಸ್ವತಃ ಸಿದ್ದಿಕ್ ಅವರು ಹಾಜರಾಗುವುದರಿಂದಲೂ ಸುಪ್ರೀಂ ಕೋರ್ಟ್ ವಿನಾಯಿತಿ ನೀಡಿದೆ.

2020ರ ಅಕ್ಟೋಬರ್‌ನಲ್ಲಿ ಹಾಥರಸ್ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ವರದಿಗಾರಿಕೆ ಸಂಬಂಧ, ಹಾಥರಸ್‌ಗೆ ತೆರಳುತ್ತಿದ್ದಾಗ ಪೊಲೀಸರು ಸಿದ್ದಿಕ್ ಅವರನ್ನು ಬಂಧಿಸಿದ್ದರು. ಅವರ ವಿರುದ್ಧ ದೇಶದ್ರೋಹ ಮತ್ತು ಗಲಭೆಗೆ ಸಂಚು ರೂಪಿಸಿದ ಆರೋಪ ಹೊರಿಸಲಾಗಿದೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯ (ಯುಎಪಿಎ) ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಲಾಗಿದೆ. ಅವರ ಜಾಮೀನು ಅರ್ಜಿಯನ್ನು ಮಥುರಾ ಜಿಲ್ಲಾ ನ್ಯಾಯಾಲಯ ತಿರಸ್ಕರಿಸಿತ್ತು. ಅಲಹಾಬಾದ್ ಹೈಕೋರ್ಟ್ ಸಹ ಜಾಮೀನು ನೀಡಲು ನಿರಾಕರಿಸಿತ್ತು. ಹೈಕೋರ್ಟ್ ಆದೇಶದ ವಿರುದ್ಧ ಸಿದ್ದಿಕ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಮುಖ್ಯನ್ಯಾಯಮೂರ್ತಿ ಯು.ಯು. ಲಲಿತ್ ಮತ್ತು ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಅವರು ಇದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತು. ಗಲಭೆ ನಡೆಸಲು ಸಿದ್ದಿಕ್ ಸಂಚು ರೂಪಿಸಿದ್ದರು ಎಂಬ ನಿರ್ಧಾರಕ್ಕೆ ಬರಲು ಆಧಾರಗಳೇನು ಎಂದು ಪೀಠವು ಪ್ರಶ್ನಿಸಿತು.

ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ, 'ಸಿದ್ದಿಕ್ ಕಪ್ಪನ್ ಉಗ್ರ ಸಂಘಟನೆ ಪಿಎಫ್‌ಐ ಜತೆ ಸಭೆ ನಡೆಸಿದ್ದರು. 2020ರ ಅಕ್ಟೋಬರ್ 5ರಂದು ಹಾಥರಸ್‌ನಲ್ಲಿ ಗಲಭೆ ನಡೆಸಲು ಸಿದ್ಧತೆ ನಡೆಸಿದ್ದರು. 1990ರ ದಶಕದಲ್ಲಿ ಮುಂಬೈನಲ್ಲಿ ನಡೆಸಿದ ಗಲಭೆಯ ರೀತಿಯದ್ದೇ ಸಂಚು ಅದಾಗಿತ್ತು' ಎಂದು ಹೇಳಿದರು. ಆಗ ಪೀಠವು, 'ಅವರ ಬಳಿ ಏನೇನು ದೊರೆಯಿತು' ಎಂದು ಪ್ರಶ್ನಿಸಿತು. 'ಗುರುತಿನ ಚೀಟಿ, ಕೆಲವು ಪ್ರಚೋದನಕಾರಿ ಸಾಹಿತ್ಯ ದೊರೆತವು' ಎಂದು ಜೇಠ್ಮಲಾನಿ ಉತ್ತರಿಸಿದರು.

ಅದಕ್ಕೆ ಪೀಠವು, 'ಅವರ ಬಳಿ ಸ್ಫೋಟಕವೇನಾದರೂ ಇತ್ತೇ? ಪ್ರಚೋದನಕಾರಿ ಸಾಹಿತ್ಯ ಎಂಬುದು ಹೇಗೆ ಗೊತ್ತಾಯಿತು' ಎಂದು ಪ್ರಶ್ನಿಸಿತು. 'ಇಲ್ಲ. ಅತ್ಯಾಚಾರ ಸಂತ್ರಸ್ತೆಯು ದಲಿತ ಸಮುದಾಯದ ಬಾಲಕಿ. ದಲಿತರೇ ಸುಮ್ಮನಿದ್ದರು. ಆದರೆ ಅವರನ್ನು ಕೆರಳಿಸಲು ಪಿಎಫ್‌ಐ ಮತ್ತು ಸಿದ್ದಿಕ್ ಸಂಚು ರೂಪಿಸಿದ್ದರು. ದಲಿತರನ್ನು ಕೆರಳಿಸುವ ಉದ್ದೇಶದ ಸಾಹಿತ್ಯವನ್ನು ಅವರು ಹೊಂದಿದ್ದರು' ಎಂದು ಜೇಠ್ಮಲಾನಿ ವಿವರಿಸಿದರು.

5B ಪುಟ ನೋಡಿ

'ವಿದೇಶದ ಟೂಲ್‌ಕಿಟ್'

ಹಾಥರಸ್‌ನಲ್ಲಿ ಗಲಭೆಯನ್ನು ಹೇಗೆ ಸೃಷ್ಟಿಸಬೇಕು ಎಂಬ ಮಾರ್ಗಸೂಚಿಗಳಿದ್ದ 'ಟೂಲ್‌ಕಿಟ್' ಅನ್ನು ಸಿದ್ದಿಕ್ ಹೊಂದಿದ್ದರು. ಹೀಗಾಗಿ ಸಿದ್ದಿಕ್‌ಗೆ ಜಾಮೀನು ನೀಡಬಾರದು ಎಂದು ಉತ್ತರ ಪ್ರದೇಶ ಸರ್ಕಾರದ ಪರ ವಕೀಲ ಮಹೇಶ್ ಜೇಠ್ಮಲಾನಿ ಹೇಳಿದರು. ಅದು ವಿದೇಶಕ್ಕೆ ಸಂಬಂಧಿಸಿದ ಟೂಲ್‌ಕಿಟ್ ಎಂದು ಪೀಠವು ಅಭಿಪ್ರಾಯಪಟ್ಟಿತು. ಜೇಠ್ಮಲಾನಿ ಅವರ ವಾದವನ್ನು ತಳ್ಳಿಹಾಕಿತು.

ಅದಕ್ಕೂ ಮುನ್ನ, 'ಇ–ಮೇಲ್ ಹೇಗೆ ಕಳಿಸಬೇಕು, ಸಾಮಾಜಿಕ ಜಾಲತಾಣಗಳಲ್ಲಿ ಏನು ಮಾಡಬೇಕು ಎಂಬ ವಿವರ ಟೂಲ್‌ಕಿಟ್‌ನಲ್ಲಿದೆ. ಪ್ರತಿಭಟನೆ ಹೇಗೆ ನಡೆಸಬೇಕು ಮತ್ತು ಪೊಲೀಸರ ಅಶ್ರುವಾಯು ಷೆಲ್ ದಾಳಿಯಿಂದ ಹೇಗೆ ತಪ್ಪಿಸಿಕೊಳ್ಳಬೇಕು ಎಂಬ ಸೂಚನೆಗಳು ಅದರಲ್ಲಿವೆ. ಪ್ರತಿಭಟನಾ ಸ್ಥಳದಿಂದ ತಪ್ಪಿಸಿಕೊಳ್ಳುವಾಗ ಕಪ್ಪು ಜನರು (ಬ್ಲ್ಯಾಕ್ ಪೀಪಲ್) ಎತ್ತ ಓಡುತ್ತಿರುತ್ತಾರೋ ಅತ್ತ ಓಡಿ ಎಂದೂ ಅದರಲ್ಲಿ ಸೂಚಿಸಲಾಗಿದೆ' ಎಂದು ಜೇಠ್ಮಲಾನಿ ವಿವರಿಸಿದರು.

ಆಗ ಕಪಿಲ್ ಸಿಬಲ್, 'ಇದು ಭಾರತಕ್ಕೆ ಸಂಬಂಧವೇ ಇಲ್ಲದ ಟೂಲ್‌ಕಿಟ್. ಅಮೆರಿಕದಲ್ಲಿ ನಡೆಯುತ್ತಿದ್ದ 'ಬ್ಲ್ಯಾಕ್ ಲೈವ್ಸ್ ಮ್ಯಾಟರ್ಸ್' ಚಳವಳಿಯ ಟೂಲ್‌ಕಿಟ್ ಇದು. ಸಿದ್ದಿಕ್ ಯಾವ ತಪ್ಪನ್ನೂ ಎಸಗಿಲ್ಲ, ಇದು ಅವರಿಗೆ ನೀಡಿದ ಕಿರುಕುಳ' ಎಂದು ಹೇಳಿದರು. ಸಿಬಲ್ ಅವರ ಪ್ರತಿಪಾದನೆಯನ್ನು ಪರಿಶೀಲಿಸಿದ ಪೀಠವು, 'ಇದು ಬೇರೆ ದೇಶಕ್ಕೆ ಸಂಬಂಧಿಸಿದ ಟೂಲ್‌ಕಿಟ್ ಇರಬೇಕು' ಎಂದು ಹೇಳಿತು.

> **ಎರಡು ವರ್ಷಗಳಲ್ಲಿ ನಾವು ಮಾನಸಿಕವಾಗಿ, ದೈಹಿಕವಾಗಿ ಮತ್ತು ಆರ್ಥಿಕವಾಗಿ ತೊಂದರೆಗಳನ್ನು ಎದುರಿಸಿದ್ದೇವೆ. ಜಾಮೀನು ದೊರೆತ ಸುದ್ದಿ ಕೇಳಿ ನಿರಾಳವಾಗುತ್ತಿದೆ**
> **ರೈಹಾನತ್**
> ಸಿದ್ದಿಕ್ ಕಪ್ಪನ್ ಪತ್ನಿ

> **ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ವಿದೆ ಎಂಬುದನ್ನು ಸುಪ್ರೀಂ ಕೋರ್ಟ್ ಒತ್ತಿ ಹೇಳಿದೆ. ಇಂದಿನ ಸಂದರ್ಭದಲ್ಲಿ ಇದು ಅತ್ಯಂತ ಒಳ್ಳೆಯ ಸಂಗತಿ**
> **ಸೀತಾರಾಂ ಯೆಚೂರಿ**
> ಸಿಪಿಎಂ ಪ್ರಧಾನ ಕಾರ್ಯದರ್ಶಿ

ನೀರಜ್ 'ಡೈಮಂಡ್' ಸಾಧನೆ

ಭಾರತದ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರು ಸ್ವಿಟ್ಜರ್‌ಲೆಂಡ್‌ನ ಜೂರಿಕ್‌ನಲ್ಲಿ ಗುರುವಾರ ನಡೆದ ಡೈಮಂಡ್ ಲೀಗ್ ಫೈನಲ್ಸ್‌ನಲ್ಲಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.



- ಡೈಮಂಡ್ ಲೀಗ್ ಫೈನಲ್ಸ್ ಗೆದ್ದ ಭಾರತದ ಮೊದಲ ಅಥ್ಲೀಟ್
- ಒಲಿಂಪಿಕ್ಸ್ ಚಿನ್ನ, ವಿಶ್ವಚಾಂಪಿಯನ್‌ಷಿಪ್ ಬೆಳ್ಳಿ ಬಳಿಕ ಮತ್ತೊಂದು ಮೈಲಿಗಲ್ಲು
- ಈ ವರ್ಷ ಆರು ಬಾರಿ 88 ಮೀ. ಗಿಂತ ಹೆಚ್ಚು ದೂರ ಸಾಧನೆ
- 2023ರ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಅರ್ಹತೆ

88.44 ಮೀ. ದೂರ ಎಸೆದ ಚೋಪ್ರಾ

ವೃತ್ತಿಜೀವನದ 4ನೇ ಅತ್ಯುತ್ತಮ ಪ್ರದರ್ಶನ

₹23.86 ಲಕ್ಷ ನಗದು ಬಹುಮಾನ

12

39 ಮೋಟಾರು ವಾಹನ ನಿರೀಕ್ಷಕರ ಹುದ್ದೆ

'ಅನರ್ಹ'ರ ನೇಮಕಕ್ಕೆ ತರಾತುರಿ!

• ಮಂಜುನಾಥ ಹೆಬ್ಬಾರ್

ನವದೆಹಲಿ: ಕಡಿಮೆ ಎತ್ತರ ಇದ್ದ ಕಾರಣಕ್ಕೆ ವೈದ್ಯಕೀಯ ಪರೀಕ್ಷೆಯಲ್ಲಿ ಅನರ್ಹಗೊಂಡವರು, ದೃಷ್ಟಿದೋಷ ಇದ್ದವರು ಹಾಗೂ ವೈದ್ಯಕೀಯ ಪರೀಕ್ಷೆಗೆ ಗೈರುಹಾಜರಾದವರನ್ನು ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಕರ್ನಾಟಕ ಸಾರಿಗೆ ಇಲಾಖೆಯು ತರಾತುರಿಯಲ್ಲಿ ಸಿದ್ಧತೆಗಳನ್ನು ನಡೆಸಿದೆ.

2006ನೇ ಸಾಲಿನ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳ ವೈದ್ಯಕೀಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೂ ನೇಮಕಾತಿ ಆದೇಶ ನೀಡಿಲ್ಲ ಎಂದು ಆರೋಪಿಸಿ 11 ಅಭ್ಯರ್ಥಿಗಳು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ. 'ಈ ಅಭ್ಯರ್ಥಿಗಳನ್ನು ಇಲಾಖೆಗೆ ಯಾವ ರೀತಿಯಲ್ಲಿ ಸೇರಿಸಿಕೊಳ್ಳಬಹುದು' ಎಂಬ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ಸಾರಿಗೆ ಇಲಾಖೆಯ ಕಾರ್ಯದರ್ಶಿಗೆ ಸುಪ್ರೀಂ ಕೋರ್ಟ್ ಜುಲೈ ತಿಂಗಳಲ್ಲಿ ನಿರ್ದೇಶನ ನೀಡಿತ್ತು.

ಪ್ರಜಾವಾಣಿ ವಿಶೇಷ

ಆಗಸ್ಟ್ 30ರಂದು ನಡೆದ ವಿಚಾರಣೆ ವೇಳೆ ಕರ್ನಾಟಕ ಸರ್ಕಾರದ ಪರ ವಕೀಲರು, 'ಪರೀಕ್ಷೆಗೆ ಹಾಜರಾದ 39 ಅಭ್ಯರ್ಥಿಗಳು ಕಡಿಮೆ ಎತ್ತರ ಹೊಂದಿದ್ದಾರೆ ಎಂಬುದು ವೈದ್ಯಕೀಯ ಪರೀಕ್ಷೆಯಲ್ಲಿ ಸಾಬೀತಾಗಿತ್ತು. ನೇಮಕಾತಿ ಪ್ರಕ್ರಿಯೆ ವೇಳೆ ಅಭ್ಯರ್ಥಿಗಳ ಅರ್ಹತೆ ಬಗ್ಗೆ ಕರ್ನಾಟಕ ಸರ್ಕಾರ ಜಾಹೀರಾತು ನೀಡಿತ್ತು. ಆದರೆ, ಮೋಟಾರು ವಾಹನ ನಿರೀಕ್ಷಕರ ಎತ್ತರದ ಬಗ್ಗೆ ಕೇಂದ್ರ ಸರ್ಕಾರ ಯಾವುದೇ ನಿಯಮ ರೂಪಿಸಿಲ್ಲ. ಹೀಗಾಗಿ, ಕಡಿಮೆ ಎತ್ತರವನ್ನು ಗಣನೆಗೆ ತೆಗೆದುಕೊಳ್ಳಬೇಕಿಲ್ಲ' ಎಂದು ವಾದ ಮಂಡಿಸಿದರು.

5B ಪುಟ ನೋಡಿ

ಮುಖ್ಯಾಂಶಗಳು
- ನೇಮಕಾತಿ ಆದೇಶ ರದ್ದುಪಡಿಸಿದ್ದ ಕೆಎಟಿ
- 105 ಮಂದಿಯ ನೇಮಕಕ್ಕೆ ಆದೇಶ ಹೊರಡಿಸಿದ್ದ ಸುಪ್ರೀಂ ಕೋರ್ಟ್
- ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿರುವ ಸಾರಿಗೆ ಇಲಾಖೆ

3 ವರ್ಷಗಳ ಸರ್ಕಾರದ 'ರಿಪೋರ್ಟ್ ಕಾರ್ಡ್' ಮಂಡಿಸುವ ಬೊಮ್ಮಾಯಿ

ಬಿಜೆಪಿ ಸರ್ಕಾರದ 'ಜನಸ್ಪಂದನ' ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು/ದೊಡ್ಡಬಳ್ಳಾಪುರ: ಬಿಜೆಪಿ ಸರ್ಕಾರದ ಮೂರು ವರ್ಷಗಳ ಸಾಧನೆಗಳನ್ನು ಜನರ ಮುಂದಿಡುವ 'ಜನಸ್ಪಂದನ' ಸಮಾವೇಶಕ್ಕೆ ದೊಡ್ಡಬಳ್ಳಾಪುರದಲ್ಲಿ ವೇದಿಕೆ ಸಜ್ಜಾಗಿದೆ. 2023ರ ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಅಣಿಗೊಳಿಸುವ ಆಶಯದಿಂದ ನಡೆಸುತ್ತಿರುವ ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೊಸ ಯೋಜನೆಗಳನ್ನು ಘೋಷಿಸುವ ಸಾಧ್ಯತೆ ಇದೆ.

'ಜನೋತ್ಸವ'ದ ಹೆಸರಿನಲ್ಲಿ ನಡೆಯಬೇಕಿದ್ದ ಈ ಕಾರ್ಯಕ್ರಮ ಮೂರು ಬಾರಿ ಮುಂದೂಡಿಕೆಯಾಗಿತ್ತು. ಇದೀಗ 'ಜನಸ್ಪಂದನ'ದ ಹೆಸರಿನಲ್ಲಿ ನಡೆಯುತ್ತಿದೆ. ಕಾರ್ಯಕ್ರಮದಲ್ಲಿ ಸುಮಾರು 3 ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದ್ದು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಮಧುಗಿರಿಯಿಂದ ಕಾರ್ಯಕರ್ತರು ಮತ್ತು ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳು ಭಾಗವಹಿಸಲಿದ್ದಾರೆ. ಇದಕ್ಕಾಗಿ ಐದು ಸಾವಿರ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ.

ದೊಡ್ಡಬಳ್ಳಾಪುರದಲ್ಲಿ ಸಮಾವೇಶದ ಜಾಗದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾರ್ಯಕ್ರಮದ ನೇತೃತ್ವ ವಹಿಸಿರುವ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, 'ನಮ್ಮದು ಏಕ ವ್ಯಕ್ತಿ ಕೇಂದ್ರಿತ ಉತ್ಸವವಲ್ಲ. ಜನರ ಸ್ಪಂದನೆಯ ಉತ್ಸವ. ಇದರಲ್ಲಿ ಸರ್ಕಾರದ ಜನಪರ ಯೋಜನೆಗಳ ಫಲಾನುಭವಿಗಳಾದ ರೈತರು, ಸ್ತ್ರೀಶಕ್ತಿ ಸಂಘದ ಪದಾಧಿಕಾರಿಗಳು, ಹಾಲು ಉತ್ಪಾದಕರ ಸಂಘಗಳ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಲಿದ್ದಾರೆ' ಎಂದರು.

5A ಪುಟ ನೋಡಿ

ಬಿಸಿನೀರು ಬಿದ್ದು ವಿದ್ಯಾರ್ಥಿಗೆ ಗಾಯ?

ಮಸ್ಕಿ: ತನಿಖೆ ನಡೆಸುವಂತೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಖಾಸಗಿ ಶಾಲೆಯಲ್ಲಿ ಓದುತ್ತಿರುವ ಎರಡನೇ ತರಗತಿ ವಿದ್ಯಾರ್ಥಿಯೊಬ್ಬನ ಸೊಂಟದ ಸುತ್ತಲೂ ಸುಟ್ಟಗಾಯಗಳಾಗಿದ್ದು, ಆತ ಲಿಂಗಸುಗೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದು ವಾರದ ಬಳಿಕ ಶುಕ್ರವಾರ ಗೊತ್ತಾಗಿದೆ. ಈ ಬಗ್ಗೆ ಮಸ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಶಾಲೆಯಲ್ಲಿ ಮಲ–ಮೂತ್ರ ಮಾಡಿಕೊಂಡಿದ್ದಕ್ಕೆ ವಿದ್ಯಾರ್ಥಿ ಮೇಲೆ ಶಿಕ್ಷಕರೊಬ್ಬರು ಬಿಸಿ ನೀರು ಚೆಲ್ಲಿದ್ದರಿಂದಾಗಿ ಗಾಯಗಳಾಗಿವೆ ಎಂಬ ಆರೋಪಗಳಿವೆ. ಈ ಬಗ್ಗೆ ತನಿಖೆ ನಡೆಸಿ, ಶಿಕ್ಷಕನ ವಿರುದ್ಧ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗೆ ಸಮರ್ಪಕ ಚಿಕಿತ್ಸೆ ಕೊಡಿಸಬೇಕು' ಎಂದು ಮಕ್ಕಳ ಸಹಾಯವಾಣಿಯ ಜಿಲ್ಲಾ ಸಂಯೋಜಕ ಸುದರ್ಶನ ಅವರು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಪತ್ರ ಬರೆದು ಕೋರಿದ್ದಾರೆ.

ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ವಿಶ್ವನಾಥ ಅವರು ಶಾಲೆ ಮತ್ತು ಆಸ್ಪತ್ರೆಗೆ ಭೇಟಿ ನೀಡಿ ಬಾಲಕ ಮತ್ತು ಪಾಲಕರಿಂದ ಮಾಹಿತಿ ಪಡೆದಿದ್ದಾರೆ. 'ಪಾಲಕರು ಯಾರ ವಿರುದ್ಧವೂ ದೂರು ನೀಡದ ಕಾರಣ ಈ ಬಗ್ಗೆ ತನಿಖೆ ನಡೆಸುವಂತೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮತ್ತು ಮಸ್ಕಿ ಪೊಲೀಸ್ ಠಾಣೆಗೆ ಕೋರಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಶೌಚಾಲಯಕ್ಕೆ ಹೋಗಿದ್ದ ವೇಳೆ ಸೋಲಾರ್ ಹೀಟರ್‌ನ ನಳದಿಂದ ಬಂದ ಬಿಸಿ ನೀರು ಗಮನಿಸದೆ ಮೈಮೇಲೆ ಹಾಕಿಕೊಂಡಿದ್ದರಿಂದ ನನ್ನ ಮಗನಿಗೆ ಗಾಯಗಳಾಗಿವೆ. ಇದರಲ್ಲಿ ನನ್ನ ಮಗನ ತಪ್ಪು ಇದೆ. ಹೀಗಾಗಿ, ನಾನು ಯಾರ ವಿರುದ್ಧವೂ ದೂರು ನೀಡಿಲ್ಲ' ಎಂದು ವಿದ್ಯಾರ್ಥಿಯ ತಂದೆ 'ಪ್ರಜಾವಾಣಿ'ಗೆ ತಿಳಿಸಿದರು.

> **ಶೌಚಾಲಯದಲ್ಲಿ ವಿದ್ಯಾರ್ಥಿಗೆ ಸೋಲಾರ್ ಹೀಟರ್‌ನ ಬಿಸಿ ನೀರಿನ ನಳ ಮತ್ತು ತಣ್ಣೀರಿನ ನಳ ಗೊತ್ತಾಗಿರಲಿಕ್ಕಿಲ್ಲ. ನಳದಿಂದ ಬಂದ ಬಿಸಿ ನೀರನ್ನು ಮೈಮೇಲೆ ಹಾಕಿಕೊಂಡಿದ್ದರಿಂದ ಗಾಯಗಳಾಗಿವೆ. ವಿದ್ಯಾರ್ಥಿ ಇದೀಗ ಆರೋಗ್ಯದಿಂದ ಇದ್ದಾನೆ**
> **ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ**

> **ವಿದ್ಯಾರ್ಥಿ ಮೇಲೆ ಶಿಕ್ಷಕರೊಬ್ಬರು ಬಿಸಿ ನೀರು ಹಾಕಿದ್ದಾರೆ ಎಂದು ದೂರು ಬಂದಿದೆ. ತನಿಖೆ ಮಾಡುವಂತೆ ಜಿಲ್ಲಾ ಮಕ್ಕಳ ಸಂರಕ್ಷಣಾಧಿಕಾರಿ ಮನ್ಸೂರ ಅಹ್ಮದ್ ದೂರು ನೀಡಿದ್ದು, ತನಿಖೆ ನಡೆಸಲಾಗುತ್ತಿದೆ**
> **ಸಿದ್ಧರಾಮ ಬಿದರಾಣಿ,** ಪಿಎಸ್‌ಐ, ಮಸ್ಕಿ ಪೊಲೀಸ್ ಠಾಣೆ

ಮಳೆ: ಸಂತ್ರಸ್ತರಿಗೆ ನೆರವು ಕಲ್ಪಿಸಿ ಬಿಬಿಎಂಪಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಮಹಾನಗರದಲ್ಲಿ ಇತ್ತೀಚೆಗೆ ಸುರಿದಿರುವ ಭಾರಿ ಮಳೆಯಿಂದಾಗಿ ಸಂತ್ರಸ್ತರಾದವರ ನೆರವಿಗೆ ತಕ್ಷಣ ಧಾವಿಸಬೇಕು, ಅವರಿಗೆ ಉಚಿತ ಆಹಾರ, ವಸತಿ, ಕುಡಿಯುವ ನೀರು ಮತ್ತಿತರ ಅಗತ್ಯತೆ ಪೂರೈಸ ಬೇಕು' ಎಂದು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಬಿಬಿಎಂಪಿಗೆ ಆದೇಶಿಸಿದೆ.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಎನ್. ಕೇಶವನಾರಾಯಣ ಅವರ ಅಧ್ಯಕ್ಷತೆಯಲ್ಲಿ ಸಂತಸ್ತರಿಗೆ ನೆರವು ನೀಡುವ ಕುರಿತು ಬಿಬಿಎಂಪಿ, ಬಿಡಿಎ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಹಲವು ನಿರ್ದೇಶನ ನೀಡಲಾಗಿದೆ.

ಬಿಬಿಎಂಪಿ ಇತರೆ ಸಂಸ್ಥೆಗಳ ನೆರವಿನಿಂದ ಕೂಡಲೇ ಮನೆಗಳಲ್ಲಿರುವ ನುಗ್ಗಿರುವ ನೀರು ಹೊರಹಾಕಲು ಕ್ರಮ ಕೈಗೊಳ್ಳಬೇಕು ಮತ್ತು ಪ್ರವಾಹ ಪೀಡಿತ ಪ್ರದೇಶಗಳನ್ನು ಗುರುತಿಸಬೇಕು, ಆಗಿರುವ ನಷ್ಟವನ್ನು ಅಂದಾಜು ಮಾಡಬೇಕು.

'ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಮತ್ತು ಜಿಲ್ಲಾ ಪ್ರಾಧಿಕಾರದಮೂಲಕ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿzಕಾರದ ಸಂತ್ರಸ್ತರ ನೆರವಿನ ಯೋಜನೆ 2010ರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು' ಎಂದೂ ನಿರ್ದೇಶಿಸಲಾಗಿದೆ.

ಬಿಬಿಎಂಪಿ ಪ್ರವಾಹ ಪೀಡಿತ ಸಂತ್ರಸ್ತರಿಗೆ ನಿಯಮದಂತೆ ಉಚಿತ ಆಹಾರ, ಹೊದಿಕೆ, ಶುದ್ಧ ಕುಡಿಯುವ ನೀರು ಸೇರಿ ಎಲ್ಲ ರೀತಿಯ ಪರಿಹಾರ ಒದಗಿಸಬೇಕು. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸಿ ಸಾಂಕ್ರಾಮಿಕ ಕಾಯಿಲೆಗಳಿಂದ ಜನರ ಆರೋಗ್ಯ ರಕ್ಷಣೆ ಮುಂದಾಗಬೇಕು ಎಂದು ಸೂಚಿಸಲಾಗಿದೆ.

ಪ್ರವಾಹದಿಂದ ಬಾಧಿತವಾಗಿರುವ ಕಾರ್ಮಿಕ ರಿಗೆ ಪರಿಹಾರ ಕಿಟ್ ಗಳನ್ನು ವಿತರಿಸುವಂತೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಂಡಳಿಗೆ ನಿರ್ದೇಶನ ನೀಡಿದೆ.

ಎಸಿಬಿ ರದ್ದು ಲೋಕಾಯುಕ್ತಕ್ಕೆ ಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶದಂತೆ ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರದ್ದುಗೊಳಿಸಿರುವ ರಾಜ್ಯ ಸರ್ಕಾರ, ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಹಿಂದೆ ನೀಡಿದ್ದ ಅಧಿಕಾರಗಳನ್ನು ಮರುಸ್ಥಾಪಿಸಿ ಶುಕ್ರವಾರ ಆದೇಶ ಹೊರಡಿಸಿದೆ.

ಎಸಿಬಿಯಲ್ಲಿ ತನಿಖಾ ಹಂತದಲ್ಲಿರುವ ಪ್ರಕರಣಗಳು, ಬಾಕಿ ಇರುವ ವಿಚಾರಣೆಗಳು, ಶಿಸ್ತುಕ್ರಮಕ್ಕೆ ಸಂಬಂಧಿಸಿದ ಪ್ರಕರಣಗಳು ಮತ್ತು ಖಾಸಗಿ ದೂರುಗಳಿಗೆ ಸಂಬಂಧಿಸಿದ ಎಲ್ಲ ಪ್ರಕರಣಗಳನ್ನೂ ಲೋಕಾಯುಕ್ತಕ್ಕೆ ವರ್ಗಾಯಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

2016ರಲ್ಲಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ತನಿಖೆ ನಡೆಸುವ ಅಧಿಕಾರವನ್ನು ಲೋಕಾಯುಕ್ತ ಪೊಲೀಸ್ ವಿಭಾಗದಿಂದ ಹಿಂಪಡೆದು ಎಸಿಬಿ ರಚಿಸಿತ್ತು. ಇದನ್ನು ರದ್ದುಗೊಳಿಸಿ ಹೈಕೋರ್ಟ್ ವಿಭಾಗೀಯ ಪೀಠ ಇದೇ ಆಗಸ್ಟ್ 11ರಂದು ತೀರ್ಪು ನೀಡಿತ್ತು.

ಸಾಲ ಆ್ಯಪ್: ಕೇಂದ್ರ ಮೂಗುದಾರ

ನವದೆಹಲಿ (ಪಿಟಿಐ): ಡಿಜಿಟಲ್ ವೇದಿಕೆಗಳ ಮೂಲಕ ಸಾಲ ಕೊಡಲು ಪರವಾನಗಿ ಇರುವ ಆ್ಯಪ್‌ಗಳ ಪಟ್ಟಿಯೊಂದನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಿದ್ಧಪಡಿಸಲಿದೆ. ಈ ಆ್ಯಪ್‌ಗಳು ಮಾತ್ರ ಆ್ಯಪ್ ಸ್ಟೋರ್‌ಗಳಲ್ಲಿ ಲಭ್ಯವಿರುವಂತೆ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ನೋಡಿಕೊಳ್ಳಲಿದೆ.

10

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸುದರ್ಶನ್ ಜ್ಯುವೆಲರ್ಸ್
ಚಿನ್ನ • ಬೆಳ್ಳಿ • ಚಿನ್ನದ ಆಭರಣಗಳು
ವಿಶೇಷ ಕೂಡುಗೆ ವೇಸ್ಟೇಜ್ 4% ಮಾತ್ರ
₹4815/-gm
ಬೆಳ್ಳಿ ₹ 51,000/-
ಚಿಕ್ಕಪೇಟೆ: 41300355

ಸುಭಾಷಿತ

ಪ್ರತಿಯೊಬ್ಬರೂ ಜಗತ್ತನ್ನು ಬದಲಾಯಿಸುವ ಬಗ್ಗೆ ಯೋಚಿಸುತ್ತಾರೆ. ಆದರೆ, ಯಾರೊಬ್ಬರೂ ತಾನು ಬದಲಾಗುವ ಕುರಿತು ಯೋಚಿಸುವುದಿಲ್ಲ.

–ಲಿಯೊ ಟಾಲ್‌ಸ್ಟಾಯ್

ಭಾರತ– ಬಾಂಗ್ಲಾ ಬಾಂಧವ್ಯ ಮತ್ತೊಂದು ಮಹತ್ವದ ಹೆಜ್ಜೆ

ನೆರೆಯ ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರು ಭಾರತಕ್ಕೆ ಭೇಟಿ ನೀಡಿದ್ದಾರೆ. ನೀರು ಹಂಚಿಕೆ, ವ್ಯಾಪಾರ, ಸಂವಹನ, ಬಾಹ್ಯಾಕಾಶ, ರೈಲು ಮೂಲಸೌಕರ್ಯ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರದ ಹಲವು ಒಪ್ಪಂದಗಳಿಗೆ ಎರಡೂ ದೇಶಗಳು ಸಹಿ ಹಾಕಿವೆ. ಹಾಗಾಗಿ, ಹಸೀನಾ ಅವರ ಭೇಟಿಯು ಫಲಪ್ರದ ಎಂದೇ ಹೇಳಬಹುದು. ಕುಶಿಯಾರಾ ನದಿ ನೀರು ಹಂಚಿಕೆಗೆ ಸಂಬಂಧಿಸಿದ ಒಪ್ಪಂದವು ಹೆಚ್ಚು ಮಹತ್ವದ್ದಾಗಿದೆ. ಫರಕ್ಕಾ ಅಣೆಕಟ್ಟಿನ ನೀರು ಹಂಚಿಕೆಗಾಗಿ ಎರಡೂ ದೇಶಗಳ ನಡುವೆ 1996ರಲ್ಲಿ ಒಪ್ಪಂದ ಏರ್ಪಟ್ಟಿತ್ತು. ಅದರ ಬಳಿಕ, ಭಾರತ–ಬಾಂಗ್ಲಾ ನಡುವೆ ನೀರು ಹಂಚಿಕೆ ಒಪ್ಪಂದ ಆಗಿರುವುದು ಇದೇ ಮೊದಲು. ಕುಶಿಯಾರಾ ಒಪ್ಪಂದದಿಂದಾಗಿ ದಕ್ಷಿಣ ಅಸ್ಸಾಂ ಮತ್ತು ಬಾಂಗ್ಲಾ ದೇಶದ ಸಿಲ್‌ಹಟ್ ಪ್ರದೇಶದ ಜನರಿಗೆ ಅನುಕೂಲ ಆಗಲಿದೆ. ಸಮಗ್ರ ಆರ್ಥಿಕ ಸಹಕಾರ ಒಪ್ಪಂದಕ್ಕೆ (ಸಿಇಪಿಎ) ಎರಡೂ ದೇಶಗಳು ಒಪ್ಪಿಗೆ ಸೂಚಿಸಿವೆ. ಈ ದಿಸೆಯಲ್ಲಿ ಮಾತುಕತೆ ಶೀಘ್ರವೇ ಆರಂಭ ಆಗಲಿದೆ. ದಕ್ಷಿಣ ಏಷ್ಯಾದಲ್ಲಿ ಬಾಂಗ್ಲಾದೇಶವು ಭಾರತದ ಅತ್ಯಂತ ದೊಡ್ಡ ವ್ಯಾಪಾರ ಪಾಲುದಾರ. ಕಳೆದ ಐದು ವರ್ಷಗಳಲ್ಲಿ ವ್ಯಾಪಾರದ ಪ್ರಮಾಣವು ದುಪ್ಪಟ್ಟಾಗಿದೆ. ಬಾಂಗ್ಲಾದೇಶವು ಇತ್ತೀಚಿನ ವರ್ಷಗಳಲ್ಲಿ ಗಣನೀಯವಾದ ಆರ್ಥಿಕ ಅಭಿವೃದ್ಧಿಯನ್ನೂ ಸಾಧಿಸಿದೆ. ಕನಿಷ್ಠ ಅಭಿವೃದ್ಧಿ ಹೊಂದಿದ ದೇಶ ಎಂಬ ಹಣೆಪಟ್ಟಿಯನ್ನು ಬಾಂಗ್ಲಾದೇಶವು 2026ರಲ್ಲಿ ಕಳಚಿಕೊಳ್ಳಲಿದೆ. ಆ ಹೊತ್ತಿಗೆ ಸಿಇಪಿಎ ಮಾತುಕತೆಯನ್ನು ಪೂರ್ಣಗೊಳಿಸುವ ಗುರಿಯನ್ನು ಎರಡೂ ದೇಶಗಳು ಹಾಕಿಕೊಂಡಿವೆ.

ಮಿತ್ರರಾಷ್ಟ್ರ ಬಾಂಗ್ಲಾದೇಶವನ್ನು ಭಾರತ ಇನ್ನೂ ಚೆನ್ನಾಗಿ ನಡೆಸಿಕೊಳ್ಳಬೇಕು

ಭಾರತ–ಬಾಂಗ್ಲಾ ನಡುವಣ ಸಂಬಂಧವು ಹಿಂದಿನಿಂದಲೂ ಬಲವಾಗಿಯೇ ಇದೆ. ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಆಡಳಿತ ಅವಧಿಯಲ್ಲಿ ಸಂಬಂಧವು ಹೆಚ್ಚು ಸೌಹಾರ್ದದಿಂದ ಕೂಡಿದೆ. ಭಾರತದ ಭದ್ರತಾ ಕಳವಳಗಳಿಗೆ ಹಸೀನಾ ಅವರ ಸರ್ಕಾರವು ಸಂವೇದನಾಶೀಲವಾಗಿ ಸ್ಪಂದಿಸಿದೆ. ಇಸ್ಲಾಂ ಮೂಲಭೂತವಾದಿ ಗುಂಪುಗಳು ಮತ್ತು ಬಾಂಗ್ಲಾದಲ್ಲಿ ನೆಲೆಯಾಗಿದ್ದ ಭಾರತ ವಿರೋಧಿ ಉಗ್ರಗಾಮಿ ಗುಂಪುಗಳ ವಿರುದ್ಧ ಹಸೀನಾ ಅವರು ಕಠಿಣ ಕ್ರಮಗಳನ್ನು ಕೈಗೊಂಡಿದ್ದಾರೆ. ಚೀನಾದ 'ಬೆಲ್ಟ್ ಆ್ಯಂಡ್ ರೋಡ್ ಇನಿಷಿಯೇಟಿವ್'ನ ಭಾಗವಾಗಿ ಬಾಂಗ್ಲಾ ಇದೆ; ಹಾಗೆಯೇ ಮೂಲಸೌಕರ್ಯ ನಿರ್ಮಾಣಕ್ಕೆ ಬೇಕಾದ ಪರಿಣತಿ ಹಾಗೂ ಹೂಡಿಕೆಗಾಗಿ ಚೀನಾದ ನೆರವನ್ನು ಬಾಂಗ್ಲಾ ಪಡೆಯುತ್ತಿದೆ. ಆದರೆ, ಇಂತಹ ನೆರವನ್ನು ಭಾರತ, ಜಪಾನ್, ದಕ್ಷಿಣ ಕೊರಿಯಾ ಮುಂತಾದ ದೇಶಗಳಿಂದಲೂ ಪಡೆದುಕೊಳ್ಳುವ ಮೂಲಕ ಸಮತೋಲನ ಕಾಯ್ದುಕೊಳ್ಳುವ ಜಾಣ್ಮೆಯನ್ನು ಮೆರೆದಿದೆ. ಸೋನಾದಿಯಾ ಆಳ ಸಮುದ್ರ ಬಂದರು ಯೋಜನೆಯಿಂದಲೂ ಚೀನಾವನ್ನು ಬಾಂಗ್ಲಾದೇಶವು ಹೊರಗೆ ಇರಿಸಿತ್ತು. ಭಾರತಕ್ಕೆ ಕಳವಳಕಾರಿಯಾಗಿದ್ದ ಈ ಯೋಜನೆಯನ್ನು ಬಳಿಕ ಕೈಬಿಡಲಾಯಿತು. ಭಾರತದ ಬಗ್ಗೆ ಇಷ್ಟೊಂದು ಸಂವೇದನಾಶೀಲವಾಗಿ ಹಸೀನಾ ಅವರು ವರ್ತಿಸುತ್ತಿದ್ದರೂ ಭಾರತ ಅದಕ್ಕೆ ಸಮಾನವಾದ ಸ್ಪಂದನ ತೋರಿಲ್ಲ ಎಂಬ ಕಾರಣಕ್ಕೆ ಬಾಂಗ್ಲಾದಲ್ಲಿ ಭಾರತ ಮತ್ತು ಹಸೀನಾ ಅವರ ಕುರಿತು ಟೀಕೆಯೂ ಇದೆ.

ತೀಸ್ತಾ ನೀರು ಹಂಚಿಕೆ ಒಪ್ಪಂದವು ಮರೀಚಿಕೆಯಾಗಿಯೇ ಉಳಿದಿದೆ. ಒಪ್ಪಂದದ ಕರಡು 2011ರಲ್ಲಿಯೇ ಸಿದ್ಧವಾಗಿದೆ. ಆದರೆ, ಒಪ್ಪಂದಕ್ಕೆ ಸಹಿ ಹಾಕುವುದಕ್ಕೆ ಸಂಬಂಧಿಸಿ ಭಾರತದಲ್ಲಿ ರಾಜಕೀಯ 'ಇಚ್ಛಾಶಕ್ತಿ' ಇಲ್ಲದಿರುವುದು ಇದಕ್ಕೆ ಕಾರಣ. ದೇಶೀಯ ರಾಜಕಾರಣ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಬಗೆಗಿನ ವಿರೋಧದ ಆಧಾರದಲ್ಲಿ ಒಪ್ಪಂದದ ಕುರಿತ ತಮ್ಮ ನಿಲುವನ್ನು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರೂಪಿಸಿಕೊಳ್ಳುತ್ತಿದ್ದಾರೆ. ಕುಶಿಯಾರಾ ಒಪ್ಪಂದವು ಭಾರತ ಭೇಟಿಯ ತಮ್ಮ ಸಾಧನೆ ಎಂದು ಹಸೀನಾ ಅವರು ಬಿಂಬಿಸಿಕೊಳ್ಳಬಹುದು. ಆದರೆ, ತೀಸ್ತಾ ಒಪ್ಪಂದವು ಸಾಧ್ಯವಾಗದಿರುವುದು ಅವರ ಪಾಲಿಗೆ ದೊಡ್ಡ ಹಿನ್ನಡೆ. ಒಂದು ವರ್ಷದಲ್ಲಿ ಅವರು ಸಾರ್ವತ್ರಿಕ ಚುನಾವಣೆ ಎದುರಿಸಬೇಕಿರುವುದರಿಂದ ಈ ಹಿನ್ನಡೆಯು ಹೆಚ್ಚು ಗಮನಾರ್ಹವಾಗಿದೆ. ಕೇಂದ್ರದ ಕೆಲವು ಸಚಿವರು ಬಾಂಗ್ಲಾದೇಶೀಯರನ್ನು ಅವಮಾನಿಸುವಂತಹ ಹೇಳಿಕೆಗಳನ್ನು ಪದೇ ಪದೇ ನೀಡಿದ್ದಾರೆ. ಬಾಂಗ್ಲಾದವರು ಗೆದ್ದಲುಗಳು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇತ್ತೀಚೆಗೆ ಹೇಳಿದ್ದರು. ಹಸೀನಾ ಅವರು ದೆಹಲಿಯಲ್ಲಿ ಮೋದಿ ಅವರ ಕೈಕುಲುಕುತ್ತಿದ್ದ ಅದೇ ಹೊತ್ತಿಗೆ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಬಾಂಗ್ಲಾ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಅಖಂಡ ಭಾರತಕ್ಕಾಗಿ ಬಾಂಗ್ಲಾವನ್ನು ಭಾರತದ ಜತೆಗೆ ವಿಲೀನಗೊಳಿಸಬೇಕು ಎಂದು ಅವರು ಹೇಳಿದ್ದಾರೆ. ಅತ್ಯಂತ ಆಪ್ತವಾಗಿರುವ ಮತ್ತು ಸಂವೇದನಾಶೀಲವಾಗಿರುವ ಮಿತ್ರ ರಾಷ್ಟ್ರದ ಜತೆಗೆ ಭಾರತವು ನಡೆದುಕೊಳ್ಳುವ ರೀತಿ ಇನ್ನಷ್ಟು ಚೆನ್ನಾಗಿ ಇರಬೇಕಿತ್ತು.

ದಿನದ ಟ್ವೀಟ್

ಅತ್ಯುತ್ತಮ ಉದಾಹರಣೆ

ಸಿದ್ದಿಕ್ ಕಪ್ಪನ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ. ಸಾಬೀತುಪಡಿಸಲಾದ ಯಾವುದೇ ಅಪರಾಧ ಮಾಡದಿದ್ದ, ಹಾಥರಸ್‌ನ ವಿದ್ಯಮಾನವನ್ನು ವರದಿ ಮಾಡಲು ಹೋಗುತ್ತಿದ್ದ ಇವರಿಗೆ ವೈಯಕ್ತಿಕ ಸ್ವಾತಂತ್ರ್ಯವನ್ನು ನೀಡಲು ಸುಪ್ರೀಂ ಕೋರ್ಟ್‌ಗೆ ಎರಡು ವರ್ಷಗಳು ಬೇಕಾದವು. ಜಾಮೀನಿಗೆ ಸಂಬಂಧಿಸಿದ ಕಾನೂನು, ನ್ಯಾಯ ಕೊಡಿಸಲು ವಿಫಲವಾದ ಅತ್ಯುತ್ತಮ ಉದಾಹರಣೆಯಾಗಿ ಈ ಪ್ರಕರಣ ನೆನಪಿನಲ್ಲಿ ಉಳಿಯಲಿದೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಕಾರು ಪ್ರಯಾಣಿಕರ ಸುರಕ್ಷತೆಗೆ ಕಾನೂನು ಮಾಡುವುದು ಸರಿ, ಆದರೆ ಮಾಡಿರುವ ಕಾನೂನು ಎಷ್ಟು ಪಾಲನೆಯಾಗುತ್ತಿದೆ ಎಂಬುದರ ಬಗ್ಗೆಯೂ ಗಮನಿಸಬೇಕು. ಕಟ್ಟುನಿಟ್ಟಿನ ಕ್ರಮ, ದಕ್ಷ ಅಧಿಕಾರಿಗಳು, ಭ್ರಷ್ಟಾಚಾರರಹಿತ ಪಾರದರ್ಶಕ ಆಡಳಿತ, ಹಾಗೆಯೇ ಪ್ರಭಾವಿ ವ್ಯಕ್ತಿಗಳ ಒತ್ತಡಕ್ಕೆ ಒಳಗಾಗದಿದ್ದಾಗ ಮಾತ್ರ ಜಾರಿಗೆ ತಂದಿರುವ ಕಾನೂನು ಬಲಿಷ್ಠವಾಗುತ್ತದೆ.

ಚೆಲುವರಾಜು ಕೆ., ನಾಗರಿಕ

25 ವರ್ಷಗಳ ಹಿಂದೆ

ಬುಧವಾರ, 10-9-1997

- **ಬಾಬ್ರಿ ಮಸೀದಿ ಧ್ವಂಸ: ಆರೋಪಪಟ್ಟಿಗೆ ನಿರ್ಧಾರ– ಠಾಕ್ರೆ, ಅಡ್ವಾಣಿ ಸೇರಿ 49 ಜನ ಆರೋಪಿಗಳು**

ಲಖನೌ, ಸೆ. 9– (ಪಿಟಿಐ): ಉತ್ತರಪ್ರದೇಶದ ಅಯೋಧ್ಯೆಯಲ್ಲಿ 1992ರ ಡಿಸೆಂಬರ್ ಆರರಂದು ನಡೆದ 'ಬಾಬ್ರಿ ಮಸೀದಿ' ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಸೇನಾ ಮುಖ್ಯಸ್ಥ ಬಾಳಾ ಠಾಕ್ರೆ, ಬಿಜೆಪಿ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಹಾಗೂ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಸೇರಿದಂತೆ 49 ಜನರ ವಿರುದ್ಧ ಆರೋಪಪಟ್ಟಿ ಸಿದ್ಧಪಡಿಸಲು ನಿಯೋಜಿತ ನ್ಯಾಯಾಲಯ ನಿರ್ಧರಿಸಿದೆ.

ಆರೋಪಪಟ್ಟಿ ಸಿದ್ಧಪಡಿಸಲಾಗುವ ಇತರೆ ಆರೋಪಿಗಳ ಪೈಕಿ ಬಿಜೆಪಿ ನಾಯಕ ಡಾ. ಮುರಳಿ ಮನೋಹರ ಜೋಷಿ, ವಿಜಯ ರಾಜೇ ಸಿಂಧಿಯಾ, ವಿಶ್ವ ಹಿಂದೂ ಪರಿಷತ್ ನಾಯಕರಾದ ಗಿರಿರಾಜ್ ಕಿಶೋರ್ ಮತ್ತು ಅಶೋಕ್ ಸಿಂಘಾಲ್ ಹಾಗೂ ಬಜರಂಗ ದಳದ ನಾಯಕ ವಿನಯ್ ಕಟಿಯಾರ್ ಸೇರಿದ್ದಾರೆ.

- **ರಾಜ್ಯಸಭೆಗೆ ಮೂಪನಾರ್ ಸೇರಿ ಟಿಎಂಸಿ ಸದಸ್ಯರ ರಾಜೀನಾಮೆ**

ನವದೆಹಲಿ, ಸೆ. 9 (ಪಿಟಿಐ): ಕೇಂದ್ರ ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವೆ ಜಯಂತಿ ನಟರಾಜನ್, ತಮಿಳು ಮಾನಿಲ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಜಿ.ಕೆ. ಮೂಪನಾರ್ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಪೀಟರ್ ಆಲ್ಫೋನ್ಸ್ ಅವರು ತಮ್ಮ ರಾಜ್ಯಸಭಾ ಸ್ಥಾನಗಳಿಗೆ 'ತಾಂತ್ರಿಕ ಕಾರಣ'ದ ಹಿನ್ನೆಲೆಯಲ್ಲಿ ನೀಡಿದ್ದ ರಾಜೀನಾಮೆಯನ್ನು ರಾಜ್ಯಸಭೆಯ ಸಭಾಪತಿ ಕೃಷ್ಣಕಾಂತ್ ಇಂದು ಅಂಗೀಕರಿಸಿದರು.

ಕಾಂಗ್ರೆಸ್ ಟಿಕೆಟ್ ಮೇಲೆ ಸ್ಪರ್ಧಿಸಿ ಗೆದ್ದಿದ್ದ ಈ ಮೂವರು ಸದಸ್ಯರ ಆಯ್ಕೆಯನ್ನು ಪ್ರಶ್ನಿಸಿ ಶಿವಸೇನೆಯ ಸದಸ್ಯರೊಬ್ಬರು ಅರ್ಜಿ ಸಲ್ಲಿಸಿ, ಇದು 'ಪಕ್ಷಾಂತರ' ಎಂದು ವಾದಿಸಿದ್ದರು.

50 ವರ್ಷಗಳ ಹಿಂದೆ

ಭಾನುವಾರ, 10-9-1972

- **ಗೋಲನ್ ಬಳಿ ಇಸ್ರೇಲಿ ಸ್ಥಾನದ ಮೇಲೆ ಹಲ್ಲೆ: ಪ್ರತೀಕಾರ ದಾಳಿಯಲ್ಲಿ ಸಿರಿಯಾದ ಮೂರು ವಿಮಾನಗಳು ಧ್ವಂಸ**

ಟೆಲ್‌ಅವಿವ್, ಸೆ. 9– ಗೋಲನ್ ಪರ್ವತ ಪ್ರದೇಶದಲ್ಲಿ ಇಂದು ಇಸ್ರೇಲ್ ಮತ್ತು ಸಿರಿಯಾ ನಡುವೆ ನಡೆದ ಉಗ್ರ ವಿಮಾನ ಕಾಳಗದಲ್ಲಿ ಸಿರಿಯಾಕ್ಕೆ ಅಪಾರ ಹಾನಿ ಉಂಟಾಗಿದೆ. ಗೋಲನ್ ಪರ್ವತ ಪ್ರದೇಶದಲ್ಲಿನ ತನ್ನ ಸೈನಿಕ ನೆಲೆಗಳ ಮೇಲೆ ದಾಳಿ ನಡೆಸಲೆತ್ನಿಸಿದ ಮೂರು ಸಿರಿಯನ್ ವಿಮಾನಗಳನ್ನು ಹೊಡೆದುರುಳಿಸಲಾಯಿತೆಂದು ಇಸ್ರೇಲಿನ ಮಿಲಿಟರಿ ವಕ್ತಾರರು ಇಂದು ಇಲ್ಲಿ ತಿಳಿಸಿದರು.

ಸಿರಿಯಾದ ವಿಮಾನಗಳು ಇಸ್ರೇಲ್ ನೆಲೆಗಳಿಗೆ ಯಾವ ಹಾನಿಯನ್ನೂ ಉಂಟುಮಾಡಿಲ್ಲ. ಇಸ್ರೇಲಿ ವಿಮಾನಗಳು ಸುರಕ್ಷಿತವಾಗಿ ನೆಲೆಗೆ ವಾಪಸಾದವೆಂದು ವಕ್ತಾರರು ಹೇಳಿದರು.

- **ಡಿವಿಜಿ ಅವರ ಸ್ಥಿತಿಯಲ್ಲಿ ಸುಧಾರಣೆ**

ಬೆಂಗಳೂರು, ಸೆ. 9– ಲಘು ಹೃದಯಾಘಾತಕ್ಕೊಳಗಾಗಿ ನಿನ್ನೆ ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ಸೇರಿಸಲ್ಪಟ್ಟ ಡಿ.ವಿ. ಗುಂಡಪ್ಪ ಅವರು ಚೇತರಿಸುತ್ತಿದ್ದು, 'ಇದೀಗ ಕಳವಳಕ್ಕೆ ಏನೂ ಕಾರಣವಿಲ್ಲ' ಎಂದು ವೈದ್ಯರು ತಿಳಿಸಿದರು.

ರಾಜ್ಯಪಾಲ ಶ್ರೀ ಎಂ.ಎಲ್. ಸುಖಾಡಿಯಾ ಅವರನ್ನು ಒಳಗೊಂಡು ಅನೇಕ ಮಂದಿ ಪ್ರಮುಖರು ಆಸ್ಪತ್ರೆಗೆ ಭೇಟಿ ನೀಡಿ, ಡಿವಿಜಿ ಅವರ ಆರೋಗ್ಯ ವಿಚಾರಿಸಿ, ಶೀಘ್ರ ಸುಖ ಹಾರೈಸಿದರು.

ಕರುಳಿನ ನರತಂತುಗಳ ಸಂಶೋಧನೆಯು ವೈದ್ಯಕೀಯ ಲೋಕದಲ್ಲಿ ಕ್ರಾಂತಿ ಮಾಡುತ್ತಿದೆ

ಕರುಳು ಹೇಳಬಲ್ಲದು ಆರೋಗ್ಯದ ಗುಟ್ಟು!

ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ನಮ್ಮ ಜೀವಿತಾವಧಿಯ ನಂತರವೂ ಮಕ್ಕಳು- ಮೊಮ್ಮಕ್ಕಳಲ್ಲಿ ತನ್ನ ಅಸ್ತಿತ್ವ ತೋರುತ್ತಲೇ ಇರುವ ವಿಶಿಷ್ಟ ಜೈವಿಕ ರಚನೆಗಳೆಂದರೆ ವಂಶವಾಹಿಗಳು. ಅವುಗಳ ಸ್ವರೂಪ ಅಭ್ಯಸಿಸುವುದೇ ತಳಿಶಾಸ್ತ್ರ ಅಥವಾ ಅನುವಂಶಶಾಸ್ತ್ರದ ಉದ್ದೇಶ. ಬರೀ ಒಂದೂವರೆ ಶತಮಾನದ ಇತಿಹಾಸವಿರುವ ಈ ಜ್ಞಾನಶಾಖೆಯು ಬೆಳೆದುನಿಂತ ಪರಿಯೇ ವಿಸ್ಮಯಕಾರಿ.

ದೇಹದ ಪ್ರತೀ ಜೀವಕೋಶದ ಕೋಶಕೇಂದ್ರದಲ್ಲಿ ಇರುವ ವರ್ಣತಂತುಗಳಲ್ಲಿ ರೈಲುಹಳಿಗಳಂತೆ ಜೋಡಣೆಯಾಗಿರುವ ವಂಶವಾಹಿ ಅಥವಾ ಜೀನ್‌ಗಳನ್ನು ಗುರುತಿಸಿ, ಪ್ರತ್ಯೇಕಿಸಿ, ರಾಸಾಯನಿಕ ಸ್ವರೂಪ ಅರ್ಥೈಸಿ, ಅದರ ಕಾರ್ಯವನ್ನು ನಿಶ್ಚಯಿಸಲು, ಅಂತರರಾಷ್ಟ್ರೀಯ ವ್ಯಾಪ್ತಿಯ ಬೃಹತ್ ಸಂಶೋಧನಾ ಯೋಜನೆಯೊಂದನ್ನು ತೊಂಬತ್ತರ ದಶಕದಲ್ಲಿ ಕೈಗೊಳ್ಳಲಾಗಿತ್ತು. ವರ್ಣತಂತುಗಳನ್ನೆಲ್ಲ ಜಾಲಾಡಿ 'ಮನುಷ್ಯನ ಸಂಪೂರ್ಣ ವಂಶವಾಹಿ ನಕ್ಷೆ'ಯನ್ನು ರಚಿಸಿದ ಈ ಯೋಜನೆಯು ಕಳೆದ ಜನವರಿಯಲ್ಲಿ ಅಂತಿಮಘಟ್ಟ ತಲುಪಿತು. ಮಾನವನ ಗುಣಾವಗುಣಗಳನ್ನೆಲ್ಲ ನಿರ್ಧರಿಸುವ ಸುಮಾರು ಇಪ್ಪತ್ತೈದು ಸಾವಿರ ವಂಶವಾಹಿಗಳ ಜಾತಕವನ್ನು ನಿಖರವಾಗಿ ತೆರೆದಿಟ್ಟ ಈ ಸಂಶೋಧನೆಯು ವಿಜ್ಞಾನದ ಮಹತ್ವದ ಮೈಲಿಗಲ್ಲೇ ಸರಿ.

ಇದರ ಜೊತೆಜೊತೆಯಲ್ಲೇ ಕಳೆದ ಒಂದೂವರೆ ದಶಕದಲ್ಲಿ ಜರುಗಿದ ಇನ್ನೊಂದು ಮಹತ್ವದ 'ತಳಿನಕ್ಷೆ'ಯು ಬಹುಜನರಿಗೆ ತಿಳಿದಿರಲಾರದು. ಮಾನವ ದೇಹದ ಅಂಗಾಂಗಗಳನ್ನೇ ಆಶ್ರಯಿಸಿ ಕೋಟ್ಯಂತರ ಸೂಕ್ಷ್ಮಾಣುಜೀವಿಗಳು ಬದುಕಿರುವುದು ಇತ್ತೀಚಿನ ದಶಕಗಳಲ್ಲಿ ಅರಿವಿಗೆ ಬಂದಿತ್ತಷ್ಟೇ. ಅಮೆರಿಕದ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಆಶ್ರಯದಲ್ಲಿ ನಡೆದ ವಿಸ್ತೃತ ಸಂಶೋಧನಾ ಯೋಜನೆಯೊಂದು, ಮನುಷ್ಯ ದೇಹದ ಸೂಕ್ಷ್ಮಾಣುಜೀವಿಗಳನ್ನೆಲ್ಲ ಹುಡುಕಿ, ಅವುಗಳ ವರ್ಣತಂತುಗಳಿಂದ ವಂಶವಾಹಿಗಳನ್ನು ಬೇರ್ಪಡಿಸಿ ನಕ್ಷೆ ರಚಿಸುವಲ್ಲಿ ಯಶಸ್ವಿಯಾಗಿದೆ. ಅಚ್ಚರಿಯ ಸಂಗತಿಯೆಂದರೆ, ಮಾನವ ದೇಹದಲ್ಲಿ ಆತನ ಜೀವಕೋಶಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಈ ಸೂಕ್ಷ್ಮಾಣುಜೀವಿಗಳಿವೆ. ಅಷ್ಟೇ ಅಲ್ಲ, ಆಶ್ರಯ ನೀಡಿದ ಮಾನವದೇಹದ ಸ್ವಂತ ವಂಶವಾಹಿಗಳಿಗಿಂತ ಹಲವುಪಟ್ಟು ಅಧಿಕ ವಂಶವಾಹಿಗಳು ಈ ಸೂಕ್ಷ್ಮಾಣುಜೀವಿಗಳದ್ದಾಗಿವೆ! ವೈದ್ಯಕೀಯ ಲೋಕದಲ್ಲಿ ಸಂಚಲನ ಮೂಡಿಸಿರುವ ಸಂಶೋಧನೆಗಳಿವು.

ಹೀಗೆ ಅಸಂಖ್ಯ ಸೂಕ್ಷ್ಮಾಣುಜೀವಿಗಳನ್ನು ಹೊತ್ತಿರುವ ಮಾನವನ ಪ್ರಮುಖ ಅಂಗವೆಂದರೆ ಕರುಳು. ಇದನ್ನು ಆಳವಾಗಿ ಅರಿಯಲು ಪ್ರತ್ಯೇಕವಾದ 'ಕರುಳು ಅಧ್ಯಯನ ಶಾಸ್ತ್ರ'ವೇ ಇಂದು ರೂಪುಗೊಂಡಿದೆ. ದೇಹದ ರಚನೆ, ಕಾರ್ಯವಿಧಾನ ಹಾಗೂ ಆರೋಗ್ಯ ನಿರ್ವಹಣೆಯಲ್ಲಿ ಕರುಳಿನ ಜೀವಿಗಳು ಹಾಗೂ ಅವುಗಳ ವಂಶವಾಹಿಗಳ ಪಾತ್ರದ ಅರಿವು ಹಲವು ಆಯಾಮಗಳಲ್ಲಿ ತೆರೆದುಕೊಳ್ಳುತ್ತಿದೆ. ಇದನ್ನು ಅರ್ಥೈಸಿಕೊಳ್ಳುವ ದಿಸೆಯಲ್ಲಿ, ಎರಡು ಮಹತ್ವದ ಅಂಶಗಳನ್ನು ಇಲ್ಲಿ ಗಮನಿಸಬಹುದು.

ಮೊದಲಿನದು, ಈಗಾಗಲೇ ಪ್ರಸ್ತಾಪಿಸಿದ ಕರುಳಿನ ಸೂಕ್ಷ್ಮಾಣುಜೀವಿಲೋಕದ ಅಗಾಧತೆ. ಈಗ ಲೆಕ್ಕ ಹಾಕಿರುವಂತೆ, ಕರುಳಿನಲ್ಲಿರುವ ಸೂಕ್ಷ್ಮಾಣುಜೀವಿಗಳು ಹಲವು ಸಹಸ್ರಕೋಟಿಗಳಷ್ಟು! ಅವುಗಳಲ್ಲಿ ಶೇ 93.5ಕ್ಕೂ ಹೆಚ್ಚಿನವು ವಿವಿಧ ತೆರನ ಬ್ಯಾಕ್ಟೀರಿಯಾಗಳು. ಈವರೆಗೆ ಸುಮಾರು 12 ಗುಂಪುಗಳಿಗೆ ಸೇರಿದ 2,172 ಪ್ರಭೇದಗಳ ಬ್ಯಾಕ್ಟೀರಿಯಾಗಳನ್ನು ಗುರುತಿಸಲಾಗಿದೆ. ಇನ್ನೂ ಗುರುತಿಸಬೇಕಿರುವುದು ಅದೆಷ್ಟೋ? ಇವೆಲ್ಲ ಕರುಳಿನ ಜೀವಕೋಶಗಳೊಂದಿಗೆ ಸಾವಯವ ಸಂಬಂಧ ಬೆಸೆದು, ಪರಸ್ಪರ ಸಹಕರಿಸುತ್ತ ಬದುಕುತ್ತಿರುವ ಪರೋಪಕಾರಿಗಳು. ಅಂದರೆ, ನಮ್ಮ ಕರುಳಿನಲ್ಲಿ 'ಸೂಕ್ಷ್ಮಾಣುಜೀವಿಗಳ ಗ್ಯಾಲಕ್ಸಿ' ಎನ್ನಬಹುದಾದ ಮತ್ತೊಂದು ಜೀವಲೋಕವೇ ಇದೆ!

ಅವುಗಳ ಮಹತ್ವವಾದರೂ ಎಂಥದ್ದು? ರೋಗನಿರೋಧಕತೆ ಹೆಚ್ಚಿಸುವುದು, ವೈವಿಧ್ಯಮಯ ಪ್ರೋಟೀನ್- ವಿಟಮಿನ್ ಉತ್ಪಾದನೆ, ರೋಗಗಳನ್ನು ನಿಯಂತ್ರಿಸುವುದು, ಆಹಾರದ ಜೀರ್ಣಕ್ರಿಯೆ ಇತ್ಯಾದಿಗಳಲ್ಲೆಲ್ಲ ಅವುಗಳ ಪಾತ್ರವಿದೆ. ಅವುಗಳಿಗೆ ಧಕ್ಕೆಯಾದಾಗ, ಬೊಜ್ಜು, ಮಧುಮೇಹ, ಸಂಧಿವಾತ, ಹೆಪಟೈಟಿಸ್, ಕ್ಯಾನ್ಸರ್‌ನಂತಹ ಕಾಯಿಲೆಗಳಿಗೂ ಅವು ಕಾರಣವಾದಾವು. ಮಾನವನ ಹಲವಾರು ವಂಶವಾಹಿಗಳ ಗುಣ ಪ್ರಕಟವಾಗುವುದಕ್ಕೂ ಈ ಬ್ಯಾಕ್ಟೀರಿಯಾಗಳ ಸಹಾಯ ಬೇಕು. ಅಂದರೆ, ಪೂರ್ವಜರಿಂದ ನಮ್ಮ ವಂಶವಾಹಿಗಳನ್ನಷ್ಟೇ ಅಲ್ಲ, ಈ ವಿಶಿಷ್ಟ ಬ್ಯಾಕ್ಟೀರಿಯಾ ಲೋಕವನ್ನೂ ನಾವು ಬಳುವಳಿಯಾಗಿ ಪಡೆದಿದ್ದೇವೆ. ಮುಂದಿನ ತಲೆಮಾರಿನ 'ಕರುಳಿನ ಕುಡಿ'ಗಳ ಭವಿಷ್ಯ ರೂಪಿಸುವಲ್ಲೂ ಅವುಗಳ ಕಾಣಿಕೆಯಿದೆ. ಹೀಗಾಗಿ, 'ಕರುಳಿನ ಕರೆ', 'ಕರುಳಬಳ್ಳಿ ಸಂಬಂಧ' ಇತ್ಯಾದಿ ಜನಪದರ ಮಾತುಗಳಿಗೆಲ್ಲ ಇದೀಗ ವಿಶೇಷ ಅರ್ಥ ಮೂಡುತ್ತಿದೆ ಎನ್ನಬೇಕು!

ಆರೋಗ್ಯಶಾಸ್ತ್ರದಲ್ಲಿ ಕರುಳಿನ ಸೂಕ್ತ ನಿರ್ವಹಣೆಗೆ ಮಹತ್ವ ಹೆಚ್ಚುತ್ತಿರುವುದು ಈ ಕಾರಣಕ್ಕಾಗಿ. ಆರೋಗ್ಯ ಕಾಪಾಡಿಕೊಳ್ಳುವುದೆಂದರೆ, ಕರುಳು ಹಾಗೂ ಕರುಳಿನ ಮಕ್ಕಳಂತಿರುವ ಬ್ಯಾಕ್ಟೀರಿಯಾ ಲೋಕವನ್ನು ಪೋಷಿಸುವುದೂ ಆಗಿದೆ. ಸಸ್ಯಜನ್ಯ ನಾರಿನಂಶ ಹಾಗೂ ಪೋಷಕಾಂಶಗಳು ಈ ಉಪಕಾರಿ ಬ್ಯಾಕ್ಟೀರಿಯಾಗಳ ಪೋಷಣೆಗೆ ಅಗತ್ಯವಾದ್ದರಿಂದ, ಆಹಾರದಲ್ಲಿ ಕಾಳು-ಬೇಳೆ, ಬೇರು-ಸೊಪ್ಪುಗಳ ಮಹತ್ವ ಹೆಚ್ಚುತ್ತಿದೆ.

ಕರುಳನ್ನು ಸೊಂಪಾಗಿಡಬಲ್ಲ ಮೂಲಿಕಾ ಕಷಾಯ, ಲೇಹ್ಯ, ರಸಗಳತ್ತ ಗಮನಹರಿಯುತ್ತಿದೆ. ಸೂಕ್ಷ್ಮಾಣುಜೀವಿಗಳನ್ನು ಪೊರೆಯಬಲ್ಲ ಈ ಬಗೆಯ ಸಸ್ಯಜನ್ಯ 'ಪ್ರೀ-ಬಯೋಟಿಕ್'ಗಳನ್ನು ನೀಡಿಯೇ ರೋಗ ಗುಣಪಡಿಸುವ ಹೊಸ ಚಿಕಿತ್ಸಾ ಕ್ರಮಗಳು ವೈದ್ಯಕೀಯ ಕ್ಷೇತ್ರದಲ್ಲಿ ಪ್ರಚಲಿತವಾಗುತ್ತಿವೆ. ಜೊತೆಗೆ, ಮನುಷ್ಯನ ವಂಶವಾಹಿಗಳ ರಚನೆಯಲ್ಲೇ ಕೈಯಾಡಿಸಿ ರೋಗಗಳನ್ನೆಲ್ಲ ಗುಣಪಡಿಸಿಯೇವು ಎಂದು ಅತಿಶಯದ ತೀರ್ಮಾನಕ್ಕೆ ಬರುವುದರಲ್ಲಿದ್ದ 'ಜೆನೆಟಿಕ್ ಎಂಜಿನಿಯರಿಂಗ್' ಕ್ಷೇತ್ರಕ್ಕೆ, ಸಂಕೀರ್ಣವಾದ ಈ ಬ್ಯಾಕ್ಟೀರಿಯಾಲೋಕದ ಅರಿವು, ವಿವೇಕ ಮೂಡುತ್ತಿದೆ!

ಕರುಳಿನ ಕುರಿತು ಅರಿಯಲೇಬೇಕಾದ ಎರಡನೆಯ ಅಂಶವೆಂದರೆ, ಅದರಲ್ಲಿ ವಿಶೇಷವಾಗಿ ರೂಪುಗೊಂಡಿರುವ ನರಮಂಡಲ. ಆಧುನಿಕ ಜೀವಶಾಸ್ತ್ರವು ಕಂಡುಕೊಳ್ಳುತ್ತಿರುವ ಕೌತುಕವಿದು. ಮಿದುಳಿನಲ್ಲಿ 'ಕೇಂದ್ರ ನರಮಂಡಲ' ಇರುವಂತೆ, ಕರುಳಿನ ಮೆದುವಾದ ಒಳಪದರಿನಲ್ಲಿ ಕೋಟ್ಯಂತರ ನರತಂತುಗಳ ಜಾಲ ಪಸರಿಸಿದೆ. ಅಂದರೆ, ಕರುಳಿಗೇ ವಿಶಿಷ್ಟವಾದ ನರಮಂಡಲವಿದೆ. ಸಂತಸ-ದುಃಖ, ಭಯ-ಆಯಾಸದಂತಹ ಭಾವಪ್ರಕೋಪದ ಸಂದರ್ಭಗಳಲ್ಲೆಲ್ಲ, ಮಿದುಳಿನಂತೆಯೇ ಕರುಳೂ ಮಿಡಿಯುವುದು ಈ ನರತಂತುಗಳಿಂದಾಗಿ. ಮನದಲ್ಲಿ ಭಾವನೆಗಳು ಚಿಮ್ಮಿದಾಗಲೆಲ್ಲ 'ಕರುಳು ಕಿವುಚಿದಂತಾಗುವುದು' ಅಥವಾ 'ಹೊಟ್ಟೆಯಲ್ಲಿ ಪಾತರಗಿತ್ತಿ ಕುಣಿಯುವುದು' ಸಹ ಇದಕ್ಕಾಗಿಯೇ. ಕರುಳನ್ನು 'ಎರಡನೇ ಮಿದುಳು' ಎಂದು ಹೆಸರಿಸುವಷ್ಟು ಇದಕ್ಕೆ ಪ್ರಾಮುಖ್ಯ ಬರುತ್ತಿದ್ದು, 'ಮಿದುಳು- ಕರುಳಿನ ಸಂಬಂಧ'ಗಳು ಪ್ರತ್ಯೇಕ ಅಧ್ಯಯನ ಶಾಸ್ತ್ರವಾಗಿ ರೂಪುಗೊಳ್ಳುತ್ತಿವೆ!

ಇದೆಲ್ಲದರ ಅರ್ಥವೇನು? ನಮ್ಮ ಆಲೋಚನೆ, ನಡವಳಿಕೆ ಹಾಗೂ ಭಾವಾವೇಶಗಳೆಲ್ಲ ಕರುಳಿನ ನರತಂತುಗಳ ಕಾರ್ಯಶೈಲಿಯ ಮೇಲೆ ಪರಿಣಾಮ ಬೀರುತ್ತವೆ. ಅಂತೆಯೇ, ಕರುಳಿನ ವಿದ್ಯಮಾನಗಳು ಸಹ ನಮ್ಮ ಯೋಚನಾಕ್ರಮಗಳನ್ನು ಪ್ರಭಾವಿಸುತ್ತವೆ. ಹೀಗಾಗಿ, ಮನೋದೈಹಿಕ ಕಾಯಿಲೆಗಳ ಚಿಕಿತ್ಸೆಗಳಲ್ಲಿ, ಮನದ ಪ್ರಶಾಂತತೆ ಹಾಗೂ ಕರುಳಿನ ಆರೋಗ್ಯ– ಇವೆರಡಕ್ಕೂ ಒಮ್ಮೆಲೇ ವಿಶೇಷ ಮಹತ್ವ ಬರುತ್ತಿದೆ. 'ಒಡಲು ತಂಪಾಗಿರಲಿ' ಎಂಬ ಜನಪದರ ಹಾರೈಕೆಗೆ ಜೀವವಿಜ್ಞಾನ ಕಂಡುಕೊಳ್ಳುತ್ತಿರುವ ಆಧುನಿಕ ಭಾಷ್ಯವಿದು.

ಒಟ್ಟಿನಲ್ಲಿ, ವೈದ್ಯಕೀಯಶಾಸ್ತ್ರದ ಈ ಹೊಸ ತಿಳಿವಳಿಕೆಗಳು 'ಆಹಾರ ಬಲ್ಲವನಿಗೆ ರೋಗವಿಲ್ಲ' ಎಂಬ ಮಾತನ್ನು ಪರಿಷ್ಕರಿಸಿ 'ಕರುಳು ಅರಿತವನಿಗೆ ರೋಗವಿಲ್ಲ' ಎಂದು ಸಾರುತ್ತಿರುವಂತಿವೆ. ಸೂಕ್ತ ಆಹಾರ- ವಿಹಾರ-ವಿಚಾರಗಳ ಮೂಲಕ ಕರುಳಿನ ಪರೋಪಕಾರಿ ಬ್ಯಾಕ್ಟೀರಿಯಾ ಜಗತ್ತನ್ನು ಪೋಷಿಸಬೇಕು. ಜೊತೆಗೆ, ಕರುಳಂಚಿನ ಕೋಟಿಕೋಟಿ ನರತಂತುಗಳ ಭಾವನೆಯನ್ನು ಕೆರಳಿಸದಂತೆ, ಮನದಲ್ಲಿ ಶಾಂತಿ-ಸಂತಸವನ್ನೂ ಸದಾ ತುಂಬಿಕೊಳ್ಳಬೇಕು. ಬ್ಯಾಕ್ಟೀರಿಯಾ ಹಾಗೂ ನರತಂತುಗಳಿಂದ ಆವೃತವಾದ ಕರುಳು ಆಗ ಒಲಿಯಬಲ್ಲದು; ಆರೋಗ್ಯ ಸದಾ ನಮ್ಮದಾಗಬಲ್ಲದು. ತನ್ನದೇ ಆರೋಗ್ಯ ಪಾಲನೆ, ತನ್ನ ಕರುಳಿನಕುಡಿಗಳ ಭವಿಷ್ಯದ ಲಾಲನೆ- ಇವೆರಡಕ್ಕೂ, ಮನುಷ್ಯ ತನ್ನ ಕರುಳನ್ನು ಎಷ್ಟು ಜತನದಿಂದ ನೋಡಿಕೊಳ್ಳಬೇಕು, ನೋಡಿ!

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ

ಯುಟ್ಯೂಬ್ ಹಳ್ಳಿ

• ನಾರಾಯಣ ರಾಯಚೂರ್

'ರೀ... ಯುಟ್ಯೂಬ್‌ನಲ್ಲಿ ಏನು ಹರಿದಾಡ್ತಿವೆ ನೋಡಿದ್ರಾ?'

'ಬೆಂಗಳೂರಲ್ಲಿ ಹರಿದಾಡಿದ್ದನ್ನ ನೋಡಿಯೇ ಸಾಕಾಗಿದೆ, 40 ಪರ್ಸೆಂಟ್ ಬೆಂಗಳೂರು ನೀರ್‌–ನಾಮ್ ಆಗಿತ್ತು. ನೀರಲ್ಲೇ ಮೀನು ಹಿಡಿಯೊ ತರಹ ಆಗಿ, ಬೋಟ್-ಕ್ಲಬ್ಬು, ಡ್ರೌನಿಂಗ್ ಸ್ಟ್ರೀಟು ಪ್ರತ್ಯಕ್ಷವಾಗಿದ್ದವು'.

'ಅದನ್ನ ಯುಟ್ಯೂಬ್‌ನಲ್ಲಿ ನೋಡಾಯ್ತು ನಾನು. ಈಗ ನಾನು ಹೇಳೋಕೆ ಹೊರ್ಟಿರೋದು ಹಳ್ಳಿ ವಿಚಾರ- 'ಯುಟ್ಯೂಬ್ ಹಳ್ಳಿ'ದು!'

'ಯುಟ್ಯೂಬ್ನಲ್ಲೂ ಹಳ್ಳಿ, ರಾಜ್ಯ, ದೇಶ ಅಂತೆಲ್ಲ ಇದೆಯಾ?'

'ಇಡೀ ಪ್ರಪಂಚಾನೇ ಇದೆ ರೀ ಈ ಯುಟ್ಯೂಬ್‌ನಲ್ಲಿ! ಛತ್ತೀಸಗಡದಲ್ಲಿರೋ ತುಳಸಿ ಅನ್ನೋ ಒಂದು ಪುಟ್ಟ ಹಳ್ಳೀಲಿ 3,000 ಜನಸಂಖ್ಯೆಯಲ್ಲಿ 1,000 ಜನ ಯುಟ್ಯೂಬ್ ಚಾನೆಲ್ ನಡೆಸ್ತಿದ್ದಾರಂತೆ. ಸರ್ಕಾರಿ ಉದ್ಯೋಗ ಬಿಟ್ಟು ಈ ವಿಡಿಯೊ ಉದ್ಯೋಗದಲ್ಲಿ ಚೆನ್ನಾಗಿ ದುಡ್ಡು ಮಾಡ್ತಿದ್ದಾರಂತೆರೀ, ನೀವೂ ಇದ್ದೀರ!' ಮಡದಿಯ ಮೂದಲಿಕೆ.

ಓ... ಹಳ್ಳಿಯ ಮೂರನೇ ಒಂದುಭಾಗ ಯುಟ್ಯೂಬ್ ಮಾಡೋರೆ ಅಂತಾದರೆ ಇನ್ನುಮುಂದೆ ಅಲ್ಲಿ ಹುಟ್ಟೋ ಮಕ್ಕಳೂ 'ಟೆಸ್ಟ್ ಟ್ಯೂಬ್' ಬೇಬಿಗಳ ಥರ 'ಯುಟ್ಯೂಬ್ ಬೇಬಿ'ಗಳೇ ಆಗಿರ್ತಾವೇನೊ!'

'ಅಲ್ಲಿ ಮುದುಕರೂ ರಾಮ್-ಲೀಲಾ ನಾಟಕದ ದೃಶ್ಯಗಳನ್ನ ಮಾಡ್ತಿದ್ದಾರಂತೆ. ಹೆಂಗಸ್ರು ಕ್ಯಾಮೆರಾದ ಮುಂದೆ ಬಂದು ವಿಡಿಯೊ ಮಾಡಿದ್ರೆ, ಯುವಕರು 'ಛತ್ತೀಸಘರಿಯಾ' ಅನ್ನೋ ಹಾಸ್ಯ ವಿಡಿಯೊ ಮಾಡಿ ಲಕ್ಷ ಲೈಕ್ ಪಡೆದು ದುಡ್ಡು ಸಂಪಾದಿಸ್ತಾ ಇದ್ದಾರಂತೆ'.

'ಹಾಸ್ಯ ಯಾರಿಗೆ ಬೇಕೋ, ಇಲ್ಲಿ ಕಣ್ಣೀರ ಕೋಡಿನೇ ಹರೀತು. ಕೆರೆ ತೂಬುಗಳೆಲ್ಲ ಒಡೆದು ಬೆಂಗಳೂರು ಬಳಲಿತು. ರಾಜಕಾಲುವೆಗಳು ಪ್ರಜೆಗಳಿಗೆ ಕಂಟಕವಾಗಿ ನಗರವು ಜಲಾನಯನ ಪ್ರದೇಶವಾಗಿ, ಜನಗಳ ನಯನದಲ್ಲಿ ಜಲ ಸುರಿಯೋದನ್ನೇ ವಿಡಿಯೊ ಮಾಡಬೇಕಷ್ಟೇ'.

'ಅದನ್ನೇ ಮಾಡಿ. ಒಟ್ಟಾರೆ ಲೈಕ್ ಜಾಸ್ತಿ ಬರಬೇಕು, ಸಂಪಾದನೆ ಹೈಕ್ ಆಗ್ಬೇಕು, ನೀವು ಯುಟ್ಯೂಬ್‌ನಲ್ಲಿ ಬರಬೇಕು'.

'ಟ್ಯೂಬ್ ಇರಲಿ, ಈಗ ಸ್ವಲ್ಪ ಟಾಯರ್ಡ್ ಆಗಿದೀನಿ, ಆಮೇಲೆ ನೋಡೋಣ್ವಾ?!'

ಸಂಗತ

ಆತ್ಮಹತ್ಯೆ ಯತ್ನ: ಬದುಕುಳಿದಾಗ...

ಬದುಕಿನ ಒತ್ತಡಗಳನ್ನು ಎದುರಿಸಲು ಮನೋವೈದ್ಯಕೀಯ ಸಲಹೆಯನ್ನು ಪಡೆಯುವುದು ಅಗತ್ಯ. ಖಿನ್ನತೆ, ಉನ್ಮಾದವನ್ನು ಚಿಕಿತ್ಸೆಯಿಂದ ನಿಯಂತ್ರಿಸಬಹುದು

• ಡಾ. ಕೆ.ಎಸ್.ಪವಿತ್ರ

ಇಡೀ ಸಮಾಜದಲ್ಲಿ ಹಲವು ರೀತಿಗಳಲ್ಲಿ ದುಃಖವನ್ನು ಹರಡುವ ಆತ್ಮಹತ್ಯೆಗೆ ಪರಿಹಾರೋಪಾಯಗಳನ್ನು ಜಗತ್ತು ಹುಡುಕುತ್ತಲೇ ಇದೆ. 2021-23ರ ಮೂರು ವರ್ಷಗಳ ಧ್ಯೇಯವಾಗಿ ವಿಶ್ವ ಆತ್ಮಹತ್ಯಾ ತಡೆ ದಿನವು (ಸೆ. 10) ಕ್ರಿಯೆ ಮೂಲಕ ಭರವಸೆ ಮೂಡಿಸುವ ಉದ್ದೇಶವನ್ನು ಇರಿಸಿಕೊಂಡಿದೆ.

ಆತ್ಮಹತ್ಯೆಗಳನ್ನು ತಡೆಯುವ ವಿಧಾನಗಳನ್ನು 'ಪ್ರಥಮ ಚಿಕಿತ್ಸೆ' ರೀತಿಯಲ್ಲಿ ಪ್ರತಿಯೊಬ್ಬರೂ ಕಲಿಯಬೇಕು ಎಂದು ಅಧ್ಯಯನಗಳು ಶಿಫಾರಸು ಮಾಡಿವೆ. ಇದನ್ನು ಅನುಷ್ಠಾನಕ್ಕೆ ತರುವುದು ಸುಲಭವಲ್ಲ. ಏಕೆಂದರೆ ಆತ್ಮಹತ್ಯೆಯ ಬಗೆಗಿನ ತಪ್ಪು ನಂಬಿಕೆಗಳು, ಉಡಾಫೆಯ ಧೋರಣೆ ನಮ್ಮನ್ನು ಹಿಂದಕ್ಕೆ ಎಳೆಯುತ್ತವೆ. ಇಂತಹ ಸಮಯದಲ್ಲಿಯೇ ಸಮಾಜದಲ್ಲಿ ಆತ್ಮಹತ್ಯೆಯನ್ನು ಇಲ್ಲವಾಗಿಸಲು ನಾವು ಹಲವು ರೀತಿಗಳಿಂದ ಶ್ರಮಿಸಬೇಕಾಗುತ್ತದೆ.

ಆತ್ಮಹತ್ಯೆಗೆ ಪ್ರಯತ್ನಿಸಿಯೂ ಬದುಕುಳಿದ ವ್ಯಕ್ತಿಗಳು ಮತ್ತೆ ಆತ್ಮಹತ್ಯೆ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಾಗಿರುವ ಬಗೆಗೆ ವಿಜ್ಞಾನ ನಮ್ಮನ್ನು ಎಚ್ಚರಿಸುತ್ತದೆ. ಆದರೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳನ್ನು ನಾವು ಕುತೂಹಲ, ಹೆದರಿಕೆಗಳಿಂದ ಗಮನಿಸುವಷ್ಟು, ಆತ್ಮಹತ್ಯೆ ಪ್ರಯತ್ನಗಳ ಬಗ್ಗೆ ಗಮನಿಸುವ ಸಾಧ್ಯತೆ ಕಡಿಮೆ. ಆತ್ಮಹತ್ಯೆಗಳನ್ನು ಇಲ್ಲವಾಗಿಸುವಲ್ಲಿ ಈ ವರ್ಗವನ್ನೂ ವಿಶೇಷವಾಗಿ ನಾವು ಗಮನಿಸಲೇಬೇಕು.

ಆತ್ಮಹತ್ಯೆಯ ಪ್ರಯತ್ನಗಳಿಗೆ ಮುಖ್ಯ ಕಾರಣಗಳು ಖಿನ್ನತೆ, ವ್ಯಕ್ತಿತ್ವ ದೋಷ ಮತ್ತು ಹಠಾತ್ ತೀವ್ರ ಒತ್ತಡ. ಇವುಗಳಲ್ಲಿ ಆತ್ಮಹತ್ಯೆಯ ಪ್ರಯತ್ನ ನಡೆದಿರುವ ಸಂದರ್ಭದ ವಿವರಗಳು ಅದರ ಹಿಂದಿರುವ ಕಾರಣವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಸಾಯುವ ಆಲೋಚನೆಯನ್ನು ದೀರ್ಘಕಾಲದಿಂದ ಹೊಂದಿದ್ದು, ತಕ್ಕ ಸಿದ್ಧತೆ ಮಾಡಿಕೊಂಡು, ಪ್ರಾಣವನ್ನು ಕಳೆದುಕೊಳ್ಳಲೇಬೇಕು ಎಂಬ ಖಚಿತ ಉದ್ದೇಶದಿಂದ ಖಿನ್ನತೆಯಲ್ಲಿ ಆತ್ಮಹತ್ಯೆಯ ಪ್ರಯತ್ನ ನಡೆಯುತ್ತದೆ. ಇಲ್ಲಿ ಅಂತಹ ವ್ಯಕ್ತಿಯ ಉದ್ದೇಶ ತೀವ್ರವಾಗಿದ್ದು, ಸಾಯಲು ಖಚಿತ ವಿಧಾನಗಳನ್ನು ಆತ ಹುಡುಕಿಕೊಳ್ಳುತ್ತಾನೆ. ಇನ್ನೊಂದು ವರ್ಗದಲ್ಲಿ 'ಸಾಯಬೇಕು' ಎಂಬ ಭಾವನೆ ಆ ಕ್ಷಣದಲ್ಲಿನ ಉದ್ವೇಗ-ಆಕ್ರೋಶಗಳಿಂದ ಮೂಡುತ್ತದೆ. ಕಡಿಮೆ ತೀವ್ರತೆಯಿಂದ ಕೂಡಿರುವ ಇಲ್ಲಿನ ಪ್ರಯತ್ನಗಳು ಎಲ್ಲರೆದುರೇ ನಡೆಯುತ್ತವೆ.

ವಿಧ ಯಾವುದೇ ಆಗಲಿ, ತೀವ್ರತೆ ಎಷ್ಟೇ ಇರಲಿ, ಆತ್ಮಹತ್ಯೆಯ ಪ್ರಯತ್ನದ ನಂತರ ಬದುಕಿ ಬಂದವರು ಅನುಭವಿಸುವ ಭಾವನೆಗಳು ವೈವಿಧ್ಯಮಯ. ಇವರಲ್ಲಿ ಮತ್ತೆ ಸಾಯಲು ಪ್ರಯತ್ನಿಸುವವರು ಶೇಕಡ 10ರಷ್ಟು ಮಂದಿಯೇ ಆದರೂ, ಇವರು ಮಾನಸಿಕ ಸಮಸ್ಯೆಗಳಿಂದ ನರಳುವುದು ಮುಂದುವರಿಯುತ್ತದೆ. ನಿರಾಳ ಭಾವ, ಭರವಸೆ, ದುಃಖ, ಕೋಪ, ಪಶ್ಚಾತ್ತಾಪ ಮೊದಲಾದ ಮಿಶ್ರ ಭಾವಗಳು ಅವರನ್ನು ಕಾಡುತ್ತವೆ. ದುರದೃಷ್ಟವೆಂದರೆ, ಮನೋವೈದ್ಯಕೀಯ ಅಧ್ಯಯನಗಳ ಪ್ರಕಾರ, ಇವರು ಅತ್ಯವಶ್ಯವಾದ ಆಪ್ತಸಲಹೆ- ಚಿಕಿತ್ಸೆಗಳಿಗೆ ಮನೋವೈದ್ಯಕೀಯ ಸೇವೆಗಳನ್ನು ಬಳಸಿಕೊಳ್ಳುವ ಸಾಧ್ಯತೆ ಬಲು ಕಡಿಮೆ. ಹಾಗಾಗಿಯೇ ಸಾಮಾನ್ಯ ಜನರಲ್ಲಿ ಹತ್ತು ಸಾವಿರಕ್ಕೆ ಒಬ್ಬರು ಆತ್ಮಹತ್ಯೆಯಿಂದ ಮೃತಪಟ್ಟರೆ, ಮೇಲಿನ ವರ್ಗದಲ್ಲಿ ನೂರಕ್ಕೆ ಒಬ್ಬರಂತೆ ಆತ್ಮಹತ್ಯೆಯಿಂದ ಸಾವಿಗೀಡಾಗುತ್ತಾರೆ.

ಆತ್ಮಹತ್ಯೆಗೆ ಪ್ರಯತ್ನಿಸಿ ಬದುಕುಳಿದ ಬಹುಜನರಿಗೆ ತತ್‌ಕ್ಷಣದಲ್ಲಿ ಕೃತಜ್ಞತಾ ಭಾವನೆಯೇನೋ ಮೂಡುತ್ತದೆ. ಸಾಯುವ ತೀವ್ರ ಆಲೋಚನೆಗಳಿಂದಲೇ ಆತ್ಮಹತ್ಯೆಗೆ ಪ್ರಯತ್ನಿಸಿದ್ದರೂ 'ನನಗೆ ನಿಜವಾಗಿ ಸಾಯುವುದು ಬೇಕಿರಲಿಲ್ಲ' ಎಂದು ಅವರಿಗೆ ಅರಿವಾಗಿಬಿಡುತ್ತದೆ. ಆದರೆ ಹಾಗೆಂದು ಅವರ ಸಮಸ್ಯೆಗಳು, ಜೀವನದ ಒತ್ತಡಗಳು ಮರೆಯಾಗಿರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಮನೋವೈದ್ಯಕೀಯ ಸಲಹೆಯನ್ನು ಪಡೆಯುವುದು ಅತಿ ಮುಖ್ಯ ಸಂಗತಿಯಾಗುತ್ತದೆ. ಖಿನ್ನತೆ ಹಾಗೂ ಉನ್ಮಾದವು ಚಿಕಿತ್ಸೆಯಿಂದ ನಿಯಂತ್ರಿಸಿ, ಆರಾಮದಾಯಕ ಜೀವನ ನಡೆಸಲು ಸಾಧ್ಯವಾಗುವ ಕಾಯಿಲೆಗಳ ಪಟ್ಟಿಯನ್ನು ಸೇರಿ ಎಷ್ಟೋ ವರ್ಷಗಳೇ ಆಗಿವೆ.

ಹಾಗೆಯೇ ವ್ಯಕ್ತಿತ್ವದೋಷಗಳದ್ದು ಆತ್ಮಹತ್ಯೆಯ ಪ್ರಯತ್ನಗಳಲ್ಲಿ ದೊಡ್ಡಪಾಲು. ಭಾವನಾತ್ಮಕ ಅಸ್ಥಿರತೆಯ ವ್ಯಕ್ತಿತ್ವದೋಷದಿಂದ ನರಳುವ ಯುವಜನರು ಹೆಚ್ಚಿನ ಪ್ರಮಾಣದಲ್ಲಿ ಔಷಧಿ ಕುಡಿದು, ಬಹಳಷ್ಟು ಮಾತ್ರೆಗಳನ್ನು ನುಂಗಿ, ಕೈಯ ಮೇಲೆ ಬ್ಲೇಡಿನಿಂದ ಹಲವು ಬಾರಿ ಕೊಯ್ದುಕೊಂಡು ದಿನನಿತ್ಯ ಆಸ್ಪತ್ರೆಯ ತುರ್ತುಚಿಕಿತ್ಸಾ ವಿಭಾಗಗಳಿಗೆ ಬರುತ್ತಲೇ ಇರುತ್ತಾರೆ. ಮೇಲ್ನೋಟಕ್ಕೆ 'ಇದು ಗಂಭೀರ ಆತ್ಮಹತ್ಯೆಯ ಪ್ರಯತ್ನವಲ್ಲ, ಇವರಿಗೆ ನಿಜವಾಗಿ ಸಾಯಬೇಕೆಂದಿಲ್ಲ, ಇತರರನ್ನು ಹೆದರಿಸುವುದಷ್ಟೇ ಇದರ ಹಿಂದಿನ ಉದ್ದೇಶ' ಎಂಬ ಕಾರಣಕ್ಕೆ ದೇಹಕ್ಕಷ್ಟೇ ಪ್ರಥಮ ಚಿಕಿತ್ಸೆ ದೊರೆತು, 'ಗುಣಮುಖ' ಎಂಬ ಹಣೆಪಟ್ಟಿ ಹೊತ್ತು ಇವರು ಹಿಂದಿರುಗುತ್ತಾರೆ. ಆದರೆ ಇವರ ವ್ಯಕ್ತಿತ್ವದೋಷ, ಕೌಟುಂಬಿಕ ಸಮಸ್ಯೆಗಳು ಹಾಗೂ ಸಂಬಂಧಗಳಲ್ಲಿನ ಸಮಸ್ಯೆಗಳಿಗೆ ಯಾವ ಚಿಕಿತ್ಸೆಯೂ ದೊರೆಯುವುದಿಲ್ಲ.

'ಮನೋವೈದ್ಯಕೀಯ ಸಲಹೆ ಪಡೆಯಿರಿ' ಎಂಬ ಕಿವಿಮಾತನ್ನು ಯಾವ ಕುಟುಂಬದವರೂ ಕೇಳದಿರುವ ಸಾಧ್ಯತೆಯೇ ಹೆಚ್ಚು. ಹಾಗೆಯೇ ಮದ್ಯದ ಮತ್ತಿನಲ್ಲಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸುವವರಲ್ಲಿ 'ಮದ್ಯವ್ಯಸನ'ದ ಚಿಕಿತ್ಸೆಗೆ ಮುಂದಾಗುವವರು ಕಡಿಮೆ.

ಇಂತಹ ಕಾರಣಗಳಿಂದ, ಆತ್ಮಹತ್ಯೆಯ ಪ್ರಯತ್ನಗಳತ್ತ ನಾವು ಗಮನಹರಿಸಲೇಬೇಕಾಗಿದೆ. ಅಂಥ ಅವಲೋಕನವು ಆತ್ಮಹತ್ಯೆಗಳನ್ನು ತಡೆಯುವುದಷ್ಟೇ ಅಲ್ಲ, ಮಾನಸಿಕ ಸ್ವಾಸ್ಥ್ಯ, ತನ್ಮೂಲಕ ದೈಹಿಕ ಆರೋಗ್ಯ, ಇವುಗಳಿಂದ ಜೀವನದ ಗುಣಮಟ್ಟ ಏರಿಕೆಗೆ ದಾರಿಯಾಗುತ್ತದೆ.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಇದೆಂತಹ ವಿಚಿತ್ರ ಆದೇಶ?!

'ಸಿಐಡಿ ಅಧಿಕಾರಿಗಳು ಹಾಗೂ ಸಿಬ್ಬಂದಿಯು ಸುರಕ್ಷತೆ ದೃಷ್ಟಿಯಿಂದ ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಆರು ಗಂಟೆ ಅವಧಿಯಲ್ಲಿ ಯಾವುದೇ ವಾಹನದಲ್ಲಿ ಪ್ರಯಾಣಿಸಬಾರದು...' ಎಂದು ಸಿಐಡಿ ಡಿಜಿಪಿ ಸೂಚನೆ ನೀಡಿರುವುದು ವರದಿಯಾಗಿದೆ (ಪ್ರ.ವಾ., ಸೆ. 9). ಇದೆಂತಹ ವಿಚಿತ್ರ ಆದೇಶ?! ಅಪಘಾತ ಆಗುತ್ತದೆಂದು ಸಂಚಾರವನ್ನೇ ನಿರ್ಬಂಧಿಸಬೇಕೆ? ಸಿಐಡಿ ಅಧಿಕಾರಿಗಳು ಮಾತ್ರ ಮನುಜರೇ? ಸಾರ್ವಜನಿಕ ಬಸ್ಸುಗಳಲ್ಲಿ ಸಂಚರಿಸುವವರು, ರಾತ್ರಿ ಪಾಳಿಯಲ್ಲಿ ಹತ್ತು ಹಲವು ಕರ್ತವ್ಯಗಳನ್ನು ನಿರ್ವಹಿಸುವವರು, ಪೊಲೀಸ್ ವಾಹನಗಳಲ್ಲಿ ಗಸ್ತು ತಿರುಗುವವರು, ಹಾಲು, ಪೇಪರ್ ಹಾಕುವವರು ಸೇರಿದಂತೆ ಬೇರೆಲ್ಲರೂ ಮನುಜರಲ್ಲವೇ?

ಅಪಘಾತಕ್ಕೆ ಮೂಲಕಾರಣ ಅತಿವೇಗ, ಕೆಟ್ಟರಸ್ತೆ, ಮಂಪರು, ಮದ್ಯಸೇವನೆ, ಅಜಾಗರೂಕತೆಯ ಚಾಲನೆ ಮುಂತಾದವು ಅಷ್ಟೆ. ಅಪಘಾತಗಳಿಗೆ ಹಗಲು ಮತ್ತು ರಾತ್ರಿ ಎಂಬ ಭೇದವಿಲ್ಲ. ಸಿಐಡಿ ಅಧಿಕಾರಿಗಳೇ ರಾತ್ರಿ ಸಂಚಾರಕ್ಕೆ ಬೆದರಿದರೆ ಸಾಮಾನ್ಯರ ಗತಿ ಏನು?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ರೊಕ್ಕದ ಬೆಳೆಗೆ ಮೊರೆ ಹೋದರು...

ಉತ್ತರ ಕರ್ನಾಟಕದಲ್ಲಿ ಜೋಳ, ದಕ್ಷಿಣ ಕರ್ನಾಟಕದಲ್ಲಿ ರಾಗಿ ಪ್ರಮುಖ ಆಹಾರಧಾನ್ಯದ ಬೆಳೆಗಳು ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು. ಜೋಳಕ್ಕೆ ರಾಗಿಗಿಂತ ಕಡಿಮೆ ಬೆಂಬಲ ಬೆಲೆ ನಿಗದಿ ಮಾಡಿದ್ದು ತಾರತಮ್ಯವಲ್ಲದೆ ಮತ್ತೇನು? (ಸಂಗತ, ಸೆ. 9). ಹೀಗಾಗಿಯೇ ರೈತರು ಜೋಳ ಬೆಳೆಯುವುದನ್ನು ಬಿಟ್ಟು, ರೊಕ್ಕದ ಬೆಳೆಯಾಗಿ ವಕ್ಕರಿಸಿದ ಸೂರ್ಯಕಾಂತಿಗೆ ಮೊರೆ ಹೋದದ್ದು.

'ಕಲ್ಯಾಣ ಕರ್ನಾಟಕ' ಎಂದು ಹೆಸರು ಬದಲಾಯಿಸಿದ ಮಾತ್ರಕ್ಕೆ ಯಾರ ಕಲ್ಯಾಣವಾದ ಹಾಗಾಯಿತು? ಅನಕ್ಷರಸ್ಥ, ಅಮಾಯಕ ಮತದಾರರ ಮೂಗಿಗೆ ತುಪ್ಪ ಸವರಿ ಆರಿಸಿ ಬಂದವರು ತಮ್ಮ ಉದ್ಧಾರ ಮಾಡಿಕೊಂಡರಷ್ಟೆ. ಸ್ವಾತಂತ್ರ್ಯ ಸಿಕ್ಕಿ ಎಪ್ಪತ್ತೈದು ವರ್ಷಗಳಾದರೂ ಇಲ್ಲಿನ ಜನರ ಬದುಕು ಹಸನಾಗಲಿಲ್ಲವಲ್ಲ ಎಂಬ ಕೊರಗು- ಅದೇ ನೆಲದಿಂದ ಎದ್ದು ಬಂದ ನನ್ನಂತಹವರಿಗೆ!

ಈರಪ್ಪ ಎಂ. ಕಂಬಳಿ, ಬೆಂಗಳೂರು

ಅಹಿಂಸೆಯ ಮಾರ್ಗದಿಂದ ಹಿನ್ನಡೆಯೇ?

ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಬೋಸ್ ಅವರು ತೋರಿದ್ದ ಹಾದಿಯಲ್ಲಿ ಭಾರತವು ಮುನ್ನಡೆದಿದ್ದರೆ ದೇಶ ಹೊಸ ಎತ್ತರಕ್ಕೆ ಏರುತ್ತಿತ್ತು' ಎಂದಿದ್ದಾರೆ (ಪ್ರ.ವಾ., ಸೆ. 9). ಅಂದರೆ ಸೇನಾತ್ಮಕವಾದ ಹಿಂಸಾ ಮಾರ್ಗವನ್ನು ಅನುಸರಿಸದೆ ಗಾಂಧಿಯವರು ತೋರಿದ ಸತ್ಯ, ಅಹಿಂಸೆಯ ಮಾರ್ಗವನ್ನು ಹಾಗೂ ಸಮಾನತೆ, ಸ್ವಾತಂತ್ರ್ಯ, ಜಾತ್ಯತೀತ, ಪ್ರಜಾಪ್ರಭುತ್ವ ಮೌಲ್ಯಗಳ ಸಂವಿಧಾನವನ್ನು ಅನುಸರಿಸುತ್ತಿರುವುದರಿಂದ ಹಿನ್ನಡೆಯಾಗಿದೆ ಎಂದು ಭಾವಿಸಬೇಕೆ?

ಬೋಸ್ ಅವರು 1943ರ ಡಿಸೆಂಬರ್ 30ರಂದು ಅಂಡಮಾನ್‌ನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ, 'ಇಂದು ಬ್ರಿಟಿಷರ ದಾಸ್ಯದಿಂದ ಮುಕ್ತಿ ಪಡೆದು ಪ್ರಥಮವಾಗಿ ಭಾರತದ ಭೂಪ್ರದೇಶದ ಮೇಲೆ ಧ್ವಜವನ್ನು ಹಾರಿಸುತ್ತಿದ್ದೇವೆ' ಎಂದು ಘೋಷಿಸಿದರು. ಅದು ಅಖಂಡ ಭಾರತದ ಮುಕ್ತಿ ಅಲ್ಲ, ಭಾರತದ ಒಂದು ಖಂಡದ್ದು. ಆದ್ದರಿಂದ ಪ್ರಧಾನಿಯವರು, 'ಬೋಸರು ಅಖಂಡ ಭಾರತದ ಮೊದಲ ಪ್ರಧಾನಿ' ಎಂದದ್ದು ಹೇಗೆ ಸರಿಯಾದೀತು? 'ರಾಜಪಥ ಎಂಬುದು ಗುಲಾಮಗಿರಿಯ ಸಂಕೇತ. ಅದನ್ನು ಕರ್ತವ್ಯಪಥ ಎಂದು ಬದಲಾಯಿಸಿದ್ದು ದೇಶಕ್ಕೆ ಹೊಸ ಚೈತನ್ಯ ಮತ್ತು ಸ್ಫೂರ್ತಿ ನೀಡಿದೆ' ಎಂದು ತಿಳಿಸಿದ್ದಾರೆ. ಹೆಸರಿನ ಬದಲಾವಣೆಯಿಂದಷ್ಟೇ ಇದು ಸಾಧ್ಯವೆ? ಎಸ್.ವಿ. ಪರಮೇಶ್ವರ ಭಟ್ಟರು ತಮ್ಮ ಒಂದು ಮುಕ್ತಕದಲ್ಲಿ, 'ಹೆಸರಿನೊಳೇನಿದೆ? ಮಲ್ಲಿಗೆ ಹೂವನು ಮೊಲ್ಲೆಯ ಹೂವೆನೆ ಕಂಪೇನು ಕಡಿಮೆಯಾಗುವುದೆ?' ಎಂದಿರುವುದನ್ನು ಈ ಸಂದರ್ಭಕ್ಕೆ ಅನ್ವಯಿಸಿಕೊಳ್ಳಬಹುದಾಗಿದೆ.

ವಿಶಾಲವಾದ ಪ್ರಜಾಸತ್ತಾತ್ಮಕ ಭಾರತದ ಪ್ರಧಾನಿಯವರು, ದೇಶದ ಸ್ವಾತಂತ್ರ್ಯ ಸಂಗ್ರಾಮದ ಪ್ರಧಾನ ಪ್ರವಾಹವನ್ನು, ಸ್ವಾತಂತ್ರ್ಯೋತ್ತರದ ತಕ್ಷಣದ ಬೆಳವಣಿಗೆಗಳನ್ನು ಪರಿಗಣಿಸದೆ ಒಂದು ನಿರ್ದಿಷ್ಟ ಮತದ ಸೈದ್ಧಾಂತಿಕ ವಕ್ತಾರರ ಹಾಗೆ ತಮ್ಮ ಭಾವನೆಗಳನ್ನು ಹರಿಯಬಿಟ್ಟಿರುವುದು ನೋವನ್ನು ಉಂಟು ಮಾಡುವಂತಹುದಾಗಿದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ರಸ್ತೆ ಗುಣಮಟ್ಟವೂ ಅತ್ಯಗತ್ಯ

ಉದ್ಯಮಿ ಸೈರಸ್ ಮಿಸ್ತ್ರಿ ಅವರ ಸಾವಿಗೆ ಕಾರಣವಾದ ಅಪಘಾತವು ಸಾರ್ವಜನಿಕವಾಗಿ ಹಲವಾರು ಚರ್ಚೆಗಳಿಗೆ ಇಂಬು ಕೊಟ್ಟಿದೆ. ವಾಹನಗಳಲ್ಲಿ ಸೀಟ್ ಬೆಲ್ಟ್ ಧರಿಸದಿರುವುದೇ ಪ್ರಯಾಣಿಕರ ಸಾವಿಗೆ ಪ್ರಮುಖ ಕಾರಣ ಎಂಬಂತೆ ಬಿಂಬಿಸಲಾಗುತ್ತಿದೆ. ಸೀಟ್ ಬೆಲ್ಟ್ ಧರಿಸುವುದರಿಂದ ಬಹಳಷ್ಟು ಪ್ರಾಣಹಾನಿ, ಗಾಯಗಳ ತೀವ್ರತೆಯನ್ನು ತಗ್ಗಿಸಬಹುದಾದರೂ ಅದೇ ಒಂದು ಪ್ರಮುಖ ಕಾರಣ ಎನ್ನುವುದನ್ನು ಸಂಪೂರ್ಣ ಒಪ್ಪಲಾಗದು. ಕೇಂದ್ರ ರಸ್ತೆ ಸಾರಿಗೆ ಸಚಿವರು 'ಅಂತರರಾಷ್ಟ್ರೀಯ ಗುಣಮಟ್ಟದ ರಸ್ತೆ ನಿರ್ಮಿಸಿದ್ದು, ಬಳಕೆದಾರರು ಟೋಲ್ ಪಾವತಿಸಲೇಬೇಕು' ಎಂದು ಲೋಕಸಭೆಯಲ್ಲಿ ಹೇಳಿಕೆ ನೀಡಿದ್ದರು. ಗ್ರಾಮೀಣ ರಸ್ತೆಗಳನ್ನು ಬಿಡಿ, ಅಂತರರಾಷ್ಟ್ರೀಯ ಗುಣಮಟ್ಟದ ಹೆಗ್ಗಳಿಕೆ ಹೊಂದಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲೂ ಬಹಳಷ್ಟು ಕಡೆ ಒಂದರಿಂದ ಮೂರು ಅಡಿಯವರೆಗೆ ಗುಂಡಿಗಳು ಬಿದ್ದಿರುವುದನ್ನು ರಸ್ತೆ ಮಾರ್ಗ ಬಳಸುವ ಯಾರಾದರೂ ಗಮನಿಸಬಹುದು. ಗುಂಡಿ ತಪ್ಪಿಸಲು ಹೋಗಿ ರಸ್ತೆ ಬಳಕೆದಾರರು ಪ್ರಾಣ ತೆತ್ತ, ಗಂಭೀರವಾಗಿ ಗಾಯಗೊಂಡ ಪ್ರಕರಣಗಳು ಅಸಂಖ್ಯ.

ಚತುಷ್ಪಥ ರಸ್ತೆಗಳು ಕೆಲವು ಕಡೆ ಏಕಾಏಕಿ ದ್ವಿಪಥವಾಗಿ ಪರಿವರ್ತನೆಯಾಗುತ್ತವೆ, ಸೇತುವೆಗಳು ಕಿರಿದಾಗುತ್ತವೆ, ಅವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ಹಾಕಲಾಗಿರುತ್ತದೆ. ಇದನ್ನು ಸಂಕೇತಿಸುವ ಫಲಕಗಳೇ ಇಲ್ಲದೆ ಚಾಲಕರು ಗಲಿಬಿಲಿಗೊಳಗಾಗಿ ಅಪಘಾತಕ್ಕೆ ಈಡಾಗುತ್ತಾರೆ. ಕಾನೂನು ಜಾರಿಗೊಳಿಸುವಾಗ ವಾಹನ ಬಳಕೆದಾರರನ್ನಷ್ಟೇ ಗುರಿಯಾಗಿಸಿಕೊಳ್ಳದೆ, ರಸ್ತೆ ನಿರ್ಮಾಣ, ನಿರ್ವಹಣೆ ಮಾಡುವವರಿಗೂ ದಂಡನೆಯ ಕ್ರಮಗಳು ಅನ್ವಯ ಆಗುವಂತೆ ಮಾಡಬೇಕಿದೆ. ಹಾಗಾದಲ್ಲಿ ರಸ್ತೆ ಸುರಕ್ಷತೆಯ ನಿಯಮಗಳಿಗೆ ಒಂದು ಅರ್ಥ ಬರುತ್ತದೆ.

ಡಾ. ಚೆನ್ನು ಅ. ಹಿರೇಮಠ, ರಾಣೆಬೆನ್ನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸರ್ಕಾರವು ತನ್ನ ಮೇಲಿನ ಭ್ರಷ್ಟಾಚಾರ ಆರೋಪಗಳನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಹಗರಣಗಳ ತನಿಖೆಗೆ ಹೊರಟಿರುವುದು ಸರಿಯಾದ ಕ್ರಮವೇ?

ಪ್ರಜಾವಾಣಿ ಚರ್ಚೆ

ಗುಡ್ಡಕ್ಕೆ ಗುಡ್ಡ 'ಮರೆ ಮಾಡುವ' ಆಟ

ಯಾವುದೇ ಅಪರಾಧ ಕೃತ್ಯವನ್ನು ಮುಚ್ಚಿಡುವುದು ಭಾರತೀಯ ದಂಡಸಂಹಿತೆಯನ್ವಯ ಶಿಕ್ಷಾರ್ಹ ಅಪರಾಧವೆನಿಸುತ್ತದೆ. ಅದು ಗೊತ್ತಿದ್ದು ಕೂಡ ನೀವು ನಮ್ಮ ಅಪರಾಧಗಳನ್ನು ಬಿಚ್ಚಿಟ್ಟರೆ ನಾವು ನಿಮ್ಮ ಅಪರಾಧಗಳನ್ನು ಬಿಚ್ಚಿಡುತ್ತೇವೆ, ನೀವೇನೂ ಸುಭಗರಲ್ಲ ಎಂದು ಗುಡ್ಡಕ್ಕೆ ಗುಡ್ಡ ಅಡ್ಡವಿರಿಸುವುದು ಈಗ ತೀರಾ ಸಾಮಾನ್ಯ ಆಗಿಬಿಟ್ಟಿದೆ

• ರಾಜಾರಾಂ ತಲ್ಲೂರು

'ನಾವೇನೂ ಸನ್ಯಾಸಿಗಳಲ್ಲ'– 'ಇಕ್ಕಟ್ಟಿಗೆ ಸಿಕ್ಕಿಸುವ ಪ್ರಶ್ನೆ' ಕೇಳಿದರೆ, ರಾಜಕಾರಣಿಗಳಿಂದ ಪಕ್ಷ ಭೇದ ಇಲ್ಲದೆ ಬರುವ ಸಿದ್ಧ ಉತ್ತರ ಇದು. ನಾಡಿನಲ್ಲೀಗ ಸನ್ಯಾಸಿಗಳದೇ ಹದ ಕೆಡುತ್ತಿರುವಾಗ, ರಾಜಕಾರಣಿಗಳು ಕೊಳೆತು ನಾರುತ್ತಿರುವುದರಲ್ಲಿ ಯಾರಿಗೂ ವಿಶೇಷ ಕಾಣಿಸುತ್ತಿಲ್ಲ. ಇದು ಕಳೆದ ನಾಲ್ಕು ದಶಕಗಳಲ್ಲಿ ಬದಲಾಗುತ್ತಾ ಬಂದಿರುವ ಸಾರ್ವಜನಿಕ ಬದುಕಿನ ಮೌಲ್ಯ.

1972-80ರ ಅವಧಿಯನ್ನು ಕರ್ನಾಟಕದಲ್ಲಿ ಭ್ರಷ್ಟಾಚಾರಕ್ಕೆ ಸಾರ್ವಜನಿಕ ರೂಪ ಸಿಗತೊಡಗಿದ ಅವಧಿ ಎಂದು ಗುರುತಿಸಲಾಗುತ್ತದೆ. ಅದಕ್ಕಿಂತ ಮೊದಲು ಭ್ರಷ್ಟಾಚಾರ ಇರಲಿಲ್ಲ ಎಂದಲ್ಲ. ಭ್ರಷ್ಟಾಚಾರಕ್ಕೊಂದು ಖಾಸಗಿ ಸ್ವರೂಪ ಇತ್ತು ಮತ್ತು 'ಮರ್ಯಾದೆ'ಯ ಭಯ ಇತ್ತು. ಅಲ್ಲಿಂದೀಚೆಗೆ ಒಬ್ಬರ ಕಾಲದಲ್ಲಿ ದುಡ್ಡುಕೊಟ್ಟರೆ ಕೆಲಸ ಆಗುತ್ತಿತ್ತು; ಇನ್ನೊಬ್ಬರ ಕಾಲದಲ್ಲಿ ದುಡ್ಡು ಕೊಟ್ಟರೂ ಕೆಲಸ ಆಗುತ್ತಿಲ್ಲ; ಆ ಬಳಿಕ ಫಿಕ್ಸೆಡ್ ರೇಟು; ಮುಂದೆ ಕಮಿಷನ್ ಏಜೆಂಟರು; ಅದೂ ಡಲ್ಲಾದಾಗ ಸಾಂಸ್ಥಿಕ ಲೂಟಿ... ಹೀಗೆ ಭ್ರಷ್ಟಾಚಾರ ನಾಡಿನಲ್ಲಿ ಬೆಳೆಯುತ್ತಾ ಬಂದದ್ದೇ ಒಂದು ಕೌತುಕದ ಕಥೆ.

ಇವತ್ತು ಪರಿಸ್ಥಿತಿ ಎಲ್ಲಿಗೆ ತಲುಪಿದೆ ಎಂದರೆ, ಭ್ರಷ್ಟಾಚಾರದ ಉದ್ದೇಶ ಈಗ ಹಣ ಮಾಡುವುದಲ್ಲ. ಹಿಂದೆಲ್ಲ, ಚುನಾವಣೆಗೆ ಖರ್ಚು ಮಾಡಿದ ಹಣವನ್ನು ಭ್ರಷ್ಟಾಚಾರದ ಮೂಲಕ ದುಡಿಯುವುದು ಅಥವಾ ತಾನು ಗೆಲ್ಲುವುದಿಲ್ಲ ಎಂದು ಖಚಿತವಿದ್ದರೆ, ನಾಲ್ಕು ಕಾಸು ಮಾಡಿಕೊಂಡು ಹೊರತೆರಳುವುದು ರಾಜಕಾರಣಿಗಳ ಉದ್ದೇಶ ಆಗಿರುತ್ತಿತ್ತು. ಆದರೆ ಇಂದು ಆ ಸ್ಥಿತಿ ಬದಲಾಗಿದೆ. ರಾಜಕಾರಣಿಗಳೆಂಬ ಮಧ್ಯವರ್ತಿಗಳು ಬೇಡ ಎಂದು ತಾವೇ ಸ್ವತಃ ರಂಗಕ್ಕಿಳಿದಿರುವ ರಿಯಲ್ ಎಸ್ಟೇಟ್ ಏಜೆಂಟರು, ಅಡ್ಡಕಸುಬಿಗಳು, ಉದ್ಯಮಪತಿಗಳು ಅಥವಾ ಅವರ ಪ್ರಾಕ್ಸಿಗಳು, ಮೊದಲೇ ತಾವು ದುಡಿದಿಟ್ಟಿರುವ ಕೋಟಿಗಟ್ಟಲೆ ಹಣವನ್ನು ಚೆಲ್ಲಿ ಚುನಾವಣೆ ಗೆಲ್ಲುತ್ತಿದ್ದಾರೆ.

ಭ್ರಷ್ಟ ವ್ಯವಸ್ಥೆಗೆ ಆರ್ಥಿಕ ಉದಾರೀಕರಣದ ಕೊಡುಗೆ ಏನೆಂದರೆ, ಭ್ರಷ್ಟಾಚಾರದ ಗಾತ್ರವನ್ನು ಹಿಗ್ಗಿಸಿ, ಅದು ಜನಸಾಮಾನ್ಯರ ಕಣ್ಣಿಗೆ ಕಾಣಿಸದಂತೆ ಭೂಮಗಾತ್ರಗೊಳಿಸಿದ್ದು. ಇಂದು ರಾಜಕಾರಣಿಗಳಾಗಿ ಕುಳಿತಿರುವವರಿಗೆ ಶಾಸಕೀಯ ತೀರ್ಮಾನಗಳ ಮೂಲಕವೇ ಸಂಪತ್ತಿನ ಹರಿವನ್ನು ತಮ್ಮೆಡೆಗೆ ತಿರುಗಿಸಿಕೊಳ್ಳುವ ತಂತ್ರ ಕರತಲಾಮಲಕ. ತಾವಿರುವ ಸ್ಥಾನದ-ಹುದ್ದೆಯ ಲಾಭ ಪಡೆದುಕೊಳ್ಳುವ 'ಡು-ರೀಡೂ-ಕ್ಯಾನ್ ಡೂ' ವಿದ್ಯೆಗಳಲ್ಲೆಲ್ಲ ಅವರು ಪಾರಂಗತರು. ಕಳೆದ ಇಪ್ಪತ್ತು ವರ್ಷಗಳಿಂದೀಚೆಗೆ ಕರ್ನಾಟಕದ ರಾಜಕೀಯದಲ್ಲಿ ಇವರದೇ ಭರಾಟೆ. ಜನಸಾಮಾನ್ಯರಿಗೂ ಇದೆಲ್ಲ ಅಭ್ಯಾಸ ಆಗಿಬಿಟ್ಟಿದೆ ಎನ್ನುವುದು ರಾಜಕಾರಣಿಗಳಿಗೂ ಇಂದು ಚೆನ್ನಾಗಿ ಅರಿವಿದೆ.

ಶೇಕಡ 40ರ ಆಟ

ಯಾವಾಗ ಶಾಸಕೀಯ ತೀರ್ಮಾನಗಳು ಮತ್ತು 'ಅಭಿವೃದ್ಧಿ' ಎಂಬ ಹೆಸರಿನಲ್ಲಿ ನಡೆಯುವ 'ಗುತ್ತಿಗೆದಾರ ಪ್ರಿಯ' ಕಾಮಗಾರಿಗಳೇ ಹಣದ ಹರಿವಿನ ಮೂಲಗಳಾದವೋ, ಆವತ್ತಿನಿಂದಲೇ ನಾಡಿನಲ್ಲಿ ಗುತ್ತಿಗೆದಾರರ ಕಾರ್ಟೆಲ್ ಬಹಳ ಪ್ರಭಾವಿ ಆಯಿತು. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ, ಯಾರೇ ಮುಖ್ಯಮಂತ್ರಿ ಆದರೂ, ಯಾರೇ ಸಚಿವರಾದರೂ ಅವರ ಸಾಮೀಪ್ಯ ಪಡೆದುಕೊಳ್ಳಬಲ್ಲ 'ಪಕ್ಷಾತೀತ' ಕಾರ್ಟೆಲ್ ಅದು. ಇದೇನೂ ಕದ್ದುಮುಚ್ಚಿ ನಡೆಯುವ ಕಳ್ಳಾಟವಲ್ಲ. ವಿಧಾನಸೌಧದ ಕಂಬಗಳೆಲ್ಲ ಇದಕ್ಕೆ ಸಾಕ್ಷಿ.

ರಾಜ್ಯ ವಿಧಾನಸಭೆಗೆ ಚುನಾವಣೆ ಎದುರು ಬಂದು ನಿಂತಿದೆ, ಹಾಗಾಗಿ, ಶೇಕಡ 40 ಕಮಿಷನ್ ವಿಚಾರ ಸದ್ದು ಮಾಡುತ್ತಿದೆ. ಇದೇನೂ ಗಾಳಿ ಸುದ್ದಿ ಅಲ್ಲ. ಕೊಟ್ಟವರೇ ಕ್ಯಾಮೆರಾಗಳ ಎದುರು ಬಂದು 'ಕೊಟ್ಟಿದ್ದೇವೆ' ಎಂದು ಹೇಳುತ್ತಿದ್ದಾರೆ. ಇಂತಹದೊಂದು ಸನ್ನಿವೇಶದಲ್ಲಿ ವಾತಾವರಣ ಆರೋಗ್ಯಕರ ಇದ್ದಿದ್ದರೆ ಏನಾಗಬೇಕಿತ್ತು? ನೇರವಾಗಿ ಸರ್ಕಾರದ ಮೇಲೇ ಆಪಾದನೆ ಮಾಡಲಾಗಿದೆ. ಆದರೆ ಸರ್ಕಾರ, ಈ ಆಪಾದನೆಗಳನ್ನು ಕೇವಲ ರಾಜಕೀಯವಾಗಿಯೇ ನಿಭಾಯಿಸಲು ಪ್ರಯತ್ನಿಸುತ್ತಿದೆ. ಈ ನಾಟಕವನ್ನು ಕಂಡ ಬಳಿಕವಾದರೂ, ಭ್ರಷ್ಟಾಚಾರ ನಿರೋಧಕ್ಕೆಂದೇ ಇರುವ ಕೇಂದ್ರದ ಅಥವಾ ರಾಜ್ಯ ಸರ್ಕಾರದ 'ಸ್ವತಂತ್ರ ಎಂದು ಘೋಷಿಸಿಕೊಂಡಿರುವ' ಯಾವುದಾದರೂ ಏಜೆನ್ಸಿಯೋ ಅಥವಾ ಸ್ವತಃ ನ್ಯಾಯಾಂಗವೋ, ಸ್ವಪ್ರೇರಣೆಯಿಂದ ಈ ಬಗ್ಗೆ ಕೂಲಂಕಷ ಪರಿಶೀಲನೆ ನಡೆಸಬೇಕಿತ್ತು. ಅದು ಆಗುತ್ತಿಲ್ಲ. ಬದಲಾಗಿ, ಸ್ವತಃ ಆಡಳಿತದಲ್ಲಿರುವ ಸರ್ಕಾರ, ತನ್ನ ಮೇಲೆ ದೂರು ಹಾಕಿದರೆ, ತಾನು ಹಿಂದಿನ ಸರ್ಕಾರಗಳ ಇಂತಹದೇ ಕೆಸರನ್ನು ಎತ್ತಿಹಾಕಿ ಇನ್ನಷ್ಟು ರಾಡಿ ಎಬ್ಬಿಸುತ್ತೇನೆ ಎಂದು ಬೆದರಿಸಿದ್ದು ವರದಿ ಆಗಿದೆ.

ಬೇವು ಬಿತ್ತಿ ಮಾವು...?

ರಾಜ್ಯದ ಹಾಲಿ ಶಾಸಕರ ಪೈಕಿ ಪ್ರತೀ ಮೂವರಲ್ಲೊಬ್ಬರು ಕ್ರಿಮಿನಲ್ ಮತ್ತು ಪ್ರತೀ ಐವರಲ್ಲೊಬ್ಬರು ಗಂಭೀರ ಸ್ವರೂಪದ ಅಪರಾಧಗಳ ಹಿನ್ನೆಲೆ ಇರುವವರು ಎಂದು ಎಡಿಆರ್ ಸಮೀಕ್ಷೆ ಹೇಳುತ್ತದೆ. ಇದನ್ನೆಲ್ಲ ಈ ಶಾಸಕರು 2018ರ ತಮ್ಮ ಚುನಾವಣಾ ಪ್ರಮಾಣಪತ್ರಗಳಲ್ಲಿಯೇ ಘೋಷಿಸಿಕೊಂಡಿದ್ದಾರೆ. ದುಡ್ಡು, ಜಾತಿ, ಸುಳ್ಳು ಪ್ರಚಾರ ಮತ್ತು ತೋಳ್ಬಲಗಳನ್ನೇ ಬಂಡವಾಳವಾಗಿಸಿಕೊಂಡು ಅಧಿಕಾರ ಗಳಿಸಿಕೊಂಡವರು ನಮ್ಮ ಶಾಸನಸಭೆಯಲ್ಲಿ ಕುಳಿತಿರುವುದು ನಮಗೆ ಗೊತ್ತೇ ಇಲ್ಲ ಎಂದು ಇವತ್ತು ಹೇಳಿಕೊಂಡರೆ ಅದು ಜನಸಾಮಾನ್ಯರಾಗಿ ನಮ್ಮ ಮೂರ್ಖತನ ವಾಗುತ್ತದೆ.

ಇಂತಹ ಜನಗಳು ಸಹಜವಾಗಿಯೇ 'ನೀನು ಕಳ್ಳ' ಎಂದರೆ ಅದಕ್ಕುತ್ತರವಾಗಿ 'ನೀನೂ ಕಳ್ಳ, ನಿನ್ನ ಕುಟುಂಬವೇ ಕಳ್ಳರದು' ಎಂದು ಕಚ್ಚಾಟದಲ್ಲಿ ತೊಡಗಿ, ಅದನ್ನೂ ಜನರಿಗೆ ಮನರಂಜನೆ ಎಂಬಂತೆ ದಯಪಾಲಿಸುತ್ತಿದ್ದಾರೆ. ಅವರಿಗದು ನಾಚಿಕೆಗೇಡು ಅನ್ನಿಸುತ್ತಿಲ್ಲ. ಚುನಾವಣೆಯ ಸಿದ್ಧತೆ ಇದಿನ್ನೂ ಆರಂಭ ಆಗಿರುವುದರಿಂದ, ಈ ಮನರಂಜನೆ ದಿನಕಳೆದಂತೆ ಮತ್ತಷ್ಟು ರಂಗೇರುವುದೂ ಖಚಿತ. ಇದನ್ನೆಲ್ಲ ಕೇವಲ ಭಾವನಾತ್ಮಕವಾಗಿ, ಹತಾಶೆಯಿಂದ ನೋಡಿ ಮರೆತುಬಿಟ್ಟರೆ ಸಾಕೆ? ಸಂವಿಧಾನವನ್ನು ನಾಡಿನ ಬದುಕಿಗೆ ಮೂಲಾಧಾರವೆಂದು ನಂಬಿರುವ ಒಂದು ಜನತಂತ್ರದ ಭಾಗವಾಗಿ, ಈ ವಿಕೃತಿಗಳು ಎಲ್ಲಿ ನಿಲ್ಲುತ್ತವೆ?

ಯಾವುದೇ ಅಪರಾಧ ಕೃತ್ಯವನ್ನು ಮುಚ್ಚಿಡುವುದು ಭಾರತೀಯ ದಂಡಸಂಹಿತೆಯನ್ವಯ ಶಿಕ್ಷಾರ್ಹ ಅಪರಾಧವೆನಿಸುತ್ತದೆ. ಅದು ಗೊತ್ತಿದ್ದು ಕೂಡ ನೀವು ನಮ್ಮ ಅಪರಾಧಗಳನ್ನು ಬಿಚ್ಚಿಟ್ಟರೆ ನಾವು ನಿಮ್ಮ ಅಪರಾಧಗಳನ್ನು ಬಿಚ್ಚಿಡುತ್ತೇವೆ, ನೀವೇನೂ ಸುಭಗರಲ್ಲ ಎಂದು ಗುಡ್ಡಕ್ಕೆ ಗುಡ್ಡ ಅಡ್ಡವಿರಿಸುವುದು ಈಗ ತೀರಾ ಸಾಮಾನ್ಯ ಆಗಿಬಿಟ್ಟಿದೆ. ಈ ಗುಡ್ಡಗಳ ಮರೆಯ ಹಿಂದೆ ತಾವೆಸಗಿರುವ ಅಪರಾಧಗಳು, ಈ ಕೆಸರೆರಚಾಟಗಳಿಗೆ ಸಾಕ್ಷಿ ಆಗುತ್ತಿರುವ ಮೂರನೆಯವರಿಗೆ ಕಾಣಿಸುವುದಿಲ್ಲ ಎಂಬ ಧೈರ್ಯ ಇದನ್ನು ಮಾಡಿಸುತ್ತಿದೆ. ಅಪರಾಧಗಳನ್ನು ಸಾಮೂಹಿಕವಾಗಿ ಮಾಡಿ, ಎಲ್ಲರೂ ಅಪರಾಧಿಗಳೇ ಎಂದು ಬಿಂಬಿಸುವ ಮೂಲಕ ಅಪರಾಧವನ್ನು ಸಹಜೀಕರಿಸುವ ತಂತ್ರ ಇದು.

ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣವಚನ ಸ್ವೀಕರಿಸಿ, ಸರ್ಕಾರದ ಸಂಪುಟ ಸೇರುವ ಸಚಿವರು ತಮ್ಮ ಪ್ರಮಾಣವಚನದ ಹಿನ್ನೆಲೆಯನ್ನಾಗಲೀ, 'ಹಿತಾಸಕ್ತಿಗಳ ಸಂಘರ್ಷ' ಎಂಬ ಪದಗಳ ಅರ್ಥವನ್ನಾಗಲೀ ಯಾವತ್ತಾದರೂ ತಿಳಿಯಲು ಪ್ರಯತ್ನಿಸಿದ್ದಾರೆಯೇ? ರಾಜ್ಯ ಕಳೆದ ಮೂವತ್ತು ವರ್ಷಗಳಲ್ಲಿ ಹಲವು ಬಾರಿ, ಮದ್ಯದ ಉದ್ದಿಮೆ ಇರುವ ಅಬಕಾರಿ ಮಂತ್ರಿ, ಸಕ್ಕರೆ ಕಾರ್ಖಾನೆಗಳಿರುವ ಕೈಗಾರಿಕಾ ಮಂತ್ರಿ, ಮೀನುಗಾರಿಕೆ ರಫ್ತು ಉದ್ಯಮ ಇರುವ ಮೀನುಗಾರಿಕಾ ಮಂತ್ರಿ, ರಿಯಲ್ ಎಸ್ಟೇಟ್ ವ್ಯವಹಾರ ಇರುವ ನಗರಾಭಿವೃದ್ಧಿ-ಕಂದಾಯ ಮಂತ್ರಿ, ಐಟಿ ಉದ್ಯಮ ಇರುವ ತಂತ್ರಜ್ಞಾನ ಮಂತ್ರಿ, ವೈದ್ಯಕೀಯ ಕಾಲೇಜು ನಡೆಸುವ ಆರೋಗ್ಯ ಮಂತ್ರಿ... ಹೀಗೆ ಸಾಲು ಸಾಲು ಹಿತಾಸಕ್ತ ಸಚಿವರನ್ನು ಕಂಡಿದೆ.

'ನಾವು ಸನ್ಯಾಸಿಗಳಲ್ಲ' ಎಂದು ಬಹಿರಂಗವಾಗಿ ಹೇಳಿಕೊಳ್ಳುವ ಈ ಸಚಿವ ಗಢಣ, ತಮ್ಮ ಹಿತಾಸಕ್ತಿಗಳನ್ನು ಬದಿಗಿಟ್ಟು ಕಾರ್ಯಾಚರಿಸಿದರು ಎಂದರೆ ನಂಬುವುದು ಸಾಧ್ಯ ಇದೆಯೆ? ಆರ್ಥಿಕ ಭ್ರಷ್ಟಾಚಾರ ಮಾತ್ರ ಹಗರಣವೇ? ಹಿತಾಸಕ್ತಿ ಸಂಘರ್ಷಗಳು, ನೀತ್ಯಾತ್ಮಕ ತಿರುಚುವಿಕೆಗಳು ಅಪರಾಧಗಳಲ್ಲವೆ? ಗುಂಪಾಗಿ ಮಾಡಿ ಬೆರಳು ತೋರಿಸಿಬಿಟ್ಟರೆ ಎಲ್ಲ ಅಪರಾಧಗಳೂ ಮಾಫಿಯೆ? ಹಾಗಾದರೆ ಸಾರ್ವಜನಿಕ ಬದುಕಿನಲ್ಲಿ ಇಂದು 'ಜನಪರ' ಎಂಬುದಕ್ಕೆ ಮಾನದಂಡ ಯಾವುದು?

ಲೇಖಕ: ಸಾಮಾಜಿಕ ವಿಶ್ಲೇಷಕ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 221

ಸಮುದ್ರದಲ್ಲಿ ಶಿವನ ವಡವಾಗ್ನಿ

ನಾರದ 'ಓ ಬ್ರಹ್ಮನೆ, ಶಂಕರನ ಮೂರನೇ ಕಣ್ಣಿನಿಂದ ಜನಿಸಿದ ಅಗ್ನಿಜ್ವಾಲೆಯು ಮನ್ಮಥನನ್ನು ಭಸ್ಮಮಾಡಿ ಮುಂದೆಲ್ಲಿಗೆ ಹೋಯಿತು?' ಎಂದು ಕೇಳುತ್ತಾನೆ.

ಆಗ ಬ್ರಹ್ಮ 'ಎಲೈ ನಾರದ, ಶಂಕರನ ಫಾಲನೇತ್ರವು ಯಾವಾಗ ಮನ್ಮಥನನ್ನು ಭಸ್ಮಮಾಡಿತೋ, ಆಗ ಎಲ್ಲ ದೇವತೆಗಳು ಮತ್ತು ಮುನಿಗಳು ನನ್ನ ಬಳಿ ಬಂದು ತಮ್ಮ ದುಃಖವನ್ನು ಹೇಳಿಕೊಂಡರು. ಶಿವನ ಕೋಪಕ್ಕೆ ತುತ್ತಾಗಿ ಮನ್ಮಥ ಸುಟ್ಟುಹೋದ ವಿಷಯವನ್ನು ದೇವತೆಗಳು ಹೇಳಿದಾಗ, ಶಿವ ಹೀಗೇಕೆ ಮಾಡಿದ ಎಂದು ವಿಮರ್ಶಿಸಿದೆ. ತಕ್ಷಣವೇ ಎಚ್ಚೆತ್ತ ನಾನು ಲೋಕರಕ್ಷಣೆಗಾಗಿ ಶಿವನ ಬಳಿಗೆ ಹೋಗಿ ವಿನಯದಿಂದ ಅವನನ್ನು ಪ್ರಸನ್ನಗೊಳಿಸಿದೆ. ಅವನ ಅನುಗ್ರಹದಿಂದ ನಾನು ದಿವ್ಯತೇಜಸ್ಸನ್ನು ಪಡೆದು, ಉರಿಯುತ್ತಿದ್ದ ಶಿವನ ಫಾಲಾಗ್ನಿಯನ್ನು ಸ್ತಂಭಿಸಿದೆ. ಇಲ್ಲದಿದ್ದರೆ, ಶಿವನ ಮೂರನೇ ಕಣ್ಣಿನಿಂದ ಹೊರಟ ಅಗ್ನಿಜ್ವಾಲೆ ಮನ್ಮಥನನ್ನು ಸುಟ್ಟ ನಂತರವೂ ತಣಿಯದೆ, ಮೂರು ಲೋಕಗಳನ್ನೂ ಸುಡಲು ಸಿದ್ಧವಾಗಿತ್ತು. ಲೋಕಹಿತಕ್ಕಾಗಿ ಜ್ವಾಲೆಯನ್ನು ವಡವಾಗ್ನಿಯನ್ನಾಗಿ ಮಾಡಿದ ನಂತರ, ಶಿವನ ಅಪ್ಪಣೆಯಂತೆ ಸಮುದ್ರಕ್ಕೆ ಹಾಕಲು ಸಮುದ್ರರಾಜನ ಬಳಿಗೆ ಹೋದೆ.

'ನನ್ನನ್ನು ನೋಡಿ ಸಮುದ್ರನು ಪುರುಷರೂಪವನ್ನು ಧರಿಸಿ ನನ್ನ ಬಳಿಗೆ ಬಂದು, 'ಓ ಬ್ರಹ್ಮ, ನೀನು ಜಗದೊಡೆಯ. ನಾನು ನಿನ್ನ ಸೇವಕ. ನೀನು ನನ್ನಲ್ಲಿಗೆ ಬಂದಿರುವ ಕಾರಣವೇನೆಂಬುದನ್ನು ಅಪ್ಪಣೆಮಾಡು' ಎಂದು ಬೇಡಿಕೊಂಡ. ನಾನು 'ಎಲೈ ಸಮುದ್ರರಾಜ, ನೀನು ಮಹಾಬುದ್ಧಿವಂತ. ಲೋಕದ ಹಿತವನ್ನು ಕಾಪಾಡುವವನೂ ಆಗಿರುವೆ. ನಾನು ನಿನ್ನ ಬಳಿ ಬಂದಿರುವ ಕಾರಣವೇನೆಂದರೆ, ವಡವಾರೂಪವಾದ ಈ ಅಗ್ನಿಯು ಈಶ್ವರನ ಕ್ರೋಧವಾಗಿರುತ್ತದೆ. ಇದು ಮನ್ಮಥನನ್ನು ಸುಟ್ಟಿದ್ದೂ ಅಲ್ಲದೆ, ಜಗತ್ತೆಲ್ಲವನ್ನೂ ಸುಡುವುದರಲ್ಲಿತ್ತು. ಕ್ರೋಧಾಗ್ನಿಯಿಂದ ಪೀಡಿತರಾದ ದೇವತೆಗಳು ನನ್ನಲ್ಲಿ ಮೊರೆಯಿಟ್ಟಾಗ, ನಾನು ಜಾಗ್ರತೆಯಾಗಿ ಶಿವನ ಬಳಿಗೆ ಹೋಗಿ ಅವನಿಚ್ಛೆಯಂತೆ ಕ್ರೋಧಾಗ್ನಿಯನ್ನು ಸ್ತಂಭಿಸಿದೆ. ಆಮೇಲೆ ಇದು ವಡವಾರೂಪವನ್ನು ಧರಿಸಿತು. ಅದನ್ನು ಶಿವನ ಮಾರ್ಗದರ್ಶನದಂತೆ ಇಲ್ಲಿಗೆ ತೆಗೆದುಕೊಂಡು ಬಂದಿದ್ದೇನೆ. ಇನ್ನು ಮುಂದೆ ಜಲರೂಪನಾದ ನೀನೇ ಈ ವಡವಾಗ್ನಿಗೆ ಆಶ್ರಯ ನೀಡಬೇಕು. ವಡವಾರೂಪವಾದ ಈ ಈಶ್ವರನ ಕ್ರೋಧಾಗ್ನಿಯನ್ನು ನೀನು ಮಹಾ ಪ್ರಳಯಕಾಲದವರೆಗೆ ಇಟ್ಟುಕೊಳ್ಳಬೇಕು. ಮುಂದೆ ನಾನು ನಿನ್ನಲ್ಲಿಗೆ ಬಂದು ವಾಸ ಮಾಡುವೆ. ಅಲ್ಲಿಯವರೆಗೆ ಭಯಂಕರವಾದ ಈ ವಡವಾಗ್ನಿಯನ್ನು ನೀನು ಹಿಡಿದಿಟ್ಟುಕೊಳ್ಳಬೇಕು. ನಿನ್ನ ಜಲವೇ ಈ ಕ್ರೋಧಾಗ್ನಿಗೆ ಆಹಾರ. ಇದು ನೀರಿನಾಳದೊಳಗೆ ಮುಳುಗಿಹೋಗದಂತೆ ಕಠಿಣ ಪ್ರಯತ್ನದಿಂದ ನೀನು ರಕ್ಷಿಸುತ್ತಿರಬೇಕು' ಎಂದೆ.

'ನನ್ನ ಮಾತನ್ನು ಒಪ್ಪಿದ ಸಮುದ್ರರಾಜ ವಡವಾಗ್ನಿಯನ್ನು ಧರಿಸಲು ಮುಂದಾದ. ಏಕೆಂದರೆ ತನ್ನ ವಿನಾ ಇನ್ನಾರೂ ವಡವಾಗ್ನಿಯನ್ನು ಹಿಡಿದು ಆಶ್ರಯ ನೀಡಲಾರರು ಎಂಬುದು ಸಮುದ್ರರಾಜನಿಗೂ ಗೊತ್ತಿತ್ತು. ವಡವಾಗ್ನಿಯನ್ನು ಬ್ರಹ್ಮನಿಂದ ಸಮುದ್ರರಾಜ ಸ್ವೀಕರಿಸುತ್ತಿದ್ದಂತೆ, ಅದು ತನ್ನ ಜ್ವಾಲೆಗಳಿಂದ ಸಮುದ್ರದ ಜಲತರಂಗಗಳನ್ನು ಭಸ್ಮಮಾಡುತ್ತಾ ಒಳಗೆ ಪ್ರವೇಶಿಸಿತು.

ಶಂಕರನ ಕ್ರೋಧಾಗ್ನಿಯನ್ನು ಶಮನಗೊಳಿಸಿದ ನಂತರ ಸಮುದ್ರಪುರುಷನು ಅಂತರ್ಧಾನನಾದ. ನಾನೂ ಸಂತುಷ್ಟನಾಗಿ ಮರಳಿದೆ. ಜಗತ್ತು ಶಂಕರನ ಕ್ರೋಧಾಗ್ನಿಯ ಭಯವಿಲ್ಲದೆ ಸ್ವಸ್ಥವಾಯಿತು. ದೇವತೆಗಳು ಮತ್ತು ಮುನಿಗಳು ಸುಖಿಗಳಾದರು ಎಂದು ಬ್ರಹ್ಮ ಹೇಳುವಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ, ಪಾರ್ವತೀಖಂಡದ ಇಪ್ಪತ್ತನೆ ಅಧ್ಯಾಯ ಮುಕ್ತಾಯವಾಗುತ್ತದೆ.

ಹಳೆ ಅಕ್ರಮಗಳ ಹೊಸ ತನಿಖೆ ಏಕೆ ಬೇಡ?

• ರಾಮಕೃಷ್ಣ ಉಪಾಧ್ಯ



ಸಾರ್ವಜನಿಕ ಜೀವನದಲ್ಲಿ ಋಜುತ್ವವನ್ನು ಪುನಃ ಸ್ಥಾಪಿಸಲು ಹಿಂದಿನ ಸರ್ಕಾರಗಳ ಅವಧಿಯಲ್ಲಿನ ಹಗರಣಗಳತ್ತ ಬೊಟ್ಟು ತೋರಿ ಪ್ರಕರಣಗಳ ತನಿಖೆ ನಡೆಸಿದರಷ್ಟೇ ಸಾಲದು. ಇತ್ತೀಚೆಗೆ ನಡೆದ ಪಿಎಸ್ಐ ಸೇರಿದಂತೆ ವಿವಿಧ ನೇಮಕಾತಿಗಳಲ್ಲಿನ ಅಕ್ರಮ ಆರೋಪ, ಬಿಬಿಎಂಪಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಬಗ್ಗೆ ಕೇಳಿ ಬಂದಿರುವ ಆರೋಪಗಳ ಬಗ್ಗೆಯೂ ಪ್ರಾಮಾಣಿಕ ತನಿಖೆಯನ್ನು ಬೊಮ್ಮಾಯಿ ಅವರು ನಡೆಸಬೇಕು

ಟ್ವಿಟರ್‌ನಂತಹ ಸಾಮಾಜಿಕ ಜಾಲತಾಣವನ್ನು ತಮ್ಮ ರಾಜಕೀಯ ವಿರೋಧಿಗಳನ್ನು ಗುರಿಯಾಗಿಸಲು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಂತೆ ಶಕ್ತಿಶಾಲಿಯಾಗಿ ಬಳಸಿಕೊಂಡ ಮತ್ತೊಬ್ಬ ರಾಜಕಾರಣಿ ಕರ್ನಾಟಕದಲ್ಲಿ ಇಲ್ಲ. ಪ್ರತಿ ಬೆಳಿಗ್ಗೆಯೂ ರಾಜಕೀಯ ಆರೋಪಗಳನ್ನು ಒಳಗೊಂಡ ಸರಣಿ ಟ್ವೀಟ್‌ಗಳನ್ನು ಅವರು ಮಾಡುತ್ತಾರೆ. ಬಳಿಕ ಮಾಧ್ಯಮಗೋಷ್ಠಿ ನಡೆಸಿ ಅಥವಾ ಸುದ್ದಿವಾಹಿನಿಗಳಿಗೆ ಹೇಳಿಕೆಗಳನ್ನು ನೀಡಿ ಆ ವಿಚಾರವು ಇಡೀ ದಿನ ಚರ್ಚೆಯಲ್ಲಿ ಇರುವಂತೆ ನೋಡಿಕೊಳ್ಳುತ್ತಾರೆ ಮತ್ತು ಆ ಮೂಲಕ ತಾವೂ ಸುದ್ದಿಯಲ್ಲಿ ಇರುವಂತೆ ಮಾಡಿಕೊಳ್ಳುತ್ತಾರೆ. ಈ ಹಿಂದೆ ಇದ್ದ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಮತ್ತು ಒಂದು ವರ್ಷದಿಂದ ಇರುವ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ವಿರುದ್ಧ ಸಿದ್ದರಾಮಯ್ಯ ಅವರು ಸತತವಾಗಿ ಕಿಡಿಕಾರುತ್ತಲೇ ಇದ್ದಾರೆ. ಇದನ್ನು ನೋಡಿ ಅದಕ್ಷ ಮತ್ತು ಅಸಮರ್ಥ ಸಚಿವರನ್ನು ಒಳಗೊಂಡ ಕರ್ನಾಟಕದ ಅತ್ಯಂತ ಭ್ರಷ್ಟ ಸರ್ಕಾರ ಇದು ಎಂದು ಯಾರಾದರೂ ಭಾವಿಸಿದರೆ ಅದಕ್ಕೆ ಸಿದ್ದರಾಮಯ್ಯ ಅವರನ್ನು ದೂರಲಾಗದು. ಗುತ್ತಿಗೆಯಲ್ಲಿ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ಗುತ್ತಿಗೆದಾರರ ಸಂಘವು ಮಾಡಿದ ಆರೋಪವನ್ನು ಸಿದ್ದರಾಮಯ್ಯ ಅವರು ಎಷ್ಟು ಸಮರ್ಥವಾಗಿ ಬಳಸಿಕೊಂಡಿದ್ದಾರೆ ಎಂದರೆ, ಎಂಟೇ ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಅದರ ಪರಿಣಾಮದ ಬಗ್ಗೆ ಬಿಜೆಪಿ ನಾಯಕರಲ್ಲಿ ಚಿಂತೆ ಆರಂಭವಾಗಿದೆ.

ಬೆಂಗಳೂರಿನಲ್ಲಿ ಇತ್ತೀಚೆಗೆ ಸಭೆ ಸೇರಿದ್ದ ಬಿಜೆಪಿ ನಾಯಕರು ತಡವಾಗಿಯಾದರೂ ಸಿದ್ದರಾಮಯ್ಯ ಮತ್ತು ಅವರ ನೇತೃತ್ವದ 2013–2018ರ ನಡುವೆ ಅಧಿಕಾರದಲ್ಲಿದ್ದ 'ಕಳಂಕಿತ' ಸರ್ಕಾರದ ವಿರುದ್ಧ 'ಪ್ರತಿದಾಳಿ' ನಡೆಸುವ ಕಾರ್ಯತಂತ್ರದ ಬಗ್ಗೆ ಚರ್ಚಿಸಿದ್ದಾರೆ. ಸಿದ್ದರಾಮಯ್ಯ ಅವರು ಕರ್ನಾಟಕ ಕಂಡ ಅತ್ಯಂತ ಭ್ರಷ್ಟ ಮತ್ತು ಅತ್ಯಂತ ಕೋಮುವಾದಿ ಮುಖ್ಯಮಂತ್ರಿ ಎಂದು ಬಿಂಬಿಸುವುದು ಬಿಜೆಪಿ ನಾಯಕರ ಉದ್ದೇಶ. ಈ ಕಾರಣಗಳಿಂದಾಗಿಯೇ 2018ರಲ್ಲಿ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಅವರಿಗೆ ಜನರು ಶಿಕ್ಷೆ ವಿಧಿಸಿದರು ಎಂಬುದನ್ನು ತೋರಿಸುವುದು ಬಿಜೆಪಿಯ ಗುರಿ.

ಇದನ್ನು ಏಕೆ ಮಾಡಬಾರದು?

ಅನ್ನಭಾಗ್ಯ, ಶಾದಿ ಭಾಗ್ಯದಂತಹ ಕಾರ್ಯಕ್ರಮಗಳು, ರೈತರು, ಹೈನುಗಾರರು, ಮೀನುಗಾರರಿಗೆ ಹೆಚ್ಚಿನ ಸಹಾಯಧನ, ಸಾಲ ಮನ್ನಾ ಮುಂತಾದ 'ಬಡವರಪರ ನೀತಿ'ಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿಕೊಂಡರೂ ಸಿದ್ದರಾಮಯ್ಯ ನೇತೃತ್ವದಲ್ಲಿ 2018ರಲ್ಲಿ ಕಾಂಗ್ರೆಸ್ ಸೋತಿತು. ವಿಧಾನಸಭೆಯಲ್ಲಿ ಪಕ್ಷದ ಬಲವು 122ರಿಂದ 78ಕ್ಕೆ ಕುಸಿಯಿತು. ಅಷ್ಟೆಲ್ಲ 'ಜನಪ್ರಿಯತೆ' ಹೊಂದಿದ್ದರೂ ಸಿದ್ದರಾಮಯ್ಯ ಅವರೇ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಭಾರಿ ಅಂತರದಲ್ಲಿ ಸೋತರು, ಬಾದಾಮಿಯಲ್ಲಿ 2,000ಕ್ಕೂ ಕಡಿಮೆ ಅಂತರದಲ್ಲಿ ತಿಣುಕಾಡಿ ಗೆದ್ದರು. ತೀರಾ ಇತ್ತೀಚೆಗೆ, ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಸಿದ್ದರಾಮಯ್ಯ ಅವರ ಗುರಿ ಆಗಿದ್ದಾರೆ. ನಾಗೇಶ್ ಅವರು ಸಚಿವರಾದ ಬಳಿಕ ಶಿಕ್ಷಣ ಇಲಾಖೆಯಲ್ಲಿ 'ಅಗಾಧ ಪ್ರಮಾಣದಲ್ಲಿ ಭ್ರಷ್ಟಾಚಾರ' ನಡೆದಿದ್ದು, 'ಟನ್‌ಗಟ್ಟಲೆ ಪುರಾವೆ' ಇದೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ. ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಯಿಂದ ತನಿಖೆ ಆಗಬೇಕು ಎಂದು ಆಗ್ರಹಿಸಿದ್ದಾರೆ. ನಾಗೇಶ್ ಅವರ ಬದ್ಧತೆ ಮತ್ತು ಸರಳತೆಯ ಅರಿವಿರುವವರು ಸಿದ್ದರಾಮಯ್ಯ ಅವರ ಆರೋಪವನ್ನು ಕಂಡು ನಗಬಹುದು ಮತ್ತು ಅವರ ಉದ್ದೇಶದ ಬಗ್ಗೆಯೇ ಗಂಭೀರ ಪ್ರಶ್ನೆ ಎತ್ತಬಹುದು. ಸಚಿವರಾಗಿರುವಾಗ ಕೂಡ ನಾಗೇಶ್ ಅವರು ಬಸ್ ಅಥವಾ ರೈಲುಗಳಲ್ಲಿ ಪ್ರಯಾಣಿಸುತ್ತಾರೆ.

ತಿರುಗೇಟಿನ ಕ್ರಮವಾಗಿ, 2014–15ರಲ್ಲಿ ನಡೆದ ಶಿಕ್ಷಕರ ನೇಮಕಾತಿಯಲ್ಲಿ ಆಗಿದೆ ಎನ್ನಲಾದ ಅವ್ಯವಹಾರ ಆರೋಪಗಳ ಬಗ್ಗೆ ಸಿಐಡಿ ತನಿಖೆಗೆ ಬೊಮ್ಮಾಯಿ ನೇತೃತ್ವದ ಸರ್ಕಾರವು ಆದೇಶಿಸಿದೆ. ಈ ನೇಮಕಾತಿಯಲ್ಲಿ, ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯಲ್ಲಿ ಇಲ್ಲದವರನ್ನೂ ನೇಮಿಸಿಕೊಳ್ಳಲಾಗಿದೆ ಎಂಬ ಆರೋಪ ಇದೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅವಧಿಯಲ್ಲಿ ಗಂಭೀರವಾದ ಹಲವು ಹಗರಣಗಳು ನಡೆದಿವೆ. ಅರ್ಕಾವತಿ ಬಡಾವಣೆಯ ಡಿನೋಟಿಫಿಕೇಷನ್ ಹಗರಣ ಅದರಲ್ಲಿ ಒಂದು. ಬೆಲೆಬಾಳುವ 541 ಎಕರೆ ಜಮೀನನ್ನು ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಿ ಡಿನೋಟಿಫೈ ಮಾಡಲಾಗಿದೆ. ಆದರೆ, 'ರೀಡೂ' ಆದೇಶಕ್ಕೆ ಮಾತ್ರ ತಾವು ಸಹಿ ಹಾಕಿರುವುದಾಗಿ ಸಿದ್ದರಾಮಯ್ಯ ಅವರು ಹೇಳಿಕೊಂಡಿದ್ದಾರೆ. ಈ ಹಗರಣದ ಬಗ್ಗೆ ನಡೆದ ತನಿಖೆಯನ್ನು ಅವರು ಸ್ಥಗಿತಗೊಳಿಸಿದರು. ಅವರಿಗಿಂತ ಹಿಂದೆ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಮತ್ತು ಎಚ್.ಡಿ. ಕುಮಾರಸ್ವಾಮಿ ಅವರಂತೆ ತಾವು ಸಿಕ್ಕಿ ಬೀಳದಂತೆ ನೋಡಿಕೊಂಡರು.

ಸ್ವಜನ ಪಕ್ಷಪಾತದ ಆರೋಪವನ್ನೂ ಸಿದ್ದರಾಮಯ್ಯ ಎದುರಿಸಿದ್ದಾರೆ. ಅವರು ಮುಖ್ಯಮಂತ್ರಿಯಾಗಿದ್ದಾಗ, ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಸಿ.ಟಿ ಮತ್ತು ಎಂ.ಆರ್.ಐ ಪ್ರಯೋಗಾಲಯ ಸ್ಥಾಪಿಸುವ ಗುತ್ತಿಗೆಯನ್ನು ಟೆಂಡರ್ ಕರೆಯದೆಯೇ ಅವರ ಮಗ ಡಾ. ಯತೀಂದ್ರ ಅವರ ಮ್ಯಾಟ್ರಿಕ್ಸ್ ಇಮೇಜಿಂಗ್ ಡಿಜಿಟಲ್ ಸೊಲ್ಯೂಷನ್ಸ್ ಎಂಬ ಖಾಸಗಿ ಸಂಸ್ಥೆಗೆ ನೀಡಲಾಗಿತ್ತು. ಇದು ತಮ್ಮ ಗಮನಕ್ಕೆ ಬಾರದೆ ಆಗಿರುವ ಕೆಲಸ ಎಂದು ಸಿದ್ದರಾಮಯ್ಯ ಹೇಳಿಕೊಂಡರು.

ಸಿದ್ದರಾಮಯ್ಯ ಅವರಿಗೆ ದುಬಾರಿ ವಾಚುಗಳು, ಶೂಗಳು ಮತ್ತು ತಂಪು ಕನ್ನಡಕಗಳ ಬಗ್ಗೆ ಭಾರಿ ಮೋಹ ಇದೆ. ವಜ್ರಖಚಿತವಾದ ₹70 ಲಕ್ಷ ಬೆಲೆಬಾಳುವ ಹುಬ್ಲೊ ವಾಚನ್ನು ಸಿದ್ದರಾಮಯ್ಯ ಕಟ್ಟಿಕೊಂಡಿದ್ದುದು ವಿವಾದವೂ ಆಗಿತ್ತು. ಆರಂಭಕ್ಕೆ ಇದು ಯಾರು ಕೊಟ್ಟದ್ದು ಎಂಬುದೇ ಗೊತ್ತಿಲ್ಲ ಎಂದರು, ಬಳಿಕ ದುಬೈನ 'ವೈದ್ಯ ಗೆಳೆಯ' ಕೊಟ್ಟದ್ದು ಎಂದರು. ಆಮೇಲೆ, ವಾಚು ಕುರಿತು ಆರೋಪ ಮಾಡಿದ್ದ ಕುಮಾರಸ್ವಾಮಿ ಅವರಿಗೇ ₹5 ಲಕ್ಷಕ್ಕೆ ಕೊಟ್ಟುಬಿಡುತ್ತೇನೆ ಎಂದರು. ಅಂತಿಮವಾಗಿ, ವಿಧಾನಸೌಧದಲ್ಲಿ ಇರಿಸುವುದಕ್ಕಾಗಿ ಕೊಡಲು ನಿರ್ಧರಿಸಿದರು.

ಆಂಜನೇಯ ಅವರು ಸಚಿವರಾಗಿದ್ದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಾಸಿಗೆ ಮತ್ತು ದಿಂಬು ಖರೀದಿಯಲ್ಲಿ ದೊಡ್ಡ ಮಟ್ಟದ ಅವ್ಯವಹಾರದ ಆರೋಪ ಕೇಳಿ ಬಂದಿತ್ತು. ಡಿ.ಕೆ. ಶಿವಕುಮಾರ್ ಸಚಿವರಾಗಿದ್ದ ಇಂಧನ ಇಲಾಖೆಯ ಸೌರ ಶಕ್ತಿ ಗುತ್ತಿಗೆ ಹಂಚಿಕೆಯಲ್ಲಿಯೂ ನಿಯಮ ಉಲ್ಲಂಘನೆಯ ಆಪಾದನೆ ಇತ್ತು. ಈ ಎಲ್ಲ ಪ್ರಕರಣಗಳ ಕುರಿತು ತನಿಖೆ ಅತ್ಯಂತ ಅಗತ್ಯ.

'ಸ್ವಚ್ಛ ಮತ್ತು ಭ್ರಷ್ಟಾಚಾರಮುಕ್ತ' ಸರ್ಕಾರದ ಭರವಸೆ ಕೊಟ್ಟು ಅಧಿಕಾರಕ್ಕೆ ಏರಿದ ಸಿದ್ದರಾಮಯ್ಯ ಅವರು ಲೋಕಾಯುಕ್ತವನ್ನು ದುರ್ಬಲಗೊಳಿಸಿ, ನೇರವಾಗಿ ತಮ್ಮ ಅಧೀನದಲ್ಲಿ ಇರುವಂತಹ ಭ್ರಷ್ಟಾಚಾರ ತಡೆ ಘಟಕವನ್ನು (ಎಸಿಬಿ) ಸ್ಥಾಪಿಸಿ 'ಭ್ರಷ್ಟಾಚಾರದ ರಕ್ಷಕ' ಆದರು. ಎಸಿಬಿಯನ್ನು ಹೈಕೋರ್ಟ್ ಇತ್ತೀಚೆಗೆ ರದ್ದುಗೊಳಿಸಿದೆ, ಅಲ್ಲಿ ದಾಖಲಾಗಿದ್ದ ಭ್ರಷ್ಟಾಚಾರ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸಿದೆ.

ಲೋಕಾಯುಕ್ತದ ಅಧಿಕಾರವನ್ನು ಮರುಸ್ಥಾಪಿಸುವ ಭರವಸೆಯು ಬಿಜೆಪಿಯ ಚುನಾವಣಾ ಪ್ರಣಾಳಿಕೆಯಲ್ಲಿ ಇತ್ತು. ಅಧಿಕಾರಕ್ಕೆ ಬಂದ ಬಳಿಕ ಅದನ್ನು ಮರೆತದ್ದು ಹೌದು. ಆದರೆ, ಹೈಕೋರ್ಟ್ ಆದೇಶದ ಬಳಿಕ, ಸರ್ಕಾರವು ಎ.ಸಿ.ಬಿಯನ್ನು ರದ್ದುಪಡಿಸಿ, ಲೋಕಾಯುಕ್ತವನ್ನು ಬಲಪಡಿಸುವ ಭರವಸೆ ಕೊಟ್ಟಿದೆ.

ಲೋಕಾಯುಕ್ತವು 67 ಪ್ರಮುಖ ರಾಜಕಾರಣಿಗಳು, 28 ಐಎಎಸ್ ಅಧಿಕಾರಿಗಳು ಮತ್ತು ಎಂಟು ಐಪಿಎಸ್ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿತ್ತು. ಆದರೆ, ಎಸಿಬಿ ಕಳೆದ ಎಂಟು ವರ್ಷಗಳಲ್ಲಿ ಒಬ್ಬನೇ ಒಬ್ಬ ರಾಜಕಾರಣಿ ಅಥವಾ ಒಬ್ಬನೇ ಒಬ್ಬ ಹಿರಿಯ ಅಧಿಕಾರಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡಿಲ್ಲ. ಹೀಗಾಗಿ, ಸಿದ್ದರಾಮಯ್ಯ ಅವರು ನಡೆಸುತ್ತಿದ್ದಾರೆ ಎಂದು ಹೇಳಲಾಗುವ 'ಭ್ರಷ್ಟಾಚಾರದ ವಿರುದ್ಧದ ಸಮರ'ವು ಪರಿಹಾಸ ಮಾತ್ರ ಎಂಬುದು ಅತ್ಯಂತ ಸ್ಪಷ್ಟವಾಗಿ ಕಾಣಿಸುತ್ತದೆ.

ಸಾರ್ವಜನಿಕ ಜೀವನದಲ್ಲಿ ಋಜುತ್ವವನ್ನು ಪುನಃ ಸ್ಥಾಪಿಸಲು ಹಿಂದಿನ ಸರ್ಕಾರಗಳ ಅವಧಿಯಲ್ಲಿನ ಹಗರಣಗಳತ್ತ ಬೊಟ್ಟು ತೋರಿ ಪ್ರಕರಣಗಳ ತನಿಖೆ ನಡೆಸಿದರಷ್ಟೇ ಸಾಲದು. ಇತ್ತೀಚೆಗೆ ನಡೆದ ಪಿಎಸ್ಐ ಸೇರಿದಂತೆ ವಿವಿಧ ನೇಮಕಾತಿಗಳಲ್ಲಿನ ಅಕ್ರಮ ಆರೋಪ, ಬಿಬಿಎಂಪಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಬಗ್ಗೆ ಕೇಳಿ ಬಂದಿರುವ ಆರೋಪಗಳ ಬಗ್ಗೆಯೂ ಪ್ರಾಮಾಣಿಕ ತನಿಖೆಯನ್ನು ಬೊಮ್ಮಾಯಿ ಅವರು ನಡೆಸಬೇಕು. ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು. ಈಗಿನದ್ದು ಬೊಮ್ಮಾಯಿ ಅವರಿಗೆ ಅಗ್ನಿಪರೀಕ್ಷೆಯ ಕಾಲ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಲೇಖಕ: ಪತ್ರಕರ್ತ

ಪದಬಂಧ 5075

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಶ್ರೇಷ್ಠನಾದ ಕವಿ (4)
3.ನಡುವೆ ವಾರವಿದ್ದಾಗ ಹೋಗಲಾಡಿಸುವುದು (4)
5.ಸವೆತ ಬಂದರೂ ಇದು ನಿರಂತರ! (3)
8.ಇದು ಪ್ರತಿಕೂಲವಾದುದು (3)
10.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
12.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
13.ವೃಕ್ಷದ ಬಳಿಯೇ ಸಾವು ಸಂಭವಿಸಿದೆಯಲ್ಲಾ? (3)
15.ಬೈದಾಟಕ್ಕೊಂದು ಪರ್ಯಾಯ ಪದ (3)
17.ನೂಲು ತೆಗೆಯುವ ಯಂತ್ರ (3)
19.ತತ್ವಗಳನ್ನು ಬಲ್ಲವನು (4)
20.ಶಿರದಲ್ಲಿ ಉಂಟಾದ ಬೇನೆ (4)

ಮೇಲಿಂದ ಕೆಳಕ್ಕೆ
2.ಕ್ರೀಡೆ ಅಥವಾ ವಿಹಾರ (3)
3.ನಿರ್ಣಯ ಮಾಡಲ್ಪಟ್ಟದ್ದು (3)
4.ಜಿಪುಣನು ಉಲ್ಟಾ ನಿಂತು ಬಿಟ್ಟಿದ್ದಾನಲ್ಲ? (2)
6.ಈತ ಶಿರವನ್ನು ಕಡಿಯುವವನು (5)
7.ಸಂವತ್ಸರದ ಹೆಸರೂ ಆಗಿರುವ ಬೇನೆ (2)
8.ಬಿಡುವು ಈ ರೀತಿ ದೊರೆತಿದೆ (3)
9.ಮಣ ಭಾರದ ಹೆಣವನ್ನು ಹೂಳಿದ ಜಾಗ (3)
10.ಪಾಕದ ನಂತರ ಸೇವಿಸಿದ ಷರಬತ್ತು (3)
11.ಸಿದ್ಧತೆಯನ್ನು ಹೀಗೆನ್ನಿ (3)
14.ಸಾರಥ್ಯ ವಹಿಸಿದ ಮೇಲೆ ಚಲಿಸಿದ ತೇರು (2)
16.ಹೆಜ್ಜೆ ಹೆಜ್ಜೆಗೂ ಇಷ್ಟೊಂದು ನಾಚಿಕೆಯೇ? (2)
17.ಹೆಬ್ಬೆರಳಿನ ಪಕ್ಕದ ಬೆರಳು (3)
18.ಬರೆಯಲ್ಪಟ್ಟಿದ್ದು ಇದು (3)



5074ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಚ್ಛ್ವಾಸ 3.ಗಾವುದ
5.ಭಿನ್ನಾಭಿಪ್ರಾಯ
7.ಕ್ಷುಲ್ಲಕ 8.ಕಹಳೆ
9.ಓರಿಗೆ 11.ಗರತಿ
13.ಲೋಚನ 15.ಶುಕ್ತಿಕೆ
16.ವಿಮಾನಯಾನ
17.ಗುಲಾಲು 18.ಕದಿರು

ಮೇಲಿಂದ ಕೆಳಕ್ಕೆ: 2.ಸಭಿಕ 3.ಗಾಯಕ
6.ಭಿಕಾರಿ 9.ಓದುಗ
10.ಗೆಳತಿ 12.ರದನ
14.ನವಿಲು 15.ಶುನಕ

ಸುಡೊಕು 5461

			4		3		6	
	9							5
			5		8	7		
		9		3				7
	3				6		5	
8		6		4		2		3
		5		2			3	4
3						5	9	
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5460 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಸೆಪ್ಟೆಂಬರ್ 10, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪೂರ್ಣಿಮಾ ಗಂ. 15-29 ನಕ್ಷತ್ರ: ಶತಭಿಷ ಗಂ. 09-37 ಯೋಗ: ಧೃತಿ ಗಂ. 14-55, ಕರಣ: ಬವ ಗಂ. 15-29, ಸಿಂಹ ಮಾಸದ 24 ನೇ ದಿನ. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-23 ಸೂರ್ಯಾಸ್ತ : 06-32 ಮುಸ್ಲಿಂ ದಿನಾಂಕ : 13 ಸಫರ್ ದಿನ ವಿಶೇಷ : ಶ್ರೀ ನಾರಾಯಣ ಗುರುಗಳ ಜನ್ಮದಿನ (ಕೇರಳ), ಓಣಮ್ ನಾಲ್ಕನೇ ದಿನ
ಅದೃಷ್ಟ ಸಂಖ್ಯೆ : 8, 10

ಮೇಷ: ಮಿತ್ರವರ್ಗದ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಅವಕಾಶಗಳು ಬರುವವು. ಗುಡಿ ಕೈಗಾರಿಕೆಯವರಿಗೆ ಈ ದಿನ ಸಾಕಷ್ಟು ಲಾಭ ಸಿಗಲಿದೆ. ಆರಕ್ಷಕ ಅಧಿಕಾರಿಗಳಿಗೆ ಹಲವು ದಿನಗಳ ಬಳಿಕ ಒತ್ತಡ ಕಡಿಮೆಯಾಗಲಿದೆ.

ವೃಷಭ: ಸಹೋದರರಲ್ಲಿ ಉಂಟಾದ ಭಿನ್ನಾಭಿಪ್ರಾಯವು ಸೇಡಿಗೆ ತಿರುಗದಂತೆ ಕಾಪಾಡಿಕೊಳ್ಳಿರಿ. ದಾಖಲೆಗಳಿಲ್ಲದೆ ಕೇವಲ ನಂಬಿಕೆಯಿಂದ ಮಾಡಿದ ವ್ಯವಹಾರದಲ್ಲಿ ಮೋಸ ಹೋಗುವ ಸಂಭವವಿದೆ.

ಮಿಥುನ: ಕಟ್ಟಡಗಳನ್ನು ಬಾಡಿಗೆಗೆ ಕೊಡುವುದರಿಂದಾಗಿ ಆರ್ಥಿಕವಾಗಿ ಅಭಿವೃದ್ಧಿ ಕಂಡುಬರುವುದು. ಕಾರ್ಯಸಾಧಕರ ಮನೋಕಾಮನೆಗಳು ಪೂರ್ಣಗೊಳ್ಳುವ ದಿನ. ಆರೋಗ್ಯ ವಿಷಯದಲ್ಲಿನ ಚಿಂತೆ ತಪ್ಪಿದ್ದಲ್ಲ.

ಕರ್ಕಾಟಕ: ಹೊಸ ಬದುಕನ್ನು ಆರಂಭಿಸಲು ಬೇಕಾದ ಅವಕಾಶದ ಬಾಗಿಲು ನಿಮಗಾಗಿ ತೆರೆಯುವುದು. ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಇರುತ್ತದೆ. ವಿದ್ಯಾಭ್ಯಾಸದಲ್ಲಿ ಮಕ್ಕಳ ಅಸಡ್ಡೆಯು ಪ್ರಗತಿಗೆ ಮಾರಕವಾಗಲಿದೆ.

ಸಿಂಹ: ಗೃಹೋಪಕರಣ ಖರೀದಿ ಅಥವಾ ಕೆಲವಾರು ಯೋಜನೆಗಳಲ್ಲಿ ಎಡವಿದ ಅನುಭವ ನಿಮಗಾಗಲಿದೆ. ದಾಂಪತ್ಯದಲ್ಲಿ ಸಂಶಯದ ವಾತಾವರಣ ಇದ್ದು ಅಸಮಾಧಾನ ಮೂಡುವುದು. ಮನದಲ್ಲಿ ಭಯ ತೋರಿಬಂದೀತು.

ಕನ್ಯಾ: ಇಂದಿನ ನಿಮ್ಮ ಜೀವನದ ನಡೆ-ನುಡಿಗಳು ಕಿರಿಯರ ಜೀವನಕ್ಕೆ ಮಾರ್ಗದರ್ಶನದಂತಾಗಿ ಸಹಕಾರಿಯಾಗುವುದು. ಆಂತರಿಕ ಸಮಸ್ಯೆ ಬಗೆಹರಿಯಬೇಕಾದರೆ ನೀವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುವುದು.

ತುಲಾ: ರಾಜಕೀಯ ವರ್ಗದವರಿಗೆ ಜನಪ್ರಿಯತೆ ಹೆಚ್ಚುವುದರಿಂದ ಶತ್ರು ಪೀಡೆಯಂತಹ ಸಮಸ್ಯೆ ಕಂಡುಬರಲಿದೆ. ಸಂಪಾದನೆಯಲ್ಲಿ ಕಡಿಮೆಯಿದ್ದರೂ ಆರ್ಥಿಕವಾಗಿ ಚಿಂತೆ ಇರದು.

ವೃಶ್ಚಿಕ: ತಂದೆ-ತಾಯಿಯ ಹಿತವಚನವನ್ನು ಸಹನೆಯಿಂದ ಕೇಳುವುದು ಮತ್ತು ಜೀವನದಲ್ಲಿ ಅಳವಡಿಸಿಕೊಳ್ಳುವುದನ್ನು ರೂಢಿಸಿಕೊಳ್ಳಿ. ಉತ್ತಮ ಸ್ಥಿತಿಯನ್ನು ಹೊಂದುವಿರಿ. ಧರ್ಮ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು.

ಧನು: ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮ ಸಾಧನೆಗೆ ಮುಳ್ಳಾಗಬಹುದು. ಏಜೆನ್ಸಿಯಂತಹ ಉದ್ಯೋಗ ನಡೆಸುವವರಿಗೆ ಬೇಡಿಕೆ ಹೆಚ್ಚುವುದರಿಂದ ಲಾಭವಾಗುವುದು.

ಮಕರ: ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯ ಹೊಂದುವಿರಿ. ನಿಮ್ಮ ಕ್ರಿಯಾತ್ಮಕವಾದ ರಾಜಕೀಯ ಭವಿಷ್ಯಕ್ಕೆ ಮೋಡ ಕವಿದಂತೆ ಆಗುತ್ತದೆ. ವೈದ್ಯರು ನೀಡಿದ ಸಲಹೆಯನ್ನು ಚಾಚೂ ತಪ್ಪದೇ ಪಾಲಿಸಿ.

ಕುಂಭ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ, ಋಣಾತ್ಮಕ ಯೋಚನೆಗಳು ಬರಬಹುದು. ರಸಗೊಬ್ಬರ ಮತ್ತು ಕೀಟನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸ ಕಾಡಲಿದೆ.

ಮೀನ: ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ಅನಿವಾರ್ಯವಾಗಿ ಪ್ರಯಾಣ ಕಂಡುಬರುವುದು. ವೃತ್ತಿಯಲ್ಲಿ ಬದಲಾವಣೆ ಬಯಸಿದಲ್ಲಿ ಕಾಯುವುದು ಅವಶ್ಯವಾಗುತ್ತದೆ.

ಅಂಗನವಾಡಿ ನೌಕರರ 8ನೇ ರಾಜ್ಯ ಸಮ್ಮೇಳನದ ಅಂಗವಾಗಿ ಹೊಸಪೇಟೆಯಲ್ಲಿ ಶುಕ್ರವಾರ ಅಂಗನವಾಡಿ ಕಾರ್ಯಕರ್ತೆಯರು ರ್‍ಯಾಲಿ ನಡೆಸಿದರು —ಪ್ರಜಾವಾಣಿ ಚಿತ್ರ

ಅಂಗನವಾಡಿ ನೌಕರರ 8ನೇ ರಾಜ್ಯ ಸಮ್ಮೇಳನದಲ್ಲಿ ನಿರ್ಣಯ

‘ಕಾರ್ಯಕರ್ತೆಗೆ ಶಿಕ್ಷಕಿ ಪದನಾಮ ಕೊಡಿ’

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ರಾಜ್ಯ ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯ ಪದನಾಮವನ್ನು ಶಿಕ್ಷಕಿ ಎಂದು ಬದಲಿಸಿ ಆದೇಶ ಹೊರಡಿಸಬೇಕು. ಸುಪ್ರೀಂಕೋರ್ಟ್ ನಿರ್ದೇಶನದಂತೆ ಗ್ರ್ಯಾಚುಯಿಟಿ ಸೌಲಭ್ಯ ಕೊಡಬೇಕು. ಎಲ್‌ಕೆಜಿ, ಯುಕೆಜಿ ಶಿಕ್ಷಣ ಅಂಗನವಾಡಿ ಕೇಂದ್ರಗಳಲ್ಲಿ ಆರಂಭಿಸಬೇಕು. ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಗೆ (ಐಸಿಡಿಎಸ್) ಆಗುವ ಹಾನಿಕಾರಕ ವಿಷಯಗಳನ್ನು ಕೈಬಿಡಬೇಕು’

ಸಿಐಟಿಯು ಹಾಗೂ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸಹಭಾಗಿತ್ವದಲ್ಲಿ ನಗರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಅಂಗನವಾಡಿ ನೌಕರರ 8ನೇ ರಾಜ್ಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳಿವು.

‘ಬರುವ ಜನವರಿಯೊಳಗೆ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಶಕ್ತಿ ಏನೆಂಬುದು ಸರ್ಕಾರಕ್ಕೆ ತೋರಿಸುತ್ತೇವೆ’ ಎಂದು ಅಂಗನವಾಡಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಎಚ್ಚರಿಕೆ ನೀಡಿದರು.

‘ಅಂಗನವಾಡಿ ಕಾರ್ಯಕರ್ತೆಯರಿಗೆ ಗ್ರ್ಯಾಚುಯಿಟಿ ಸೌಲಭ್ಯ ನೀಡುವ ಸಂಬಂಧ ಮೂರು ತಿಂಗಳೊಳಗೆ ನಿಯಮ ರೂಪಿಸಬೇಕೆಂದು ಸುಪ್ರೀಂ ಕೋರ್ಟ್ ಗಡುವು ನೀಡಿದೆ. ಆದರೆ, ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಈ ಕುರಿತಾಗಿ ಸಭೆಯೂ ನಡೆಸಿಲ್ಲ’ ಎಂದು ಹೇಳಿದರು.

ಸಂಘದ ಅಖಿಲ ಭಾರತ ಅಧ್ಯಕ್ಷೆ ಎ.ಆರ್.ಸಿಂಧು ಮಾತನಾಡಿ, ‘ಐಸಿಡಿಎಸ್ ಯೋಜನೆಯು ಅಪೌಷ್ಟಿಕತೆ ನಿವಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಆದರೆ, ಸರ್ಕಾರ ಅದರ ಅನುದಾನ ಕಡಿತಗೊಳಿಸಿದೆ. ಈ ಸಂಬಂಧ ದೇಶದ ಎಲ್ಲ ಸಂಸದರಿಗೆ ಪತ್ರ ಬರೆದು ಉತ್ತರ ಕೇಳುವ ಅಭಿಯಾನ ನಡೆಸಲು ತೀರ್ಮಾನಿಸಲಾಗಿದೆ’ ಎಂದರು.

‘ವಿದ್ಯುತ್ ಖಾಸಗೀಕರಣ ಮಾಡದಿರಿ’

ಹಾವೇರಿ: ‘ವಿದ್ಯುತ್ ಖಾಸಗೀಕರಣ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರ ರೈತರಿಗೆ ಹಿಂದೆ ಮಾತು ನೀಡಿತ್ತು. ಈಗ ಸಂಸತ್‌ನಲ್ಲಿ ಈ ಸಂಬಂಧ ಮಸೂದೆ ಮಂಡಿಸಲು ಸಿದ್ಧತೆ ಮಾಡಿಕೊಂಡಿದೆ ಎಂಬ ವಿಚಾರ ಗೊತ್ತಾಗಿದೆ. ರೈತರಿಗೆ ಕೊಟ್ಟ ವಚನ ಪಾಲಿಸದಿದ್ದರೆ ರಾಜಕೀಯವಾಗಿ ದೊಡ್ಡ ದಂಡ ತೆರಬೇಕಾಗುತ್ತದೆ’ ಎಂದು ರೈತ ನಾಯಕ ಕೆ.ಟಿ. ಗಂಗಾಧರ್ ಅವರು ಪ್ರಧಾನಿ ಮೋದಿ ಅವರಿಗೆ ಎಚ್ಚರಿಕೆ ನೀಡಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ‘ರೈತ ವಿರೋಧಿ ಮೂರು ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ವಾಪಸ್ ಪಡೆದಿದೆ. ಆದರೆ, ರಾಜ್ಯ ಸರ್ಕಾರ ಈ ಕಾಯ್ದೆಗಳನ್ನು ಹಿಂಪಡೆಯಲು ಮೀನಮೇಷ ಎಣಿಸುತ್ತಿರುವುದನ್ನು ನೋಡಿದರೆ ರಾಜ್ಯ ಸರ್ಕಾರ ‘ರೈತ ವಿರೋಧಿ’ ಎಂಬುದು ಸ್ಪಷ್ಟವಾಗುತ್ತಿದೆ’ ಎಂದು ವಾಗ್ದಾಳಿ ನಡೆಸಿದರು.

ವಿವಿಧ ಆರೋಪ: 33 ಬಿಇಒಗಳ ವರ್ಗಾವಣೆ

ಬೆಂಗಳೂರು: ಲೋಕಾಯುಕ್ತ, ಇಲಾಖಾ ವಿಚಾರಣೆ ಸೇರಿದಂತೆ ವಿವಿಧ ಆರೋಪಗಳನ್ನು ಹೊತ್ತಿರುವ 33 ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸರ್ಕಾರ ನಾನ್ ಎಕ್ಸಿಕ್ಯೂಟಿವ್ ಹುದ್ದೆಗಳಿಗೆ ವರ್ಗಾಯಿಸಿದೆ.

ಜತೆಗೆ ನಾಲ್ವರು ಶಿಕ್ಷಣಾಧಿಕಾರಿಗಳನ್ನೂ ವಿವಿಧ ಹುದ್ದೆಗಳಿಗೆ ವರ್ಗಾಯಿಸಲಾಗಿದೆ. ಎಕ್ಸಿಕ್ಯೂಟಿವ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವಿರುದ್ಧ ಯಾವುದೇ ಆರೋಪಗಳು ಕೇಳಿಬಂದರೆ, ಅವರ ವಿರುದ್ಧ ತನಿಖೆ, ವಿಚಾರಣೆ ನಡೆಯುತ್ತಿದ್ದರೆ, ಅಂಥವರನ್ನು ನಾನ್ ಎಕ್ಸಿಕ್ಯೂಟಿವ್ ಹುದ್ದೆಗಳಿಗೆ ವರ್ಗಾಯಿಸಬೇಕು ಎಂಬ ನಿಯಮದ ಅನ್ವಯ ಈ ವರ್ಗಾವಣೆ ಮಾಡಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ತಿಳಿಸಿದೆ.

ಸೌಲಭ್ಯಕ್ಕೆ ತಂತ್ರಾಂಶ ಬಳಕೆ ಕಡ್ಡಾಯ: ಶಿಕ್ಷಕರ ಸೇವಾ ಸೌಲಭ್ಯಗಳನ್ನು ಶಿಕ್ಷಕ ಮಿತ್ರ ತಂತ್ರಾಂಶದ ಮೂಲಕ ಅನುಷ್ಠಾನಗೊಳಿಸುವುದನ್ನು ಕಡ್ಡಾಯಗೊಳಿಸಿ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಇಲಾಖೆಯಲ್ಲಿ 2.60 ಲಕ್ಷ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಅವರು ತಮಗೆ ಲಭ್ಯವಿರುವ ಸೌಲಭ್ಯಗಳನ್ನು ಪಡೆಯಲು ಪಾಠ ಮಾಡದೇ ಅನಗತ್ಯವಾಗಿ ಬಿಇಒ, ಡಿಡಿಪಿಐ ಕಚೇರಿಗಳಿಗೆ ಅಲೆಯುವುದನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಬಿಜೆಪಿ ಸರ್ಕಾರದ ‘ಜನಸ್ಪಂದನ’ ಇಂದು

ಒಂದನೇ ಪುಟದಿಂದ

‘ಬಿ.ಎಸ್.ಯಡಿಯೂರಪ್ಪ ಅವರ ಎರಡು ವರ್ಷಗಳ ಅವಧಿ ಮತ್ತು ಬಸವರಾಜ ಬೊಮ್ಮಾಯಿ ಅವರ ಒಂದು ವರ್ಷದ ಆಡಳಿತದಲ್ಲಿ ಕೈಗೊಂಡ ಪ್ರಮುಖ ನಿರ್ಧಾರಗಳು ಮತ್ತು ಕಾರ್ಯಕ್ರಮಗಳನ್ನು ಒಳಗೊಂಡ ರಿಪೋರ್ಟ್ ಕಾರ್ಡ್ ಅನ್ನು ಜನರ ಮುಂದಿಡಲಾಗುವುದು’ ಎಂದರು.

‘ಕಾಂಗ್ರೆಸ್‌ನವರು ಸಿದ್ದರಾಮೋತ್ಸವ ಮಾಡಿಕೊಂಡರು. ನಾವು ಅವರ ಕಾರ್ಯಕ್ರಮಕ್ಕೂ ಮೊದಲೇ ಯೋಜನೆ ರೂಪಿಸಿದ್ದೆವು. ನಮ್ಮ ಪಕ್ಷದ ಕಾರ್ಯಕರ್ತನ ಹತ್ಯೆಯಿಂದ ಕಾರ್ಯಕ್ರಮ ಮುಂದೂಡಿದ್ದೆವು. ಕಾಂಗ್ರೆಸ್‌ನವರು ಯಾರು ಸತ್ತರೂ, ನೆರೆ ಬಂದರೂ ಲೆಕ್ಕಕ್ಕೇ ಇಡದೇ ಕಾರ್ಯಕ್ರಮ ಮಾಡಿಕೊಂಡರು. ನಾವು ಬೊಮ್ಮಾಯಿ ಅಥವಾ ಯಡಿಯೂರಪ್ಪ ಅವರ ಹುಟ್ಟಿದ ಹಬ್ಬ ಆಚರಿಸುತ್ತಿಲ್ಲ’ ಎಂದರು.

ಈ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಭಾಗವಹಿಸಲಿದ್ದಾರೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಛತ್ತೀಸಘಡದಲ್ಲಿ ಪಕ್ಷದ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಈ ಕಾರ್ಯಕ್ರಮಕ್ಕೆ ಬರುವುದಿಲ್ಲ. ಬಿ.ಎಸ್. ಯಡಿಯೂರಪ್ಪ, ನಳಿನ್‌ಕುಮಾರ್ ಕಟೀಲ್ ಸೇರಿ ಪಕ್ಷದ ಎಲ್ಲ ಸಚಿವರು, ಪ್ರಮುಖ ನಾಯಕರು ಭಾಗವಹಿಸುತ್ತಾರೆ ಎಂದು ಹೇಳಿದರು.

ಇದು ಬಿಜೆಪಿಯ ಅತ್ಯಂತ ದೊಡ್ಡ ಜನಸಭೆಯಾಗಲಿದೆ. ರಾಜ್ಯದ 6 ವಲಯಗಳಲ್ಲಿ ಇಂಥ ಜನಸಭೆಗಳನ್ನು ನಡೆಸುತ್ತೇವೆ. ಈ ಭಾಗದಲ್ಲಿ ಬಿಜೆಪಿ ಶಕ್ತಿಯನ್ನು ಪ್ರಶ್ನಿಸುವವರಿಗೆ ಸಮಾವೇಶ ಉತ್ತರ ನೀಡಲಿದೆ – ಡಾ.ಕೆ.ಸುಧಾಕರ್, ಸಚಿವ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಇಎಸ್‌ಜೆ/ಇಟಿಎನ್‌ಡಿ-ಇಪಿ-19/10429/2022-23 ದಿನಾಂಕ: 07.09.2022

ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–1 (ಸಿವಿಲ್) ಪದವಾನ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ಗಳನ್ನು ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: (1) ಹಾಸನ ಜಿಲ್ಲೆ, ಹಾಸನ ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ ಪಕ್ಕ ಬದಿ ಚರಂಡಿ, ಆರ್.ಸಿ.ಸಿ ಕಲ್ವರ್ಟ್ಸ್, ಹೆಚ್.ಡಿ.ಪಿ.ಇ ನೀರು ಸರಬರಾಜು ಕೊಳವೆ ಮಾರ್ಗ ನಿರ್ಮಾಣದ ಜೊತೆಗೆ 15ಮೀ ಅಗಲ, 12ಮೀ ಅಗಲ ಮತ್ತು 9ಮೀ ಅಗಲದ ಡಾಂಬರೀಕರಣ ರಸ್ತೆ ನಿರ್ಮಾಣದೊಂದಿಗೆ ಲ್ಯಾಂಡ್ ಲೂಸರ್‌ಗಳಿಗಾಗಿ ವಸತಿ ಬಡಾವಣೆ ನಿರ್ಮಾಣ ಮಾಡುವ ಕಾಮಗಾರಿ (2) ಹಾಸನ ಜಿಲ್ಲೆ, ಹಾಸನ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿ ಚರಂಡಿ, ಕಲ್ವರ್ಟ್ಸ್, ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ 15ಮೀ ಅಗಲದ ಡಾಂಬರೀಕರಣ ರಸ್ತೆ ನಿರ್ಮಾಣ ಮಾಡುವ ಕಾಮಗಾರಿ

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11.10.2022 ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು–2, ಕೆಐಎಡಿಬಿ, ಬೆಂಗಳೂರು
DIPR/CP/2137/Zenkar/2022-23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ – 586201 ತಾ: ಬ.ಬಾಗೇವಾಡಿ, ಜಿ:ವಿಜಯಪುರ.
ಸಂ:ಕೃಭಾಜನಿನಿ/ಎಎಲ್‌ಬಿಸಿ ವಿಭಾಗ/ಡಿಎಮ್/ಟೆಂಡರ/ಜಮ್ಮಲಗಿ/ರಸ್ತೆ/2022–23/1598 ದಿನಾಂಕ: 05.09.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎಎಲ್‌ಬಿಸಿ ವಿಭಾಗ ಆಲಮಟ್ಟಿ ತಾ: ನಿಡಗುಂದಿ ಇವರು **ಶೇಕಡಾವಾರು ಟೆಂಡರ್‌**ನ್ನು ಆಹ್ವಾನಿಸಲಾಗಿದೆ. ಕೆಟಿಪಿಪಿ ಕಾಯ್ದೆ ನಿಯಮ–28ರನ್ವಯ ದ್ವಿ–ಲಕೋಟೆ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಭದ್ರತಾ ಠೇವಣಿ ಸಹಿತ ದ್ವಿ–ಲಕೋಟೆಯಲ್ಲಿ ಟೆಂಡರನ್ನು ಇ–ಪೋರ್ಟಲ್ ಮೂಲಕ ಸಂದಾಯ ಮಾಡಬಹುದಾಗಿದೆ. ಟೆಂಡರನ್ನು **ಕೆಪಿಡಬ್ಲ್ಯೂಡಿ ಕ್ಲಾಸ್–1 & ಮೇಲ್ಪಟ್ಟ** ಅರ್ಹ ಗುತ್ತಿಗೆದಾರರಿಂದ **ಕೆಡಬ್ಲ್ಯೂ–4** ರಲ್ಲಿ ಈ ಕೆಳಗಿನ ಕಾಮಗಾರಿಗೆ ಆಹ್ವಾನಿಸಲಾಗಿರುತ್ತದೆ.

ಕ್ರ.ಸಂ	ಕಾಮಗಾರಿಯ ಹೆಸರು	ಟೆಂಡರಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	Improvements and Developments of Aycut Roads Gundkarajagi to Basarkod and Gonal P N to Basarkod and SH-161 via Hullur, Koppa, Siddapur to Basarkod Outer Road coming under command area of Chimmalgi LIS, under UKP Stage-III in MuddebihalTaluk, Vijayapura District. **(Indent No. 23051)**	3361.28
2	Construction and Developments of Aycut Roads from Nadahalli to Madikeshwar, Balawat to Madikeshwarand Nadahalli via BalawatGudihal to SH-41 coming under command area of Chimmalgi LIS under UKP Stage-III in MuddebihalTaluk, Vijayapura District. **(Indent No. 23050)**	3401.76

ಟೆಂಡರ ಪ್ರಕ್ರಿಯೆ ವಿವಿಧ ಹಂತಗಳು ಈ ಕೆಳಗಿನಂತೆ ಇರುತ್ತವೆ.
1) ಟೆಂಡರ ಡಾಕುಮೆಂಟ್‌ನ್ನು ಇ-ಪೋರ್ಟಲ್‌ನಲ್ಲಿ ವೀಕ್ಷಿಸುವ& ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ 13.09.2022 ರಿಂದ 23.09.2022 **ಸಾಯಂಕಾಲ 5.00 ಘಂಟೆಯವರೆಗೆ**
2) ಟೆಂಡರಿನ ಪೂರ್ವಭಾವಿ ಸಭೆ (ಮುಖ್ಯ ಅಭಿಯಂತರರು, ಆಣೆಕಟ್ಟು ವಲಯ ಆಲಮಟ್ಟಿ ಕಛೇರಿಯಲ್ಲಿ) **17.09.2022 ಬೆಳಗ್ಗೆ 11.00 ಘಂಟೆಗೆ**
3) ಲಕೋಟೆ–1 (ತಾಂತ್ರಿಕ ಬಿಡ್)ನ್ನು ತೆರೆಯುವ ದಿನಾಂಕ (ಈ ಕಛೇರಿಯಲ್ಲಿ ತೆರೆಯಲಾಗುವುದು) **27.09.2022 ಬೆಳಗ್ಗೆ 11.00 ಘಂಟೆಗೆ**
4) ಲಕೋಟೆ–2 (ಆರ್ಥಿಕ ಬಿಡ್)ನ್ನು ತೆರೆಯುವ ದಿನಾಂಕ(ಈ ಕಛೇರಿಯಲ್ಲಿ ತೆರೆಯಲಾಗುವುದು) **03.10.2022 ಬೆಳಗ್ಗೆ 11.00 ಘಂಟೆಗೆ**

ಯಾವುದೇ ಸಂದರ್ಭದಲ್ಲಾದರೂ, ಯಾವುದೇ ಕಾರಣ ನೀಡದೇ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. ಟೆಂಡರಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ಅವಧಿಯಲ್ಲಿ ಅಥವಾ http://eproc.karnataka. gov.in/eportal/ines. seam and www.kbjnl.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/406/ಎಂಸಿಎ/2022–23

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರ (ಪೂ)ರವರ ಕಛೇರಿ, ಸಯ್ಯಾಜೀರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024. ಇಮೇಲ್: eeemccmys@gmail.com
ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆ.ಪ್ರ–06/2022–23 ದಿನಾಂಕ: 05.09.2022

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕಶೀರ್ಷಿಕೆಗಳಡಿ ಎಸ್.ಎಫ್.ಸಿ ವಿಶೇಷ ಅನುದಾನ, ಹಾಗೂ ನಗರ ಪಾಲಿಕೆ ಅನುದಾನದಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	(ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಕಾರ್ಯಪಾಲಕ ಅಭಿಯಂತರರು (ಸಿವಿಲ್ ವಿಭಾಗ)	ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ)/ ಟಿ.ಎನ್–35/2022–23	12	160.90	08.09.2022	15.09.2022	16.09.2022
2.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ)/ ಟಿ.ಎನ್–36/2022–23	11	4665.00	12.09.2022	27.09.2022	28.09.2022
3.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ)/ ಟಿ.ಎನ್–37/2022–23	01	196.00	13.09.2022	29.09.2022	30.09.2022
4.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ)/ ಟಿ.ಎನ್–38/2022–23	72	2523.75	16.09.2022	29.09.2022	30.09.2022
5.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ(ಪೂ)/ ಟಿ.ಎನ್–39/2022–23	03	868.35	12.09.2022	14.10.2022	15.10.2022
6.	ಆರೋಗ್ಯ ಶಾಖೆ	ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ/ಹೆಚ್ –01/ಪ/2022–23	03	59.50	05.09.2022	19.09.2022	20.09.2022
7.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ/ಹೆಚ್ –01/ಪ/2022–23	02	665.14	05.09.2022	06.10.2022	07.10.2022
8.		ಟೆಂ.ಪ್ರ.ಸಂಖ್ಯೆ: ಮೈನಪಾ/ಕಾಇಂ/ಹೆಚ್ –01/ಪ/140/2022–23	01	5.70	05.09.2022	12.09.2022	13.09.2022

ಇ–ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಡಾಕ್ಯುಮೆಂಟ್ ಪದ್ಧತಿಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ನ (https://eproc. karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ನಿಗದಿತ ಕೊನೆಯ ದಿನಾಂಕದಂದು ಸಂಜೆ 5.30 ರೊಳಗೆ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ (ಪೂರ್ವ/ಪಶ್ಚಿಮ), ಕಾರ್ಯಪಾಲಕ ಅಭಿಯಂತರರು ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ, ಕಾರ್ಯಪಾಲಕ ಅಭಿಯಂತರರು ದೃಢೀಕರಣ ಪ್ರಮಾಣ ಪತ್ರದಲ್ಲಿ ಇಂಡೆಂಟ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.

ಸಹಿ/– ಕಾರ್ಯಪಾಲಕ ಅಭಿಯಂತರರು(ಪೂರ್ವ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಸಹಿ/– ಕಾರ್ಯಪಾಲಕ ಅಭಿಯಂತರರು(ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/462/22-23

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ
ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ. ರಸ್ತೆ, ಬೆಂಗಳೂರು–09.
ಸಂಖ್ಯೆ: ಸಿ1/ಸ.ಶಿ.ಕ/ಐಸಿಟಿ–01/2021–22 ದಿನಾಂಕ: 07.09.2022

ಅಲ್ಪಾವಧಿ ಇ–ಟೆಂಡರ್ ಪತ್ರಿಕಾ ಪ್ರಕಟಣೆ

2021–22ನೇ ಸಾಲಿನಲ್ಲಿ ಐ.ಸಿ.ಟಿ ಮತ್ತು ಡಿಜಿಟಲ್ ಇನೋವೇಟಿವ್ ಚಟುವಟಿಕೆಯಡಿಯಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಆಯ್ದ 14 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ 3ನೇ ಬಾರಿ ಅಲ್ಪಾವಧಿ ಇ–ಟೆಂಡರ್‌ನಲ್ಲಿ ಈ ಕೆಳಕಂಡ ಉಪಕರಣಗಳನ್ನು ಕರೆಯಲಾಗಿದೆ. ಈ ಉಪಕರಣಗಳನ್ನು ಸರಬರಾಜು ನೀಡಲು ಬಯಸುವ ಅರ್ಹ ಸಂಸ್ಥೆಗಳು ಇ–ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ: www.eproc.karnataka.gov.in ಹಾಗೂ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–22131430 ಮತ್ತು ಮೊಬೈಲ್ ಸಂಖ್ಯೆ: 9448999326 9448999428.

ಕ್ರ. ಸಂ	ಉಪಕರಣಗಳ ವಿವರ	ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಲು ದಿನಾಂಕ	ಆನ್‌ಲೈನ್‌ನಲ್ಲಿ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ
1	ಲ್ಯಾಪ್‌ಟಾಪ್–01, ಪ್ರೊಜೆಕ್ಟರ್–01 ಮತ್ತು ಸ್ಕ್ರೀನ್–01.	09.09.2022	23.09.2022
2	ಕಂಪ್ಯೂಟರ್‌ಗಳು–10 (ಎಐಒ)		
3	2 ಕೆವಿ ಸಾಮರ್ಥ್ಯದ ಯು.ಪಿ.ಎಸ್ (ಬ್ಯಾಟರಿ ಸಹಿತ)–01		

ಸಹಿ/–
ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸ.ಶಿ.ಕ, ಬೆಂಗಳೂರು ಉತ್ತರ ಜಿಲ್ಲೆ.
ವಾ.ಸಾ.ಸಂ.ಇ/ವಾಪ್ರ/2165/ಆಕಾರ್/22–23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JJMTENDER:2022–23/1525
ದಿನಾಂಕ:08–09–2022

1.ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:15/2020–21 (ಏಕ–ಲಕೋಟೆ ಪದ್ಧತಿ) 2ನೇ ಕರೆ (e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ **ರೂ.14.12 ಲಕ್ಷಗಳು.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:16.09.2022 ಸಂಜೆ:5:30 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ:17.09.2022 ಸಂಜೆ:5:35 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232–222363.

ಸಹಿ/–ಕಾರ್ಯಪಾಲಕ ಇಂಜಿನಿಯರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/331/2022–23

ನಗರಸಭಾ ಕಾರ್ಯಾಲಯ ಹೊಸಪೇಟೆ.
No: CMC HPT/WS/15TH FINANCE/MF/2022-23
Dated: 08-09-2022

ಟೆಂಡರಿಗಾಗಿ ಆಹ್ವಾನ (ಐ.ಎಫ್.ಟಿ.) ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರಮೆಂಟ್ ಮುಖಾಂತರ)

2020–21ನೇ ಸಾಲಿನ 15ನೇ ಹಣಕಾಸು ಹಾಗೂ 2022–23ನೇ ಸಾಲಿನ ನಗರಸಭೆ ನಿಧಿ ಅನುದಾನದ ನಿಧಿಯಿಂದ ಈ ಕೆಳಗಿನ ಕೆಲಸಕ್ಕಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.govt.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:26–09–2022 ಸಂಜೆ 5.00 ಗಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27–09–2022 ಸಂಜೆ 5.10 ಗಂಟೆ ನಂತರ(3) ಆರ್ಥಿಕ ಬಿಡ್ ತೆರೆಯುವ ಸ್ಥಳ ಹಾಗೂ ದಿನಾಂಕ:28–09–2022 ನಗರಸಭೆ, ಹೊಸಪೇಟೆ. 1) **DMA/2022-23/WS/WORK_INDENT 137567** ಕಾಯ್ದಿರಿಸಿದ ಮೊತ್ತ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):98.00 ಲಕ್ಷ, ಇ.ಎಂ.ಡಿ(90 ದಿನಗಳ ವ್ಯಾಲಿಡಿಟಿ ರೂ.ಗಳಲ್ಲಿ): 196000.00 2) **CMC/ HPT/AMRUT/WS/LABOUR/2022-23** ಕಾಯ್ದಿರಿಸಿದ ಮೊತ್ತ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 61.00ಲಕ್ಷ, ಇ.ಎಂ.ಡಿ(90 ದಿನಗಳ ವ್ಯಾಲಿಡಿಟಿ ರೂ.ಗಳಲ್ಲಿ): 122000.00 ಟೆಂಡರ್ ಪ್ರೋಸೆಸ್ಸಿಂಗ್ ಫೀ ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂದನೆಗಳಿಗೆ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ, ಹೊಸಪೇಟೆ.
ಸಹಿ/– ಪೌರಾಯುಕ್ತರು ನಗರಸಭೆ, ಹೊಸಪೇಟೆ.
ಸಹಿ/– ಅಧ್ಯಕ್ಷರು, ನಗರಸಭೆ, ಹೊಸಪೇಟೆ.
ಡಿಐಪಿಆರ್/ಹೊಸಪೇಟೆ/129/ಎಂಸಿಎ/2022–23

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಛೇರಿ, ಮೆಸ್ಕಾಂ ಭವನ, ಬಿಜೈ, ಮಂಗಳೂರು–575004
ದೂರವಾಣಿ: 0824-2885795, CIN: U40109 KA 2002 SGC 030425
ಸಂಖ್ಯೆ:ಮೆಸ್ಕಾಂ/ಅ.ಇಂ(ಖ)/ಕಾನಿಇಂ(ಕಾ)/ಸಕಾನಿಇಂ(ಕಾ)/2022–23/ 414 & 415 ದಿನಾಂಕ: 09.09.2022

ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

ಮ.ವಿ.ಸ.ಕಂ. ಯು ಉಡುಪಿ ಮತ್ತು ಕಾವೂರು ವಿಭಾಗಗಳಿಗೆ ಸಂಬಂಧಪಟ್ಟ ಈ ಕೆಳಕಂಡ ವ್ಯವಸ್ಥೆ ಸುಧಾರಣೆ ಕಾಮಗಾರಿಯನ್ನು ಪೂರ್ಣ ಗುತ್ತಿಗೆ ಆಧಾರದಲ್ಲಿ ಹಾಗೂ ಮಂಗಳೂರು ಮತ್ತು ಸಾಗರ ವಿಭಾಗಗಳಿಗೆ ಸಂಬಂಧಪಟ್ಟ ಸಬ್‌ಸ್ಟೇಶನ್ ಕಾಮಗಾರಿಗಳನ್ನು ಅಂಶಿಕ ಗುತ್ತಿಗೆ ಆಧಾರದಲ್ಲಿ ನಿರ್ವಹಿಸಲು ಟೆಂಡರನ್ನು ಆಹ್ವಾನಿಸುತ್ತಿದೆ.

ಕ್ರ.ಸಂ.	ಕಾಮಗಾರಿಯ ವಿವರ	ಬಿಡ್ ವಿಚಾರಣಾ ಸಂಖ್ಯೆ
1.	ಉಡುಪಿ ವಿಭಾಗದ ಪಡುಬಿದ್ರೆ ಉಪವಿಭಾಗದಲ್ಲಿರುವ ವಿವಿಧ ಸಾಮರ್ಥ್ಯದ ವಿದ್ಯುತ್ ವಿತರಣಾ ಪರಿವರ್ತಕಗಳ ಎಲ್.ಟಿ ಸರ್ಕ್ಯೂಟ್‌ಗಳ ಹಳೆಯದಾದ ಸ್ಕ್ವಿರಲ್ ವಾಹಕಗಳನ್ನು ರ್‍ಯಾಬಿಟ್ ವಾಹಕಗಳಿಗೆ ಬದಲಾಯಿಸುವ ಕಾಮಗಾರಿ	MESCOM/2022-23/EL/ WORK_INDENT1831
2.	ಕಾವೂರು ವಿಭಾಗದ ಮೂಡಬಿದ್ರೆ ಉಪವಿಭಾಗದ ಅಧಿಕ ಹೊರೆ ಹೊಂದಿರುವ ವಿತರಣಾ ಪರಿವರ್ತಕಗಳ ಹೊರೆಯನ್ನು ಕಡಿಮೆಗೊಳಿಸಲು 51 ಸಂಖ್ಯೆಯ 63 ಕೆವಿಎ ಪರಿವರ್ತಕಗಳನ್ನು ಅಳವಡಿಸುವ ಕಾಮಗಾರಿ	MESCOM/2022-23/EL/ WORK_INDENT1832
3.	ಮಂಗಳೂರು ವಿಭಾಗ ಉಳ್ಳಾಲ ಉಪವಿಭಾಗದ ಕೋಟೆಕಾರು ಎಂಬಲ್ಲಿ 1x8 ಎಂವಿಎ, 33/11ಕೆವಿ ಉಪಕೇಂದ್ರದ ಸ್ಥಾಪನೆಯೊಂದಿಗೆ ಹಾಲಿ ಇರುವ 33 ಕೆ.ವಿ ಕೊಣಾಜೆ–ತೊಕ್ಕೊಟ್ಟು ಏಕ ವಿದ್ಯುತ್ ಮಾರ್ಗವನ್ನು ಸುಮಾರು 5.385 ಕಿ.ಮೀ ನಷ್ಟು ದೇರಳಕಟ್ಟೆ ಜಂಕ್ಷನ್ ವರೆಗೆ ದ್ವಿಮಾರ್ಗವನ್ನಾಗಿ ಪರಿವರ್ತಿಸುವ ಹಾಗೂ ಸುಮಾರು 5.37 ಕಿ.ಮೀ (4.31OH+1.06UG) ಹೊಸ 33ಕೆ.ವಿ ಏಕ ವಿದ್ಯುತ್ ಮಾರ್ಗವನ್ನು ದೇರಳಕಟ್ಟೆ ಜಂಕ್ಷನ್ ನಿಂದ ಪ್ರಸ್ತಾಪಿತ ಉಪಕೇಂದ್ರದವರೆಗೆ ನಿರ್ಮಿಸುವ ಕಾಮಗಾರಿ	MESCOM/ 2022-23/SS/ WORK_INDENT1829
4.	ಸಾಗರ ವಿಭಾಗ ಹೊಸನಗರ ಉಪವಿಭಾಗದ ಹರಿದ್ರಾವತಿ ಎಂಬಲ್ಲಿ 1x8 ಎಂವಿಎ, 33/11 ಕೆವಿ ಉಪಕೇಂದ್ರದ ಸ್ಥಾಪನೆಯೊಂದಿಗೆ ಹಾಲಿ ಇರುವ 33ಕೆ.ವಿ ಸಾಗರ–ಹೊಸನಗರ ಮಾರ್ಗದಿಂದ ಕೊಯೊಟ್ ವಾಹಕ ಬಳಸಿ ಸುಮಾರು 0.35 ಕಿ.ಮೀ 33 ಕೆವಿ ಮಾರ್ಗ (LILO ವ್ಯವಸ್ಥೆ) ರಚಿಸುವ ಕಾಮಗಾರಿ	MESCOM/ 2022-23/SS/ WORK_INDENT1830

ಆಸಕ್ತಿಯುಳ್ಳ ಅರ್ಹ ಬಿಡ್ಡುದಾರರು ವೆಬ್‌ಸೈಟ್ www.eproc.karnataka.gov.inಗೆ ದಿನಾಂಕ **13.09.2022** ಅಥವಾ ನಂತರ ಲಾಗ್ ಆನ್ ಮಾಡಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ) (ಖರೀದಿ), ಕಾರ್ಪೊರೇಟ್ ಕಛೇರಿ, ಮಂಗಳೂರು
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ನಂ.1ನೇ ವಿಭಾಗ, ನಂ.55 ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–4)
No.KSDB/EE/No1.div/S.T/PB/IFT-04/2022-23/593 Dated: 07.09.2022

ಕಾರ್ಯಪಾಲಕ ಅಭಿಯಂತರರು, ನಂ.1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರ ಕಛೇರಿಯಿಂದ 2021–22ನೇ ಸಾಲಿನ ಕೊಳಚೆ ಪ್ರದೇಶ ಸುಧಾರಣೆಯಡಿಯಲ್ಲಿ **ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅರುಂದತಿನಗರ ಕೊಳಚೆ ಪ್ರದೇಶದಲ್ಲಿ ಸಮುದಾಯ ಭವನ, ಟ್ರಸ್ ವರ್ಕ್ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಾಗಿ** ದ್ವಿ–ಲಕೋಟಿ ಪದ್ಧತಿಯಲ್ಲಿ ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದ್ದು, ಕಾಮಗಾರಿಯ **ಕೊನೆಯ ದಿನಾಂಕ**: 27.09.2022 **ಬೆಳಗ್ಗೆ 11.00 ಗಂಟೆಯಾಗಿದ್ದು,** ಆಸಕ್ತಿಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗೆ/ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ **ದಿನಾಂಕ**: 27.09.2022 **ಬೆಳಗ್ಗೆ** 11.00 **ಗಂಟೆಯೊಳಗೆ https://www.eproc.karnataka.gov.in** ರಲ್ಲಿ ವೀಕ್ಷಿಸಬಹುದಾಗಿರುತ್ತದೆ ಹಾಗೂ ಕಛೇರಿ ಸಮಯದಲ್ಲಿ ನಂ.1ನೇ ವಿಭಾಗ, ಕಕೊಅಮ, ಬೆಂಗಳೂರು ಕಛೇರಿಗೆ ಭೇಟಿ ನೀಡಿ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ನಂ.1ನೇ ವಿಭಾಗ, ಕ.ಕೊ.ಅ.ಮ. ಬೆಂಗಳೂರು
DIPR/CP/RO2153/AAPL/2022-23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:KW- 3:ಟೆಂ:2022–23:2137 ದಿನಾಂಕ: 06–09–2022.

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

ಲೆಕ್ಕ ಶೀರ್ಷಿಕೆ: 5054 (ಯೋಜನೆ) ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳ ಸುಧಾರಣೆ ಅಡಿಯಲ್ಲಿ ಮಂಜೂರಾದ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW-3ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http:/ /eproc.karnataka.gov.in.** ಮುಖಾಂತರ ಭಾಗವಹಿಸಬಹುದು. ಕಾಮಗಾರಿ ವರ್ಕ ಇಂಡೆಂಟ್ ಸಂಖ್ಯೆ: **153083/Call-2 ಅಂದಾಜು ಮೊತ್ತ ರೂ. 100.00 ಲಕ್ಷಗಳು** ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು, ಸದರಿ ವೆಬ್‌ಸೈಟ್‌ನಲ್ಲಿಯು ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **16–09–2022** ಸಮಯ 16.00 ಗಂಟೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **17–09–2022** ಸಮಯ 16.30 ಗಂಟೆ, ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/316/ಎಂಸಿಎ/2022–23

ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ. ತುಮಕೂರು.
ದೂರವಾಣಿ: 0816–2955247 Emil:dudc_tkr@yahoo.co.in
ನಂ:ಡಿಯುಡಿಸಿ/ನಗರೋತ್ಥಾನ (ಮುನ್ಸಿಪಾಲಿಟಿ)/ಹಂತ–4/ಸಿಆರ್/01/2022–23
ದಿನಾಂಕ : 03.09.2022

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ರವರಿಂದ ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ಬಿಡ್ ದಾರರಿಂದ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನ್ಸಿಪಾಲಿಟಿ) ಯೋಜನೆ (ಹಂತ–04)ಯಡಿ ತುಮಕೂರು ಜಿಲ್ಲೆಯ ಶಿರಾ ನಗರ ಸಭೆಯ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಕೆಳಗಿನಂತೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

INDENT No. & Details of ULB **(1)** Sira CMC Package-01 DMA/ 2022-23/RD/WORK_INDENT133093, Amount put to Tender:Rs.760.50 in Lakhs. EMD: Rs.11.50Lakhs. Contractor Class: Class 01. Sira CMC Package-02 DMA/2022-23/RD/ WORK_INDENT133094, Amount put to Tender:Rs.7660.50 in Lakhs. EMD: Rs.11.50Lakhs. Contractor Class: Class 01.

ಬಿಡ್‌ದಾರರು ಎಲ್ಲಾ ದಾಖಲಾತಿಗಳ ಮತ್ತು ಇತರೆ ವಿವರಗಳ ಮಾಹಿತಿಗಾಗಿ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.
(1) ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ ಮತ್ತು ಅವಧಿ:03.09.2022 ರಿಂದ **03.10.2022** ರವರೆಗೆ ಸಮಯ: 17:00 ಗಂಟೆ. (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **03.10.2022** ರವರೆಗೆ ಸಮಯ: 17:00 ಗಂಟೆ. (3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **06.10.2022** 11.00 ಗಂಟೆಗೆ ಡಿ.ಯು.ಡಿ.ಸಿ, ತುಮಕೂರು.
ಮೇಲ್ಕಂಡ ದಿನಾಂಕಗಳು ಹಾಗೂ ಟೆಂಡರ್ ದಸ್ತಾವೇಜಿನ ಯಾವುದೇ ತಿದ್ದುಪಡಿ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ.
DIPR/TUM/487/MCA/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು (ರಾರಾನ) ರವರ ಕಛೇರಿ, ಕೆರೆಗಳು ವಿಭಾಗ, ಕೊಠಡಿ ಸಂಖ್ಯೆ 308, 3ನೇ ಮಹಡಿ, ಅನೆಕ್ಸ್–3 ಕಟ್ಟಡ, ಎನ್. ಆರ್. ಚೌಕ, ಬೆಂಗಳೂರು–560 002.
ಸಂ: ಕಾಪಾಅ–ರಾರಾನ/ಕೆರೆಗಳು//ಟೆಂಡ್–03/2022–23 ದಿನಾಂಕ: 08.09.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ(ಐಎಫ್‌ಟಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು–ರಾರಾನ ಕೆರೆಗಳು ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಮತ್ತಿಕೆರೆ ಉದ್ಯಾನವನ (ಜೆ.ಪಿ. ಉದ್ಯಾನವನ)ದ ಸುಧಾರಣಾ ಕಾಮಗಾರಿ ಪ್ಯಾಕೇಜ್–XVI (ಉಳಿದ ಕಾಮಗಾರಿಗಳು) (ದರ್ಜೆ–1 & ಮೇಲ್ಪಟ್ಟ ಗುತ್ತಿಗೆದಾರರು)	476.50	7,15,000/-
2	ಮಲ್ಲತ್ತಹಳ್ಳಿ ಕೆರೆದಂಡೆ ಮತ್ತು ಪಾದಾಚಾರಿ ಮಾರ್ಗದ ಸುಧಾರಣಾ ಕಾಮಗಾರಿ. ಪ್ಯಾಕೇಜ್–XI (ಉಳಿದ ಕಾಮಗಾರಿಗಳು) (ದರ್ಜೆ–1 & ಮೇಲ್ಪಟ್ಟ ಗುತ್ತಿಗೆದಾರರು)	199.50	3,00,000/-
3	ಪ್ಯಾಕೇಜ್–8 ಕ್ಕೆ ಯೋಜನಾ ಸಲಹಾ ಸೇವೆಯನ್ನು ಒದಗಿಸುವುದು. 1) ಮಲ್ಲತ್ತಹಳ್ಳಿ ಕೆರೆಯಲ್ಲಿ ಉಳಿದ ಭಾಗಕ್ಕೆ ಕಾಂಪೌಂಡ್ ಗೋಡೆಯ ನಿರ್ಮಾಣ, ತ್ಯಾಜ್ಯ ವಿಲೇವಾರಿ ನಿರ್ಮಾಣ, ಬ್ಯಾಲೆನ್ ಡೈವರ್ಶನ್ ನಿರ್ಮಾಣ, 2) ಪಟ್ಟಣಗೆರೆ ಕೆಂಚೇನಹಳ್ಳಿ ಕೆರೆಯಲ್ಲಿ ಅಭಿವೃದ್ಧಿ ಕಾಮಗಾರಿಗಳು. (ಎನ್‌ಎಬಿಎಲ್ & ಐಎಸ್‌ಓ ಪ್ರಮಾಣೀಕೃತ ಸಲಹೆಗಾರರು).	1,800.00	50,000/-
4	ಮತ್ತಿಕೆರೆ ಉದ್ಯಾನವನ (ಜೆ.ಪಿ. ಉದ್ಯಾನವನ)ದ ಸುಧಾರಣಾ ಕಾಮಗಾರಿ ಪ್ಯಾಕೇಜ್–XVI (ಉಳಿದ ಕಾಮಗಾರಿಗಳು) (ಎನ್‌ಎಬಿಎಲ್ & ಐಎಸ್‌ಓ ಪ್ರಮಾಣೀಕೃತ ಸಲಹೆಗಾರರು).	476.50	25,000/-
5	ಮಲ್ಲತ್ತಹಳ್ಳಿ ಕೆರೆದಂಡೆ ಮತ್ತು ಪಾದಾಚಾರಿ ಮಾರ್ಗದ ಸುಧಾರಣಾ ಕಾಮಗಾರಿ. ಪ್ಯಾಕೇಜ್–XI (ಉಳಿದ ಕಾಮಗಾರಿಗಳು) (ಎನ್‌ಎಬಿಎಲ್ & ಐಎಸ್‌ಓ ಪ್ರಮಾಣೀಕೃತ ಸಲಹೆಗಾರರು).	199.50	25,000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು GoK ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಿಂದ **12.09.2022ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಪೂರ್ವಭಾವಿ ಸಭೆ ದಿನಾಂಕ : **21.09.2022ರ ಸಂಜೆ 3.00 ಗಂಟೆಗೆ. 3)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **26.09.2022ರ ಸಂಜೆ 4.00 ಗಂಟೆಯವರೆಗೆ 4)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **28.09.2022ರ ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–ರಾರಾನ (ಕೆರೆಗಳು).
ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬ್ರಿಟನ್ ಇತಿಹಾಸದಲ್ಲಿಯೇ ಸುದೀರ್ಘ ಕಾಲ ರಾಣಿಯಾಗಿದ್ದ ಹೆಗ್ಗಳಿಕೆ; 96 ಸುತ್ತು ಗುಂಡು ಹಾರಿಸಿ 'ಗನ್ ಸೆಲ್ಯೂಟ್'

ರಾಣಿ 2ನೇ ಎಲಿಜಬೆತ್ ಗೌರವಾರ್ಥ ಶೋಕಾಚರಣೆ

ಬ್ರಿಟನ್‌ನ ರಾಜ 3ನೇ ಚಾರ್ಲ್ಸ್ (ಬಲ) ಮತ್ತು ರಾಣಿ ಕ್ಯಾಮಿಲ್ಲಾ ಅವರು ಶುಕ್ರವಾರ ಲಂಡನ್ನಿನ ಬಕಿಂಗ್‌ಹ್ಯಾಂ ಅರಮನೆಗೆ ಆಗಮಿಸಿದರು – ಎಎಫ್‌ಪಿ ಚಿತ್ರ

ಲಂಡನ್ (ಪಿಟಿಐ): ಬ್ರಿಟನ್ ಇತಿಹಾಸದಲ್ಲಿಯೇ ಸುದೀರ್ಘ ಕಾಲ ರಾಣಿಯಾಗಿದ್ದ 2ನೇ ಎಲಿಜಬೆತ್ (96) ನಿಧನ ಹಿನ್ನೆಲೆಯಲ್ಲಿ ದೇಶದಾದ್ಯಂತ ಶೋಕಾಚರಣೆ ಘೋಷಿಸಲಾಗಿದ್ದು, ರಾಣಿಯ ಅಂತ್ಯಸಂಸ್ಕಾರದ ನಂತರವೂ ಏಳು ದಿನಗಳವರೆಗೆ ರಾಜಮನೆತನದಲ್ಲಿ ಶೋಕಾಚರಣೆ ಮುಂದುವರಿಯಲಿದೆ ಎಂದು ಬಕ್ಕಿಂಗ್ ಹ್ಯಾಮ್ ಅರಮನೆಯು ಪ್ರಕಟಿಸಿದೆ.

ಗುರುವಾರ ರಾತ್ರಿ ನಿಧನರಾದ ರಾಣಿ 2ನೇ ಎಲಿಜಬೆತ್ ಅವರ ಅಂತ್ಯಸಂಸ್ಕಾರ ಇದೇ 19ರಂದು ಕೇಂದ್ರ ಲಂಡನ್‌ನ ವೆಸ್ಟ್‌ಮಿನಿಸ್ಟರ್ ಅಬೆನಲ್ಲಿ ನಡೆಯುವ ನಿರೀಕ್ಷೆ ಇದೆ. ಅಂತ್ಯಕ್ರಿಯೆ ದಿನ ಸರ್ಕಾರ ಸಾರ್ವತ್ರಿಕ ರಜೆ ಘೋಷಿಸಲಿದೆ. ರಾಣಿಯ ಗೌರವಾರ್ಥ ಬ್ರಿಟನ್ ಸರ್ಕಾರ ಸಹ ರಾಷ್ಟ್ರೀಯ ಶೋಕಾಚರಣೆ ಘೋಷಿಸಿದೆ.

ಗನ್ ಸೆಲ್ಯೂಟ್: ರಾಣಿಯ ಗೌರವಾರ್ಥ ಅವರ ಜೀವಮಾನದ ಪ್ರತಿ ವರ್ಷಕ್ಕೆ ಒಂದು ಸುತ್ತು ಗುಂಡಿನಂತೆ, 96 ಸುತ್ತು ಗುಂಡುಗಳನ್ನು ಗಾಳಿಯಲ್ಲಿ ಹಾರಿಸಿ 'ಗನ್ ಸೆಲ್ಯೂಟ್' ಸಲ್ಲಿಸಲಾಯಿತು. ಚರ್ಚ್‌ಗಳಲ್ಲೂ ಗಂಟೆಗಳನ್ನು ಬಾರಿಸುವ ಮೂಲಕ ರಾಣಿಗೆ ನಮನ ಸಲ್ಲಿಸಲಾಗುತ್ತಿದೆ. ಈ ಸಂಬಂಧ ದಿ ಚರ್ಚ್ ಆಫ್ ಇಂಗ್ಲೆಂಡ್ ಪಾದ್ರಿಗಳಿಗೆ ಮಾರ್ಗಸೂಚಿ ನೀಡಿದೆ.

ವಿಶೇಷ ಅಧಿವೇಶನ: ರಾಣಿಯ ಸ್ಮರಣಾರ್ಥ ಶುಕ್ರವಾರ ಬ್ರಿಟನ್ ಸಂಸತ್ತಿನ ವಿಶೇಷ ಅಧಿವೇಶನ ಆರಂಭವಾಯಿತು. ಸಂಸದರು ರಾಣಿಗೆ ಗೌರವ ನಮನ ಸಲ್ಲಿಸಿದರು. ಎರಡು ದಿನಗಳ ಕಾಲ ಈ ವಿಶೇಷ ಅಧಿವೇಶನ ನಡೆಯಲಿದೆ.

ಭಾರತದಲ್ಲಿ ನಾಳೆ ಶೋಕಾಚರಣೆ (ನವದೆಹಲಿ ವರದಿ): ರಾಣಿ 2ನೇ ಎಲಿಜಬೆತ್ ಅವರ ಗೌರವಾರ್ಥ ಇದೇ 11ರಂದು ಭಾರತದಾದ್ಯಂತ ಶೋಕಾಚರಣೆ ನಡೆಯಲಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ಘೋಷಿಸಿದೆ.

'ಈ ಅವಧಿಯಲ್ಲಿ ದೇಶದಾದ್ಯಂತ ರಾಷ್ಟ್ರಧ್ವಜ ಅರ್ಧಕ್ಕೆ ಇಳಿಸಲಾಗುವುದು. ಯಾವುದೇ ಮನರಂಜನಾ ಕಾರ್ಯಕ್ರಮಗಳು ನಡೆಯುವುದಿಲ್ಲ' ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

'ರಾಣಿ ಭೇಟಿಯು ಕ್ಷಮೆಗಿಂತಲೂ ಮಿಗಿಲಾದುದು'

ಅಮೃತಸರ (ಪಿಟಿಐ): 'ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಸ್ಮಾರಕಕ್ಕೆ ರಾಣಿ 2ನೇ ಎಲಿಜಬೆತ್ ಅವರ ಭೇಟಿ, ಆ ಘಟನೆಗೆ ಕ್ಷಮೆ ಕೇಳುವುದಕ್ಕಿಂತಲೂ ಮಿಗಿಲಾದುದು' ಎಂದು ಜಲಿಯನ್ ವಾಲಾಬಾಗ್ ಟ್ರಸ್ಟ್ ಕಾರ್ಯದರ್ಶಿ ಸುಕುಮಾರ್ ಮುಖರ್ಜಿ ಹೇಳಿದರು.

ರಾಣಿ ಅವರು 1997ರಲ್ಲಿ ಸ್ಮಾರಕಕ್ಕೆ ಭೇಟಿ ನೀಡಿ ಗೌರವ ಸಲ್ಲಿಸಿದ್ದರು. ಆಗ ರಾಣಿ ತನ್ನ ದೇಶದ ಪರ ಕ್ಷಮೆ ಕೇಳಬಹುದು ಎಂದು ಹೆಚ್ಚಿನವರು ಆಶಿಸಿದ್ದರು. ಆದರೆ, ಹಾಗಾಗಲಿಲ್ಲ. ಬ್ರಿಟಿಷ್ ಸೇನಾಧಿಕಾರಿ ಆದೇಶದಂತೆ 1919ರಲ್ಲಿ ಹತ್ಯಾಕಾಂಡ ನಡೆದಿತ್ತು.

ಕೊಹಿನೂರ್ ವಜ್ರ ಮರಳಿಸಿ: ರಾಣಿ ಎಲಿಜಬೆತ್ ನಿಧನದ ಹಿಂದೆಯೇ ಸದ್ಯ, ಬ್ರಿಟನ್‌ನ ರಾಜಮನೆತನದಲ್ಲಿ ಇರುವ ಅಮೂಲ್ಯ 105 ಕ್ಯಾರಟ್‌ನ ಕೊಹಿನೂರ್ ವಜ್ರವನ್ನು ಭಾರತಕ್ಕೆ ಮರಳಿಸಬೇಕು ಎಂಬ ಅಭಿಯಾನ ಟ್ವಿಟರ್‌ನಲ್ಲಿ ಆರಂಭವಾಗಿದೆ.

ಈ ವಜ್ರ 14ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಪತ್ತೆಯಾಗಿದ್ದು, ಬ್ರಿಟಿಷರ ಆಡಳಿತಾವಧಿಯಲ್ಲಿ ಅವರ ಸುಪರ್ದಿಗೆ ಹೋಗಿತ್ತು. ಇದು ತಮಗೆ ಸೇರಬೇಕು ಎಂದು ಭಾರತ ಸೇರಿ ನಾಲ್ಕು ದೇಶಗಳು ಪ್ರತಿಪಾದಿಸುತ್ತಿವೆ. ಟ್ವಿಟರ್‌ನಲ್ಲಿ ಈ ಚರ್ಚೆ ಆರಂಭವಾಗಿದೆ.

ಚಾರ್ಲ್ಸ್ ಭಾರತ ಪ್ರೀತಿ

ಬ್ರಿಟನ್ ರಾಜನಾಗಿ ಶನಿವಾರ ಬೆಳಿಗ್ಗೆ ಕೌನ್ಸಿಲ್ ಸಭೆಯಲ್ಲಿ ಅಧಿಕೃತವಾಗಿ ಘೋಷಿಸಲ್ಪಡುತ್ತಿರುವ 3ನೇ ಚಾರ್ಲ್ಸ್ ಅವರು ಭಾರತದ ಮೇಲೆ ಒಲವು ಮತ್ತು ಪ್ರೀತಿ ಹೊಂದಿದ್ದಾರೆ.

ಭಾರತೀಯ ಪುರಾತನವಾದ ಯೋಗ, ಆಯುರ್ವೇದದ ಮೇಲೆ ಆಸಕ್ತಿ ಇರಿಸಿಕೊಂಡಿದ್ದಾರೆ. ರಾಜಕುಮಾರರಾಗಿದ್ದ ಅವಧಿಯಲ್ಲಿ ಹಲವು ಬಾರಿ ಭಾರತಕ್ಕೆ ಭೇಟಿ ನೀಡಿದ್ದಾರೆ.

2007ರಲ್ಲಿ ಅವರು ಸ್ಥಾಪಿಸಿದ ಬ್ರಿಟಿಷ್ ಏಷ್ಯನ್ ಟ್ರಸ್ಟ್ ಮೂಲಕ ಭಾರತಕ್ಕೆ ಹಲವು ರೀತಿಯಲ್ಲಿ ಸಹಾಯಹಸ್ತವನ್ನೂ ಚಾಚಿದ್ದಾರೆ. ಕೋವಿಡ್ ಸಮಯದಲ್ಲೂ ಭಾರತಕ್ಕೆ ಚಾರ್ಲ್ಸ್ ನೆರವಾಗಿದ್ದರು.

ಬೆಂಗಳೂರಿಗೆ ಭೇಟಿ ನೀಡಿದ್ದ ರಾಣಿ ಎಲಿಜಬೆತ್

ಪ್ರಜಾವಾಣಿ ವಾರ್ತೆ

ಎರಡನೇ ಎಲಿಜಬೆತ್ ಅವರು ಬೆಂಗಳೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅಂದಿನ ರಾಜ್ಯಪಾಲರೂ ಆಗಿದ್ದ ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಇದ್ದರು – ಚಿತ್ರ ಕೃಪೆ: ವಾರ್ತಾ ಇಲಾಖೆ

ಬೆಂಗಳೂರು: ಗುರುವಾರ ನಿಧನರಾದ ಬ್ರಿಟನ್ ರಾಣಿ ಎರಡನೇ ಎಲಿಜಬೆತ್ ಅವರು 1961ರಲ್ಲಿ ಬೆಂಗಳೂರಿಗೆ ಭೇಟಿ ನೀಡಿದ್ದಲ್ಲದೇ, ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

ಎಲಿಜಬೆತ್ ತೀರಿಕೊಂಡ ಹೊತ್ತಿನಲ್ಲಿ ಅವರು ಬೆಂಗಳೂರಿಗೆ ಭೇಟಿ ನೀಡಿದ್ದ ನೆನಪು ಹಾಗೂ ವಿಡಿಯೊಗಳನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ನಗರಕ್ಕೆ ಭೇಟಿ ನೀಡಿದ್ದ ರಾಣಿ ಎಲಿಜಬೆತ್ ಅವರನ್ನು ಅಂದಿನ ರಾಜ್ಯಪಾಲರು ಮತ್ತು ಮೈಸೂರಿನ ಮಹಾರಾಜರಾಗಿದ್ದ ಜಯಚಾಮ ರಾಜೇಂದ್ರ ಒಡೆಯರ್ ಅವರನ್ನು ವಿಮಾನ ನಿಲ್ದಾಣದಲ್ಲಿ ಆತ್ಮೀಯವಾಗಿ ಸ್ವಾಗತಿಸಿದ್ದರು. ನಗರದ ನಾಗರಿಕರ ಪರವಾಗಿ ಬೆಂಗಳೂರಿನ ಮೇಯರ್ ಅವರು ಹಾಜರಿದ್ದರು.

ಎಂ.ಜಿ. ರಸ್ತೆಯ ಇಕ್ಕೆಲಗಳಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ನಾಗರಿಕರು, ಶಾಲಾ ಮಕ್ಕಳು ಸಂಭ್ರಮದಿಂದ ರಾಣಿ ಅವರನ್ನು ಸ್ವಾಗತಿಸಿದ್ದರು. ಎಲ್ಲರೂ ಕೈಬೀಸಿ, ಶುಭಾಶಯ ಕೋರಿದ್ದರು.

ಇವತ್ತಿನ ಅನಿಲ್ ಕುಂಬ್ಳೆ ವೃತ್ತದಲ್ಲಿರುವ 'ಬೈಬಲ್ ಸೊಸೈಟಿ ಆಫ್ ಇಂಡಿಯಾ'ದ 150ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನೀಡಿದ್ದ ಈ ಭೇಟಿಯು ಮಹತ್ವದ್ದಾಗಿತ್ತು. ಈ ಸೊಸೈಟಿಯ ರಾಷ್ಟ್ರೀಯ ಕೇಂದ್ರ ಕಚೇರಿಯು ಬೆಂಗಳೂರಿನಲ್ಲಿದೆ. ರಾಣಿ ಎಲಿಜಬೆತ್ ಅವರಿಗೆ ಬೈಬಲ್ ಅನ್ನು ಕಾಣಿಕೆಯಾಗಿ ನೀಡಲಾಗಿತ್ತು.

ಈ ಸಂದರ್ಭದಲ್ಲಿ ಲಾಲ್‌ಬಾಗ್‌ಗೆ ಭೇಟಿ ನೀಡಿದ್ದ ರಾಣಿ ಎಲಿಜಬೆತ್ ಅವರು, ಸಸ್ಯತೋಟದ ಸೌಂದರ್ಯ ಸೊಬಗನ್ನು ಸವಿದಿದ್ದರು. ಭೇಟಿಯ ನೆನಪಿಗಾಗಿ ಸಸಿಯನ್ನು ನೆಟ್ಟಿದ್ದರು. ಗಾಜಿನ ಮನೆಗೆ ಭೇಟಿ ನೀಡಿ ಅದರ ವೈಶಿಷ್ಟ್ಯವನ್ನು ಮೆಚ್ಚಿದ್ದರು.

ಭೇಟಿಯ ಚಿತ್ರಗಳು ಮತ್ತು ವಿಡಿಯೊಗಳು ಈಗ ಗಮನಸೆಳೆದಿದ್ದು, ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡುತ್ತಿವೆ.

ನಾರಾಯಣ ಗುರು: ಕರುಣೆ ಪ್ರಜ್ಞೆಗಳ ತೀರ್ಥ

● ಎಸ್. ಸೂರ್ಯಪ್ರಕಾಶ ಪಂಡಿತ್

ಆಧ್ಯಾತ್ಮಿಕತೆಗೆ ಸಮಾಜಸುಧಾರಣೆಯ ಹೃದಯ ಅಥವಾ ಸಮಾಜಸುಧಾರಣೆಗೆ ಆಧ್ಯಾತ್ಮಿಕತೆಯ ಪ್ರಜ್ಞೆ ಸೇರಿಕೊಂಡು ಮೂಡಿದ ವಿಗ್ರಹರೂಪವೇ ನಾರಾಯಣಗುರು (1854–1928). ಅವರು ಅದ್ವೈತದರ್ಶನದ ಹಿನ್ನೆಲೆಯಲ್ಲಿ ಸಮಾಜಸುಧಾರಣೆಯನ್ನು ಮಾಡಿದ ನಮ್ಮ ಕಾಲದ ಮಹಾದಾರ್ಶನಿಕ.

ನಾರಾಯಣ ಗುರುಗಳ ಪ್ರಸಿದ್ಧ ರಚನೆಗಳಲ್ಲೊಂದು 'ದರ್ಶನಮಾಲಾ'. ಅಲ್ಲಿಯ ಪದ್ಯವೊಂದು ಹೀಗಿದೆ:

ದಗ್ಧ್ವಾ ಜ್ಞಾನಾಗ್ನಿನಾ ಸರ್ವಮುದ್ದಿಶ್ಯ ಜಗತಾಂ ಹಿತಮ್
ಕರೋತಿ ವಿಧಿವತ್ ಕರ್ಮ ಬ್ರಹ್ಮವಿದ್ ಬ್ರಹ್ಮಣಿ ಸ್ಥಿತಃ

ಇದು ಬ್ರಹ್ಮಜ್ಞಾನಿಯ ಲಕ್ಷಣವನ್ನು ವಿವರಿಸುತ್ತಿದೆ.

'ಅರಿವು ಎಂಬ ಬೆಂಕಿಯಲ್ಲಿ ಎಲ್ಲ ಕರ್ಮಗಳನ್ನೂ ಸುಟ್ಟುಹಾಕಿದವನು. ಹೀಗಿದ್ದರೂ ಅವನು ವಿಧಿಬದ್ಧವಾದ ಕರ್ಮಗಳನ್ನು ಮಾಡುತ್ತಿರುತ್ತಾನೆ; ಹೀಗೆ ಅವನು ಮಾಡುವುದಾದರೂ ಜಗತ್ತಿನ ಹಿತಕ್ಕಾಗಿ. ಇಂಥವನು ಬ್ರಹ್ಮಜ್ಞಾನಿ.'

ಬ್ರಹ್ಮಜ್ಞಾನಿಯ ಈ ಲಕ್ಷಣದಂತೆಯೇ ಇದ್ದವರು ನಾರಾಯಣ ಗುರುಗಳು.



ಇಂದು ಜಯಂತಿ

ಸಮಾಜದಲ್ಲಿ ಬೇರೂರಿದ್ದ ಅಸ್ಪೃಶ್ಯತೆಯ ರೋಗವನ್ನು ಪರಿಹರಿಸಲು ನಾರಾಯಣ ಗುರುಗಳು ಆರಿಸಿಕೊಂಡ ಮಾರ್ಗ– ಧರ್ಮ ಮತ್ತು ಅಧ್ಯಾತ್ಮ. ಇರುವುದು ಒಂದೇ ಸತ್ಯ; ಅದನ್ನು ಯಾವ ಹೆಸರಿನಿಂದಲಾದರೂ ಕರೆಯಿರಿ: ಆತ್ಮ, ಬ್ರಹ್ಮ, ಪರಮಾತ್ಮ, ಚೈತನ್ಯ – ಹೀಗೆ ಯಾವುದೂ ಆಗಬಹುದು. ಏಕೆಂದರೆ ಆ 'ತತ್ತ್ವ' ನಾಮ–ರೂಪಗಳಿಗೆ ಅತೀತವಾದದ್ದು. ಆದರೆ ಎಲ್ಲರಲ್ಲೂ ಎಲ್ಲೆಲ್ಲೂ ಎಲ್ಲ ಕಾಲದಲ್ಲೂ ಇರುವಂಥ ಶಾಶ್ವತಸತ್ಯವೇ ಅದು –ಎನ್ನುವುದು ಅದ್ವೈತದ ಸಾರ.

ಉಪನಿಷತ್ತುಗಳು ಪ್ರತಿಪಾದಿಸಿದ ಬ್ರಹ್ಮತತ್ತ್ವವನ್ನು ಎತ್ತಿಹಿಡಿದವರು ಶಂಕರಾಚಾರ್ಯರು. ಅವರು ಪ್ರತಿಪಾದಿಸಿದ ಸಿದ್ಧಾಂತವೇ 'ಅದ್ವೈತ' ಎಂಬ ಹೆಸರನ್ನು ಪಡೆಯಿತು. ಈ ಅದ್ವೈತದ ಬೆಳಕಿನಲ್ಲಿಯೇ ನಾರಾಯಣ ಗುರುಗಳು ಕೂಡ ತಮ್ಮ ದಾರ್ಶನಿಕತೆಯನ್ನು ಪ್ರತಿಪಾದಿಸಿದರು.

ಇರುವುದು ಒಂದೇ ತತ್ತ್ವ; ಅದು ಶುದ್ಧತತ್ತ್ವ. ಹೀಗಾಗಿ ಅದರಲ್ಲಿ ಭೇದಭಾವಕ್ಕೆ ಅವಕಾಶವೇ ಇಲ್ಲ; ಜಾತಿ–ಮತಗಳ ಗೊಡವೆ ಅದಕ್ಕೆ ಇಲ್ಲ. ಎಲ್ಲರಲ್ಲೂ ಒಂದೇ ಪರಮಾತ್ಮವಸ್ತು ಇರುವಾಗ ಮನುಷ್ಯರಲ್ಲಿ ಒಬ್ಬರು ಮೇಲು, ಇನ್ನೊಬ್ಬರು ಕೀಳು ಎಂಬ ವಿಂಗಡಣೆಗೆ ಅವಕಾಶವಾದರೂ ಎಲ್ಲಿ? ಹೀಗಾಗಿ ಇಡಿಯ ಮನುಕುಲ ಆ ಚೈತನ್ಯದ ಸ್ವರೂಪವೇ ಹೌದು. ಸಮಾಜದಲ್ಲಿ ಜಾತಿಯ ಕಾರಣದಿಂದ ಶ್ರೇಷ್ಠ–ಕನಿಷ್ಠ ಎಂಬ ಗೋಡೆಗಳನ್ನು ಎಬ್ಬಿಸುವುದು ಅಧಾರ್ಮಿಕವೂ, ಆಧ್ಯಾತ್ಮಿಕತೆಗೆ ವಿರೋಧವೂ ಹೌದು ಎಂದು ಘೋಷಿಸಿ, ಸಮಾಜಸುಧಾರಣೆಗೆ ಅಧ್ಯಾತ್ಮಸ್ಪರ್ಶದ ಅಪೂರ್ವ ಕಾಂತಿಯನ್ನು ಒದಗಿಸಿದವರು ನಾರಾಯಣ ಗುರುಗಳು.

ಆಧುನಿಕ ಜಗತ್ತಿನ ಎಲ್ಲ ಸಮಸ್ಯೆಗಳ ಮೂಲ ಇಂದಿನ ಜನಾಂಗ ಧಾರ್ಮಿಕತೆಯಿಂದ ವಿಮುಖರಾಗುತ್ತಿರುವುದೇ ಹೌದು ಎಂದಿದ್ದಾರೆ ಒಂದೆಡೆ, ಖ್ಯಾತ ಇತಿಹಾಸತಜ್ಞ ವಿಲ್ ಡ್ಯುರೆಂಟ್. ಆದರೆ ಸಮಾಜವನ್ನು ನಾವು ನೋಡಿದಾಗ ಎಲ್ಲೆಲ್ಲೂ ಧಾರ್ಮಿಕತೆಯ ಹಿರಿಮೆಯೇ ಇದ್ದಂತೆ ಭಾಸವಾಗುತ್ತಿರುತ್ತದೆಯೆನ್ನಿ! ವಾಸ್ತವದಲ್ಲಿ ನಾವು ಇಂದು ನೋಡುತ್ತಿರುವ ಧಾರ್ಮಿಕತೆಯ ಬಹುಪಾಲು ಕಲಾಪಗಳು ಸೋಗಿನ, ತೋರಿಕೆಯ ಸಂಗತಿಗಳೇ ಹೌದು ಎಂಬುದು ನಮೆಲ್ಲರಿಗೂ ಅನುಭವಕ್ಕೆ ಬಂದಿರುತ್ತದೆ ಕೂಡ. ಈ ಅವಾಂತರಗಳ ನಡುವೆ ದಿಟವಾದ ಧಾರ್ಮಿಕತೆಯ ಬೆಳಕನ್ನು ಕಾಣಿಸಬಲ್ಲ ಗುರು ಎಲ್ಲ ಕಾಲಕ್ಕೂ ಬೇಕಾಗುತ್ತದೆ. ನಮ್ಮ ಕಾಲದಲ್ಲಿ ಹೀಗೆ ಕಾಣಿಸಿಕೊಂಡ ಗುರುಗಳಲ್ಲಿ ಒಬ್ಬರು ನಾರಾಯಣ ಗುರುಗಳು. ಸಮಾಜದ ಹಲವು ಅನಿಷ್ಟಗಳಿಗೆ ಧರ್ಮವೇ ಕಾರಣವಾಗಿರುವಾಗ, ಅದೇ ಧರ್ಮ ಅವುಗಳಿಗೆ ಪರಿಹಾರವನ್ನೂ ನೀಡಬಲ್ಲದು – ಎಂಬ ಅಪೂರ್ವ ಕಾಣ್ಕೆಯಿಂದ ಸಮಾಜದ ಕೊಳೆಯನ್ನು ಕಳೆಯಲು ತೊಡಗಿದ ಮಹಾಪುರುಷ ಅವರು. ಬುದ್ಧ ಭಗವಂತರು ಪ್ರತಿಪಾದಿಸಿದ ಕಾರುಣ್ಯಪಥ ಮತ್ತು ಶಂಕರಾಚಾರ್ಯರು ಪ್ರತಿಪಾದಿಸಿದ ಜ್ಞಾನಮಾರ್ಗ – ಈ ಎರಡು ಮಹಾಪ್ರಸ್ಥಾನಗಳ ಸಂಗಮವನ್ನು ಅವರಲ್ಲಿ ನಾವು ಕಾಣುತ್ತೇವೆ.

ನಾರಾಯಣ ಗುರುಗಳು ಕಟ್ಟಿಸುತ್ತಿದ್ದ ದೇವಸ್ಥಾನದ ಬಗ್ಗೆ ಕೆಲವರು 'ಕೆಳಜಾತಿಯವರು ಶಿವ ದೇವಸ್ಥಾನವನ್ನು ಕಟ್ಟಿ ಶಿವನಿಗೆ ಮೈಲಿಗೆ ಉಂಟುಮಾಡಿದರು' ಎಂದು ಆಡಿಕೊಂಡರಂತೆ. ಆಗ ನಾರಾಯಣ ಗುರುಗಳು 'ಮನುಷ್ಯನ ಕೈಗೆ ಸಿಕ್ಕಿ ಪಾಪ ದೇವರಿಗೂ ಮಡಿ–ಮೈಲಿಗೆಗಳು ಅಂಟಿಕೊಂಡವು! ಇರಲಿ, ನಾವು ಮೈಲಿಗೆಯ ಶಿವನನ್ನೇ ಪೂಜಿಸೋಣ; ಅವರು ಮಡಿ ಶಿವನನ್ನು ಪೂಜಿಸಿಕೊಳ್ಳಲಿ' ಎಂದರಂತೆ. ಗುರುಗಳು ಶಿವನ ಪೂಜೆಯನ್ನು ತೊರೆಯಲಿಲ್ಲ ಎಂಬುದು ಗಮನಾರ್ಹ. ❖

ಪತ್ರಕರ್ತ ಕಪ್ಪನ್‌ಗೆ ಜಾಮೀನು

ಒಂದನೇ ಪುಟದಿಂದ

ಆಗ, ಸಿದ್ದಿಕ್ ಪರ ವಕೀಲ ಕಪಿಲ್ ಸಿಬಲ್ ಮಧ್ಯಪ್ರವೇಶಿಸಿದರು. 'ಸಿದ್ದಿಕ್ ಅವರ ಕಾರಿನಲ್ಲಿ ಇದ್ದದ್ದು 'ಜಸ್ಟೀಸ್ ಫಾರ್ ಹಾಥರಸ್ ಗರ್ಲ್' ಎಂಬ ಕರಪತ್ರ ಅಷ್ಟೆ' ಎಂದು ಹೇಳಿದರು.

ಅದನ್ನು ಗಂಭೀರವಾಗಿ ಪರಿಗಣಿಸಿದ ಮುಖ್ಯನ್ಯಾಯಮೂರ್ತಿಯು, 'ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಸಂತ್ರಸ್ತ ಬಾಲಕಿಗೆ ನ್ಯಾಯ ಸಿಗಬೇಕು ಮತ್ತು ಅದಕ್ಕಾಗಿ ಎಲ್ಲರೂ ದನಿ ಎತ್ತಬೇಕು ಎಂಬುದನ್ನು ತೋರಿಸಲು ಅವರು ಯತ್ನಿಸಿದ್ದರು. ಇದು ಕಾನೂನಿನ ಕಣ್ಣಿನಲ್ಲಿ ಅಪರಾಧವೇ' ಎಂದು ಪ್ರಶ್ನಿಸಿದರು.

ಪೀಠದಲ್ಲಿದ್ದ ಮತ್ತೊಬ್ಬ ನ್ಯಾಯಮೂರ್ತಿ ರವೀಂದ್ರ ಭಟ್ ಸಹ ಇದಕ್ಕೆ ದನಿಗೂಡಿಸಿದರು. '2012ರಲ್ಲಿ ಇಂಡಿಯಾ ಗೇಟ್ ಬಳಿ ನಡೆದ ಪ್ರತಿಭಟನೆ ಬಗ್ಗೆ ನಿಮಗೆ ಗೊತ್ತಿರಬೇಕು. ಆ ಪ್ರತಿಭಟನೆಯ ಕಾರಣದಿಂದ ಹೊಸ ಕಾನೂನೇ ಜಾರಿಗೆ ಬಂದಿತು. ಎಲ್ಲೋ ಏನೋ ಕೊರತೆ ಇದೆ ಎಂಬುದನ್ನು ಎತ್ತಿ ತೋರಿಸಲು ಇಂತಹ ಪ್ರತಿಭಟನೆಗಳು ಅನಿವಾರ್ಯ' ಎಂದು ಹೇಳಿದರು.

ಸಿದ್ದಿಕ್ ಅವರ ಬಳಿ ಪ್ರಚೋದನಕಾರಿ ಬರಹಗಳು ಇದ್ದವು ಎಂಬುದನ್ನು ತೋರಿಸಲು ನಿಮಗೆ ಸಾಧ್ಯವಾಗಿಲ್ಲ ಎಂದು ಪೀಠವು ಮಹೇಶ್ ಜೇಠ್ಮಲಾನಿ ಅವರಿಗೆ ಹೇಳಿತು. ಸಿದ್ದಿಕ್ ಅವರಿಗೆ ಜಾಮೀನು ಮಂಜೂರು ಮಾಡಿತು.

ಪ್ರಕರಣದ ವಿವರ: 2020ರ ಸೆಪ್ಟೆಂಬರ್‌ನಲ್ಲಿ ಉತ್ತರ ಪ್ರದೇಶದ ಹಾಥರಸ್‌ನಲ್ಲಿ ದಲಿತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿತ್ತು. ಕೃತ್ಯದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಬಾಲಕಿ ಕೆಲವೇ ದಿನಗಳಲ್ಲಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಳು. ಮೃತ ಬಾಲಕಿಯ ಕುಟುಂಬದವರಿಗೆ ಗೊತ್ತಿಲ್ಲದೆಯೇ ಪೊಲೀಸರು ತಡರಾತ್ರಿಯಲ್ಲಿ ರಹಸ್ಯವಾಗಿ, ಶವವನ್ನು ದಹನ ಮಾಡಿದ್ದರು.

ಈ ಪ್ರಕರಣದ ವಿರುದ್ಧ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು.

ಷರತ್ತುಬದ್ಧ ಜಾಮೀನು: ಆರೋಪಿ ಸಿದ್ದಿಕ್ ಅವರನ್ನು ಮೂರು ದಿನಗಳ ಒಳಗೆ ವಿಚಾರಣಾ ನ್ಯಾಯಾಲಯದ ಎದುರು ಹಾಜರು ಮಾಡಬೇಕು. ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಎಂದು ಹೇಳಿದೆ. ಕೆಲವು ಷರತ್ತುಗಳನ್ನೂ ಹಾಕಿದೆ. ದೆಹಲಿಯ ಜಂಗ್‌ಪುರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲೇ ಆರೋಪಿ ಇರಬೇಕು. ವಿಚಾರಣಾ ನ್ಯಾಯಾಲಯದ ಅನುಮತಿ ಪಡೆಯದೆ ಬೇರೆಡೆಗೆ ಹೋಗಬಾರದು. ಸಂಬಂಧಿತ ಪೊಲೀಸ್ ಠಾಣೆಯಲ್ಲಿ ಪ್ರತಿ ಸೋಮವಾರ ಆರೋಪಿ ಸಹಿ ಮಾಡಬೇಕು. ಆರು ವಾರಗಳವರೆಗೆ ಸಿದ್ದಿಕ್ ದೆಹಲಿಯಲ್ಲೇ ಇರಬೇಕು. ಆನಂತರ ಕೇರಳಕ್ಕೆ ತೆರಳಬಹುದು. ಆದರೆ, ಪ್ರತಿ ಸೋಮವಾರ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಬೇಕು ಎಂದು ಸುಪ್ರೀಂ ಕೋರ್ಟ್ ಷರತ್ತು ಹಾಕಿದೆ.

ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ) : ಪ್ರವಾದಿ ಮಹಮ್ಮದ್ ಅವರ ಕುರಿತು ನಿಂದನಾತ್ಮಕ ಹೇಳಿಕೆ ನೀಡಿ ಅಮಾನತುಗೊಂಡಿರುವ ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರ ಬಂಧನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

'ಅನರ್ಹ'ರ ನೇಮಕಕ್ಕೆ ತರಾತುರಿ!

ಒಂದನೇ ಪುಟದಿಂದ

ಆಗ ನ್ಯಾಯಪೀಠವು, ಕಡಿಮೆ ಎತ್ತರದ ವಿಷಯವನ್ನು ಹೊರಗಿಟ್ಟು ಮತ್ತೆ ವೈದ್ಯಕೀಯ ಪರೀಕ್ಷೆ ನಡೆಸಿ 39 ಅಭ್ಯರ್ಥಿಗಳನ್ನು ಇಲಾಖೆಗೆ ಸೇರಿಸಿಕೊಳ್ಳಬಹುದು ಎಂದು ಹೇಳಿತು. ಈ ಬಗ್ಗೆ ಎರಡು ವಾರಗಳಲ್ಲಿ ಪ್ರಮಾಣಪತ್ರ ಸಲ್ಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿತು.

ಅದರ ಬೆನ್ನಲ್ಲೇ, ಸಾರಿಗೆ ಇಲಾಖೆಯ ಕಾರ್ಯದರ್ಶಿ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದು ಅಭ್ಯರ್ಥಿಗಳ ಪರೀಕ್ಷೆಗೆ ವೈದ್ಯಕೀಯ ಮಂಡಳಿ ಸ್ಥಾಪಿಸುವಂತೆ ಕೋರಿದ್ದಾರೆ.

ಮುಂದಿನ ವಾರವೇ ವೈದ್ಯಕೀಯ ಪರೀಕ್ಷೆ ನಡೆಸಿ 39 ಅಭ್ಯರ್ಥಿಗಳ ನೇಮಕ ಮಾಡಿಕೊಳ್ಳಲು ಸಿದ್ಧತೆ ನಡೆದಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ. 'ಈ ಅಭ್ಯರ್ಥಿಗಳಲ್ಲಿ ಮೂವರು ದೃಷ್ಟಿದೋಷ ಹೊಂದಿದವರು. ಮೂವರು ವೈದ್ಯಕೀಯ ಪರೀಕ್ಷೆಗೆ ಗೈರುಹಾಜರಾದವರು. ಉಳಿದ ಅಭ್ಯರ್ಥಿಗಳು ನಿಗದಿಪಡಿಸಿದ ಮಾನದಂಡಕ್ಕಿಂತ ಕಡಿಮೆ ಎತ್ತರ ಹೊಂದಿದವರು' ಎಂದು ಮೂಲಗಳು ತಿಳಿಸಿವೆ.

'ವಿಶೇಷ ಮೇಲ್ಮನವಿ ಅರ್ಜಿ ವಿಚಾರಣೆ ವೇಳೆಗೆ 2019 ರಲ್ಲಿ ಹಾಜರಾಗಿದ್ದ ಸಾರಿಗೆ ಇಲಾಖೆಯ ಆಗಿನ ಪ್ರಧಾನ ಕಾರ್ಯದರ್ಶಿ ಅಂಜುಂ ಪರ್ವೇಜ್, ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ 39 ಅಭ್ಯರ್ಥಿಗಳು ಅನರ್ಹರು ಎಂದು ಪ್ರಮಾಣಪತ್ರ ಸಲ್ಲಿಸಿದ್ದರು. ಆದರೆ, ಇದೀಗ ಸಾರಿಗೆ ಇಲಾಖೆ ಏಕಾಏಕಿ ನಿಲುವು ಬದಲಿಸಿ ಇವರನ್ನು ನೇಮಕ ಮಾಡಿಕೊಳ್ಳಲು ಮುಂದಾಗಿದೆ. ಈ ವಿಚಾರವನ್ನು ಸಚಿವ ಸಂಪುಟದ ಗಮನಕ್ಕೂ ತಂದಿಲ್ಲ. ಸಾರಿಗೆ ಇಲಾಖೆಯ ನಡೆಯೇ ಅನುಮಾನಾಸ್ಪದವಾಗಿದೆ' ಎಂದು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ವೃಂದ ಮತ್ತು ನೇಮಕಾತಿ ನಿಯಮದ ಬಗ್ಗೆ ಸಾರಿಗೆ ಇಲಾಖೆಯ ಅಭ್ಯರ್ಥಿಗಳು ಸುಪ್ರೀಂ ಕೋರ್ಟ್‌ಗೆ ತಪ್ಪು ಮಾಹಿತಿ ನೀಡಿದ್ದಾರೆ. ಸುಪ್ರೀಂ ಕೋರ್ಟ್ ಸೂಚಿಸಿದ್ದರೂ 11 ಅರ್ಹ ಅಭ್ಯರ್ಥಿಗಳ ಬಗ್ಗೆ ಚಕಾರವೇ ಎತ್ತದೆ ಅನರ್ಹರನ್ನು ನೇಮಕ ಮಾಡಿಕೊಳ್ಳಲು ಮುಂದಾಗಿದ್ದಾರೆ. ಇದರ ಹಿಂದೆ ಹಗರಣ ನಡೆದಿರುವ ಅನುಮಾನ ಇದೆ. ಇದರ ಬಗ್ಗೆ ಕರ್ನಾಟಕ ಸರ್ಕಾರ ಸಮಗ್ರ ತನಿಖೆ ನಡೆಸಬೇಕು' ಎಂದು ಹಲವು ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್.ವಿ.ಪ್ರಸಾದ್ ಅವರಿಗೆ ಎರಡು ಸಲ ಕರೆ ಮಾಡಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ. ನೇಮಕಾತಿ ಪ್ರಕ್ರಿಯೆ ಬಗ್ಗೆ ವಾಟ್ಸ್ ಆ್ಯಪ್ ಮೂಲಕ ಕಳುಹಿಸಿದ ಪ್ರಶ್ನೆಗಳನ್ನು ನೋಡಿದ ಅವರು ಪ್ರತಿಕ್ರಿಯಿಸಲಿಲ್ಲ.

ಪ್ರಕರಣದ ಹಿನ್ನೆಲೆ: 245 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು 2006ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಬಳಿಕ ಹುದ್ದೆಗಳ ಸಂಖ್ಯೆಯನ್ನು 145ಕ್ಕೆ ಇಳಿಸಲಾಗಿತ್ತು. ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಪರೀಕ್ಷೆ ನಡೆಸಿ 145 ಅಭ್ಯರ್ಥಿಗಳ ಪಟ್ಟಿಯನ್ನು 2008ರಲ್ಲಿ ಪ್ರಕಟಿಸಿತ್ತು. ಬಳಿಕ ಈ ಅಭ್ಯರ್ಥಿಗಳಿಗೆ ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಲಾಗಿತ್ತು. 39 ಅಭ್ಯರ್ಥಿಗಳು ಅನರ್ಹರು ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು 2008ರ ಸೆಪ್ಟೆಂಬರ್ 12ರಂದು ವರದಿ ನೀಡಿದ್ದರು.

ನೇಮಕಾತಿ ಪ್ರಕ್ರಿಯೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಕೆಲವು ಅಭ್ಯರ್ಥಿಗಳು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ (ಕೆಎಟಿ) ಮೆಟ್ಟಿಲೇರಿದ್ದರು. ಈ ನೇಮಕಾತಿ ಪ್ರಕ್ರಿಯೆಯನ್ನು ಕೆಎಟಿ ರದ್ದುಪಡಿಸಿತ್ತು. ಈ ಆದೇಶವನ್ನು ಹೈಕೋರ್ಟ್ ಸಹ ಎತ್ತಿ ಹಿಡಿದಿತ್ತು. ಬಳಿಕ ಕೆಲವು ಅಭ್ಯರ್ಥಿಗಳು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾದ 105 ಅಭ್ಯರ್ಥಿಗಳನ್ನು ಷರತ್ತುಬದ್ಧವಾಗಿ ನೇಮಕ ಮಾಡಿಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶ ಹೊರಡಿಸಲಾಗಿತ್ತು. ಬಳಿಕ ಅವರನ್ನು ನೇಮಕ ಮಾಡಿಕೊಳ್ಳಲಾಗಿತ್ತು.

ಇದು ಕೃಷ್ಣ 'ಪರಮಾತ್ಮ'ನಾಟ!

ನಾವು ನೋಡಿದ ಸಿನಿಮಾ

ಲಕ್ಕಿಮ್ಯಾನ್ (ಕನ್ನಡ)

- ನಿರ್ಮಾಣ: ಪಿ.ಆರ್. ಮೀನಾಕ್ಷಿ ಸುಂದರಂ, ಆರ್. ಸುಂದರ ಕಾಮರಾಜ್
- ನಿರ್ದೇಶನ: ಎಸ್. ನಾಗೇಂದ್ರ ಪ್ರಸಾದ್
- ತಾರಾಗಣ: ಪುನೀತ್ ರಾಜ್‌ಕುಮಾರ್, ಡಾರ್ಲಿಂಗ್ ಕೃಷ್ಣ, ಸಂಗೀತಾ ಶೃಂಗೇರಿ, ರೋಶಿನಿ ಪ್ರಕಾಶ್, ನಾಗಭೂಷಣ್, ರಂಗಾಯಣ ರಘು, ಸಾಧು ಕೋಕಿಲ, ಸುಂದರ್ ರಾಜ್

ರಿಮೇಕ್ ಸಿನಿಮಾಗಳು ಒಂದು ರೀತಿ ಈಗಾಗಲೇ ನಡೆದ ಲೈವ್ ಕ್ರಿಕೆಟ್ ಪಂದ್ಯದ ಹೈಲೈಟ್ಸ್‌ನಂತೆ. ಮುಂದೇನಾಗುತ್ತದೆ? ಫಲಿತಾಂಶವೇನು? ಎನ್ನುವುದು ವೀಕ್ಷಕನಿಗೆ ತಿಳಿದಿರುತ್ತದೆ. ಆದರೆ ಕೆಲವೊಮ್ಮೆ ಲೈವ್‌ನಲ್ಲಿ ನೋಡಿದ ಪಂದ್ಯಕ್ಕಿಂತಲೂ ಹೈಲೈಟ್ಸ್ ಹೆಚ್ಚು ಖುಷಿ ಕೊಡುತ್ತದೆ. 'ಲಕ್ಕಿಮ್ಯಾನ್' ಸಿನಿಮಾವೂ ಇದೇ ರೀತಿ. ತನ್ನೊಳಗಿನ ಪಾತ್ರಗಳು, ಅವುಗಳ ನಟನಾ ಸಾಮರ್ಥ್ಯ ಹಾಗೂ ಅದೆಲ್ಲವುದಕ್ಕಿಂತ ಪ್ರಮುಖವಾಗಿ ಪುನೀತ್ ರಾಜ್‌ಕುಮಾರ್ ಅವರ ಇರುವಿಕೆಯಿಂದ ಈ ಚಿತ್ರವು ರಿಮೇಕ್ ಪರಿಧಿಯಿಂದ ಕೊಂಚ ಹೊರಕ್ಕೆ ಹೆಜ್ಜೆ ಇಡುತ್ತದೆ. ನಗಿಸುತ್ತಾ ಸಾಗುವ ಈ ಸಿನಿಮಾ ಅಂತ್ಯದಲ್ಲಿ ನಿಶ್ಯಬ್ದವನ್ನು ಉಳಿಸುವಾಗ, 'ಪರಮಾತ್ಮ' ಮತ್ತೆ ಮತ್ತೆ ನೆನಪಾಗುತ್ತಾನೆ, ಕಾಡುತ್ತಾನೆ.

ಎಸ್. ನಾಗೇಂದ್ರ ಪ್ರಸಾದ್ ನಿರ್ದೇಶನದ 'ಲಕ್ಕಿಮ್ಯಾನ್', ತಮಿಳಿನ 'ಓ ಮೈ ಕಡವುಳೆ' ಸಿನಿಮಾದ ರಿಮೇಕ್. ಪ್ರತಿ ದೃಶ್ಯ ಹಾಗೂ ಸಂಭಾಷಣೆ ಮೂಲ ಸಿನಿಮಾದಂತೆಯೇ ಇದೆ. ಆದರೆ, ಚಿತ್ರಕಥೆಗೆ ಜೀವ ತುಂಬುವ ಕೆಲಸವನ್ನು ಇಲ್ಲಿನ ಪಾತ್ರಗಳು ನಿರ್ವಹಿಸಿದ ರೀತಿ ಉಲ್ಲೇಖಾರ್ಹ. ಭೌತಿಕವಾಗಿ ನಮ್ಮ ನಡುವೆ ಇಲ್ಲದ 'ಪರಮಾತ್ಮ' ಇಲ್ಲಿ 'ಪರಮಾತ್ಮ'ನಾಗಿ ವಿಶೇಷ ಪಾತ್ರದಲ್ಲಿ ತೆರೆತುಂಬಿಕೊಂಡಿರುವುದು ಕಾಕತಾಳೀಯ.

ಕಥೆ ಹೀಗಿದೆ. ಅರ್ಜುನ್ ನಾಗಪ್ಪ (ಡಾರ್ಲಿಂಗ್ ಕೃಷ್ಣ), ಅನು ಆಂಥೋನಿ ದೋಣಿಯಪ್ಪ(ಸಂಗೀತಾ ಶೃಂಗೇರಿ) ಹಾಗೂ ಶೆಟ್ಟಿ (ನಾಗಭೂಷಣ್) ಬಾಲ್ಯ ಸ್ನೇಹಿತರು. ಕಾಲೇಜು ಶಿಕ್ಷಣದ ಬಳಿಕ ಅರ್ಜುನ್‌ನನ್ನೇ ಮದುವೆಯಾಗುವ ಅನುವಿನ ಇಚ್ಛೆಗೆ ಅರ್ಜುನ್ ಸಮ್ಮತಿಸುತ್ತಾನೆ. ಆದರೆ ಬಾಲ್ಯ ಸ್ನೇಹಿತೆಯನ್ನೇ ಮದುವೆಯಾಗಿದ್ದು, ದಾಂಪತ್ಯ ಜೀವನದಲ್ಲಿ ಹಲವು ಸಮಸ್ಯೆಗಳಿಗೆ ಕಾರಣವಾಗುತ್ತದೆ. ವಿಚ್ಛೇದನ ನೀಡುವ ಹಂತಕ್ಕೂ ಇದು ತಲುಪುತ್ತದೆ. ಕೌಂಟುಂಬಿಕ ನ್ಯಾಯಾಲಯದ ಮೆಟ್ಟಿಲೇರುವ ಅರ್ಜುನ್ ಜೀವನದಲ್ಲಿ 'ಪರಮಾತ್ಮ'ನ ಪ್ರವೇಶವಾಗುತ್ತದೆ. 'ಬಾಸ್' ಎಂಬ ಪಾತ್ರದಲ್ಲಿ ಪುನೀತ್ ರಾಜ್‌ಕುಮಾರ್ ಹಾಗೂ ಪರಮಾತ್ಮನ ಸಹಾಯಕನ ಪಾತ್ರದಲ್ಲಿ ಸಾಧು ಕೋಕಿಲ(ಬೇಬಿ) ಪ್ರವೇಶಿಸಿದ ಬಳಿಕ ನಡೆಯುವ ಘಟನೆಗಳೇ ಚಿತ್ರದ ಕಥಾಹಂದರ.

ದೇವರಿಂದ ಜೀವನದ ಎರಡನೇ ಅವಕಾಶ ಪಡೆದ ಅರ್ಜುನ್, ಅನುವಿಗೆ ವಿಚ್ಛೇದನ ನೀಡುತ್ತಾನೆಯೇ ಎನ್ನುವುದೇ ಮುಂದಿನ ಕಥೆ.

ಸ್ನೇಹ, ಪ್ರೀತಿಯ ಪಾಠ ಮಾಡುತ್ತಾ ಸಾಗುವ ಚಿತ್ರದ ಮೊದಲಾರ್ಧ ಭರ್ಜರಿ ಮನರಂಜನೆ, ನಗುವಿನ ರಸದೌತಣ. ಪುನೀತ್ ಅವರ ಪ್ರವೇಶಕ್ಕೆ ಮಲ್ಟಿಪ್ಲೆಕ್ಸ್‌ಗಳಲ್ಲೂ ಏಕಪರದೆ ಚಿತ್ರಮಂದಿರದ ವಾತಾವರಣ. ಪುನೀತ್ ಅವರು ಇಲ್ಲಿ ಹೀರೊ ಆಗದೆ ತಾವು ಇರುವಂತೆಯೇ ಸರಳವಾಗಿ ಕಾಣಿಸಿಕೊಂಡಿದ್ದಾರೆ. ನಾಯಕನನ್ನು ತಮ್ಮ ಮಾತಿನಲ್ಲೇ ಕಾಲೆಳೆಯುತ್ತಾ, ಕಿವಿಮಾತು ಹೇಳುತ್ತಾ ಎಲ್ಲ ಧರ್ಮದ 'ಪರಮಾತ್ಮ'ನಾಗಿ ಕಾಣಿಸಿಕೊಳ್ಳುತ್ತಾರೆ. ಪುನೀತ್ ಅವರಿಗೆ ಈ ಚಿತ್ರ ಒಂದು ಅತ್ಯುತ್ತಮ ಅರ್ಪಣೆ. ಸಾಧುಕೋಕಿಲ ಅವರು ತಮ್ಮ ಹಾವಭಾವ, ಸಂಭಾಷಣೆ ಮುಖಾಂತರ ಪ್ರೇಕ್ಷಕರನ್ನು ನಗಿಸುವ ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು, ಯಶಸ್ಸು ಸಾಧಿಸುತ್ತಾರೆ.

ಡಾರ್ಲಿಂಗ್ ಕೃಷ್ಣ ಇಲ್ಲಿ ಹೆಚ್ಚು ಅಂಕಗಿಟ್ಟಿಸುತ್ತಾರೆ. ಅವರ ಪ್ರಬುದ್ಧ ನಟನೆಯನ್ನು ಇಲ್ಲಿ ಕಾಣಬಹುದು. ಲಿಫ್ಟ್ ಒಳಗೆ ತನ್ನೊಳಗಿನ ಹತಾಶೆ, ನೋವನ್ನು ಹೊರಹಾಕುವ ದೃಶ್ಯದಲ್ಲಿ ಅವರದ್ದು ಪರಕಾಯ ಪ್ರವೇಶ. ಸ್ನೇಹಿತನಾಗಿ ನಾಗಭೂಷಣ್ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಸಂಗೀತಾ ಶೃಂಗೇರಿ ಅವರಿಗೆ ಇಲ್ಲಿ ನಟನೆಗೆ ಹೆಚ್ಚಿನ ಅವಕಾಶ ಸಿಕ್ಕಿದ್ದು, ಇದನ್ನು ಸದ್ಬಳಕೆ ಮಾಡಿಕೊಂಡು ಪ್ರೇಕ್ಷಕನಿಗೆ ಹಿಡಿಸುತ್ತಾರೆ.ರೋಶಿನಿ ಪ್ರಕಾಶ್ ಅವರದ್ದು ನೈಜ ನಟನೆ.

ಕೊನೆಯಲ್ಲಿನ 'ಬಾರೋ ರಾಜ' ಹಾಡು, ಅದರಲ್ಲಿನ ಪುನೀತ್ ಹಾಗೂ ಪ್ರಭುದೇವ ಅವರ ಡ್ಯಾನ್ಸ್ ಕೇಕ್ ಮೇಲಿನ ಚೆರಿಯಂತೆ. ಎಂಡ್ ಕ್ರೆಡಿಟ್ಸ್ ವೇಳೆ ಪುನೀತ್ ಅವರ ಜೊತೆಗಿನ ಚಿತ್ರೀಕರಣದ ತುಣುಕುಗಳನ್ನು ನೋಡುತ್ತಾ, ಕಣ್ತುಂಬಿಕೊಳ್ಳುತ್ತಾ ಚಿತ್ರಮಂದಿರ ಏಕಾಏಕಿ ನಿಶ್ಯಬ್ಧವಾಗುತ್ತದೆ.

ಅಭಿಲಾಷ್ ಪಿ.ಎಸ್.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ನವೀನ್ ಡಿ. ಪಡೀಲ್
ರಂಗಭೂಮಿ, ಚಲನಚಿತ್ರ, ಕಿರುತೆರೆ ನಟ
ಸೆಲೆಬ್ರಿಟಿ LIVE
ಕುಸೆಲ್ದರಸನ ಕುಶಲೋಪರಿ
ಬೆಳಿಗ್ಗೆ 11 ಗಂಟೆಗೆ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
ಖಾದಿ ಭವನ, ನಂ:10, ಜಸ್ಮಾಭವನ ರಸ್ತೆ, ಬೆಂಗಳೂರು–560 052.
ದೂರವಾಣಿ:080–2226 6852, ಇಮೇಲ್: kviboardbangkar@gmail.com
ಸಂ.ಖಾಮಂ/ಮಾರುಕಟ್ಟೆ–1/97(2)/2022–23 ದಿನಾಂಕ:09.09.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಹೊರಗುತ್ತಿಗೆ ಆಧಾರದಲ್ಲಿ ವಿವಿಧ ಸೇವೆಗಳನ್ನು ಒದಗಿಸಲು ಅರ್ಹ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಸಲ್ಲಿಸಲು ಅರ್ಹ ಗುತ್ತಿಗೆದಾರರಿಗೆ ಅವಕಾಶ ಕಲ್ಪಿಸಿದೆ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 21.09.2022 ರಂದು 15.00 ಗಂಟೆಯುವರೆಗೆ ಹೆಚ್ಚಿನ ವಿವರಗಳಿಗೆ http://eproc.karnataka.gov.in ವೀಕ್ಷಿಸಬಹುದು.
ಸಹಿ/– ಟೆಂಡರ್ ಆಹ್ವಾನಿಸುವ ಅಧಿಕಾರಿ
ಖಾದಿ ಮಂಡಳಿ, ಬೆಂಗಳೂರು.

ದಿ ಜಯನಗರ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್
ನಂ.902, 8ನೇ ಮುಖ್ಯ ರಸ್ತೆ 2ನೇ ಬಡಾವಣೆ, ಜಯನಗರ, ಬೆಂಗಳೂರು–560 011
ದೂರವಾಣಿ: 080–26568074
72ನೇ ವಾರ್ಷಿಕ ಸರ್ವಸದಸ್ಯರ ಸಭೆ
2021–22ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರ
ಮೇಲ್ಕಂಡ ಸಂಘದ 2021–22 ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 11–09–2022ನೇ ಭಾನುವಾರ ಬೆಳಿಗ್ಗೆ 10:00 ಘಂಟೆಗೆ ಸಂಘದ ಅಧ್ಯಕ್ಷರಾದ "ಸಹಕಾರ ಕೌಸ್ತುಭ" ಶ್ರೀ ಬಿ.ಆರ್. ವಾಸುದೇವ್ (ವಾಸು) ಇವರ ಅಧ್ಯಕ್ಷತೆಯಲ್ಲಿ "ಸಹಕಾರಿ ವಿದ್ಯಾಕೇಂದ್ರ ಶಾಲಾ ಆವರಣ" ನಂ.3, 41ನೇ ಕ್ರಾಸ್, ಈಸ್ಟ್ ಎಂಡ್ "ಬಿ' ಮುಖ್ಯರಸ್ತೆ, ಜಯನಗರ 9ನೇ ಬಡಾವಣೆ, ಬೆಂಗಳೂರು–560 069, ಇಲ್ಲಿ ಸಮಾವೇಶಗೊಳಿಸಲಾಗಿದೆ. ಮಾನ್ಯ ಸದಸ್ಯರು ಮಹಾಸಭೆಗೆ ಸಕಾಲಕ್ಕೆ ಆಗಮಿಸಿ, ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರುತ್ತೇನೆ.
ಸ್ಥಳ: ಬೆಂಗಳೂರು
ದಿನಾಂಕ : 25–08–2022
ಆಡಳಿತ ಮಂಡಳಿ ಪರವಾಗಿ
(ಎಂ. ಶಿವಣ್ಣ)
ಕಾರ್ಯದರ್ಶಿ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
ಖಾದಿ ಭವನ, ನಂ:10, ಜಸ್ಮಾಭವನ ರಸ್ತೆ, ಬೆಂಗಳೂರು–560 052.
ದೂರವಾಣಿ:080–2226 6852, ಇಮೇಲ್: kviboardbangkar@gmail.com
ಸಂ.ಖಾಮಂ/ಮಾರುಕಟ್ಟೆ–1/97(2)/2022–23 ದಿನಾಂಕ:09.09.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಮಂಡಳಿಯ ರಾಜ್ಯಮಟ್ಟದ ಖಾದಿ ಉತ್ಸವ–2022ನ್ನು ವಿಜಯಪುರ ನಗರದಲ್ಲಿ ದಿನಾಂಕ:28.09.2022 ರಿಂದ 12.10.2022ರವರೆಗೆ 15 ದಿನಗಳ ಕಾಲ ಆಯೋಜಿಸುತ್ತಿರುವ ವಸ್ತು ಪ್ರದರ್ಶನಕ್ಕೆ ಅವಶ್ಯಕವಿರುವ ಮಳಿಗೆ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯ ಒದಗಿಸಲು ಕಾಮಗಾರಿಗಳನ್ನು ನಿರ್ವಹಿಸಲು ಆಸಕ್ತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಅಲ್ಪಾವಧಿ ಇ–ಟೆಂಡರ್‌ನ್ನು ಅಹ್ವಾನಿಸಲಾಗಿದೆ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 16.09.2022 ರಂದು 16.00 ಗಂಟೆಯುವರೆಗೆ ಹೆಚ್ಚಿನ ವಿವರಗಳಿಗೆ http://eproc.karnataka.gov.in ವೀಕ್ಷಿಸಬಹುದು.
ಸಹಿ/– ಟೆಂಡರ್ ಆಹ್ವಾನಿಸುವ ಅಧಿಕಾರಿ
ಖಾದಿ ಮಂಡಳಿ, ಬೆಂಗಳೂರು.

ಔಷಧ ನಿಯಂತ್ರಣ ಇಲಾಖೆ
ಪ್ರಧಾನ ವೈಜ್ಞಾನಿಕ ಅಧಿಕಾರಿಯವರ ಕಛೇರಿ, ಔಷಧ ಪರೀಕ್ಷಾ ಪ್ರಯೋಗಾಲಯ, ಅರಮನೆ ರಸ್ತೆ, ಬೆಂಗಳೂರು–560 001. ದೂರವಾಣಿ : 080–22264788/744.
ಸಂಖ್ಯೆ : ಔನಿಇ/ಔಪಪ್ರ/ಟಿ.ಐ.ಎ./ಇ–ಟೆಂಡರ್/DCD-01/2022–23 ದಿನಾಂಕ:08.09.2022
ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿಲಕೋಟೆ ಪದ್ದತಿ)
ಸದಸ್ಯ ಕಾರ್ಯದರ್ಶಿ, ಟೆಂಡರ್ ಆಹ್ವಾನ ಪ್ರಾಧಿಕಾರ, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು ರವರು ಔಷಧ ನಿಯಂತ್ರಣ ಇಲಾಖೆ ಮತ್ತು ಅಧೀನ ಕಛೇರಿಗಳಿಗೆ, ಕಛೇರಿ ಕೆಲಸಗಳ ಉಪಯೋಗಕ್ಕಾಗಿ 31 ಎ.ಸಿ. ವಾಹನಗಳನ್ನು ಚಾಲಕರೊಂದಿಗೆ ಮಾಸಿಕ ಬಾಡಿಗೆ ಆಧಾರದ ಮೇರೆಗೆ ಹೊರಗುತ್ತಿಗೆ ಪಡೆಯಲು ಅರ್ಹ ಏಜೆನ್ಸಿಗಳಿಂದ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಇ–ಟೆಂಡರ್ ಫಾರಂಗಳನ್ನು ವೆಬ್‌ಸೈಟ್ https://eproc.karnataka.gov.in ನಿಂದ ದಿನಾಂಕ: 09.09.2022 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಪ್ರಿ–ಬಿಡ್ ಮೀಟಿಂಗ್ ಅನ್ನು ದಿನಾಂಕ: 16.09.2022ರ ಬೆಳಿಗ್ಗೆ 11.30 ಗಂಟೆಗೆ ಪ್ರಧಾನ ವೈಜ್ಞಾನಿಕ ಅಧಿಕಾರಿಯವರ ಕಛೇರಿ, ಔಷಧ ಪರೀಕ್ಷಾ ಪ್ರಯೋಗಾಲಯ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ನಿಗಧಿಪಡಿಸಲಾಗಿದೆ. ಇ–ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 26.09.2022ರ ಸಂಜೆ 05:30 ಗಂಟೆಯವರೆಗೆ. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 28.09.2022 ರಂದು ಬೆಳಿಗ್ಗೆ 11:30 ಗಂಟೆಗೆ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 30.09.2022 ಆಗಿರುತ್ತದೆ. ಸದರಿ ಟೆಂಡರ್‌ಗಳ ವಿವರಣಾತ್ಮಕ ಮಾಹಿತಿಯನ್ನು ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದಾಗಿದೆ, ಟೆಂಡರ್ ತೆರೆಯುವ ದಿನಾಂಕವು ಸಾರ್ವತ್ರಿಕ ರಜೆಯೆಂದು ಘೋಷಿಸಲ್ಪಟ್ಟರೆ, ಅದರ ಮುಂದಿನ ಅಧಿಕೃತ ಕೆಲಸದ ದಿನದಂದು ಟೆಕ್ನಿಕಲ್ ಬಿಡ್ ತೆರೆಯಲಾಗುವುದು. ಇತರೆ ವಿವರಗಳನ್ನು ಪ್ರಧಾನ ವೈಜ್ಞಾನಿಕ ಅಧಿಕಾರಿರವರ ಕಛೇರಿ, ಔಷಧ ಪರೀಕ್ಷಾ ಪ್ರಯೋಗಾಲಯ, ಅರಮನೆ ರಸ್ತೆ, ಬೆಂಗಳೂರು ಇಲ್ಲಿಂದ ಖುದ್ದಾಗಿ ಪಡೆಯಬಹುದು.
ಸಹಿ/– ಸದಸ್ಯ ಕಾರ್ಯದರ್ಶಿ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.
ವಾಸಾಸಂಇ/ಬೆಂ.ನ./ಜಿಎ/2147/2022–23

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ
ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(34ಇ)/(21ಇ)(22ಇ)(30ಇ)(31ಇ):2022–23:ಜೆಇ–2 ದಿನಾಂಕ:09.09.2022
ಟೆಂಡರ್ ಪ್ರಕಟಣೆ / ಅಲ್ಪಾವಧಿ ಟೆಂಡರ್ ಪ್ರಕಟಣೆ / 2ನೇ ಕರೆ/3ನೇ ಕರೆ/4ನೇ ಕರೆ/ ಸಮಯಾವಧಿ ವಿಸ್ತರಣೆ / (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ–ಪ್ರೊಕ್ಯುರ್‌ಮೆಂಟ್ ಮೂಲಕ ಲೆಕ್ಕ ಶೀರ್ಷಿಕೆ:– '4216-01-700-2-24-386 ನ್ಯಾಯಾಂಗ ಅಧಿಕಾರಿಗಳ ವಸತಿ ಸಮುಚ್ಚಯ'ರಡಿ ಇಂಡೆಂಟ್ ನಂ. 144337 ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 20.09.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಲೆಕ್ಕಶೀರ್ಷಿಕೆ:– ''ಗ್ರಾಮ ಬಂಧು ಸೇತುವೆ'' ಯೋಜನೆಯಡಿ ಇಂಡೆಂಟ್ ನಂ. 155625, 155617, 156569 (ಪ್ಯಾಕೇಜ್), 156548 (ಪ್ಯಾಕೇಜ್), 155618, 155620, 155621, 155624, 155897, 155586, 155561, 155889, 155554, 156572 (ಪ್ಯಾಕೇಜ್), 155896, 156712, 156711 (ಪ್ಯಾಕೇಜ್) ಮತ್ತು ಇಂಡೆಂಟ್ ನಂ. 156121 ಟೆಂಡರ್ ಆಹ್ವಾನಿಸಲಾಗಿರುತ್ತದೆ ಮತ್ತು ಲೆಕ್ಕಶೀರ್ಷಿಕೆ:– 5054–ಜಿಲ್ಲಾ ಮತ್ತು ಇತರೆ ಸುಧಾರಣೆಗಳು ರಡಿ ಇಂಡೆಂಟ್ ನಂ. 153254, 156021, 153255, 153257, 153258, 153259, 153260, 153261, 155403, 155527, 156129 ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹಾಗೂ ಲೆಕ್ಕಶೀರ್ಷಿಕೆ :–5054–ರಾಜ್ಯ ಹೆದ್ದಾರಿ ಸುಧಾರಣೆ ರಸ್ತೆಗಳುರಡಿ ಇಂಡೆಂಟ್ ನಂ. 156152, 156149, 155992, 156147, 156140 ಮತ್ತು ಇಂಡೆಂಟ್ ನಂ : 153440 ಟೆಂಡರ್ ಆಹ್ವಾನಿಸಲಾಗಿದ್ದು, ಈ ಎಲ್ಲಾ ಕಾಮಗಾರಿಗಳಿಗೆ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 22.09.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಲೆಕ್ಕಶೀರ್ಷಿಕೆ:– 5054–ಜಿಲ್ಲಾ ಮತ್ತು ಇತರೆ ಸುಧಾರಣೆಗಳು ರಡಿ ಇಂಡೆಂಟ್ ನಂ.153665, 155289, 155395 2ನೇ ಕರೆಯಾಗಿ ಮತ್ತು ಇಂಡೆಂಟ್ ನಂ. 153479, 153381, 153491 ಈ ಕಾಮಗಾರಿಗಳಿಗೆ 3ನೇ ಕರೆಯಾಗಿ ಹಾಗೂ ಇಂಡೆಂಟ್ ನಂ. 152837, 152847, 153411, 153472, 153517, 153554, 153568, 153636, 153651, 153753, 153467, 153496 ಈ ಕಾಮಗಾರಿಗಳಿಗೆ 4ನೇ ಕರೆಯಾಗಿ, ಲೆಕ್ಕಶೀರ್ಷಿಕೆ :–''ಗ್ರಾಮ ಬಂಧು ಸೇತುವೆ'' ಯೋಜನೆಯಡಿ ಇಂಡೆಂಟ್ ನಂ. 154970, 154997, 155074, 151850, ಈ ಕಾಮಗಾರಿಗಳಿಗೆ 2ನೇ ಕರೆಯಾಗಿ, ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳಿಗೆ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 19.09.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಲೆಕ್ಕಶೀರ್ಷಿಕೆ :–5054–ಪ್ರಮುಖ ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳು ರಡಿ ಇಂಡೆಂಟ್ ನಂ. 155669 ಈ ಕಾಮಗಾರಿಗೆ ಸಮಯಾವಧಿ ವಿಸ್ತರಣೆ ಮಾಡಲಾಗಿದ್ದು, ಕಾಮಗಾರಿಗೆ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 22.09.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಕಾಮಗಾರಿವಾರು ಮೀಸಲಾತಿ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಿಳಿದುಕೊಳ್ಳುವುದು. ಈ ಕಾಮಗಾರಿಗಳ ಗರಿಷ್ಠ ಅಂದಾಜು ಮೊತ್ತ ರೂ. 280.00 ಲಕ್ಷ, ಕನಿಷ್ಠ ಅಂದಾಜು ಮೊತ್ತ ರೂ.10.00 ಲಕ್ಷ ಆಗಿರುತ್ತದೆ.
ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ / ಕರೆ / ತಿದ್ದುಪಡಿ / ಟೆಂಡರು ಮುಂದೂಡಿಕೆ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೋಡಿಕೊಳ್ಳುವುದು. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.inನ್ನು ಸಂಪರ್ಕಿಸಲು ಕೋರಲಾಗಿದೆ.
DIPR / MNG / 571/ MPL / 22-23
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ

ಎರಡು–ಮೂರು ಅಂತಸ್ತುಗಳ ಫ್ಲೈಓವರ್‌ಗಳ ನಿರ್ಮಾಣಕ್ಕೆ ಗಡ್ಕರಿ ಸಲಹೆ

ಸಂಚಾರ ದಟ್ಟಣೆಗೆ 'ಸ್ಕೈಬಸ್' ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ನಗರದ ಸಂಚಾರ ಒತ್ತಡವನ್ನು ಕಡಿಮೆ ಮಾಡಲು 'ಸ್ಕೈಬಸ್' ವ್ಯವಸ್ಥೆಯನ್ನು ನಿರ್ಮಿಸಲು ಆದಷ್ಟು ಬೇಗ ತಾಂತ್ರಿಕ ಅಧ್ಯಯನ ನಡೆಸಿ ವರದಿ ಪಡೆಯುತ್ತೇನೆ' ಎಂದು ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ಬೆಂಗಳೂರಿನ ಸಂಚಾರ ದಟ್ಟಣೆಯನ್ನು ತಿಳಿಗೊಳಿಸಲು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯೊಂದೇ ಪರಿಹಾರ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜತೆ ಈ ಕುರಿತು ಸಮಾಲೋಚನೆ ನಡೆಸಿದ್ದೇನೆ. ಬೆಂಗಳೂರು ನಗರದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ ಅಗತ್ಯವಿದೆ. ಫಿಲಿಪ್ಪೀನ್ಸ್ ಮಾದರಿಯಲ್ಲಿ ಸ್ಕೈಬಸ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬಹುದು. ಈ ವ್ಯವಸ್ಥೆ ಜಾರಿಗೊಳಿಸಲು ಫ್ರಾನ್ಸ್ ಮತ್ತು ಆಸ್ಟ್ರಿಯಾದ ಎರಡು ಕಂಪನಿಗಳಿವೆ. ಇವೆರಡೂ ಸಮರ್ಥ ಕಂಪನಿಗಳೆಂದು ಹೆಸರು ಮಾಡಿವೆ. ಮುಂದಿನ ಮೂರು ತಿಂಗಳಲ್ಲಿ ತಾಂತ್ರಿಕ ವರದಿಯನ್ನು ಪಡೆಯಲು ರಾಜ್ಯ ಸರ್ಕಾರಕ್ಕೆ ನೆರವು ನೀಡುತ್ತೇನೆ' ಎಂದು ಗಡ್ಕರಿ ಹೇಳಿದರು.

'ಸ್ಕೈಬಸ್ ಅಲ್ಲದೇ, ಟ್ರಾಲಿ ಬಸ್‌ಗಳ ಸಾಧ್ಯತೆಯನ್ನೂ ರಾಜ್ಯ ಸರ್ಕಾರ ಪರಿಶೀಲಿಸಬಹುದು. ಮೇಲೆ ಹಾದು ಹೋಗುವ ವಿದ್ಯುತ್ ತಂತಿಗಳಿಂದ ವಿದ್ಯುತ್ ಶಕ್ತಿಯನ್ನು ಬಳಸಿಕೊಂಡು ಬಸ್‌ಗಳು ಸಂಚರಿಸುತ್ತವೆ. ಇವು ಬ್ಯಾಟರಿ ಚಾಲಿತ ಬಸ್‌ಗಳಿಗಿಂತ ಭಿನ್ನ. ಇವುಗಳ ವೆಚ್ಚ ₹50 ಲಕ್ಷದಿಂದ ₹60 ಲಕ್ಷ ಇರುತ್ತವೆ. 88 ಜನ ಕುಳಿತುಕೊಳ್ಳಬಹುದು. ಇವು ಕಡಿಮೆ ವೆಚ್ಚದ ಪರಿಹಾರವಾಗಿವೆ' ಎಂದು ಅವರು ಹೇಳಿದರು.

'ನಗರದ ವ್ಯಾಪ್ತಿಯಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳನ್ನು ಅಗಲಗೊಳಿಸುವುದು ಈಗಿನ ಸಂದರ್ಭದಲ್ಲಿ ಪ್ರಾಯೋಗಿಕವಲ್ಲ. ಭೂಸ್ವಾಧೀನ ವೆಚ್ಚವೇ ಅತ್ಯಧಿಕವಾಗುತ್ತದೆ. ಇದರ ಬದಲಿಗೆ ಎರಡು ಅಥವಾ ಮೂರು ಅಂತಸ್ತಿನ ಫ್ಲೈಓವರ್‌ಗಳನ್ನು ನಿರ್ಮಿಸುವುದರಿಂದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಬಹುದು. ಇದಕ್ಕೆ ನಗರದಲ್ಲಿ ಭೂಸ್ವಾದೀನದ ಅಗತ್ಯ ಬೀಳುವುದಿಲ್ಲ' ಎಂದೂ ಗಡ್ಕರಿ ವಿವರಿಸಿದರು.

ಇನ್ನು ಮುಂದೆ ನಗರದಲ್ಲಿ ಭೂಸ್ವಾಧೀನ ಮಾಡಿಕೊಂಡು ರಸ್ತೆಗಳ ವಿಸ್ತರಣೆ ಅಗಲ ಮಾಡುವುದಿಲ್ಲ. ಅದರ ಬದಲಿಗೆ ಈಗ ಇರುವ ರಸ್ತೆಗಳ ಮೇಲೆಯೇ ಎರಡು ಅಥವಾ ಮೂರು ಅಂತಸ್ತುಗಳ ಫ್ಲೈಓವರ್‌ಗಳನ್ನು ನಿರ್ಮಿಸುತ್ತೇವೆ. ಎರಡು ರಸ್ತೆಗಳ ಫ್ಲೈಓವರ್ ಜತೆಗೆ ಮೆಟ್ರೊಲೈನ್ ಕೂಡ ಒಳಗೊಂಡಿರುತ್ತದೆ. ಇದು ನಗರದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಿಗೆ ಪರಿಹಾರವಾಗುತ್ತದೆಯೇ ಹೊರತು, ರಾಜ್ಯ ಮತ್ತು ನಗರ ರಸ್ತೆಗಳಿಗೆ ಆಗುವುದಿಲ್ಲ ಎಂದೂ ತಿಳಿಸಿದರು.

ಫ್ಲೈಓವರ್ ರಿಪೇರಿ ಶೀಘ್ರ ಪೂರ್ಣ

'ತುಮಕೂರು ರಸ್ತೆ ಫ್ಲೈಓವರ್‌ನಲ್ಲಿ ದುರ್ಬಲವಾದ ಕೇಬಲ್ ಸೇತುವೆಯೊಂದಾಗಿ ಭಾರಿ ವಾಹನಗಳಿಗೆ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗಿದೆ ಎನ್ನುವುದನ್ನು ಒಪ್ಪುತ್ತೇನೆ. ಈ ಫ್ಲೈಓವರ್ ನಿರ್ಮಿಸಿದ ಗುತ್ತಿಗೆದಾರ ರಿಪೇರಿ ಕೆಲಸ ಮಾಡುವ ಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೇರೊಬ್ಬ ಗುತ್ತಿಗೆದಾರನಿಗೆ ₹15 ಲಕ್ಷ ಮೊತ್ತದ ಗುತ್ತಿಗೆಯನ್ನು ನೀಡಿದೆ. ಈ ಕಾಮಗಾರಿ ಶೀಘ್ರವೇ ಪೂರ್ಣಗೊಳ್ಳಲಿದೆ' ಎಂದು ಕೇಂದ್ರ ಸಚಿವ ಗಡ್ಕರಿ ತಿಳಿಸಿದರು.

ಅಕ್ರಮ: ಸಹ ಶಿಕ್ಷಕರು ಸೆ.14ರವರೆಗೆ ಕಸ್ಟಡಿಗೆ

ಬೆಂಗಳೂರು: ಪ್ರೌಢಶಾಲೆಗಳ ಗ್ರೇಡ್–2 ಸಹಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಸಂಬಂಧ ಬಂಧಿಸಲಾಗಿರುವ 12 ಸಹ ಶಿಕ್ಷಕರನ್ನು ಹೆಚ್ಚಿನ ವಿಚಾರಣೆಗಾಗಿ ಸೆ. 14ರವರೆಗೆ ಸಿಐಡಿ ಕಸ್ಟಡಿಗೆ ನೀಡಲಾಗಿದೆ.

2014– 15ನೇ ಸಾಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ (ಪ್ರೌಢ) ಅವರು ವಿಧಾನಸೌಧ ಠಾಣೆಗೆ ಪ್ರತ್ಯೇಕ ದೂರು ನೀಡಿದ್ದರು. ಅದರನ್ವಯ ಎರಡು ಎಫ್‌ಐಆರ್ ದಾಖಲಾಗಿದ್ದವು. ತನಿಖೆ ಹೊಣೆಯನ್ನು ಸಿಐಡಿಗೆ ವಹಿಸಲಾಗಿದೆ.

ತುಮಕೂರು ಹಾಗೂ ವಿಜಯಪುರದಲ್ಲಿ ಕಾರ್ಯಾಚರಣೆ ನಡೆಸಿದ ಸಿಐಡಿ ಅಧಿಕಾರಿಗಳು, ಅಕ್ರಮವಾಗಿ ನೇಮಕವಾಗಿದ್ದ 12 ಸಹ ಶಿಕ್ಷಕರನ್ನು ಇತ್ತೀಚೆಗಷ್ಟೇ ಬಂಧಿಸಿದ್ದರು. ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ, ಸಿಐಡಿ ಅಧಿಕಾರಿಗಳ ಕೋರಿಕೆಯಂತೆ ಆರೋಪಿಗಳನ್ನು ಕಸ್ಟಡಿಗೆ ನೀಡಿದೆ.

'ದೂರಶಿಕ್ಷಣ ಪದವಿಯೂ ಸಾಂಪ್ರದಾಯಿಕ ಪದವಿಗೆ ಸಮಾನ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾನ್ಯತೆ ಪಡೆದ ಸಂಸ್ಥೆಗಳಿಂದ ದೂರಶಿಕ್ಷಣ ಮತ್ತು ಆನ್‌ಲೈನ್ ಕಲಿಕೆಯ ಮೂಲಕ ಪಡೆದ ಪದವಿಗಳನ್ನು ಸಾಂಪ್ರದಾಯಿಕ ಕ್ರಮದಲ್ಲಿ ಪಡೆದ ಪದವಿಗಳಿಗೆ ಸಮಾನವಾಗಿ ಪರಿಗಣಿಸಲಾಗುವುದು ಎಂದು ಯುಜಿಸಿ ಕಾರ್ಯದರ್ಶಿ ರಜನೀಶ್ ಜೈನ್ ಹೇಳಿದ್ದಾರೆ.

ಉನ್ನತ ಶಿಕ್ಷಣ ಸಂಸ್ಥೆಗಳು ಮುಕ್ತ, ದೂರಶಿಕ್ಷಣ ಅಥವಾ ಆನ್‌ಲೈನ್ ಮೂಲಕ ನೀಡುವ ಸ್ನಾತಕೋತ್ತರ ಡಿಪ್ಲೊಮಾಗಳು ಸಾಂಪ್ರದಾಯಿಕ ಕ್ರಮದಲ್ಲಿ ನೀಡುವ ಪದವಿ, ಸ್ನಾತಕೋತ್ತರ ಡಿಪ್ಲೊಮಾಗಳಿಗೆ ಸಮಾನವಾಗಿರುತ್ತದೆ ಎಂದಿದ್ದಾರೆ.

ಯುಜಿಸಿಯ (ಮುಕ್ತ ಮತ್ತು ದೂರಶಿಕ್ಷಣ ಮತ್ತು ಆನ್‌ಲೈನ್ ಕಾರ್ಯಕ್ರಮಗಳು) ನಿಯಮಾವಳಿ 22ರ ಪ್ರಕಾರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ज्ञान-विज्ञान विमुक्तये

'ಎಸ್‌ಎಲ್‌ಎನ್ ಆಡಳಿತ ಮಂಡಳಿ ನೇಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಟೆ ಲಕ್ಷ್ಮಿ ನರಸಿಂಹ ಸ್ವಾಮಿ ಧರ್ಮಸಂಸ್ಥೆಗೆ (ಎಸ್‌ಎಲ್‌ಎನ್) ಹೊಸ ಆಡಳಿತ ಮಂಡಳಿಯನ್ನು ಸರ್ಕಾರ ಕೂಡಲೇ ನೇಮಿಸಬೇಕು ಎಂದು ಕಾಂಗ್ರೆಸ್ ಮುಖಂಡ ವಿ.ಆರ್. ಸುದರ್ಶನ್ ಒತ್ತಾಯಿಸಿದರು.

ಜನೋಪಕಾರಿ ದೊಡ್ಡಣ್ಣಶೆಟ್ಟಿ ಅವರು ಈ ಸಂಸ್ಥೆ ಸ್ಥಾಪಿಸಿದ್ದು, 1905ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅದಕ್ಕೆ ಚಾಲನೆ ನೀಡಿದ್ದರು. ಅಂದಿನಿಂದ ಬಡ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಂಸ್ಥೆ ಶ್ರಮಿಸುತ್ತಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ, ರವೀಂದ್ರನಾಥ ಟ್ಯಾಗೋರ್ ಕೂಡ ಇಲ್ಲಿ ಸಭೆ ನಡೆಸಿದ್ದರು. ಚಾರಿತ್ರಿಕ ಹಿನ್ನೆಲೆ ಹೊಂದಿರುವ ಈ ಸಂಸ್ಥೆಗೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಆಡಳಿತ ಮಂಡಳಿ ನೇಮಕ ಮಾಡಲಾಗುತ್ತಿದೆ. ಹಿಂದಿನ ಆಡಳಿತ ಮಂಡಳಿಯ ಅವಧಿ 2022ರ ಆಗಸ್ಟ್ 9ಕ್ಕೆ ಪೂರ್ಣಗೊಂಡಿದ್ದು, ಹೊಸ ಮಂಡಳಿ ನೇಮಕ ಆಗಬೇಕಿದೆ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸಂಸ್ಥೆಯ ವ್ಯಾಪ್ತಿಯಲ್ಲಿ ಎಸ್‌ಎಲ್‌ಎನ್ ಪದವಿ ಕಾಲೇಜು, ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆಗಳಿವೆ. ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯದಲ್ಲಿ 150ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು, ಪ್ರತಿ ದಿನದ ಊಟೋಪಚಾರ ಮತ್ತು ದೈನಂದಿನ ಖರ್ಚು ವೆಚ್ಚಗಳಿಗೆ ತೊಂದರೆಯಾಗಿದೆ. ಆದ್ದರಿಂದ ಕೂಡಲೇ ಆಡಳಿತ ಮಂಡಳಿ ನೇಮಕ ಮಾಡಬೇಕು ಎಂದು ಮನವಿ ಮಾಡಿದರು.

ಹೊರಗೆ ಹೋಗುವಾಗ ತಪ್ಪದೇ ಮಾಸ್ಕ್ ಧರಿಸಿ
ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಹಿರಂಗ ಚರ್ಚೆ: ಪೈಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಟಿ ದಿಗ್ಗಜ ಮೋಹನ್‌ದಾಸ್ ಪೈ ಅವರಿಗೆ ಬಹಿರಂಗ ಪತ್ರ ಬರೆದಿರುವ ಬೆಂಗಳೂರು ದಕ್ಷಿಣ ಜಿಲ್ಲೆ ಬಿಜೆಪಿ ಅಧ್ಯಕ್ಷ ಎನ್.ಆರ್. ರಮೇಶ್, 'ಕೆರೆ, ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡಿರುವ ಐಟಿ, ಬಿಟಿ ಕಂಪನಿಗಳ ವಿರುದ್ಧವೇ 'ಸೇವ್ ಬೆಂಗಳೂರು' ಅಭಿಯಾನ ನಡೆಸಬೇಕಿದೆ. ಬೇಕಿದ್ದರೆ ಬಹಿರಂಗ ಚರ್ಚೆಗೆ ಬರಬಹುದು' ಎಂದಿದ್ದಾರೆ.

'ಬೆಂಗಳೂರಿನ ಪ್ರವಾಹ ಪರಿಸ್ಥಿತಿಗೆ ನಿಜವಾದ ಕಾರಣಗಳನ್ನು ತಿಳಿದಿದ್ದರೂ ಜಾಣ ಕುರುಡರಂತೆ ತಮ್ಮ ನೇತೃತ್ವದ ಕಂಪನಿಗಳ ಕರಾಳ ಮುಖಗಳನ್ನು ದುರುದ್ದೇಶಪೂರ್ವಕವಾಗಿ ಮರೆಮಾಚಿದ್ದೀರಿ. ಕೆಂಪೇಗೌಡರಿಂದ ಅತ್ಯಂತ ವೈಜ್ಞಾನಿಕವಾಗಿ ನಿರ್ಮಾಣಗೊಂಡಿರುವ ಬೆಂಗಳೂರು ಮಹಾನಗರಕ್ಕೆ ಜಾಗತಿಕ ಮಟ್ಟದಲ್ಲಿ ಕೆಟ್ಟ ಹೆಸರು ಬರುವಂತಹ ನಡೆ–ನುಡಿಗಳನ್ನು ಪ್ರದರ್ಶಿಸುತ್ತಿರುವ ನಿಮಗೆ 'ವಾಸ್ತವ ಸ್ಥಿತಿ ಮತ್ತು ಇಂದಿನ ಪ್ರವಾಹ ಪರಿಸ್ಥಿತಿಗೆ ನೈಜ ಕಾರಣಗಳನ್ನು ತಿಳಿಸುವ' ಉದ್ದೇಶದಿಂದ ಈ ಬಹಿರಂಗ ಪತ್ರ ಬರೆಯಲಾಗಿದೆ. ತಪ್ಪು ಅಥವಾ ಆಕ್ಷೇಪಣೆ ಇದ್ದಲ್ಲಿ ಬಹಿರಂಗ ಚರ್ಚೆಗೆ ಆಹ್ವಾನಿಸಲಾಗಿದೆ' ಎಂದಿದ್ದಾರೆ.

ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ಮೋಹನ್ ದಾಸ್ ಪೈ ಅವರ ವಿಳಾಸವನ್ನು ಪತ್ರದಲ್ಲಿ ನಮೂದಿಸಿದರುವ ರಮೇಶ್, 'ತಮ್ಮ ನೇತೃತ್ವ ಹೊಂದಿರುವ ಇಸಿಎಲ್‌ಐಎ, ಒಆರ್‌ಆರ್‌ಸಿಎ ಮತ್ತು ಐಟಿಪಿಎಲ್ ಪ್ರದೇಶಗಳಲ್ಲಿ ರಾಜಕಾಲುವೆ ಹಾಗೂ ಕೆರೆಗಳನ್ನು ಒತ್ತುವರಿ ಮಾಡಿಕೊಂಡು ಪ್ರವಾಹದ ಸ್ಥಿತಿಗೆ ಕಾರಣರಾಗಿದ್ದೀರಿ. ಶೇ 50ಕ್ಕೂ ಹೆಚ್ಚು ನಿರ್ಮಿತ ಪ್ರದೇಶಗಳ ಮಾಹಿತಿ ಮರೆಮಾಚಿ ಪ್ರತಿ ವರ್ಷ ಬಿಬಿಎಂಪಿಗೆ ನೂರಾರು ಕೋಟಿ ಆಸ್ತಿ ತೆರಿಗೆ ವಂಚಿಸಲಾಗುತ್ತಿದೆ. ಅಲ್ಲದೆ, ಸಿಎಸ್‌ಆರ್ ನಿಧಿಯಲ್ಲಿ ಶೇ 95ಕ್ಕೂ ಹೆಚ್ಚು ಮೊತ್ತವನ್ನು ವಂಚಿಸುತ್ತಿರುವ ಐಟಿ–ಬಿಟಿ ಕಂಪನಿಗಳ ವಿರುದ್ಧವೇ ನೀವು 'ಸೇವ್ ಬೆಂಗಳೂರು' ಅಭಿಯಾನ ನಡೆಸಬೇಕು' ಎಂದಿದ್ದಾರೆ.

'ಬೆಂಗಳೂರು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘದಡಿ 79 ಟೆಕ್‌ಪಾರ್ಕ್‌ಗಳು, ಎಲೆಕ್ಟ್ರಾನಿಕ್ ಸಿಟಿ ಇಂಡಸ್ಟ್ರಿಸ್ ಸಂಘದಡಿ 250ಕ್ಕೂ ಹೆಚ್ಚು ಐಟಿ–ಬಿಟಿ ಕಂಪನಿಗಳು, ಮಹದೇವಪುರದ ಐಟಿಪಿಎಲ್‌ನಲ್ಲಿ 100ಕ್ಕೂ ಹೆಚ್ಚು ಐಟಿ ಕಂಪನಿಗಳು ತಾವು ನಿರ್ಮಾಣ ಮಾಡಿರುವ ತಮ್ಮ ಸಂಸ್ಥೆಗಳ ಕಟ್ಟಡಗಳಿಗಾಗಿ ರಾಜಕಾಲುವೆ, ಬಫರ್ ಝೋನ್‌ಗಳನ್ನು ಬಹುತೇಕ ಒತ್ತುವರಿ ಮಾಡಿಕೊಂಡಿರುವುದನ್ನು ನೀವು ಮರೆತಂತಿದೆ. ರಾಜಕಾಲುವೆಗಳ ಬೃಹತ್ ಮಳೆನೀರುಗಾಲುವೆ, ದ್ವಿತೀಯ ಹಂತದ ಕಾಲುವೆಗಳ ಅಗಲವನ್ನು ಕಡಿತಗೊಳಿಸಿದ್ದೀರಿ. ಮಾರ್ಗಾಂತರ ಮಾಡಿರುವುದು ನಿಮಗೆ ತಿಳಿದಿದೆ ಎಂದು ಭಾವಿಸಿದ್ದೇನೆ' ಎಂದಿದ್ದಾರೆ.

'ಐಟಿ–ಬಿಟಿ ಪಾರ್ಕ್‌ಗಳ 90.85 ಲಕ್ಷ ಚದರ ಅಡಿ ನಿರ್ಮಿತ ಪ್ರದೇಶದಲ್ಲಿ ಶೇ 25ರಷ್ಟನ್ನು ರಾಜಕಾಲುವೆ ಹಾಗೂ ಕೆರೆಗಳ ಒತ್ತುವರಿ ಮಾಡಿಕೊಂಡೆ ಕಟ್ಟಡ ನಿರ್ಮಿಸಲಾಗಿದೆ. ಆರು ಲಕ್ಷ ಚದರ ಅಡಿ ವಿಸ್ತೀರ್ಣದ ರಾಜಕಾಲುವೆ ಪ್ರದೇಶವನ್ನು 79 ಟೆಕ್ ಪಾರ್ಕ್‌ಗಳು ಮಾಡಿವೆ. ಈ ಬಗ್ಗೆ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಪ್ರಕರಣ ಇರುವುದನ್ನು ನೀವು ಮರೆತಂತಿದೆ' ಎಂದಿದ್ದಾರೆ.

'ಬೇಡಿಕೆ ಈಡೇರದಿದ್ದರೆ ಅನಿರ್ದಿಷ್ಟಾವಧಿ ಮುಷ್ಕರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೇತನ ಹೆಚ್ಚಳ, ಸೇವಾ ಭದ್ರತೆ, ಜೀವ ವಿಮೆ ಸೇರಿ ವಿವಿಧ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕು. ಇಲ್ಲವಾದಲ್ಲಿ ಸೆ.19ರಿಂದ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳಲಾಗುವುದು' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಸರ್ಕಾರಕ್ಕೆ ಎಚ್ಚರಿಸಿದ್ದಾರೆ.

ಗುರುವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಸ್ವಾಮಿ ಮಾತನಾಡಿ, 'ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎನ್. ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿ ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಸರ್ಕಾರ ಯಥಾವತ್ತಾಗಿ ಅನುಷ್ಠಾನ ಮಾಡಬೇಕು. ವಿವಿಧ ಬೇಡಿಕೆಗಳ ಈಡೇರಿಕೆಗೆ ಸಂಬಂಧಿಸಿದಂತೆ ಕಳೆದ ಜು.7ರಂದು 'ಬೆಂಗಳೂರು ಚಲೋ' ನಡೆಸಲಾಗಿತ್ತು.

ಆ ವೇಳೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಕೆಲವೇ ದಿನಗಳಲ್ಲಿ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಈವರೆಗೂ ಬೇಡಿಕೆಗಳು ಈಡೇರದಿದ್ದರಿಂದ ಮತ್ತೆ ಮುಷ್ಕರದ ಹಾದಿ ಹಿಡಿಯಲು ನಿರ್ಧರಿಸಿದ್ದೇವೆ' ಎಂದರು.

'ಶ್ರೀನಿವಾಸಾಚಾರಿ ಅಧ್ಯಕ್ಷತೆಯ ಮಾನವ ಸಂಪನ್ಮೂಲ ಸಮಿತಿ 2020ರಲ್ಲಿಯೇ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಈ ವರದಿಯನ್ನು ಅನುಷ್ಠಾನ ಮಾಡುವಂತೆ ಹಲವು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ಹೋರಾಟ ಮಾಡಲಾಗಿದೆ. ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಸೇವಾ ಭದ್ರತೆ ನೌಕರರಿಗೆ ಇಲ್ಲವಾಗಿದೆ' ಎಂದು ಹೇಳಿದರು.

'ಕಳೆದ ಬಾರಿ ಸ್ವಾತಂತ್ರ್ಯ ಉದ್ಯಾನದಲ್ಲಿ ಮುಷ್ಕರ ನಡೆಸಿದಾಗ 8 ಸಾವಿರಕ್ಕೂ ಅಧಿಕ ನೌಕರರು ಪಾಲ್ಗೊಂಡಿದ್ದರು. ಈ ಬಾರಿ 30 ಸಾವಿರಕ್ಕೂ ಅಧಿಕ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ಈಜಿಪುರ ಮೇಲ್ಸೇತುವೆ: ಅವಶೇಷ ತೆರವಿಗೆ ಗಡುವು

ಬೆಂಗಳೂರು: ದ್ವಿಚಕ್ರ ವಾಹನ ಸವಾರರು, ಆಟೊಗಳ ಸುಗಮ ಸಂಚಾರಕ್ಕೆ ಅಡ್ಡಿಪಡಿಸುತ್ತಿರುವ ಈಜಿಪುರ ಮೇಲ್ಸೇತುವೆ ಕಾಮಗಾರಿಯ ಅವಶೇಷಗಳನ್ನು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಶುಕ್ರವಾರ ಪರಿಶೀಲನೆ ನಡೆಸಿದರು. ಮೂರು ದಿನಗಳ ಒಳಗೆ ತೆರವುಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಗಡುವು ನೀಡಿದರು.

ಬಿಬಿಎಂಪಿಯ ಹಾಗೂ ಗುತ್ತಿಗೆದಾರ ಕಂಪನಿ ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್‌ನ ನಿರ್ಲಕ್ಷ್ಯದಿಂದ ಕಾಮಗಾರಿ ಇನ್ನೂ ಅಪೂರ್ಣವಾಗಿದ್ದು, ಕೋರಮಂಗಲದ 100 ಅಡಿ ರಸ್ತೆ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಾಹನ ಸಂಚಾರಕ್ಕೆ ಎಡೆಮಾಡಿಕೊಟ್ಟು ತೊಂದರೆಯನ್ನುಂಟು ಮಾಡಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿಯೇ ನಿರ್ಮಾಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಬೇಕೆಂದು ತೇಜಸ್ವಿ ಸೂರ್ಯ ಒತ್ತಾಯಿಸಿದ್ದರು.

ಕೋರಮಂಗಲದ ಮಹಾರಾಜ ಸಿಗ್ನಲ್ ಬಳಿಯ ಜಲಾವೃತ ಪ್ರದೇಶಗಳಿಗೂ ಭೇಟಿ ನೀಡಿ ಪರಿಶೀಲಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ

ಕುಲಸಚಿವರುಗಳವರ ಕಛೇರಿ, ಜ್ಞಾನಭಾರತಿ, ಬೆಂಗಳೂರು – 56

ನಂ.ಬಿಯು/ಇ–ಆಡಳಿತ/ಟೆಂಡರ್–ಜಾಹಿರಾತು–05/2022–23 ದಿನಾಂಕ: 06.09.2022

ಇ–ಟೆಂಡರ್‌ಗಳಿಗಾಗಿ ಆಹ್ವಾನ ಪ್ರಕಟಣೆ

ಬೆಂಗಳೂರು ವಿಶ್ವವಿದ್ಯಾಲಯವು ಈ ಕೆಳಕಂಡ ಟೆಂಡರ್ ಗಳಿಗಾಗಿ ಇ–ಪ್ರೊಕ್ಯೂರ್ಮೆಂಟ್ ಮುಖಾಂತರ ಬಿಡ್ ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಗೆ ಸಂಬಂಧಿಸಿದ ವಿವರಗಳು ಇ–ಪ್ರೊಕ್ಯೂರ್ಮೆಂಟ್ https://eproc,karnataka.gov.in ವೇದಿಕೆಯಲ್ಲಿ ದೊರಕುತ್ತವೆ. ಬಿಡ್ ಗಳನ್ನು https://eproc,karnataka.gov.in ನಲ್ಲಿ ಆನ್ ಲೈನ್ ಮೂಲಕ ಸಲ್ಲಿಸಬೇಕು. ಟೆಂಡರ್ ನಲ್ಲಿ ಸೂಚಿಸಲಾದ ಸಮಯ ವೇಳಾಪಟ್ಟಿಗೆ ಬದ್ಧರಾಗಿರಲು ಬಿಡ್ ದಾರರಲ್ಲಿ ವಿನಂತಿಸಲಾಗಿದೆ.

ಕ್ರ.ಸಂ	ಟೆಂಡರ್‌ಗಳ ವಿವರ
1	ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಪ್ರಸಾರಾಂಗ ಮಾರಾಟ ಘಟಕದಿಂದ ಹಳೆಯ ಪುಸ್ತಕಗಳ ವಿಲೇವಾರಿ
2	57ನೇ ವಾರ್ಷಿಕ ಘಟಿಕೋತ್ಸವಕ್ಕೆ ಚಿನ್ನದ ಪದಕಗಳ ಪೂರೈಕೆ (CALL-2)

ಸಹಿ/–, ಕುಲಸಚಿವರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ.
Ph No. : 08156-270058
E-mail ID: eerdwsd.ckb2@gmail.com

ಸಂ.:ಕಾಅ/ಗ್ರಾ.ಕು.ನೀ&ನೈವಿ/ಚಿ.ಪುರ/ಟೆಂಡರ್/ಸ.ಇಂ–2/2022–23 ದಿನಾಂಕ: 01.09.2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 21/ 2022–23 ದಿನಾಂಕ : 01.09.2022
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ JJM-2215-SVS ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಶಿಡ್ಲಘಟ್ಟ ತಾಲ್ಲೂಕಿನ 33 ಗ್ರಾಮಗಳಲ್ಲಿ ನಲ್ಲಿ ನೀರು ಸಂಪರ್ಕ ಕಾಮಗಾರಿಗಳನ್ನು ನಿರ್ವಹಿಸಲು ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ www.eproc.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

(1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 15.09.2022ರಂದು ಸಂಜೆ 5.00 ಗಂಟೆವರೆಗೆ.** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 17.09.2022 ಬೆಳಗ್ಗೆ 11.00 ಗಂಟೆಗೆ.** (3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 19.09.2022 ಬೆಳಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ249/ಎಂ.ಸಿ.ಎ/2022–23.

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ರಾಮನಗರ ವಿಭಾಗ, ಸಂಚಾರ ಶಾಖೆ
ಮೊದಲನೇ ಮಹಡಿ, ವಾಹನ ನಿಲ್ದಾಣ ಐಜೂರು ವೃತ್ತ, ರಾಮನಗರ–562159

ಸಂಖ್ಯೆ.ಕರಾಸಾ/ರಾನವಿ/ಸಂ.ವಾ/1558/1559/22–23 ದಿನಾಂಕ: 08.09.2022

ಜಾಹಿರಾತು ಪ್ರಕಟಣೆ ಸಂಖ್ಯೆ : 08&09 ಹಾಗೂ ಇ–ಟೆಂಡರ್ ಪ್ರಕಟಣೆ ಸಂಖ್ಯೆ: 10–2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಆನೇಕಲ್, ಕೋಡಿಹಳ್ಳಿ, ದೊಡ್ಡಮರಳವಾಡಿ, ಕನಕಪುರ, ರಾಮನಗರ ಹಾಗೂ ಮಾಗಡಿ ಬಸ್ ನಿಲ್ದಾಣಗಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಮತ್ತು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಹೋರ್ಡಿಂಗ್ಸ್/ಗ್ಲೋಸೈನ್/ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ **ದಿನಾಂಕ:30.09.2022ರಂದು 15:00 ಗಂಟೆಗೆ** ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು **ದಿನಾಂಕ:08.09.2022 ರಿಂದ ದಿನಾಂಕ:28.09.2022ರ 15:00 ಗಂಟೆಗಳವರೆಗೆ** ಪಡೆಯಬಹುದು. ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಮಾಗಡಿ, ಚನ್ನಪಟ್ಟಣ, ಕೋಡಿಹಳ್ಳಿ, ಆನೇಕಲ್ ಹಾಗೂ ಕೋಡಂಬಳ್ಳಿ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು **ದಿನಾಂಕ:13.10.2022 ರಂದು 11:00 ಗಂಟೆಗೆ** ಇ–ಟೆಂಡರ್ ನಡೆಸಲು / ತೆರೆಯಲು ಸಮಯವನ್ನು ನಿಗಧಿಪಡಿಸಲಾಗಿರುತ್ತದೆ. **ದಿನಾಂಕ: 12.09.2022** ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ದಿನಾಂಕ:11.10.2022 ರಂದು 17:00 ಗಂಟೆಯವರೆಗೆ** ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ:7760990852.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ : ರಾಮನಗರ ವಿಭಾಗ
ವಾಸಾಸಂಇ/ವಾಪ್ರ/ಜಿಎ/2154/2022–23

ಉಪ ನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮಗ್ರ ಶಿಕ್ಷಣ–ಕರ್ನಾಟಕ,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
ಸಂಖ್ಯೆ: ಸ.ಶಿ./ಹೊ.ಗು.ಟೆಂಡರ್/1/2022–23 ದಿನಾಂಕ:05.09.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

2022–23ನೇ ಸಾಲಿನ ಸಮಗ್ರ ಶಿಕ್ಷಣ ಕರ್ನಾಟಕ ಅಡಿಯಲ್ಲಿ ಜಿಲ್ಲಾ/ಬ್ಲಾಕ್ ಕಂಪ್ಯೂಟರ್ ಪ್ರೋಗ್ರಾಮರ್/ಎಂ.ಐ.ಎಸ್.ಕೋ–ಆರ್ಡಿನೇಟರ್/ಡೇಟಾ ಎಂಟ್ರಿ ಆಪರೇಟರ್/ಬ್ಲಾಕ್ ಲೆಕ್ಕ ಸಹಾಯಕರು/ಡಿ ಗ್ರೂಪ್/ನೌಕರರ ಸೇವೆಯನ್ನು ಒದಗಿಸಲು ಅರ್ಹ ಹೊರಗುತ್ತಿಗೆ ಏಜೆನ್ಸಿಯ/ಕಂಪನಿ ಸಂಸ್ಥೆಗಳ ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://www.eproc.karnataka.gov.in ನಲ್ಲಿ ಮಾಹಿತಿಯನ್ನು ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 14.09.2022, ಸಮಯ: 5.00 ಗಂಟೆಗೆ.**

ಸಹಿ/– ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ–ಕರ್ನಾಟಕ, ಚಿಕ್ಕಬಳ್ಳಾಪುರ ಜಿಲ್ಲೆ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ254/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE

NOTICE is hereby given to the public that we are investigating the right, title, interest, benefits, entitlements of whatsoever nature of Sowparnika Projects and Infrastructure Pvt. Ltd, a company registered under the Companies Act, 1956 having its registered office at No. 750, I Main Road, C Block, AECS Layout, Kundalahalli, Bangalore - 560037 and Girijamma, R. Basavaraj, S. R. Shivakumar, Savitha & Bharathi in respect of the properties situated in Karnataka, India which is more particularly described in the Schedule, hereunder written (hereinafter called "**the said Scheduled Properties**"). The investigation is with respect of a proposed funding arrangement by our clients wherein the said Schedule Properties together with the receivables therefrom shall be charged as a security in favour of our clients.

ALL persons including an individual, a Hindu Undivided Family, a company, banks, financial institution(s), non-banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of the said Scheduled Properties or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, gift, trust, inheritance, succession, possession, lease, sub-lease, tenancy, maintenance, easement, license, bequeath, share, assignment, lien, attachment, decree, award or order of any court of law or authority, development rights, right of way, lis pendens, reservation, agreement, FSI consumption, development rights, or any liability or commitment or otherwise or demand or objections of any nature whatsoever are hereby requested to inform the same in writing, supported with the original documents, to the undersigned having their office at 6/12, Gurappa Avenue Primrose Road Bengaluru 560 025 within a period of 14 (Fourteen) days from the date of the publication of this notice, failing which, the claim or claims, if any, of such person or persons shall be considered to have been waived and/or abandoned.

SCHEDULED PROPERTIES

Sl. No	Survey Number and Extent	Bounded on the East by	Bounded on the West by	Bounded on the North by	Bounded on the South by	Ownership Details
	PROJECT - ASHIYANA					
1	All that piece and parcel of the residentially converted land bearing Survey No. 57/1, measuring 1 Acre 10 Guntas and land bearing Survey No. 277, measuring 15 Guntas, totally measuring 1 Acre 25 Guntas, situated at Samethanahalli Village, Anugondanahalli Hobli, Hoskote Taluk converted vide Official Memorandum dated 31.03.2016 bearing No.ALN(H)SR/34/2014-15	Sy. Nos. 36, 48 & 56	Sy. Nos. 57/2 and 36	Sy. No. 36	Remaining land in Sy. No. 57/1	Owners – Girijamma, R. Basavaraj, S.R. Shivakumar, Savitha & Bharathi Developer – Sowparnika Projects and Infrastructure Pvt. Ltd.
2	All that piece and parcel residentially converted land bearing Survey No. 57/2, measuring 2 Acres 30 Guntas, situated at Samethanahalli Village, Anugondanahalli Hobli, Hoskote Taluk, converted vide Official Memorandum dated 24.02.2016 bearing No.ALN(H)SR/35/2014-15	Sy. No. 57/1	Government Road	Sy. No. 36	Sy. No. 57/1	Owner - Sowparnika Projects and Infrastructure Pvt. Ltd.

FoxMandal
S T Prashantha Kumar, Partner
Fox Mandal & Associates LLP
6/12, Gurappa Avenue, Primrose Road
BENGALURU 560 025. Phone : + 91 80 2559 5911
e-mail : prashantha.kumar@foxmandal.in

IN THE HIGH COURT OF KARNATAKA AT BENGALURU
Notice to the Respondents No. 2(c) and 2(d), Vide Order dated 02.09.2022
R.F.A. No.1537/2010
Sri. G. Ganesh & Anr., ...Appellant/s
(By Sriyuths H.T. Narayan .N Jyothsna and B. Hanumantharayappa. Advs, for Appellants)
V/s
K. Gopal, Since dead by Lrs,
G. Shivashankar & Ors., ...Respondent/s
(By Sri R.B. Sadasivappa, Adv., for R-2(b), R-3(d) and R-4)

TO: Respondents
2(c) Smt. Nalini D/o Late Thiruvengadam
2(d) Smt. Malini D/o Late Thiruvengadam
Both are R/at No.14, 60 feet Road, Kurubarahalli Near Annapoorneshwari Rice Corner, J C Nagara, Bangalore.

Appeal from the Judgement & Decree dated 09.09.2009 passed in OS. No.3805/1993 on the file of the XXXVII Addl. City Civil & Sessions Judge, Bengaluru.

Notice is hereby given to you to appear in this court either in person or through Counsel duly instructed or through some one authorised by law, to act for you in the above appeal on **28.09.2022** in case you intend to contest the appeal. if you fail to appear, the same will be dealt with, heard and decided in your absence.

Issued under my hand and the seal of this Court, this the 02nd day of September 2022.

By Order of the Court, Asst. Registrar

Form No. 22
General Notice in respect of Interlocutary Application
IN THE HIGH COURT OF KARNATAKA AT BENGALURU
WRIT APPEAL
NO. 2097 / 2017 (LR)
(SUBSTITUTED SERVICE OF NOTICE TO THE R4(b), R5(b), R5(c) BY WAY OF PAPER PUBLICATION VIDE COURT ORDER DATED 18.08.2022)

Appellants: CHANDRAPPA S/O LATE MARIHONNAIAH, DEAD BY HIS LR'S,
1 SMT. KEMPAMMA, W/O LATE CHANDRAPPA, DEAD BY LR - APPELLANT NO.2 HONNAPPA
2. HONNAPPA, S/O LATE CHANDRAPPA ALSO DIED BY LR'S
2(a) SMT. UMA, W/O LATE HONNAPPA AGED ABOUT 46 YEARS RESIDENT OF SHIVAGANGE VILLAGE & POST PIN - 562 111, SOMPURA HOBLI, NELAMANGALA TALUK, BENGALURU RURAL DISTRICT AND OTHERS.
By Sri. Parashuram R. Hattarakihal & Others, Advocates for Appellants
-V/s-
Respondents: 1 STATE OF KARNATAKA, DEPT. OF REVENUE, VIKASA SOUDHA, BENGALURU-01. REPRESENTED BY ITS SECRETARY AND OTHERS.
(VCO dated 24.04.2019, AGA for R1 to R3 Sri.A.G.Shivanna & H.M.Kishor Kumar, Advocates for R5(g) & R5(h) (VK filed) R4(a), R4(c), R4(d) & R4(e) are Served)
TO: **RESPONDENTS NO.4(b), 5(b) TO 5(c)**
4(b) SMT. CHANDRAMMA, W/O LATE RAJASHEKHAR @ NARASIMHAIAH, AGED ABOUT 48 YEARS, **5(b) SURESH** S/O LATE NARASIMHAIAH, AGED ABOUT 43 YEARS, **5(c) SMT. KUMARI,** D/O LATE NARASIMHAIAH, AGED ABOUT 41 YEARS
RESPONDENTS NO.R4(b), R5(b) & R5(c) ARE RESIDING AT NO.11 SANJEEVA NAYAKA LANE AVENUE ROAD CROSS, BENGALURU - 560 002.

Whereas the above named Appellant has filed Writ Appeal under Section 4 of Karnataka High Court Act, 1961, praying to set aside the order dated 13.04.2016 passed in W.P. No. 58488-58489/2015(LR).

Notice is hereby given to you to appear in this Ccurt in person or through an advocate or through someone duly authorised to act for you in this matter on **20.09.2022** at 10.30 A.M. to show cause why the application should not be allowed. If you fail to appear, the application will be dealt with, heard and decided in your absence.

Issued under my hand and the seal of this court on THURSDAY THE 25TH DAY OF AUGUST 2022.

By order of the Court, Assistant Registrar, High Court of Karnataka, Bangalore.

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/43/2022–23 ದಿನಾಂಕ: 08.09.2022

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ: 03.09.2014ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ.ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಡಿ. ನಾಗರಾಜ್ ಬಿನ್ ಎನ್. ದಾಸಪ್ಪರವರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ: ಭವಿಷ ಪ್ರಾಪರ್ಟೀಸ್ ಪರವಾಗಿ ಪ್ರೊಪ್ರೈಟರ್ ಶ್ರೀ ಎಸ್. ಪ್ರಸಾದ್ ನಾಯ್ಡು ಬಿನ್ ರಂಗಯ್ಯ ನಾಯ್ಡು ಎಸ್.	ಆನೇಕಲ್	ಸರ್ಜಾಪುರ	ಸೋಂಪುರ	86/1	0–10	ಉದ್ಯಾನವನ ಮತ್ತು ಸಾರ್ವಜನಿಕ / ಅರೆ ಸಾರ್ವಜನಿಕ	ವಸತಿ	
2	ಶ್ರೀ ಡಿ. ನಾಗರಾಜ್ ಬಿನ್ ಎನ್. ದಾಸಪ್ಪರವರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ: ಭವಿಷ ಪ್ರಾಪರ್ಟೀಸ್ ಪರವಾಗಿ ಪ್ರೊಪ್ರೈಟರ್ ಶ್ರೀ ಎಸ್. ಪ್ರಸಾದ್ ನಾಯ್ಡು ಬಿನ್ ರಂಗಯ್ಯ ನಾಯ್ಡು ಎಸ್.	ಆನೇಕಲ್	ಸರ್ಜಾಪುರ	ಸೋಂಪುರ	86/2	0–10	ಉದ್ಯಾನವನ ಮತ್ತು ಸಾರ್ವಜನಿಕ / ಅರೆ ಸಾರ್ವಜನಿಕ	ವಸತಿ	
3	ಶ್ರೀ ಬಿ. ಶ್ರೀಧರ್ ರೆಡ್ಡಿ ಬಿನ್ ಬಿ. ಸುರೇಂದ್ರ ರೆಡ್ಡಿರವರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ: ಭವಿಷ ಪ್ರಾಪರ್ಟೀಸ್ ಪರವಾಗಿ ಪ್ರೊಪ್ರೈಟರ್ ಶ್ರೀ ಎಸ್. ಪ್ರಸಾದ್ ನಾಯ್ಡು ಬಿನ್ ರಂಗಯ್ಯ ನಾಯ್ಡು ಎಸ್.	ಆನೇಕಲ್	ಸರ್ಜಾಪುರ	ಸೋಂಪುರ	87/2	0–07.08	ಉದ್ಯಾನವನ ಮತ್ತು ಸಾರ್ವಜನಿಕ / ಅರೆ ಸಾರ್ವಜನಿಕ	ವಸತಿ	

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
ವಾಸಾಸಂಇ/ವಾಪ್ರ/ಎಲ್‌ಸಿ/2141/2022–23

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿ ನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಪಿಎ/ಟಿಪಿ/ಭೂಉಬ/27/2022–23/1196 ದಿನಾಂಕ: 08.09.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ.ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಆನಂದರೆಡ್ಡಿ ಎಂ.ಜಿ. ಬಿನ್ ಎಂ. ಗಂಗಿರೆಡ್ಡಿ	ದೇವನಹಳ್ಳಿ	ಕಸಬಾ	ದಾಸರಹಳ್ಳಿ	65/3	1–01	ವ್ಯವಸಾಯ	ವಸತಿ

ಷರಾ: ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವಾಸಾಸಂಇ/ವಾಪ್ರ/ಜಿಎ/2167/2022–23

ಕೋವಿಡ್: ಸ್ಥಗಿತಗೊಂಡಿದ್ದ ಯೋಜನೆಗೆ ಮರು ಚಾಲನೆ ● ದಂತ ಪಂಕ್ತಿಗೆ ಹೆಚ್ಚಿದ ಬೇಡಿಕೆ

ಹಿರಿಯರಿಗೆ ಮತ್ತೆ ಸಿಗಲಿದೆ 'ದಂತ ಭಾಗ್ಯ'

● ವರುಣ ಹೆಗಡೆ

ಬೆಂಗಳೂರು: ಕೋವಿಡ್ ಕಾಣಿಸಿಕೊಂಡ ಬಳಿಕ ಸ್ಥಗಿತಗೊಂಡಿದ್ದ 'ದಂತ ಭಾಗ್ಯ' ಯೋಜನೆಯನ್ನು ಆರೋಗ್ಯ ಇಲಾಖೆ ಮತ್ತೆ ಪ್ರಾರಂಭಿಸಿದೆ. ಬಾಯಿ ಚಿಕಿತ್ಸೆಗೆ ವಿಧಿಸಿದ್ದ ನಿರ್ಬಂಧಗಳು ತೆರವುಗೊಂಡಿದ್ದು, ದಂತ ಪಂಕ್ತಿಗೆ ಬೇಡಿಕೆ ಹೆಚ್ಚಾಗಿದೆ.

ಈ ವರ್ಷ ನಾಲ್ಕು ತಿಂಗಳ (ಏಪ್ರಿಲ್–ಜುಲೈ) ಅವಧಿಯಲ್ಲಿ 945 ಮಂದಿಗೆ ದಂತ ಪಂಕ್ತಿಗಳನ್ನು ಅಳವಡಿಕೆ ಮಾಡಲಾಗಿದೆ.

ಬಿಪಿಎಲ್ ಕುಟುಂಬಗಳ 45 ವರ್ಷಗಳು ಮೇಲ್ಪಟ್ಟವರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಹಲ್ಲುಗಳು ಇಲ್ಲದವರಿಗೆ ಯೋಜನೆಯಡಿ ಉಚಿತವಾಗಿ ದಂತ ಪಂಕ್ತಿಗಳನ್ನು ವಿತರಿಸಲಾಗುತ್ತದೆ. 2020ರ ಮಾರ್ಚ್ ತಿಂಗಳಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ದಂತ ಚಿಕಿತ್ಸೆಗಳಿಗೆ ನಿರ್ಬಂಧ ಹೇರಲಾಗಿತ್ತು. ಎರಡು ಹಾಗೂ ಮೂರನೇ ಅಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿದ್ದರಿಂದ ದಂತ ಚಿಕಿತ್ಸೆ ಮುಂದೂಡುವಂತೆ ಆಸ್ಪತ್ರೆಗಳಿಗೆ ಸರ್ಕಾರ ಸೂಚಿಸಿತ್ತು.



> ಕೋವಿಡ್ ಕಾರಣ ದಂತ ಚಿಕಿತ್ಸಾ ಕೇಂದ್ರ ಸ್ಥಗಿತಗೊಂಡಿದ್ದರಿಂದ ದಂತ ಪಂಕ್ತಿ ಅಳವಡಿಕೆ ನಡೆದಿರಲಿಲ್ಲ. ಈಗ ದಂತ ಪಂಕ್ತಿ ಅಳವಡಿಸಲಾಗುತ್ತಿದೆ.
>
> **ಡಾ. ಲೋಕೇಶ್ ಪಿ.,** ಆರೋಗ್ಯ ಇಲಾಖೆ ಉಪನಿರ್ದೇಶಕ (ಬಾಯಿ ಆರೋಗ್ಯ)

ಕೋವಿಡ್ ಪ್ರಕರಣಗಳು ಕಳೆದ ಏಪ್ರಿಲ್ ಬಳಿಕ ಇಳಿಕೆ ಕಂಡಿರುವುದರಿಂದ ದಂತ ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ. ಯೋಜನೆಯ ಫಲಾನುಭವಿಗಳನ್ನು ಸ್ಥಳೀಯ ಮಟ್ಟದಲ್ಲಿ ಆಶಾ ಕಾರ್ಯಕರ್ತರು ಮತ್ತು ಆರೋಗ್ಯ ಸಹಾಯಕರು ಗುರುತಿಸಲಿದ್ದು, ಯೋಜನೆಯಡಿ ಹೆಸರು ನೋಂದಾಯಿಸಿಕೊಂಡವರಿಗೆ ದಂತ ವೈದ್ಯಕೀಯ ಕಾಲೇಜುಗಳ ಮೂಲಕ ದಂತ ಪಂಕ್ತಿಗಳನ್ನು ಅಳವಡಿಸಲಾಗುತ್ತಿದೆ.

ದಂತ ಪಂಕ್ತಿಗೆ ಬೇಡಿಕೆ ಹೆಚ್ಚಳ: ರಾಜ್ಯ ಸರ್ಕಾರವು 2016ರಲ್ಲಿ 'ದಂತ ಭಾಗ್ಯ' ಯೋಜನೆಯನ್ನು ಪ್ರಾರಂಭಿಸಿತ್ತು. ಸಂಪೂರ್ಣ ದಂತ ಪಂಕ್ತಿ ಕಳೆದುಕೊಂಡ, 60 ವರ್ಷ ಮೇಲ್ಪಟ್ಟ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ನೆರವು ನೀಡಲಾಗುತ್ತಿತ್ತು. ಬಳಿಕ ಫಲಾನುಭವಿಗಳ ವಯೋಮಿತಿಯನ್ನು 55ಕ್ಕೆ ಇಳಿಸಲಾಗಿತ್ತು.

ಈಗ 45 ವರ್ಷಗಳು ಮೇಲ್ಪಟ್ಟವರಿಗೆ ದಂತ ಪಂಕ್ತಿ ಅಳವಡಿಸಲಾಗುತ್ತಿದೆ. ಸರ್ಕಾರಿ ಮತ್ತು ಖಾಸಗಿ ದಂತ ವೈದ್ಯಕೀಯ ಕಾಲೇಜುಗಳಿಗೆ ಯೋಜನೆಯ ಅನುಷ್ಠಾನದ ಜವಾಬ್ದಾರಿ ನೀಡಲಾಗಿದೆ.

ಯೋಜನೆ ಪ್ರಾರಂಭವಾದ ಮೊದಲ 5 ವರ್ಷಗಳಲ್ಲಿ 16,755 ಮಂದಿಗೆ ದಂತ ಪಂಕ್ತಿಗಳನ್ನು ಅಳವಡಿಸಲಾಗಿತ್ತು. ವರ್ಷದಿಂದ ವರ್ಷಕ್ಕೆ ಬೇಡಿಕೆ ಹೆಚ್ಚಳವಾಗಿತ್ತು. 2020ರಲ್ಲಿ ಹೆಸರು ನೋಂದಾಯಿಸಿಕೊಂಡ ಬಹುತೇಕರಿಗೆ ಕೋವಿಡ್‌ನಿಂದಾಗಿ ದಂತ ಪಂಕ್ತಿ ಅಳವಡಿಸಿರಲಿಲ್ಲ.

ಎರಡು ವರ್ಷಗಳ ಬಳಿಕ ದಂತ ಪಂಕ್ತಿ ಅಳವಡಿಸುತ್ತಿರುವುದರಿಂದ ಫಲಾನುಭವಿಗಳ ಸಂಖ್ಯೆ ಹೆಚ್ಚಳವಾಗಿದೆ.

'ವಸಡಿನ ತೊಂದರೆ ಹಾಗೂ ದಂತಕ್ಷಯದಿಂದ ಬಹಳಷ್ಟು ಮಂದಿ ತಮ್ಮ ಹಲ್ಲುಗಳನ್ನು ಕಳೆದುಕೊಳ್ಳುತ್ತಾರೆ. ಕೃತಕ ದಂತ ಪಂಕ್ತಿ ಜೋಡಣೆಯಿಂದ ಆಹಾರವನ್ನು ಜಗಿದು ತಿನ್ನಲು ಸಾಧ್ಯವಾಗುತ್ತದೆ. ಆದ್ದರಿಂದ ದಂತ ಭಾಗ್ಯ ಯೋಜನೆಯಡಿ ದಂತ ಪಂಕ್ತಿ ಅಳವಡಿಸಲಾಗುತ್ತಿದೆ' ಎಂದು ಆರೋಗ್ಯ ಇಲಾಖೆಯ ಬಾಯಿ ಆರೋಗ್ಯದ ಉಪನಿರ್ದೇಶಕ ಡಾ. ಲೋಕೇಶ್ ಪಿ. ತಿಳಿಸಿದರು.

ಐವರಿಗೆ ತಲಾ 7 ವರ್ಷ ಕಠಿಣ ಜೈಲು ಶಿಕ್ಷೆ

ಮುಡಾ ಅಕ್ರಮ: ತಲಾ ₹1 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ₹ 5 ಕೋಟಿ ಮೊತ್ತದ ದುರುಪಯೋಗ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ಕೆಬ್ಬಳ್ಳಿ ಆನಂದ್ ಸೇರಿದಂತೆ ಐವರನ್ನು ಅಪರಾಧಿಗಳು ಎಂದು ಪರಿಗಣಿಸಿ ತಲಾ ಏಳು ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ತಲಾ ₹ 1 ಕೋಟಿ ದಂಡ ವಿಧಿಸಿ ಸಿಬಿಐ ವಿಶೇಷ ನ್ಯಾಯಾಲಯ ತೀರ್ಪು ನೀಡಿದೆ.

ನ್ಯಾಯಾಧೀಶ ಸಂತೋಷ ಗಜಾನನ ಭಟ್ ಇದೇ 8ರಂದು (ಗುರುವಾರ) ತೀರ್ಪು ಪ್ರಕಟಿಸಿದ್ದಾರೆ.

ಮೆಸರ್ಸ್ ಎ.ಆರ್.ಲಾಜಿಸ್ಟಿಕ್ಸ್ ಹೆಸರಿನಲ್ಲಿ ಅದಿರು ಗಣಿಗಾರಿಕೆ ವ್ಯವಹಾರ ನಡೆಸುತ್ತಿದ್ದ ಕೆಬ್ಬಳ್ಳಿ ಆನಂದ್, ಮೆಸರ್ಸ್ ಫ್ಯೂಚರ್ ಫಾರ್ಮ್ ಅಂಡ್ ಎಸ್ಟೇಟ್ಸ್ ಲಿಮಿಟೆಡ್‌ನ ಸಿಇಒ ನಾಗಲಿಂಗಸ್ವಾಮಿ, ರಿಯಲ್ ಎಸ್ಟೇಟ್ ಏಜೆಂಟ್ ಹಾಗೂ ಮೆಸರ್ಸ್ ಆಕಾಶ್ ಎಂಟರ್‌ಪ್ರೈಸಸ್ ಮಾಲೀಕ ಚಂದ್ರಶೇಖರ್, ಮುಡಾದ ಪ್ರಥಮ ದರ್ಜೆ ಸಹಾಯಕ ಎಚ್.ಕೆ.ನಾಗರಾಜ ಹಾಗೂ ಕೆಬ್ಬಳ್ಳಿ ಆನಂದ್ ಅವರ ಸಹಾಯಕ ಕೆ.ಬಿ. ಹರ್ಷನ್ ಶಿಕ್ಷೆಗೊಳಗಾದ ಅಪರಾಧಿಗಳಾಗಿದ್ದಾರೆ.

ಅಪರಾಧಿಗಳು ವೋಚರ್ ಮತ್ತು ಚೆಕ್‌ಗಳನ್ನು ಮೋಸದಿಂದ ಭರ್ತಿ ಮಾಡಿ ತಲಾ ₹ 1 ಕೋಟಿ ಮೊತ್ತದ ಐದು ಚೆಕ್‌ಗಳನ್ನು ಮುಡಾದಿಂದ ಇಂಡಿಯನ್ ಬ್ಯಾಂಕ್‌ನ ಮಂಡ್ಯದ ಶಾಖೆಯಲ್ಲಿ ಠೇವಣಿ ಇರಿಸಿದ್ದರು. ನಂತರ ಈ ಮೊತ್ತವನ್ನು ಮೆಸರ್ಸ್ ಆಕಾಶ್ ಎಂಟರ್‌ಪ್ರೈಸಸ್‌ನ ಖಾತೆಗೆ ವರ್ಗಾಯಿಸಿಕೊಂಡು ಮುಡಾಕ್ಕೆ ₹ 5 ಕೋಟಿ ನಷ್ಟ ಉಂಟು ಮಾಡಿದ ಆರೋಪ ಎದುರಿಸುತ್ತಿದ್ದರು.

ಎಲ್ಲ ಅಪರಾಧಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 120 ಬಿ, 409, 420, 467, 468 ಮತ್ತು 471 ಹಾಗೂ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13 (2), 13 (1), (ಸಿ) ಮತ್ತು ಡಿ ಅಡಿಯಲ್ಲಿ ಸಿಬಿಐ ಹಾಗೂ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸರು 2015ರ ಜೂನ್ 27ರಂದು ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಕೆ.ಎಸ್.ಹೇಮಾ ವಾದ ಮಂಡಿಸಿದ್ದರು.

ತಾಯಿಯಂತೆ ದೇಶ ಸೇವೆ ಮಾಡುವೆ: ಚಾರ್ಲ್ಸ್

ಲಂಡನ್(ಪಿಟಿಐ): ಬ್ರಿಟನ್ ರಾಣಿ ಎಲಿಜಬೆತ್ ಅವರು ಉತ್ತಮವಾಗಿ ಜೀವಿಸಿದ್ದರು ಎಂದು ಅವರ ಪುತ್ರ ಹಾಗೂ ಮಹಾರಾಣಿಯ ಉತ್ತರಾಧಿಕಾರಿ ಚಾರ್ಲ್ಸ್ ಅವರು ಪ್ರತಿಪಾದಿಸಿದ್ದಾರೆ.

ರಾಣಿಯನ್ನು ಕಳೆದುಕೊಂಡ ದುಃಖದಲ್ಲಿರುವ ಬ್ರಿಟನ್ ದೇಶದ ಜನತೆಯನ್ನುದ್ದೇಶಿಸಿ ಭಾಷಣ ರಾಜ ಚಾರ್ಲ್ಸ್ 3 ಅವರು, 'ಪ್ರೀತಿಯ ತಾಯಿ ವಾತ್ಸಲ್ಯ, ಮಾರ್ಗದರ್ಶನಕ್ಕೆ ಧನ್ಯವಾದಗಳು. ಸುದೀರ್ಘ ಆಡಳಿತ ನಡೆಸಿದ ತನ್ನ ತಾಯಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ' ಎಂದರು.

ನಮ್ಮ ಈ ದುಃಖದಲ್ಲಿ ನಾವು ರಾಣಿಯನ್ನು ನೆನಪಿಸಿಕೊಳ್ಳೋಣ. ಆಕೆಯ ಉದಾಹರಣೆಯ ಬೆಳಕಿನ ಶಕ್ತಿಯನ್ನು ಪಡೆದುಕೊಳ್ಳೋಣ ಎಂದ ಅವರು, ಬ್ರಿಟನ್ ಹಾಗೂ ಕಾಮನ್‌ವೆಲ್ತ್‌ಗೆ ನಿಷ್ಠೆ ಹಾಗೂ ಗೌರವದಿಂದ ಸೇವೆ ಸಲ್ಲಿಸುವುದಾಗಿ ತಮ್ಮ ಐತಿಹಾಸಿಕ ಭಾಷಣದಲ್ಲಿ ದೇಶದ ಜನತೆಗೆ ವಾಗ್ದಾನ ನೀಡಿದರು.

ತಾಯಿಯ ರೀತಿಯೇ ದೇವರು ನನಗೆ ಶಕ್ತಿ ನೀಡುವಷ್ಟು ಕಾಲ ರಾಷ್ಟ್ರದ ಹೃದಯಭಾಗವಾಗಿರುವ ಸಾಂವಿಧಾನಿಕ ತತ್ವಗಳನ್ನು ಎತ್ತಿಹಿಡಿಯಲು ಪ್ರತಿಜ್ಞೆ ಮಾಡುವುದಾಗಿ ತಿಳಿಸಿದರು.

'ಮಡಿವಾಳ ಮಾಚಿದೇವರ ಸಮಗ್ರ ವಚನಗಳು' ಬಿಡುಗಡೆ

'ವಚನಕ್ರಾಂತಿ ಹತ್ತಿಕ್ಕಿದವರು ಈಗಲೂ ಇದ್ದಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುತ್ವದ ನೆಲೆಗಟ್ಟಿನ ವಚನ ಕ್ರಾಂತಿಯನ್ನು ಹತ್ತಿಕ್ಕಿದ ಪಟ್ಟಭದ್ರರೇ ಇಂದಿಗೂ ಜನಪರ ಧ್ವನಿಗಳನ್ನು ನಿರಂತರವಾಗಿ ದಮನಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ದೂರಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು ನಗರ ಘಟಕ ಶುಕ್ರವಾರ ಹಮ್ಮಿಕೊಂಡಿದ್ದ ಅಶೋಕ ದೊಮ್ಮಲೂರು ಸಂಪಾದಕತ್ವದ 'ಮಡಿವಾಳ ಮಾಚಿದೇವರ ಸಮಗ್ರ ವಚನಗಳು' ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ಜಾತಿ, ಭೇದವಿಲ್ಲದ ಸಮಾನತೆಯ ತತ್ವದ ಮೇಲೆ 12ನೇ ಶತಮಾನದಲ್ಲಿ ಹುಟ್ಟಿಬಂದ ವಚನ ಚಳವಳಿಯ ವಿರುದ್ಧ ಕೆಲವರು ಯುದ್ಧವನ್ನೇ ಸಾರಿದರು. ವಚನಗಳನ್ನು ನಿರ್ನಾಮ ಮಾಡಿದರು. ಅಳಿದುಳಿದ ವಚನಗಳೇ ಇಂದು ಭವಿಷ್ಯದ ದಾರಿ ತೋರುತ್ತಿವೆ. ಅವುಗಳ ಸಂರಕ್ಷಣೆ, ಅನುಸರಣೆ ಇಂದಿನ ಅಗತ್ಯ ಎಂದು ಪ್ರತಿಪಾದಿಸಿದರು.

ವಿಶ್ವದ ಇತಿಹಾಸದಲ್ಲೇ ದುಡಿಯುವ, ಶ್ರಮಿಕ ವರ್ಗ ರಚಿಸಿದ ಏಕೈಕ ಸಾಹಿತ್ಯವೆಂದರೆ ವಚನಗಳು. ವೇಶ್ಯಾವಾಟಿಕೆಯಿಂದ ಹೊರಬಂದ ಪುಣ್ಯಸ್ತ್ರೀಯರೂ ವಚನ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ಇಂತಹ ಮೌಲ್ಯಗಳ ತಳಹದಿಯ ಮೇಲೆ ಹುಟ್ಟಿದ್ದೇ ಲಿಂಗಾಯತ ಧರ್ಮ. ನೆಲ, ಜೀವ, ಸಮಾಧಿ, ಸಂಸ್ಕೃತಿಯ ಬೇರುಗಳನ್ನು ಅದು ಒಳಗೊಂಡಿದೆ. ಅದು ಸಂವೇದನಾತ್ಮಕ ಧರ್ಮ ಎಂದು ಬಣ್ಣಿಸಿದರು.



ನಗರದಲ್ಲಿ ಶುಕ್ರವಾರ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ 'ಮಡಿವಾಳ ಮಾಚಿದೇವರ ಸಮಗ್ರ ವಚನಗಳು' ಗ್ರಂಥ ಬಿಡುಗಡೆ ಮಾಡಿದರು. ಅಶೋಕ ದೊಮ್ಮಲೂರು, ಪ್ರೊ.ಎಸ್.ಜಿ ಸಿದ್ದರಾಮಯ್ಯ, ಗೊ.ರು. ಚನ್ನಬಸಪ್ಪ, ಶಿವರುದ್ರ ಸ್ವಾಮೀಜಿ, ಎಚ್ ರವಿಕುಮಾರ್ ಇದ್ದರು ಪ್ರಜಾವಾಣಿ ಚಿತ್ರ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗ್ರಂಥ ಬಿಡುಗಡೆ ಮಾಡಿದರು. ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಪ್ರಾಸ್ತಾವಿಕ ಮಾತನಾಡಿದರು.

ಶರಣ ಸಾಹಿತ್ಯ ಪರಿಷತ್ ಗೌರವ ಸಲಹೆಗಾರ ಗೊ.ರು. ಚನ್ನಬಸಪ್ಪ ಅಧ್ಯಕ್ಷತೆ ವಹಿಸಿದ್ದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ, ಪತ್ರಕರ್ತ ರಂಜಾನ್ ದರ್ಗಾ, ಗ್ರಂಥ ಸಂಪಾದಕ ಅಶೋಕ ದೊಮ್ಮಲೂರು, ಲೋಕಸೇವಾ ಆಯೋಗದ ಸದಸ್ಯ ಎಚ್.ರವಿಕುಮಾರ್ ಉಪಸ್ಥಿತರಿದ್ದರು.

ಬೆಂಗಳೂರು ಪ್ರವಾಹ: ಶ್ವೇತಪತ್ರ ಹೊರಡಿಸಲು ಕಾಂಗ್ರೆಸ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ವ್ಯಾಪ್ತಿಯ ಪ್ರದೇಶಗಳಲ್ಲಿ ಉಂಟಾಗಿರುವ ಪ್ರವಾಹ ಮತ್ತು ಅದಕ್ಕೆ ಕಾರಣರಾದವರ ಕುರಿತು ಶ್ವೇತಪತ್ರ ಹೊರಡಿಸುವಂತೆ ರಾಜ್ಯ ಸರ್ಕಾರವನ್ನು ಕಾಂಗ್ರೆಸ್ ಆಗ್ರಹಿಸಿದೆ.

ಪಕ್ಷದ ಹಲವು ನಾಯಕರೊಡನೆ ಕೆಪಿಸಿಸಿ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, 'ಬೆಂಗಳೂರು ನಗರದ ಈಗಿನ ದುಃಸ್ಥಿತಿಗೆ ಬಿಜೆಪಿಯ ದುರಾಡಳಿತವೇ ಕಾರಣ. ಹಿಂದಿನ 16 ವರ್ಷಗಳ ಅವಧಿಯಲ್ಲಿ 11 ವರ್ಷ ಬಿಜೆಪಿಯೇ ಆಡಳಿತ ನಡೆಸಿದೆ. ಈ ಅವಧಿಯಲ್ಲಿ ನಗರದ ಅಭಿವೃದ್ಧಿಯ ಕಡೆಗೆ ಗಮನ ಹರಿಸದೆ ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗಿದ್ದೇ ಬೆಂಗಳೂರಿನ ಹಲವು ಪ್ರದೇಶಗಳು ಪ್ರವಾಹದಲ್ಲಿ ಮುಳುಗಲು ಕಾರಣ' ಎಂದರು.

ಪ್ರವಾಹ ಮತ್ತು ರಸ್ತೆ ಗುಂಡಿಗಳ ಕುರಿತು ಶ್ವೇತಪತ್ರ ಹೊರಡಿಸಬೇಕು. ಆ ಮೂಲಕ ಬಿಜೆಪಿಯ ದುರಾಡಳಿತ ದರ್ಶನ ಜನರಿಗೆ ಆಗಲಿ. ಸಮಸ್ಯೆ ಪರಿಹಾರಕ್ಕೆ ತಕ್ಷಣ ಸರ್ವಪಕ್ಷಗಳ ನಾಯಕರ ಸಭೆ ಕರೆದು ಚರ್ಚಿಸಬೇಕು. ಸಂತ್ರಸ್ತರಿಗೆ ತ್ವರಿತ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

'ತಪ್ಪು ಮುಚ್ಚಿಕೊಳ್ಳಲು ಆರೋಪ': ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ಬಿಜೆಪಿ ಸರ್ಕಾರದ ಅವಧಿಯ ತಪ್ಪುಗಳಿಂದಾಗಿಯೇ ಬೆಂಗಳೂರಿನಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ತಪ್ಪು ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಮೂರು ವರ್ಷಗಳ ಬಿಜೆಪಿ ಆಡಳಿತದ ಅವಧಿಯಲ್ಲಿ ಏನು ಮಾಡಿದ್ದಾರೆ ಎಂಬುದನ್ನು ತೋರಿಸಲಿ' ಎಂದು ಸವಾಲು ಹಾಕಿದರು.

ತಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಾಜಕಾಲುವೆ ಒತ್ತುವರಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿತ್ತು. 1,953 ಒತ್ತುವರಿ ಪ್ರಕರಣ ಗುರುತಿಸಿ, 1,300 ಸ್ಥಳಗಳಲ್ಲಿ ಒತ್ತುವರಿ ತೆರವುಗೊಳಿಸಲಾಗಿತ್ತು. 653 ಪ್ರಕರಣಗಳಲ್ಲಿ ಒತ್ತುವರಿ ತೆರವು ಬಾಕಿ ಇತ್ತು. ಈ ಒತ್ತುವರಿಗಳನ್ನು ತೆರವುಗೊಳಿಸುವ ಕೆಲಸವನ್ನು ಬಿಜೆಪಿ ಸರ್ಕಾರ ಮಾಡಿಲ್ಲ ಎಂದು ದೂರಿದರು.

'ಪ್ರವಾಹ ನಿಯಂತ್ರಣ ಮತ್ತು ಪರಿಹಾರ ಕಾರ್ಯಾಚರಣೆಯಲ್ಲಿ ಸರ್ಕಾರದ ವೈಫಲ್ಯದ ವಿರುದ್ಧ ವಿಧಾನಮಂಡಲದ ಒಳಗೆ, ಹೊರಗೆ ಹೋರಾಟ ನಡೆಸುತ್ತೇವೆ' ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಶಾಸಕರಾದ ಡಾ.ಜಿ. ಪರಮೇಶ್ವರ, ಕೆ.ಜೆ. ಜಾರ್ಜ್ ಮಾತನಾಡಿದರು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಧ್ರುವನಾರಾಯಣ, ರಾಜ್ಯಸಭಾ ಸದಸ್ಯ ನಾಸೀರ್ ಅಹ್ಮದ್, ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ, ವಿಧಾನ ಪರಿಷತ್ ಸದಸ್ಯ ಅಲ್ಲಂ ವೀರಭದ್ರಪ್ಪ, ಮುಖಂಡ ಪ್ರೊ.ಎಂ.ವಿ. ರಾಜೀವ್ ಗೌಡ ಇದ್ದರು.

> ### ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಅಧ್ಯಯನ ಸಮಿತಿ: ಡಿಕೆಶಿ
>
> 'ಬೆಂಗಳೂರು ನಗರದಲ್ಲಿ ಪ್ರವಾಹ ಸ್ಥಿತಿಗೆ ಕಾರಣವಾದ ಅಂಶಗಳು, ಸರ್ಕಾರ ಕೈಗೊಂಡಿರುವ ಕ್ರಮಗಳು, ಸಂತ್ರಸ್ತರಿಗೆ ಪರಿಹಾರ ವಿತರಣೆ ಕುರಿತು ಅಧ್ಯಯನ ನಡೆಸಲು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.
>
> 'ಶಾಸಕ ಕೃಷ್ಣ ಬೈರೇಗೌಡ, ಮಾಜಿ ಮೇಯರ್ ಜಿ. ಪದ್ಮಾವತಿ ಸೇರಿ ಹಲವರು ಸಮಿತಿಯಲ್ಲಿರುತ್ತಾರೆ. ಈ ಸಮಿತಿಯು ಪ್ರವಾಹದಿಂದ ಹಾನಿಯಾಗಿರುವ ಸ್ಥಳಗಳಿಗೆ ಭೇಟಿ ನೀಡಿ, ಅಧ್ಯಯನ ನಡೆಸಲಿದೆ. 15 ದಿನಗಳಲ್ಲಿ ಸಮಿತಿ ವರದಿ ಸಲ್ಲಿಸಲಿದೆ. ಬೆಂಗಳೂರಿನ ಜನರ ಅಭಿಪ್ರಾಯಕ್ಕೆ ಧ್ವನಿಯಾಗುವುದು ಈ ಅಧ್ಯಯನದ ಹಿಂದಿನ ಉದ್ದೇಶ' ಎಂದರು.
>
> 'ಮಳೆಹಾನಿ ಕುರಿತು ಮಾಧ್ಯಮಗಳು ಮತ್ತು ಕಾಂಗ್ರೆಸ್ ಪಿತೂರಿ ನಡೆಸಿ ಅಪಪ್ರಚಾರ ನಡೆಸುತ್ತಿವೆ' ಎಂಬ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸದಸ್ಯ ತೇಜಸ್ವಿ ಸೂರ್ಯ ಆರೋಪದ ಬಗ್ಗೆ ಕೇಳಿದಾಗ, 'ನಾವು ಬೆಂಗಳೂರಿನ ಘನತೆಗೆ ಧಕ್ಕೆ ತರುವ ಕೆಲಸ ಮಾಡುವುದಿಲ್ಲ' ಎಂದು ಉತ್ತರಿಸಿದರು.

ಮೆಟ್ರೊ: ಮತ್ತೊಂದು ಸುರಂಗ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಯೋಜನೆಯ ಮತ್ತೊಂದು ಸುರಂಗ ಮಾರ್ಗದ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಪೂರ್ಣಗೊಳಿಸಿದ್ದು, ವೆಲ್ಲಾರ ಜಂಕ್ಷನ್‌ನಿಂದ ಲ್ಯಾಂಗ್‌ಫೋರ್ಡ್ ಟೌನ್ ತನಕ ಸುರಂಗ ಕೊರೆದಿರುವ 'ವರದಾ' ಟಿಬಿಎಂ(ಟನಲ್ ಬೋರಿಂಗ್ ಮಷಿನ್) ಶುಕ್ರವಾರ ಹೊರಬಂದಿದೆ.

ಗೊಟ್ಟಿಗೆರೆ–ನಾಗವಾರ ಮೆಟ್ರೊ ರೈಲು ಮಾರ್ಗದಲ್ಲಿ ವೆಲ್ಲಾರ ಜಂಕ್ಷನ್(ರಾಷ್ಟ್ರೀಯ ಮಿಲಿಟರಿ ಸ್ಕೂಲ್)– ಲ್ಯಾಂಗ್‌ಫೋರ್ಡ್ ಟೌನ್ ನಡುವೆ 597 ಮೀಟರ್ ಸುರಂಗ ನಿರ್ಮಾಣದ ಕಾಮಗಾರಿಯನ್ನು 225 ದಿನಗಳಲ್ಲಿ ಪೂರ್ಣಗೊಳಿಸಿದೆ.

ಶುಕ್ರವಾರ ಬೆಳಿಗ್ಗೆ 10.30ರ ಸುಮಾರಿನಲ್ಲಿ ಈ ಯಂತ್ರವು ಲ್ಯಾಂಗ್‌ಫೋರ್ಡ್ ಟೌನ್ ಬಳಿ ಹೊರಬಂದಿತು. ಈ ಸಂದರ್ಭದಲ್ಲಿ ಎಂಜಿನಿಯರ್‌ಗಳು, ಗುತ್ತಿಗೆದಾರರು, ಕಾರ್ಮಿಕರು ಹರ್ಷೋದ್ಗಾರದೊಂದಿಗೆ ಯಂತ್ರವನ್ನು ಸ್ವಾಗತಿಸಿದರು.

ಗೊಟ್ಟಿಗೆರೆ–ನಾಗವಾರ ಮಾರ್ಗದಲ್ಲಿ ಡೇರಿ ವೃತ್ತದಿಂದ ನಾಗವಾರ ತನಕ 21,255 ಮೀಟರ್ ಉದ್ದದ ಜೋಡಿ ಸುರಂಗ ಮಾರ್ಗ ನಿರ್ಮಾಣವಾಗುತ್ತಿದೆ.

ಈ ಪೈಕಿ ಈವರೆಗೆ 12,838 ಮೀಟರ್ ಸುರಂಗ ಮಾರ್ಗದ ಕಾಮಗಾರಿ ಪೂರ್ಣಗೊಂಡಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.



ಲ್ಯಾಂಗ್‌ಫೋರ್ಡ್ ಟೌನ್ ಬಳಿ ಸುರಂಗದಿಂದ ಹೊರಬಂದ ಟಿಬಿಎಂ

ತಂದೆ–ತಾಯಿ, ಮಾವನಿಗೆ ಚಾಕುವಿನಿಂದ ಇರಿದ ಯುವಕ

ಬೆಂಗಳೂರು: ಪುನರ್ವಸತಿ ಕೇಂದ್ರಕ್ಕೆ ಸೇರಿಸುತ್ತಿದ್ದಾರೆಂಬ ಕಾರಣಕ್ಕೆ ತಂದೆ–ತಾಯಿ ಹಾಗೂ ಸೋದರ ಮಾವನಿಗೆ ಚಾಕುವಿನಿಂದ ಇರಿದಿರುವ ಆರೋಪಿ ತೇಜಸ್ (24) ಎಂಬುವರನ್ನು ಯಶವಂತಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಯಶವಂತಪುರ ನಿವಾಸಿ ತೇಜಸ್, ಗುರುವಾರ ರಾತ್ರಿ ಕೃತ್ಯ ಎಸಗಿದ್ದ. ರಸ್ತೆ ಅಕ್ಕ–ಪಕ್ಕದಲ್ಲಿ ನಿಲ್ಲಿಸಿದ್ದ ಸಾರ್ವಜನಿಕರ 12 ವಾಹನಗಳ ಗಾಜುಗಳನ್ನೂ ಒಡೆದಿದ್ದ. ಗಾಯಾಳು ಪೋಷಕರು ನೀಡಿದ್ದ ದೂರಿನಡಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ದುಶ್ಚಟ ಬಿಡಿಸಲು ಪ್ರಯತ್ನ: 'ಆರೋಪಿ ತೇಜಸ್ ದುಶ್ಚಟಕ್ಕೆ ಬಿದ್ದಿದ್ದ. ಪೋಷಕರು ಈತನಿಗೆ ಹಲವು ಬಾರಿ ಬುದ್ಧಿವಾದ ಹೇಳಿದ್ದರು. ಅಷ್ಟಾದರೂ ಆರೋಪಿಯು ದುಶ್ಚಟ ಬಿಟ್ಟಿರಲಿಲ್ಲ. ಈತನ ಆರೋಗ್ಯವೂ ಹದಗೆಟ್ಟಿತ್ತು' ಎಂದು ಪೊಲೀಸರು ತಿಳಿಸಿದರು.

'ಮಗನನ್ನು ದುಶ್ಚಟಗಳಿಂದ ದೂರ ಮಾಡಲು ಪ್ರಯತ್ನಿಸಿದ್ದ ಪೋಷಕರು, ವೈದ್ಯರ ಸಲಹೆಯಂತೆ ಪುನರ್ವಸತಿ ಕೇಂದ್ರಕ್ಕೆ ಸೇರಿಸಲು ಮುಂದಾಗಿದ್ದರು. ಅದರಂತೆ ತಂದೆ–ತಾಯಿ ಹಾಗೂ ಸೋದರ ಮಾವ, ಆರೋಪಿ ತೇಜಸ್‌ನನ್ನು ಕೇಂದ್ರಕ್ಕೆ ಬಿಟ್ಟು ಬರಲು ತಯಾರಿ ಮಾಡಿಕೊಳ್ಳುತ್ತಿದ್ದರು' ಎಂದೂ ಹೇಳಿದರು.

ಚಾಕುವಿನಿಂದ ಇರಿದು ಪರಾರಿ: 'ತೇಜಸ್ ಜೊತೆ ಗುರುವಾರ ರಾತ್ರಿ ಮಾತುಕತೆ ನಡೆಸಿದ್ದ ತಂದೆ–ತಾಯಿ, ಪುನರ್ವಸತಿ ಕೇಂದ್ರಕ್ಕೆ ಸೇರಿಸುವುದಾಗಿ ಹೇಳಿದ್ದರು. ಅಷ್ಟಕ್ಕೆ ಕೋಪಗೊಂಡ ತೇಜಸ್, ಜಗಳ ತೆಗೆದು ರಂಪಾಟ ಮಾಡಿದ್ದ. ಚಾಕುವಿನಿಂದ ತಂದೆ–ತಾಯಿಗೆ ಇರಿದಿದ್ದ. ನಂತರ, ಸೋದರ ಮಾವನಿಗೆ ಚಾಕುವಿನಿಂದ ಚುಚ್ಚಿ ಮನೆಯಿಂದ ಪರಾರಿಯಾಗಿದ್ದ' ಎಂದು ಪೊಲೀಸರು ತಿಳಿಸಿದರು.

'ರಸ್ತೆಯಲ್ಲಿ ಓಡಾಡಿದ್ದ ಆರೋಪಿ, ವಿಚಿತ್ರವಾಗಿ ವರ್ತಿಸಿದ್ದ. ಕಾರು, ಸೇರಿ 12 ವಾಹನಗಳ ಗಾಜು ಒಡೆದಿದ್ದ. ನಂತರ, ಚಾಕು ಹಿಡಿದುಕೊಂಡು ಗಣೇಶ ವಿಸರ್ಜನೆ ಮೆರವಣಿಗೆಯ ಸ್ಥಳಕ್ಕೆ ಹೋಗಿದ್ದ' ಎಂದು ಹೇಳಿದರು.

ರಿವಾಲ್ವರ್ ತೋರಿಸಿ ಪರಾರಿ: ಡ್ರಗ್ ಪೆಡ್ಲರ್ ಬಂಧನ

ಬೆಂಗಳೂರು: ತನ್ನನ್ನು ಬಂಧಿಸಲು ಬಂದ ಕೇರಳ ಪೊಲೀಸರಿಗೆ ರಿವಾಲ್ವರ್‌ನಿಂದ ಬೆದರಿಸಿ ಪರಾರಿಯಾಗಿದ್ದ ಆರೋಪಿ ಜಾಫರ್ ಎಂಬುವರನ್ನು ನಗರದ ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಜಾಫರ್, ತನ್ನೂರಿನಿಂದ ತಪ್ಪಿಸಿಕೊಂಡು ಬೆಂಗಳೂರಿಗೆ ಬಂದಿದ್ದ. ತನ್ನನ್ನು ಹಿಡಿಯಲು ಬಂದ ಪೊಲೀಸರನ್ನು ಬೆದರಿಸಿದ್ದ. ಪ್ರಕರಣ ದಾಖಲಾಗುತ್ತಿದ್ದಂತೆ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕುರತಿಕ್ಕಾಡ್ ಠಾಣೆಯಲ್ಲಿ ಪ್ರಕರಣ: 'ಡ್ರಗ್ಸ್ ಮಾರಾಟ ಜಾಲದ ರೂವಾರಿ ಜಾಫರ್, ಕೇರಳದಲ್ಲಿ ಸಹಚರರ ಮೂಲಕ ಮಾದಕ ವಸ್ತು ಮಾರಾಟ ಮಾಡಿಸುತ್ತಿದ್ದ. ಈತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಕುರತಿಕ್ಕಾಡ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತಲೆಮರೆಸಿಕೊಂಡಿದ್ದ ಆರೋಪಿ ಪತ್ತೆಗಾಗಿ ಕುರತಿಕ್ಕಾಡ್ ಪಿಎಸ್‌ಐ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಂಧನ ಭೀತಿಯಲ್ಲಿದ್ದ ಆರೋಪಿ ಜಾಫರ್, ಸಹಚರರ ಸಮೇತ ಕೇರಳ ತೊರೆದು ಬೆಂಗಳೂರಿಗೆ ಬಂದಿದ್ದ. ಈತನನ್ನು ಹುಡುಕಿಕೊಂಡು ಪಿಎಸ್‌ಐ ನೇತೃತ್ವದ ತಂಡವೂ ಬೆಂಗಳೂರಿಗೆ ಬಂದಿತ್ತು.'

'ಎಚ್‌ಎಸ್‌ಆರ್ ಲೇಔಟ್ ಠಾಣೆ ವ್ಯಾಪ್ತಿಯ ಹೋಟೆಲೊಂದರಲ್ಲಿ ಆರೋಪಿ ಇತ್ತೀಚೆಗೆ ಕಾಣಿಸಿಕೊಂಡಿದ್ದ. ಮಾಹಿತಿ ತಿಳಿದ ಪಿಎಸ್‌ಐ ನೇತೃತ್ವದ ತಂಡ, ಬಂಧಿಸಲು ಮುಂದಾಗಿತ್ತು. ರಿವಾಲ್ವರ್ ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದ ಆರೋಪಿ, ಸಹಚರರ ಸಮೇತ ಸ್ಥಳದಿಂದ ಪರಾರಿಯಾಗಿದ್ದ' ಎಂದು ತಿಳಿಸಿವೆ.

ಜಂಟಿ ಕಾರ್ಯಾಚರಣೆ: 'ಆರೋಪಿ ಪರಾರಿಯಾದ ಬಗ್ಗೆ ಕುರತಿಕ್ಕಾಡ್ ಪಿಎಸ್‌ಐ, ಎಚ್‌ಎಸ್‌ಆರ್ ಲೇಔಟ್ ಠಾಣೆಗೆ ಮಾಹಿತಿ ನೀಡಿದ್ದರು. ಅಕ್ರಮ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ನಕಲಿ ಮಾಲೀಕನ ಸೃಷ್ಟಿಸಿ ನಿವೇಶನ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಮಾಲೀಕ ಹಾಗೂ ದಾಖಲೆ ಸೃಷ್ಟಿಸಿ ನಿವೇಶನ ಮಾರುತ್ತಿದ್ದ ಜಾಲದ ಬಗ್ಗೆ ನಗರದ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಪ್ರಕರಣದ ರೂವಾರಿಗಳ ಪತ್ತೆಗಾಗಿ ಮಾಹಿತಿ ಕಲೆಹಾಕುತ್ತಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಇತರೆ ಸಂಸ್ಥೆಗಳು ಅಭಿವೃದ್ಧಿಪಡಿಸಿದ ನಿವೇಶನಗಳ ನಕಲಿ ದಾಖಲೆ ಸೃಷ್ಟಿಸುತ್ತಿದ್ದ ಜಾಲ, ಅದೇ ನಿವೇಶನಗಳನ್ನು ಕೋಟಿಗೂ ಹೆಚ್ಚು ಮೊತ್ತಕ್ಕೆ ಮಾರಿತ್ತು.

ಜಾಲದ ಸುಳಿವು ಪತ್ತೆ ಮಾಡಿದ್ದ ನಿವೇಶನಗಳ ಕೆಲ ಅಸಲಿ ಮಾಲೀಕರು, ಪೊಲೀಸರಿಗೆ ದೂರು ನೀಡಿದ್ದರು. ಇದರನ್ವಯ 15 ಎಫ್‌ಐಆರ್‌ಗಳು ದಾಖಲಾಗಿದ್ದವು.

'ಶೇಷಾದ್ರಿಪುರ, ಮಾರತಹಳ್ಳಿ, ಕುಮಾರಸ್ವಾಮಿ ಲೇಔಟ್, ಕೆಂಪೇಗೌಡನಗರ, ಯಲಹಂಕ ನ್ಯೂ ಟೌನ್, ಜಿಗಣಿ ಹಾಗೂ ಇತರೆ ಠಾಣೆಗಳಲ್ಲಿ ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ವಿಶೇಷ ತಂಡಗಳು ಪ್ರಕರಣದ ತನಿಖೆ ಆರಂಭಿಸಿವೆ. ಹಲವರನ್ನು ಬಂಧಿಸಿವೆ. ಜಾಲದ ರೂವಾರಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಖಾಲಿ ನಿವೇಶನ ಮೇಲೆ ಕಣ್ಣು: 'ಹೊರ ದೇಶ ಹಾಗೂ ಹೊರ ರಾಜ್ಯಗಳಲ್ಲಿ ನೆಲೆಸಿರುವ ಹಲವರು, ಬೆಂಗಳೂರಿನಲ್ಲಿ ನಿವೇಶನ ಖರೀದಿಸಿದ್ದಾರೆ. ಅವರೆಲ್ಲರೂ ನಿವೇಶನಗಳಲ್ಲಿ ಯಾವುದೇ ಮನೆ ಅಥವಾ ಕಟ್ಟಡ ನಿರ್ಮಿಸಿಲ್ಲ. ಹೀಗಾಗಿ, ನಿವೇಶನಗಳು ಖಾಲಿ ಇವೆ. ಇವುಗಳ ಮೇಲೆಯೇ ಆರೋಪಿಗಳು ಕಣ್ಣು ಹಾಕುತ್ತಿದ್ದರು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ಖಾಲಿ ನಿವೇಶನ ಗುರುತಿಸುತ್ತಿದ್ದ ಆರೋಪಿಗಳು, ಅಸಲಿ ಮಾಲೀಕರ ವಿವರ ಪತ್ತೆ ಮಾಡುತ್ತಿದ್ದರು. ಅದೇ ಮಾಲೀಕರ ಹೆಸರಿನಲ್ಲೇ ಮತ್ತೊಬ್ಬ ನಕಲಿ ಮಾಲೀಕನನ್ನು ಸೃಷ್ಟಿಸುತ್ತಿದ್ದರು. ಅದಕ್ಕೆ ತಕ್ಕಂತೆ ನಕಲಿ ದಾಖಲೆಗಳನ್ನೂ ಹೊಂದಿಸಿಕೊಳ್ಳುತ್ತಿದ್ದರು. ತುರ್ತಾಗಿ ನಿವೇಶನ ಮಾರಾಟಕ್ಕಿರುವುದಾಗಿ ಪ್ರಚಾರ ಮಾಡುತ್ತಿದ್ದರು' ಎಂದು ಹೇಳಿದರು.

'ನಿವೇಶನ ಖರೀದಿಸಲು ಆಸಕ್ತಿ ತೋರಿಸುತ್ತಿದ್ದವರ ಜೊತೆ ಮಾತುಕತೆ ನಡೆಸುತ್ತಿದ್ದ ಆರೋಪಿಗಳು, ಬ್ಯಾಂಕ್ ಸಾಲ ಸಹ ಕೊಡಿಸುವುದಾಗಿ ಹೇಳುತ್ತಿದ್ದರು. ಬ್ಯಾಂಕ್ ಸಿಬ್ಬಂದಿಯೂ ಆರೋಪಿಗಳ ಜೊತೆ ಶಾಮೀಲಾಗಿದ್ದರಿಂದ ಕೆಲವೇ ದಿನಗಳಲ್ಲಿ ಸಾಲ ಮಂಜೂರಾಗುತ್ತಿತ್ತು' ಎಂದೂ ತಿಳಿಸಿದರು.

ಆರು ಮಂದಿ ವಶಕ್ಕೆ: ಬನಶಂಕರಿ ಬಿಡಿಎ ಲೇಔಟ್‌ನಲ್ಲಿರುವ ನರಸಯ್ಯ ಎಂಬುವರಿಗೆ ಸೇರಿದ್ದ 60x40 ಅಳತೆಯ ನಿವೇಶನವನ್ನು ಆರೋಪಿಗಳು ಅಕ್ರಮವಾಗಿ ಮಾರಿದ್ದರು. ಈ ಸಂಬಂಧ ದಾಖಲಾಗಿದ್ದ ಪ್ರಕರಣಗಳು ಆರು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

2 ಕೆ.ಜಿ ಗಾಂಜಾ ಜಪ್ತಿ

ಬೆಂಗಳೂರು: ಹೊರರಾಜ್ಯಗಳಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಆರೋಪಿ ಎಂ. ಗೋಪಿ ಅಲಿಯಾಸ್ ನಾರಾಯಣ್ (25) ಎಂಬುವರನ್ನು ಕೆ.ಪಿ.ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಾಗಮ್ಮನಗರದ ನಿವಾಸಿ ಗೋಪಿ ಹಲವು ತಿಂಗಳಿನಿಂದ ಗಾಂಜಾ ಮಾರಾಟದಲ್ಲಿ ತೊಡಗಿದ್ದ. ಈತನನ್ನು ಬಂಧಿಸಿ, ₹50 ಸಾವಿರ ಮೌಲ್ಯದ 2 ಕೆ.ಜಿ. 115 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಿನ್ನಿ ಸ್ಟೋನ್ ಸೇತುವೆ ಬಳಿ ಸೆ. 7ರಂದು ಸುತ್ತಾಡುತ್ತಿದ್ದ ಆರೋಪಿಯು ಗ್ರಾಹಕರಿಗೆ ಗಾಂಜಾ ಮಾರುತ್ತಿದ್ದ ವೇಳೆ ಬಂಧಿಸಲಾಯಿತು' ಎಂದರು.

ವಿದ್ಯುತ್ ತಗುಲಿ ಬಿಹಾರದ ಎಲೆಕ್ಟ್ರಿಷಿಯನ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ವಿದ್ಯುತ್ ತಗುಲಿ ಬರ್ಮನ್ (25) ಎಂಬುವರು ಮೃತಪಟ್ಟಿದ್ದಾರೆ.

ಈ ಸಂಬಂಧ ಕೆ.ಆರ್.ಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬಿಹಾರದ ಬರ್ಮನ್ ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಎಲೆಕ್ಟ್ರಿಷಿಯನ್ ಆಗಿ ಕೆಲಸ ಆರಂಭಿಸಿದ್ದರು. ಕೋಡಿಹಳ್ಳಿಯ ಆಲ್ಫ ಗಾರ್ಡನ್ ಬಳಿಯ ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಬರ್ಮನ್ ಅವರು ಎಂದಿನಂತೆ ಶುಕ್ರವಾರ ಬೆಳಿಗ್ಗೆ ಕೆಲಸಕ್ಕೆ ಹಾಜರಾಗಿದ್ದರು. ನಿರ್ಮಾಣ ಹಂತದ ಕಟ್ಟಡದಲ್ಲಿ ವಿದ್ಯುತ್ ತಂತಿ ಜೋಡಣೆ ಹಾಗೂ ಇತರೆ ಕೆಲಸದಲ್ಲಿ ನಿರತರಾಗಿದ್ದರು. ಇದೇ ಸಂದರ್ಭದಲ್ಲೇ ವಿದ್ಯುತ್ ತಗುಲಿ ಅವರು ಮೃತಪಟ್ಟಿದ್ದಾರೆಂದು ಪ್ರತ್ಯಕ್ಷದರ್ಶಿಗಳು ಹೇಳಿಕೆ ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದರು.

ನಗರದಲ್ಲಿ ಇಂದು

ಸಂಸ್ಥಾಪಕರ ದಿನಾಚರಣೆ: ಬಿ.ಡಿ. ಜತ್ತಿ ಅವರ 110ನೇ ಜನ್ಮದಿನೋತ್ಸವ, ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, 'ಬಸವ ಕಾರುಣ್ಯ ಪ್ರಶಸ್ತಿ' ಪ್ರದಾನ: ಭೀಮಣ್ಣ ಖಂಡ್ರೆ, ಅತಿಥಿಗಳು: ಶಂಕರ ಬಿದರಿ, ವೆಂಕಟರಡ್ಡಿ ಮುದ್ನಾಳ್, ಜಯಪ್ರಕಾಶ ಚಿಗಟೇರಿ, ಆಯೋಜನೆ: ಬಸವ ಸಮಿತಿ, ಸ್ಥಳ: ನವೀಕೃತ ಅನುಭವ ಮಂಟಪ ಸಭಾಂಗಣ, ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಳಿಗ್ಗೆ 10

ಪಾಂಚಜನ್ಯ ಪುರಸ್ಕಾರ ಪ್ರದಾನ: ಉಪಸ್ಥಿತಿ: ಜಪಾನಂದಜೀ ಮಹಾರಾಜ್, ಪ್ರಶಸ್ತಿ ಪ್ರದಾನ: ಶತಾವಧಾನಿ ಆರ್. ಗಣೇಶ್, ಪೋಷಕ ಸಮಿತಿ ಉದ್ಘಾಟನೆ: ನ್ಯಾ.ಎನ್. ಕುಮಾರ್, ಆಯೋಜನೆ: ಪಾಂಚಜನ್ಯ ಪ್ರತಿಷ್ಠಾನ, ಸ್ಥಳ: ಪ್ರೊ.ಜಿ. ವೆಂಕಟಸುಬ್ಬಯ್ಯ ಶತಾಬ್ದಿ ಕಲಾ ಭವನ, 8ನೇ ಬ್ಲಾಕ್, ಜಯನಗರ, ಬೆಳಿಗ್ಗೆ 10.30

ಕಾ.ತ. ಚಿಕ್ಕಣ್ಣ ಅವರ 'ಪುರಾಣ ಕನ್ಯೆ' ಕಾದಂಬರಿ ಬಿಡುಗಡೆ: ಪ್ರೊ.ಎಚ್.ಎಸ್. ಶಿವಪ್ರಕಾಶ್, ಕೃತಿ ಪರಿಚಯ: ನಟರಾಜ್ ಬೂದಾಳ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಮುಖ್ಯ ಅತಿಥಿ: ಎಸ್. ಎನ್. ನಾಗಾರಾಜ ರೆಡ್ಡಿ, ಆಯೋಜನೆ: ರಶ್ಮಿ ಪುಸ್ತಕ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11



ಕರೀಗೌಡ ಬೀಚನಹಳ್ಳಿ ಅವರ 'ಮಾಯಾಗನ್ನಡಿ' ಕೃತಿ ಬಿಡುಗಡೆ: ಎಂ. ಕೃಷ್ಣಪ್ಪ, ಮುಖ್ಯ ಅತಿಥಿ: ಅಗ್ರಹಾರ ಕೃಷ್ಣಮೂರ್ತಿ, ಆಯೋಜನೆ: ಸಾಹಿತ್ಯ ಸಂಗಮ ಟ್ರಸ್ಟ್, ಕಿರಂ ಪ್ರಕಾಶನ, ಸ್ಥಳ: ಬಾಲಗಂಗಾಧರನಾಥ ಸ್ವಾಮೀಜಿ ಬುಕ್ ಹೌಸ್, ಆದಿಚುಂಚನಗಿರಿ ಕಾಂಪ್ಲೆಕ್ಸ್, ವಿಜಯನಗರ, ಬೆಳಿಗ್ಗೆ 11



ರಮೇಶ್ ಅರವಿಂದ್ ಅವರ 'ಪ್ರೀತಿಯಿಂದ ರಮೇಶ್' ಕೃತಿ ಬಿಡುಗಡೆ: ಅನಂತನಾಗ್, ಜೋಗಿ, ರಾಘವೇಂದ್ರ ಹುಣಸೂರು, ಆಯೋಜನೆ: ಸಾವಣ್ಣ ಪ್ರಕಾಶನ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 11

ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಮಹೇಶ ಜೋಶಿ, ಮುಖ್ಯ ಅತಿಥಿಗಳು: ಬಿ.ವಿ. ಚಿನ್ನಪ್ಪರೆಡ್ಡಿ, ಆರ್. ಜಯಶಂಕರ್, ಎಚ್. ಆರ್. ಪದ್ಮನಾಭ್, ಅಧ್ಯಕ್ಷತೆ: ಸಿ.ಜಿ. ವಿಜಯಕುಮಾರ್, ಆಯೋಜನೆ: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್, ಸ್ಥಳ: ವೈ.ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ, ಸಂಜೆ 4

ಗುರುಶ್ರೀ ಪುರಸ್ಕಾರ: ಪ್ರೊ. ಮನೋಹರ್, ಪೂರ್ಣಿಮಾ ಜೋಗಿ, ಎಸ್.ಎನ್. ಶಂಕರ್, ಬಿ.ಆರ್. ನರಸಿಂಹಮೂರ್ತಿ, ಆಯೋಜನೆ: ವಿವೇಕಾನಂದ ಕಲಾಕೇಂದ್ರ, ಸ್ಥಳ: ಸಂಸ್ಕೃತಿ ಸದನ ಸಭಾಂಗಣ, ವಿದ್ಯಾಪೀಠ, ಸಂಜೆ 4

2021–22ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ: ಮುಖ್ಯ ಅತಿಥಿಗಳು: ಎಸ್. ದೊಡ್ಡಣ್ಣ, ಉಪಸ್ಥಿತಿ: ನಿರ್ಮಲ್ ಕುಮಾರ್ ಕೆ.ಆರ್., ಎಂ.ಕೃಷ್ಣದಾಸ್, ಬಿ.ಆರ್. ವಾಸುದೇವ್, ಎನ್. ಕಾಮರಾಜ್, ಟಿ.ಆರ್. ವೆಂಕಟರೆಡ್ಡಿ, ಅಧ್ಯಕ್ಷತೆ: ಟಿ. ನಾರಾಯಣಪ್ಪ, ಆಯೋಜನೆ ಹಾಗೂ ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ, ಸಂಜೆ 6

ಶಾಂತಿ ಕುರಿತು ವಿಚಾರಸಂಕಿರಣ: 'ದೀರ್ಘಕಾಲದ ಶಾಂತಿ ನೆಲಸಲು ಮೂಲಭೂತ ಆಶಯಗಳು', ಗೌರವ ಅತಿಥಿ: ತಾರಿಕ್ ಅಹ್ಮದ್ ಸಾಹೇಬ್, ಮೊಹ್ಮದ್ ಇರ್ಫಾನ್ ಸಾಹೇಬ್, ಭಾಷಣಕಾರರು: ಎಸ್. ರಾಜೇಂದ್ರ ಪ್ರಸಾದ್, ಮಣಿವಣ್ಣನ್ ಪಿ., ನ್ಯಾ. ಜವಾದ್ ರಹೀಮ್, ಭಾಸ್ಕರ್ ರಾವ್, ನಟರಾಜ್ ಹುಳಿಯಾರ್, ಅನುಷಾ ರವಿ ಸೂದ್, ಕೆ.ಕೆ. ಬದ್ರುದ್ದೀನ್ ಸಾಹೇಬ್, ಆಯೋಜನೆ: ಅಹ್ಮದಿಯಾ ಮುಸ್ಲಿಂ ಕಮ್ಯುನಿಟಿ, ಸ್ಥಳ: ಗೋಕುಲಮ್ ಗ್ರ್ಯಾಂಡ್ ಹೋಟೆಲ್, ಎಚ್.ಎಂ.ಟಿ. ರಸ್ತೆ, ಬೆಳಿಗ್ಗೆ 11

ಕಲಾರಾಧನ: ಅತಿಥಿಗಳು: ವೈ.ಕೆ.ಸಂಧ್ಯಾ ಶರ್ಮಾ, ರಾಗಿಣಿ ಸನತ್, ಆಯೋಜನೆ: ಆರಾಧನಾ, ಸ್ಥಳ: ಅಶ್ವತ್ಥ್ ಕಲಾಭವನ, ಮಧ್ಯಾಹ್ನ 3

'ಕುಶಲವ ಕಾಳಗ' ಯಕ್ಷಗಾನ ಪ್ರದರ್ಶನ: ಭಾಗವತರು: ಸುಬ್ರಾಯ ಹೆಬ್ಬಾರ್, ಆಯೋಜನೆ: ರೋಟರಿ ಬೆಂಗಳೂರು ಸೌತ್, ಸ್ಥಳ: ವಿವೇಕ ಸಭಾಂಗಣ, ಜಯನಗರ 4ನೇ ಬ್ಲಾಕ್, ಸಂಜೆ 4

ಕನ್ನಡ ಕಲಿಕಾ ಶಿಬಿರ ಸಮಾರೋಪ ಹಾಗೂ ಪ್ರಮಾಣಪತ್ರ ವಿತರಣಾ ಸಮಾರಂಭ: ಪ್ರಮಾಣಪತ್ರ ವಿತರಣೆ: ಟಿ.ಎಸ್. ನಾಗಾಭರಣ, ಅಧ್ಯಕ್ಷತೆ: ನಸೀರ್ ಅಹ್ಮದ್, ಮುಖ್ಯ ಅತಿಥಿಗಳು: ಸಂತೋಷ್ ಹಾನಗಲ್, ವರ್ಧಮಾನ್ ಕಳಸೂರ್, ಆಶಯ ನುಡಿ: ಸಮಿವುಲ್ಲಾ ಖಾನ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಅಖಿಲ ಕರ್ನಾಟಕ ಮಹಮ್ಮದೀಯರ ಕನ್ನಡ ವೇದಿಕೆ, ಸ್ಥಳ: ಫಲಾಹಾಧಾರೇನ್ ಮದರಸ, ಎಚ್. ಬಿ.ಆರ್. ಲೇಔಟ್, ಸಂಜೆ 4

ಹಿರಿಯ ಛಾಯಾಗ್ರಾಹಕರಿಗೆ ಸನ್ಮಾನ: ಅಧ್ಯಕ್ಷತೆ: ಎಂ.ಕೃಷ್ಣಪ್ಪ, ಉದ್ಘಾಟನೆ: ಶ್ರೀನಾಥ್, ಅತಿಥಿಗಳು: ಅರ್ಜುನ್ ದೇವಯ್ಯ ತೀತಿಮಾಡ, ಪರಮೇಶ್ವರ್, ಆಯೋಜನೆ: ಹಂಪಿ ಸ್ನೇಹ ಕೂಟ, ಸ್ಥಳ: ಗ್ರಂಥಾಲಯ ಸಭಾಂಗಣ, ಹಂಪಿನಗರ, ವಿಜಯನಗರ, ಸಂಜೆ 4

ಕಾವ್ಯರಸವಿಹಾರ (ಗಮಕ ಪ್ರಸಾರ – ಪ್ರಚಾರ ಅಭಿಯಾನ): ಕಾವ್ಯವಾಚನ: ಸುಷ್ಮಾ ಸಂತೋಷ್, ವ್ಯಾಖ್ಯಾನ: ಗಂಗಮ್ಮ ಕೇಶವಮೂರ್ತಿ, ಆಯೋಜನೆ: ಕರ್ನಾಟಕ ಗಮಕ ಕಲಾ ಪರಿಷತ್, ಕೈಪು ಸಾಂಸ್ಕೃತಿಕ ಪ್ರತಿಷ್ಠಾನ. ಸ್ಥಳ: 486, ರಾಯಲ್ ಪಾರ್ಕ್ ರೆಸಿಡೆನ್ಸಿ, 5ನೇ ಕ್ರಾಸ್, 1ನೇ ಮುಖ್ಯರಸ್ತೆ, ಆಲಹಳ್ಳಿ, ಸಂಜೆ 4.30

'ದಾಸ ಶ್ರೇಷ್ಠ ಪುರಂದರ' ಸಂಗೀತ ಕಾರ್ಯಕ್ರಮ: ರಕ್ಷಾ ಕಾರ್ತಿಕ್ ಮತ್ತು ಶಿಷ್ಯರು, ಗೌರವ ಅತಿಥಿ: ವಿದ್ವಾನ್ ಆರ್. ಕೆ. ಪದ್ಮನಾಭ, ಆಯೋಜನೆ: ನಟನಮ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಸಂಪಂಗಿರಾಮ ನಗರ, ಸಂಜೆ 5

ಸಿಂಗ್ ಫಾರ್ ಕೆಕೆ: ಕುನಾಲ್ ಗಾಂಜಾವಾಲ, ಜುಬೀನ್ ಗಾರ್ಗ್, ಆಯೋಜನೆ ಹಾಗೂ ಸ್ಥಳ: ಭಾರ್ತಿಯಾ ಮಾಲ್, ಸಂಜೆ 5

ತಿಂಗಳ ಮಾತುಕತೆ: ಕುಮಾರಸ್ವಾಮಿ ಬೆಜ್ಜಿಹಳ್ಳಿ, ಜಿ.ಪಿ. ಬಸವರಾಜು, ವಿ.ಎನ್. ಲಕ್ಷ್ಮೀನಾರಾಯಣ, ಓ.ಎಲ್. ನಾಗಭೂಷಣಸ್ವಾಮಿ, ಬಿದರಹಳ್ಳಿ ನರಸಿಂಹಮೂರ್ತಿ, ಎಂ.ಬಿ. ನಾಗರಾಜ್, ಟಿ.ಎಸ್. ರಾಮಸ್ವಾಮಿ, ಶಾಂತಾ ಬಿ.ಎನ್., ಆಯೋಜನೆ ಹಾಗೂ ಸ್ಥಳ: ಕ್ರಿಯಾ ಮಾಧ್ಯಮ, # 70, ಸುಬ್ಬರಾಮಚೆಟ್ಟಿ ರಸ್ತೆ, ನೆಟ್ಟಕಲ್ಲಪ್ಪ ವೃತ್ತ, ಸಂಜೆ 5

ಕಾ.ವೆಂ. ಶ್ರೀನಿವಾಸಮೂರ್ತಿ ಅವರ ಐದು ಪುಸ್ತಕಗಳು ಬಿಡುಗಡೆ: 'ಬೀಸಿದರೇನು ಬಿರುಗಾಳಿ', 'ಭಾವಗೀತೆಯ ಛಂದಸ್ಸು', 'ಕನ್ನಡ ಕಾವ್ಯದಲ್ಲಿ ಕುಲದ ನಿರ್ವಚನ– ಕಾವ್ಯ ಸಂಪಾದನೆ', 'ಸಾಹಿತ್ಯ ಕಲಾಕ್ಷೇತ್ರ', 'ಎಂ. ಚಿದಾನಂದಮೂರ್ತಿ ಕನ್ನಡಪ್ರಜ್ಞೆ', ಪುಸ್ತಕಗಳ ಲೋಕಾರ್ಪಣೆ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ಎಚ್.ಎಸ್. ವೆಂಕಟೇಶಮೂರ್ತಿ, ಮುಖ್ಯ ಅತಿಥಿಗಳು: ಬಿ. ಗಂಗಾಧರ್, ಎಚ್.ಎಸ್. ಸತ್ಯನಾರಾಯಣ, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಶೇಷಾದ್ರಿಪುರ ಕಲೇಜಿನ ದತ್ತಿ ಸಭಾಂಗಣ, ಶೇಷಾದ್ರಿಪುರ, ಸಂಜೆ 5.15



ಆರ್.ಆರ್. ಕೇಶವಮೂರ್ತಿ ಸಂಗೀತ ಉತ್ಸವ: ಉದ್ಘಾಟನೆ: ವಿದ್ಯಾಭೂಷಣ, ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಂ.ಬಿ. ದ್ಯಬೇರಿ, ಆರ್. ರಮೇಶ್ ಆಚಾರ್ಯ, ಆಯೋಜನೆ: ಸ್ವರ ಸೌರಭ: ಸ್ಥಳ: ಕೆನರಾ ಯೂನಿಯನ್, ಮಲ್ಲೇಶ್ವರ, ಸಂಜೆ 4

'ಶ್ರೀ ಸಪ್ಪನಾಡು ಕ್ಷೇತ್ರ ಮಹಾತ್ಮೆ' ಯಕ್ಷಗಾನ: ಭಾಗವತರು: ಕರುಣಾಕರ ಶೆಟ್ಟಿಗಾರ್, ಆಯೋಜನೆ: ಪುತ್ತೂರು ಮಹಾಲಿಂಗೇಶ್ವರ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಟೆಲಿಕಾಂ ಲೇಔಟ್, ಜಕ್ಕೂರು, ಸಂಜೆ 5.30

ಊಂಜಲ್ ಸಂಗೀತೋತ್ಸವ: ಚಂದನಾ ಮುರಳೀಧರ್, ಹಾರ್ಮೋನಿಯಂ: ನಾಗೇಶ್, ತಬಲಾ: ಸರ್ವೋತ್ತಮ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6

'ಭಾವ ಸಂಗಮ' ಕನ್ನಡ ಗೀತೆ ಗಾಯನ: ಗಣೇಶ್ ದೇಸಾಯಿ ಮತ್ತು ತಂಡ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

'ಮಲ್ಲಿಗೆ' ನಾಟಕ ಪ್ರದರ್ಶನ: ನಿರ್ದೇಶನ: ಪ್ರಕಾಶ್ ಪಿ. ಶೆಟ್ಟಿ, ಆಯೋಜನೆ: ರಂಗಮಂಟಪ, ಸ್ಥಳ: ರಂಗಶಂಕರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

ಗ್ರಾಹಕರ ಪ್ರಶ್ನೆಗಳಿಗೆ ಉತ್ತರಿಸಿದ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ

ಸಮಸ್ಯೆಗಳ ಮಹಾಪೂರ: ಸ್ಪಂದನೆಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದೇ ಪದೇ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ. ಮನೆ ಮೇಲೆ ವಿದ್ಯುತ್ ತಂತಿ ಹಾದು ಹೋಗಿದೆ, ಜಮೀನಿನಲ್ಲಿ ಹೈಟೆನ್ಷನ್ ವೈರ್ ಹಾಕಲಾಗಿದೆ, ಬಿಲ್ ಪಾವತಿಸುವುದು ತಡವಾದರೆ ಸಿಬ್ಬಂದಿ ವಿದ್ಯುತ್ ಕಡಿತಗೊಳಿಸುತ್ತಾರೆ....

ಇಂತಹ ಹಲವಾರು ಪ್ರಶ್ನೆಗಳಿಗೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಸಮಾಧಾನದಿಂದ ಉತ್ತರಿಸಿದರು. 'ಪ್ರಜಾವಾಣಿ' ಕಚೇರಿಯಲ್ಲಿ ಶುಕ್ರವಾರ ನಡೆದ 'ಫೋನ್ - ಇನ್' ಕಾರ್ಯಕ್ರಮದಲ್ಲಿ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳ ಗ್ರಾಹಕರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ನೀಡುವ ಭರವಸೆ ನೀಡಿದರು. ಕೆಲವು ಸಮಸ್ಯೆಗಳಿಗೆ ತಕ್ಷಣವೇ ಪರಿಹಾರ ಒದಗಿಸುವುದಾಗಿ ತಿಳಿಸಿದರು.

ಗ್ರಾಹಕರ ಪ್ರಶ್ನೆಗಳಿಗೆ ಮಹಾಂತೇಶ ಬೀಳಗಿ ಅವರು ನೀಡಿರುವ ಉತ್ತರಗಳ ವಿವರ ಇಲ್ಲಿದೆ.

'ಪ್ರಜಾವಾಣಿ' ಫೋನ್‌ಇನ್ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಬೆಸ್ಕಾಂ ಅಧಿಕಾರಿಗಳಾದ ಸಿಜಿಎಂ ಎಂ.ಎಲ್. ನಾಗರಾಜ್, ನಿರ್ದೇಶಕ (ತಾಂತ್ರಿಕ) ಡಿ. ನಾಗಾರ್ಜುನ್, ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ, ಎಚ್.ಜೆ ರಮೇಶ್, ಎಚ್. ಜೆ ರಮೇಶ್ (ಎಡದಿಂದ ಬಲಕ್ಕೆ ನಿಂತಿರುವುದು) ಮಹಾಲಕ್ಷ್ಮಿ, ಶಿವಕುಮಾರ್, ಪಾಲನೇತ್ರ, ಬಸವರಾಜ ಪಾಟೀಲ್, ಶ್ರೀನಾಥ್, ಜ್ಯೋತಿಪ್ರಕಾಶ್, ಟಿ.ಎಂ.ಶಿವಪ್ರಕಾಶ್, ನವನೀತ್ ಕೃಷ್ಣನ್, ಕಾರ್ತಿಕ್, ಶ್ರೀನಿವಾಸಮೂರ್ತಿ, ಗೋಪಾಲ್ ಸಾಲಿಯಾನ್, ನಾಗರಾಜ್ ಇದ್ದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಫೋನ್-ಇನ್

● **ಹೊಸದಾಗಿ ಮನೆ ಕಟ್ಟುವವರು ₹5-6 ಸಾವಿರ ಪಾವತಿಸಿ ವಿದ್ಯುತ್ ಸಂಪರ್ಕ ಪಡೆಯಬೇಕಾಗಿದೆ. ವಿದ್ಯುತ್ ಬಳಸದಿದ್ದರೂ ₹1500 ಕಟ್ಟಿಸಿಕೊಳ್ಳುತ್ತಾರೆ. ಹಣ ಕಟ್ಟದಿದ್ದರೆ ವಿದ್ಯುತ್ ಕಡಿತಗೊಳಿಸಲಾಗುತ್ತದೆ.**

ಹರೀಶ್, ರಾಮನಗರ

ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲು ನಿರ್ದಿಷ್ಟ ದರ ನಿಗದಿಪಡಿಸಲಾಗಿದೆ. ಶಾಶ್ವತ ಸಂಪರ್ಕಕ್ಕೆ ಪ್ರತ್ಯೇಕ ದರ ನಿಗದಿಪಡಿಸಲಾಗಿದೆ. ತಾತ್ಕಾಲಿಕ ಸಂಪರ್ಕಕ್ಕೆ ನಿರ್ದಿಷ್ಟ ಅವಧಿ ನಿಗದಿಪಡಿಸಲಾಗುತ್ತದೆ. ಈ ಅವಧಿಯ ಬಳಿಕ ಮತ್ತೆ ಶುಲ್ಕ ಪಾವತಿಸಿ ಸಂಪರ್ಕವನ್ನು ನವೀಕರಣಗೊಳಿಸಬೇಕು. ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಶುಲ್ಕ ಪಡೆಯುತ್ತಿದ್ದರೆ ಪರಿಶೀಲಿಸುತ್ತೇವೆ. ಶುಲ್ಕಕ್ಕೆ ಸಂಬಂಧಿಸಿದ ವಿವರಗಳು ಬೆಸ್ಕಾಂ ಕಚೇರಿಗಳಲ್ಲಿ ಲಭ್ಯ. ಬಡವರಿಗೆ ಈ ಮೊತ್ತ ಹೆಚ್ಚು ಎನ್ನುವುದಾದರೆ ಸರ್ಕಾರದ ಗಮನಕ್ಕೆ ತರುತ್ತೇವೆ.

● **ಗ್ರಾಮೀಣ ಪ್ರದೇಶದಲ್ಲಿ ರಾತ್ರಿ ಹತ್ತು ಗಂಟೆ ನಂತರ ಬೆಳಿಗ್ಗೆ 9 ಗಂಟೆಯವರೆಗೂ ವಿದ್ಯುತ್ ಇರುವುದಿಲ್ಲ. ಹಲವು ಸಿಬ್ಬಂದಿ 10-12 ವರ್ಷಗಳಿಂದ ಒಂದೇ ಸ್ಥಳದಲ್ಲಿದ್ದಾರೆ, ಬದಲಾವಣೆಯಾಗಿಲ್ಲ.**

ಸತೀಶ್, ಮೂದಿಗೆರೆ, ಚನ್ನಗಿರಿ ತಾಲ್ಲೂಕು.

ವಿದ್ಯುತ್ ಕಡಿತವಾದರೆ ಆರು ತಾಸುಗಳ ಒಳಗೆ ಸಂಪರ್ಕ ಕಲ್ಪಿಸಬೇಕು ಎಂದು ಸೂಚನೆ ನೀಡಲಾಗಿದೆ. ಈ ಸಮಸ್ಯೆಯನ್ನು ಪರಿಶೀಲಿಸಿ ಬಗೆಹರಿಸುತ್ತೇವೆ. ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿರುವ ಸಿಬ್ಬಂದಿಯನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗುವುದು. ಈ ಮೂಲಕ ಇಲಾಖೆಯಲ್ಲಿ ಚೈತನ್ಯ ಭರಿತ ವಾತಾವರಣ ಸೃಷ್ಟಿಸಲು ಕ್ರಮ ಕೈಗೊಳ್ಳುತ್ತೇವೆ.

● **ನಮಗೆ ಮಾಹಿತಿ ನೀಡದೆಯೇ ನಮ್ಮ ಜಮೀನಿನಲ್ಲಿ ಹೈಟೆನ್ಷನ್ ವೈರ್ ಹಾಕಲಾಗಿದೆ. ಒಂದೂವರೆ ಎಕರೆ ಜಾಗದಲ್ಲಿ ತಂತಿ ಹಾದು ಹೋಗಿದೆ. ಈ ಬಗ್ಗೆ ದೂರು ನೀಡಿದರೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಪರಿಹಾರವನ್ನೂ ನೀಡಿಲ್ಲ**

ಸುಮಾ, ಕಾಚನಾಯಕನಹಳ್ಳಿ, ಚಂದಾಪುರ.

ಕೈಗಾರಿಕೆಗಳಿಗೆ ಮತ್ತು ವಾಣಿಜ್ಯ ಉದ್ದೇಶಕ್ಕೆ ಹೈಟೆನ್ಷನ್ ವಿದ್ಯುತ್ ಮಾರ್ಗಗಳು ಅನಿವಾರ್ಯ. ಬೇರೆ ಕಡೆ ಸ್ಥಳಾಂತರಿಸಲು ಸಾಧ್ಯವಿದ್ದರೆ ಪರಿಶೀಲಿಸಲಾಗುವುದು. ಒಂದು ವೇಳೆ, ಇದೇ ಮಾರ್ಗದಲ್ಲಿ ವಿದ್ಯುತ್ ತಂತಿ ಹಾಕುವುದು ಅನಿವಾರ್ಯವಾಗಿದ್ದರೆ ಪರಿಹಾರ ನೀಡಲಾಗುವುದು.

● **ಬಿಲ್ ಪಾವತಿಸುವುದು ತಡವಾಗಿದ್ದಕ್ಕೆ ಸಿಬ್ಬಂದಿ ವಿದ್ಯುತ್ ಕಡಿತಗೊಳಿಸಿದ್ದಾರೆ. ನಮ್ಮಿಂದ ತಪ್ಪಾಗಿದೆ ನಿಜ. ಆದರೆ, ಸ್ವಲ್ಪ ಸಮಯಾವಕಾಶ ನೀಡಬೇಕಾಗಿತ್ತು. ವಿದ್ಯುತ್ ಕಡಿತಗೊಳಿಸಿದರೆ ಹೇಗೆ?**

ರಿಯಾಜ್ ಕೋಡಿಗೆಹಳ್ಳಿ, ಬೆಂಗಳೂರು.

ಸೌಜನ್ಯದಿಂದ ವರ್ತಿಸುವಂತೆ ಸಿಬ್ಬಂದಿಗೆ ಪಾಠ ಮಾಡುತ್ತೇವೆ. ಸಕಾಲಕ್ಕೆ ಬಿಲ್ ಪಾವತಿಸುವುದು ಸಹ ಗ್ರಾಹಕರ ಕರ್ತವ್ಯ.

● **ನಮ್ಮ ಪ್ರದೇಶದಲ್ಲಿ ಬೀದಿ ದೀಪಗಳ ಸಮಸ್ಯೆ ಇದೆ. ಇಲ್ಲಿನ ಎಲೆಕ್ಟ್ರಿಕಲ್ ಪ್ಯಾನಲ್‌ಗಳು ಹಾಳಾಗಿರುವುದರಿಂದ ಸರಿಪಡಿಸಬೇಕು.**

ಮಧು, ಬನಶಂಕರಿ, 6ನೇ ಹಂತ, ವೃಷಭಾವತಿ ನಗರ

ಬೀದಿ ದೀಪಗಳನ್ನು ಅಳವಡಿಸುವುದು ಸ್ಥಳೀಯ ಸಂಸ್ಥೆಯ ಜವಾಬ್ದಾರಿಯಾಗಿದೆ. ಎಲೆಕ್ಟ್ರಿಕಲ್ ಪ್ಯಾನೆಲ್ ದುರಸ್ತಿಗೊಳಿಸಲಾಗುವುದು.

● **ವಿದ್ಯುತ್ ಬಿಲ್ ಪಾವತಿಸಲು ಇಂಟರ್‌ನೆಟ್ ಸಮಸ್ಯೆಯಾಗುತ್ತಿದೆ.**

ಅಂಬರೀಷ್. ಮುಳಬಾಗಿಲು, ಕೋಲಾರ

ಎರಡು ತಿಂಗಳಿಂದ ಈ ಸಮಸ್ಯೆಯಾಗಿತ್ತು. ಈಗ ಬೆಳಿಗ್ಗೆ 8 ಗಂಟೆಯಿಂದ 1.30ರವರೆಗೆ ಬಿಲ್ ಪಾವತಿಸಿಕೊಳ್ಳಲಾಗುತ್ತಿದೆ. ಈಗ ಸಾಫ್ಟ್‌ವೇರ್ ಸಮಸ್ಯೆ ಬಗೆಹರಿಸಲಾಗಿದೆ.

'ಅಮೃತ ಜ್ಯೋತಿ ಸ್ಥಗಿತಗೊಳಿಸಿಲ್ಲ'

● **ವಿದ್ಯುತ್ ಸಂಪರ್ಕ ವ್ಯವಸ್ಥೆಯಲ್ಲಿ ಸುಧಾರಣೆಯಾಗಿದೆ. ನೆಲದಡಿಯಲ್ಲಿ ಕೇಬಲ್ ಹಾಕುವಾಗ ಸಮಸ್ಯೆಯಾಗುತ್ತಿದೆ. 'ಅಮೃತ ಜ್ಯೋತಿ' ಯೋಜನೆ ಸ್ಥಗಿತಗೊಳಿಸಲಾಗುತ್ತಿದೆಯೇ?**

ಅಶ್ವತ್ಥರೆಡ್ಡಿ, ರೈತ. ಮಾಲೂರು, ಕೋಲಾರ ಜಿಲ್ಲೆ.

ನೆಲದಡಿಯಲ್ಲಿ ಹಾಕುವ ಕೇಬಲ್ ಸಮಸ್ಯೆ ಸರಿಪಡಿಸುತ್ತೇವೆ. ಅಮೃತ ಯೋಜನೆ ಮುಂದುವರಿಸುತ್ತೇವೆ. ಸ್ಥಗಿತಗೊಳಿಸುವುದಿಲ್ಲ. ಈ ಬಗ್ಗೆ ಯಾವುದೇ ಗೊಂದಲ ಬೇಡ. ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳ ಗೃಹ ವಿದ್ಯುತ್ ಬಳಕೆದಾರರಿಗೆ (ಭಾಗ್ಯಜ್ಯೋತಿ, ಕುಟೀರಜ್ಯೋತಿ ಬಳಕೆದಾರರನ್ನು ಒಳಗೊಂಡಂತೆ) ಮಾಸಿಕ 75 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸಿಬ್ಬಂದಿ ಕಾರ್ಯಕ್ಕೆ ಮೆಚ್ಚುಗೆ

'ಎಂಟು ಜಿಲ್ಲೆಗಳಲ್ಲಿನ 1.30 ಕೋಟಿ ಗ್ರಾಹಕರನ್ನು ಹೊಂದಿರುವ ಬೆಸ್ಕಾಂ ಗ್ರಾಹಕರಿಗೆ ಅತ್ಯುತ್ತಮ ಸೇವೆ ಒದಗಿಸಲು ಪ್ರಯತ್ನಿಸುತ್ತಿದೆ. ಬೆಸ್ಕಾಂ ಸಿಬ್ಬಂದಿ ಜೀವದ ಹಂಗು ತೊರೆದು ಹಗಲಿರುಳು ಶ್ರಮಿಸುತ್ತಿದ್ದಾರೆ. ಅಪಾಯವನ್ನು ಬೆನ್ನಿಗೆ ಕಟ್ಟಿಕೊಂಡು ಕೆಲಸ ಮಾಡುತ್ತಾರೆ' ಎಂದು ಮಹಾಂತೇಶ ಬೀಳಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಅರ್ಕಾವತಿಗೆ ಪರ್ಯಾಯ ಸೇತುವೆ: ಗಡ್ಕರಿಗೆ ಡಿಕೆಶಿ ಮನವಿ

ಬೆಂಗಳೂರು: ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಅವರನ್ನು ಶುಕ್ರವಾರ ಭೇಟಿ ಮಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್, ಕನಕಪುರ ಪಟ್ಟಣದಲ್ಲಿ ಹಾದುಹೋಗಿರುವ ಅರ್ಕಾವತಿ ನದಿಗೆ ಅಡ್ಡಲಾಗಿ ಪರ್ಯಾಯ ಸೇತುವೆ ನಿರ್ಮಾಣಕ್ಕೆ ಮನವಿ ಸಲ್ಲಿಸಿದರು.

ದಿಂಡಿಗಲ್-ಬೆಂಗಳೂರು ನಡುವೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ ಮಾರ್ಗದಲ್ಲಿ ಕನಕಪುರ ಪಟ್ಟಣದಲ್ಲೇ ಅರ್ಕಾವತಿ ನದಿ ಹರಿಯುತ್ತದೆ. 1954ರಲ್ಲಿ ನಿರ್ಮಿಸಿರುವ ಸೇತುವೆ ಅತ್ಯಂತ ಕಿರಿದಾಗಿದ್ದು, ವಾಹನಗಳ ಸಂಚಾರಕ್ಕೆ ತೀವ್ರ ಸಮಸ್ಯೆಯಾಗುತ್ತಿದೆ. ₹ 62.10 ಕೋಟಿ ವೆಚ್ಚದಲ್ಲಿ ಪರ್ಯಾಯ ಸೇತುವೆ ನಿರ್ಮಿಸುವ ಪ್ರಸ್ತಾವ ಇದೆ. ಅದಕ್ಕೆ ತ್ವರಿತವಾಗಿ ಮಂಜೂರಾತಿ ನೀಡಿ, ಕಾಮಗಾರಿ ಆರಂಭಿಸಬೇಕು ಎಂದು ಮನವಿ ಮಾಡಿದರು.

ರಾಷ್ಟ್ರೀಯ ಹೆದ್ದಾರಿ 209ರ ಸುಧಾರಣೆಗೂ ಕ್ರಮ ಕೈಗೊಳ್ಳಬೇಕು. ಬೆಂಗಳೂರು-ಮೈಸೂರು ನಡುವಿನ ದಶಪಥ ಹೆದ್ದಾರಿಯಲ್ಲಿ ಇರುವ ದೋಷಗಳನ್ನು ಸರಿಪಡಿಸಬೇಕು. ಅತಿವೃಷ್ಟಿಯಿಂದ ಈ ಮಾರ್ಗದ ರಾಮನಗರ, ಚನ್ನಪಟ್ಟಣ ಮತ್ತು ಮಂಡ್ಯ ಭಾಗದಲ್ಲಿ ಜನರಿಗೆ ಉಂಟಾದ ಸಂಕಷ್ಟಕ್ಕೆ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಇದ್ದರು.

ದೇವಸ್ಥಾನ ನಿರ್ಮಾಣ: 13ಕ್ಕೆ ಸಿಂಡಿಕೇಟ್ ಸಭೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಗಣೇಶ ದೇವಸ್ಥಾನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇದೇ 13ರಂದು ಸಿಂಡಿಕೇಟ್ ವಿಶೇಷ ಸಭೆ ನಡೆಯಲಿದೆ.

ಈ ಸಭೆಯಲ್ಲಿ ದೇವಸ್ಥಾನಕ್ಕೆ ನಿರ್ದಿಷ್ಟ ಜಾಗ ನೀಡುವ ಸಂಬಂಧ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.

ದೇವಸ್ಥಾನ ನಿರ್ಮಾಣ ಕಾಮಗಾರಿ ಶುಕ್ರವಾರವೂ ಮುಂದುವರಿಸಿದ್ದಕ್ಕೆ ಪ್ರತಿಭಟನೆ ನಡೆಸಲು ಮುಂದಾದ ಕೆಲವು ವಿದ್ಯಾರ್ಥಿಗಳನ್ನು ಪ್ರಾಧ್ಯಾಪಕರೇ ಸಮಾಧಾನಪಡಿಸಿದರು.

ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರೇ ಜಾಗವನ್ನು ಗುರುತಿಸಲಿ ಎನ್ನುವ ಆಗ್ರಹ ಕೂಡ ವಿದ್ಯಾರ್ಥಿ ಸಮೂಹದಿಂದ ವ್ಯಕ್ತವಾಗಿವೆ.

'ಗಣೇಶ ದೇವಸ್ಥಾನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಹಿಂದಿನ ಕುಲಪತಿ ಅವರು ಸಿಂಡಿಕೇಟ್ ಅನುಮೋದನೆ ಪಡೆದಿರಲಿಲ್ಲ. ವಿಶ್ವವಿದ್ಯಾಲಯದ ಜತೆ ಮಾತುಕತೆ ನಡೆಸಿ, ಸೌಹಾರ್ದಯುತವಾಗಿ ದೇವಸ್ಥಾನ ಸ್ಥಳಾಂತರಿಸಿ ಎಂದು ಸರ್ಕಾರ ಆದೇಶ ನೀಡಿತ್ತು. ಈ ಬಗ್ಗೆಯೂ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿಲ್ಲ' ಎಂದು ಸಿಂಡಿಕೇಟ್ ಸದಸ್ಯ ಡಾ. ಎಚ್. ಸುಧಾಕರ್ ತಿಳಿಸಿದರು.

ಹಲ್ಲೆ: ರೌಡಿ ಸಹೋದರರ ಬಂಧನ

ಬೆಂಗಳೂರು: ಎದುರಾಳಿ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದ ಆರೋಪದಡಿ ರೌಡಿ ಸಹೋದರರನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಂಜು ಹಾಗೂ ವೀರು ಬಂಧಿತರು. ಅಪರಾಧ ಪ್ರಕರಣದಲ್ಲಿ ಜೈಲು ಸೇರಿದ್ದ ಇಬ್ಬರೂ 15 ದಿನಗಳ ಹಿಂದೆಯಷ್ಟೇ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ಈಗ ಪುನಃ ಅವರಿಬ್ಬರೂ ಅಪರಾಧ ಕೃತ್ಯ ಎಸಗಿದ್ದಾರೆ. ರೌಡಿ ಕುಳ್ಳ ರಿಜ್ವಾನ್ ಜೊತೆ ಗುರುತಿಸಿಕೊಂಡಿದ್ದ ಸಂಜು ಹಾಗೂ ವೀರು ಹೆಸರು ರೌಡಿ ಪಟ್ಟಿಯಲ್ಲಿದೆ. ಇವರಿಬ್ಬರೂ ಸೇರಿಕೊಂಡು ಮುನೇಶ್ವರ ಬ್ಲಾಕ್‌ನಲ್ಲಿ ಮನೋಜ್ ಎಂಬುವರ ಮೇಲೆ ಇತ್ತೀಚೆಗೆ ಹಲ್ಲೆ ಮಾಡಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನೂ ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ

ಬಿಬಿಎಂಪಿ ವಾರ್ಡ್ ಮರು ವಿಂಗಡಣೆ ಅರ್ಜಿ ವಿಚಾರಣೆ ● ಸರ್ಕಾರದಿಂದ ನಿಲುವು ಪ್ರತಿಪಾದನೆ

ರಾಜಕೀಯ ಇಲ್ಲ: ಅಡ್ವೋಕೇಟ್ ಜನರಲ್ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಚುನಾವಣೆಗೆ ಸಂಬಂಧಿಸಿದಂತೆ 243 ವಾರ್ಡ್‌ಗಳ ಮೀಸಲು ನಿಗದಿಗೆ ಭೌಗೋಳಿಕ ವಿಸ್ತೀರ್ಣ ಮತ್ತು 2011ರ ಜನಗಣತಿ ಆಧಾರದಲ್ಲಿ ನ್ಯಾಯೋಚಿತ ಮಾರ್ಗಗಳನ್ನು ಅನುಸರಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ವಾರ್ಡ್‌ಗಳ ಮರು ವಿಂಗಡಣೆ ಅಧಿಸೂಚನೆ ಪ್ರಶ್ನಿಸಿ ಶಾಸಕರಾದ ಸೌಮ್ಯಾ ರೆಡ್ಡಿ ಮತ್ತು ಬಿ.ಝಡ್. ಜಮೀರ್ ಅಹ್ಮದ್ ಖಾನ್ ಸೇರಿ 10ಕ್ಕೂ ಹೆಚ್ಚು ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಮುಖ್ಯಾಂಶಗಳು

- ನ್ಯಾಯೋಚಿತ ಮಾರ್ಗಗಳನ್ನು ಅನುಸರಿಸಲಾಗಿದೆ: ರಾಜ್ಯ ಸರ್ಕಾರ
- 10ಕ್ಕೂ ಹೆಚ್ಚು ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ
- 34 ಸಾವಿರದಿಂದ 39 ಸಾವಿರ ಜನಸಂಖ್ಯೆಯ ಆಧಾರದಲ್ಲಿ ವಾರ್ಡ್ ಮರುವಿಂಗಡಣೆ

ಸರ್ಕಾರದ ನಿಲುವನ್ನು ಸಮರ್ಥಿಸಿಕೊಂಡ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ವಾರ್ಡ್ ಮರು ವಿಂಗಡಣೆ ವೇಳೆ ಜನಸಂಖ್ಯೆ ಪ್ರಮಾಣವನ್ನು ಪರಿಗಣಿಸುವಲ್ಲಿ ಸರ್ಕಾರ ತಾರತಮ್ಯ ಎಸಗಿದೆ ಮತ್ತು ಈ ಮೂಲಕ ಬಿಬಿಎಂಪಿ ಕಾಯ್ದೆ-2020ರ ಕಲಂ 7 ಅನ್ನು ಉಲ್ಲಂಘಿಸಲಾಗಿದೆ' ಎಂಬ ಅರ್ಜಿದಾರರ ಆಕ್ಷೇಪಣೆಯನ್ನು ಬಲವಾಗಿ ಅಲ್ಲಗಳೆದರು.

'ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ವಾರ್ಡ್ ವಿಂಗಡಣೆಯನ್ನು ಶೇ 10ರಂತೆ 34 ಸಾವಿರದಿಂದ 39 ಸಾವಿರ ಜನಸಂಖ್ಯೆಯ ಆಧಾರದಲ್ಲಿ ಮರು ವಿಂಗಡಣೆ ಮಾಡಲಾಗಿದೆ. ಕೆಲವೆಡೆ ವಾರ್ಡ್‌ಗಳು ಭೌಗೋಳಿಕವಾಗಿ ಪುಟ್ಟ ವಿಸ್ತೀರ್ಣದವಾಗಿದ್ದು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದರೆ, ಮತ್ತೆ ಕೆಲವೆಡೆ ಭೌಗೋಳಿಕವಾಗಿ ವಿಶಾಲವಾದ ವಾರ್ಡ್‌ಗಳಲ್ಲಿ ಜನಸಂಖ್ಯೆ ಕಡಿಮೆ ಇದೆ. ಹೀಗಾಗಿ, ಈ ಅಸಮತೋಲನವನ್ನು ಶೇ 10ರ ಪ್ರಮಾಣದಂತೆ ಹೊಂದಿಸುವ ಮೂಲಕ ವಿಂಗಡಣೆ ನಡೆಸಲಾಗಿದೆ' ಎಂದರು.

'ಮರು ವಿಂಗಡಣೆಯಲ್ಲಿ ರಾಜಕೀಯ ದುರುದ್ದೇಶ ಅಡಗಿದೆ' ಎಂಬ ಅರ್ಜಿದಾರ ಜಮೀರ್ ಅಹಮದ್ ಪರ ವಕೀಲರ ಆರೋಪವನ್ನು ತಳ್ಳಿಹಾಕಿದ ಪ್ರಭುಲಿಂಗ ನಾವದಗಿ, 'ಪ್ರತಿಪಕ್ಷದ ಶಾಸಕರು ಪ್ರತಿನಿಧಿಸುತ್ತಿರುವ ಚಾಮರಾಜಪೇಟೆ, ಶಿವಾಜಿನಗರ ಮತ್ತು ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ವಾರ್ಡ್‌ಗಳ ಸಂಖ್ಯೆ ಕಡಿಮೆಯಾಗಿದ್ದರೆ, ಅದೇ ಪಕ್ಷದವರು ಪ್ರತಿನಿಧಿಸುತ್ತಿರುವ ಬ್ಯಾಟರಾಯನಪುರ, ಬಿಟಿಎಂ ಲೇಔಟ್, ಸರ್ವಜ್ಞನಗರ, ದಾಸರಹಳ್ಳಿ ಕ್ಷೇತ್ರಗಳಲ್ಲಿ ವಾರ್ಡ್‌ಗಳ ಸಂಖ್ಯೆ ಹೆಚ್ಚಾಗಿದೆ' ಎಂದು ಸಮಜಾಯಿಷಿ ನೀಡಿದರು.

'ಮರುವಿಂಗಡಣೆಯ ಮಾನದಂಡಗಳೇನು, ಯಾಕೆ ಇಷ್ಟೊಂದು ಅಂತರ' ಎಂಬ ನ್ಯಾಯಪೀಠದ ಪ್ರಶ್ನೆಗೆ, '2011ರ ಜನಗಣತಿ ಆಧಾರದಲ್ಲೇ ಜನಸಂಖ್ಯೆ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ' ಎಂದರು.

ಆಯೋಗದ ಪರ ವಾದ ಮಂಡಿಸಿದ ಹಿರಿಯ ವಕೀಲ ಕೆ.ಎನ್. ಫಣೀಂದ್ರ, 'ಆಯೋಗ ಈಗಾಗಲೇ ತನ್ನ ನಿಲುವನ್ನು ಕೋರ್ಟ್‌ಗೆ ಸ್ಪಷ್ಟವಾಗಿ ತಿಳಿಸಿದೆ. ಈ ವಿಚಾರದಲ್ಲಿ ಅರ್ಜಿದಾರರ ಪರ ವಕೀಲರು ಮತ್ತೆ ಮತ್ತೆ ತಕರಾರು ತೆಗೆಯುವುದು ಸಲ್ಲ' ಎಂದು ಅಸಮಾಧಾನ ಹೊರಹಾಕಿದರು.

'ಈಗ ನಿಗದಿಪಡಿಸಲಾಗಿರುವ ಮರುವಿಂಗಡಣೆಯ ಅನುಸಾರವೇ ಚುನಾವಣೆ ನಡೆಸಬೇಕು. ಏನಾದರೂ ಆಕ್ಷೇಪಣೆ ಅಥವಾ ಲೋಪದೋಷಗಳು ಇದ್ದಲ್ಲಿ ಅದನ್ನು ಮುಂದಿನ ಚುನಾವಣೆಯಲ್ಲಿ ಸರಿಪಡಿಸಿಕೊಳ್ಳಬಹುದು. ಚುನಾಯಿತ ಪ್ರತಿನಿಧಿಗಳಿಲ್ಲದೆ ಪಾಲಿಕೆಯನ್ನು ಆಡಳಿತಾಂಗದ ಕೈಯಲ್ಲಿ ನಡೆಸಿಕೊಂಡು ಹೋಗುವುದು ಸೂಕ್ತವಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಕೋರ್ಟ್ ಕಲಾಪದ ಅವಧಿ ಪೂರ್ಣಗೊಂಡ ಕಾರಣ ನ್ಯಾಯಮೂರ್ತಿಗಳು ವಿಚಾರಣೆಯನ್ನು ಇದೇ 13ಕ್ಕೆ ಮುಂದೂಡಿದರು.

ಪೊಲೀಸ್ ಭದ್ರತೆಯಲ್ಲಿ ಕಾಮಗಾರಿ: ಎಂಜಿನಿಯರ್ ಅಮಾನತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಗಣೇಶ ದೇವಸ್ಥಾನ ನಿರ್ಮಾಣಕ್ಕಾಗಿ ಪೊಲೀಸ್ ಭದ್ರತೆಯಲ್ಲಿ ಗುರುವಾರ ಕಾಮಗಾರಿ ಆರಂಭಿಸಲಾಯಿತು. ಇದನ್ನು ಖಂಡಿಸಿ ಪ್ರತಿಭಟನೆ ನಡೆಸಿದ ಶಿಕ್ಷಕರು ಹಾಗೂ ಕೆಲ ವಿದ್ಯಾರ್ಥಿಗಳು, 'ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಅವರನ್ನು ಅಮಾನತು ಮಾಡಬೇಕು' ಎಂದು ಒತ್ತಾಯಿಸಿದರು.

ಕುಲಪತಿ ಅವರಿಗೆ ಮನವಿ ಸಲ್ಲಿಸಿರುವ ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕರ ಪರಿಷತ್ ಸದಸ್ಯರು, 'ಯಾವುದೇ ಅನುಮತಿ ಪಡೆಯದೇ ದೇವಸ್ಥಾನ ನಿರ್ಮಿಸಲಾಗುತ್ತಿದೆ. ಇದನ್ನು ಪ್ರಶ್ನಿಸಿದ್ದಕ್ಕೆ ಶಿಕ್ಷಕರನ್ನು ಕಿಡಿಗೇಡಿಗಳೆಂದು ಅವಮಾನಿಸಲಾಗಿದೆ. ಈ ಅನಧಿಕೃತ ಕಾಮಗಾರಿಗೆ ಕಾರಣವಾಗಿರುವ ರಾಜರಾಜೇಶ್ವರಿನಗರ ವಲಯದ ರಸ್ತೆ ಮೂಲಸೌಕರ್ಯ ವಿಭಾಗದ ಎಂಜಿನಿಯರ್ ಅವರನ್ನು ಅಮಾನತು ಮಾಡಲು ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಬೇಕು' ಎಂದು ಆಗ್ರಹಿಸಿದ್ದಾರೆ.

ನಮನ ರಾಜ್ಯ ಸರ್ಕಾರಿ ಎಸ್ಸಿ-ಎಸ್ಟಿ ನೌಕರರ ರಾಜ್ಯ ಮಟ್ಟದ ಜಾಗೃತ ಸಮಾವೇಶದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ನಮಿಸಿದರು. ಕಾಂಗ್ರೆಸ್ ಮುಖಂಡರಾದ ಎಚ್.ಸಿ. ಮಹದೇವಪ್ಪ, ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಡಿ.ಶಿವಶಂಕರ್, ಎಚ್.ಆಂಜನೇಯ ಇದ್ದರು

ಸಂತೆ ಮೈದಾನದಲ್ಲಿ ಕಟ್ಟಡ ನಿರ್ಮಾಣಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕೆ.ಆರ್.ಪುರ ಸಂತೆ ಜಾಗದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಬಹುಮಹಡಿ ವಾಣಿಜ್ಯ ಕಟ್ಟಡ ಯೋಜನೆ ಕೈಬಿಡದಿದ್ದರೆ ಕಾನೂನು ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ಭ್ರಷ್ಟಾಚಾರ ವಿರೋಧಿ ಮತ್ತು ಪರಿಸರ ಸಂರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಹಾಗೂ ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಾಹಂ ಎಚ್ಚರಿಸಿದರು.

ಕೆ.ಆರ್.ಪುರದಲ್ಲಿ ರೈತರು, ವ್ಯಾಪಾರಿಗಳ ಅಹವಾಲು ಆಲಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಮೇಲ್ನೋಟಕ್ಕೆ ಸಂತೆ ವಿಚಾರದಲ್ಲಿ ರೈತರಿಗೆ ಬಿಬಿಎಂಪಿ, ಪೊಲೀಸರಿಂದ ದೌರ್ಜನ್ಯ ಹೆಚ್ಚಾಗಿದೆ. ರೈತರ ಹಿತ ರಕ್ಷಣೆಗೆ ಕಾನೂನು ಹೋರಾಟ ಮಾಡುತ್ತೇವೆ. ಹೋರಾಟದಿಂದ ಹಿಂದೆ ಸರಿಯುವುದಿಲ್ಲ' ಎಂದರು.

'ಸಂತೆ ಮೈದಾನದಲ್ಲಿ 2008ರಲ್ಲಿ ನಂದೀಶ್ ರೆಡ್ಡಿ ಶಾಸಕರಾಗಿದ್ದಾಗ ₹150 ಕೋಟಿ ವೆಚ್ಚದಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣ ಮಾಡಲು ಹೊರಟಿದ್ದಾಗ ಹಲವು ಹೋರಾಟ ಮಾಡಿ ಸಂತೆ ಜಾಗ ಉಳಿಸಿಕೊಂಡಿದ್ದೇವೆ. ಮತ್ತೆ ಕಟ್ಟಡ ನಿರ್ಮಿಸಲು ಯೋಜನೆ ತಂದಿದ್ದಾರೆ. ಇದರಿಂದ ಹಣ್ಣು ಮತ್ತು ತರಕಾರಿ ಹೂವಿನ ಸಣ್ಣಪುಟ್ಟ ವ್ಯಾಪಾರಿಗಳಿಗೆ ತೊಂದರೆಯಾಗಲಿದೆ' ಎಂದು ರೈತ ಮಂಜುನಾಥ ಆರೋಪಿಸಿದರು.

'ಸಂತೆ ಅಭಿವೃದ್ಧಿಗೊಳಿಸಿ ಮೂಲಸೌಕರ್ಯಗಳನ್ನು ಕಲ್ಪಿಸುವುದನ್ನು ಬಿಟ್ಟು, ಬಿಟ್ಟು ಬಹುಮಹಡಿ ಕಟ್ಟಡದ ನಿರ್ಮಾಣದ ಯೋಜನೆ ನೆಪದಲ್ಲಿ ರೈತರು ಮತ್ತು ವ್ಯಾಪಾರಿಗಳನ್ನು ಹೊರ ದಬ್ಬುವ ಹುನ್ನಾರ ನಡೆಯುತ್ತಿದೆ' ಎಂದು ವ್ಯಾಪಾರಿ ಅಂಜನಮೂರ್ತಿ ಹೇಳಿದರು.

'ಕಾನೂನು ಹೋರಾಟ ಮೂಲಕ ಸಂತೆ ಉಳಿಸಿಕೊಳ್ಳುತ್ತೇವೆ' ಎಂದು ಹಣ್ಣು ಮತ್ತು ತರಕಾರಿ ವ್ಯಾಪಾರಿಗಳ ಅಧ್ಯಕ್ಷ ಬಾಬು ತಿಳಿಸಿದರು.

ಮೈಸೂರು ರೇಸ್

ಮೂನ್ಸ್ ಬ್ಲೆಸ್ಸಿಂಗ್ ಗೆಲ್ಲುವ ನಿರೀಕ್ಷೆ

ಎಂ. ಡಬ್ಲ್ಯೂ. ಚಿನ್ನಪ್ಪ ಮೆಮೋರಿಯಲ್ ಟ್ರೋಫಿ ಶನಿವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೂನ್ಸ್ ಬ್ಲೆಸ್ಸಿಂಗ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:15ಕ್ಕೆ ಪ್ರಾರಂಭವಾಗಲಿರುವ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಚೈನ್ ಆಫ್ ಥಾಟ್ಸ್ 4, ಅಲ್ಟಿಮೇಟ್ ಚಾಯ್ಸ್ 8 ಹೈ ಒಪಿನಿಯನ್ 2
2ನೇ ರೇಸ್: ಎಂಗಲ್‌ಬರ್ಗ್ 10, ಕಿಂಗ್ಸ್ ಕಮಾಂಡ್ 1, ಸ್ಪಿರಿಚುಯಲ್ ಕ್ವೀನ್ 9
3ನೇ ರೇಸ್: ಗೋಲ್ಡ್ ಚಾರ್ಮ್ 3, ಡಾನ್ಸ್ ಡೆನ್ 8, ವಾರ್ ಸಾಂಗ್ 4
4ನೇ ರೇಸ್: ಮೂನ್ಸ್ ಬ್ಲೆಸ್ಸಿಂಗ್ 7, ಕೇಪಬಲ್ 10, ಸೌಂಡ್ ಆಫ್ ಕ್ಯಾನನ್ಸ್ 8
5ನೇ ರೇಸ್: ಮ್ಯಾಜಿಕ್ ಸರ್ಕಲ್ 10, ಸಂಟೋರಿನಿ 5, ನೊಟೋರಿಟಿ 1
6ನೇ ರೇಸ್: ದಿ ಸ್ಟ್ರೆಂಥ್ 1, ಬ್ರಹ್ಮಾಸ್ತ್ರಮ್ 9, ಅನ್‌ಇಮ್ಯಾಜಿನಬಲ್ 3
7ನೇ ರೇಸ್: ಲಕ್ಕಿ ಒನ್ 4, ಪರ್ಸಿವೇಲ್ 3, ಸುಪ್ರೀಮ್ ಏಂಜಲ್ 7

ಉತ್ತಮ ಬೆಟ್: ಎಂಗಲ್‌ಬರ್ಗ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಿವೃತ್ತ ಶಿಕ್ಷಕಿ ಕೊಲೆ

ಪ್ರಸನ್ನಕುಮಾರಿ

ಬೆಂಗಳೂರು: ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯಲ್ಲಿ ಪ್ರಸನ್ನ ಕುಮಾರಿ (60) ಎಂಬುವವರನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದ್ದು, ಚಿನ್ನಾಭರಣ ಹಾಗೂ ನಗದು ದೋಚಲೆಂದು ದುಷ್ಕರ್ಮಿಗಳು ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

'ವಿಜಯವಾಡದ ಪ್ರಸನ್ನಕುಮಾರಿ, ಚಿಂತಾಮಣಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿ ಕೆಲ ತಿಂಗಳ ಹಿಂದೆಯಷ್ಟೇ ನಿವೃತ್ತರಾಗಿದ್ದರು. ವಿದ್ಯಾರಣ್ಯಪುರದ ಮನೆಯಲ್ಲಿ ಒಂಟಿಯಾಗಿ ನೆಲೆಸಿದ್ದರು' ಎಂದು ಪೊಲೀಸರು ಹೇಳಿದರು.

'ಗುರುವಾರ ರಾತ್ರಿ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ಪ್ರಸನ್ನಕುಮಾರಿ ಅವರ ಕೈ-ಕಾಲು ಕಟ್ಟಿಹಾಕಿ ಥಳಿಸಿದ್ದಾರೆ. ನಂತರ, ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದಾರೆ' ಎಂದು ತಿಳಿಸಿದರು.

'ಪ್ರಸನ್ನಕುಮಾರಿ ಅವರು ಮನೆಯಿಂದ ಹೊರಬಾರದಿದ್ದರಿಂದ ಪಕ್ಕದ ಮನೆಯವರು ಅನುಮಾನಗೊಂಡಿದ್ದರು. ಮನೆ ಬಳಿ ಹೋಗಿ ನೋಡಿದಾಗ ಮೃತದೇಹ ಕಂಡಿತ್ತು. ಅವರೇ ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಹೇಳಿದರು.

ಸಂಚು ರೂಪಿಸಿ ಕೃತ್ಯ: 'ಪ್ರಸನ್ನಕುಮಾರಿ ಅವರು ಮನೆಯಲ್ಲಿ ಒಬ್ಬರೇ ಇರುತ್ತಿದ್ದರು. ಈ ಬಗ್ಗೆ ತಿಳಿದುಕೊಂಡು ಸಂಚು ರೂಪಿಸಿ ದುಷ್ಕರ್ಮಿಗಳು ಕೃತ್ಯ ಎಸಗಿದ್ದಾರೆ. ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದು ದೋಚಿರುವ ಮಾಹಿತಿ ಇದ್ದು, ಮೊತ್ತ ಹಾಗೂ ಪ್ರಮಾಣ ಎಷ್ಟೆಂದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ಪೊಲೀಸರು ತಿಳಿಸಿದರು.

'ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಕೊಲೆ ಪ್ರಕರಣ ಭೇದಿಸಲು ವಿಶೇಷ ತಂಡ ರಚಿಸಲಾಗಿದ್ದು, ಮನೆಯ ಅಕ್ಕ-ಪಕ್ಕದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ಅವರು ಹೇಳಿದರು.

'ಸದನದಲ್ಲಿ ಶ್ರೀರಾಮರೆಡ್ಡಿ' ಕೃತಿ ಬಿಡುಗಡೆಯಲ್ಲಿ ಸಿದ್ದರಾಮಯ್ಯ ಹೇಳಿಕೆ

'ನಿಸ್ವಾರ್ಥ ರಾಜಕಾರಣದ ಮಾದರಿಯಾಗಿದ್ದ ಜಿವಿಎಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿ.ವಿ. ಶ್ರೀರಾಮ ರೆಡ್ಡಿ ನಿಸ್ವಾರ್ಥ ರಾಜಕಾರಣಕ್ಕೆ ಮಾದರಿಯಾಗಿದ್ದರು. ಜೀವನದ ಕೊನೆಯವರೆಗೂ ಅವರು ಜನಪರ ಕಾಳಜಿ ಮತ್ತು ಬದ್ಧತೆಯಿಂದ ರಾಜಕಾರಣ ಮಾಡಿದ್ದರು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಮರಿಸಿದರು.

ನಗರದ ಗಾಂಧಿ ಭವನದಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಪತ್ರಕರ್ತ ನವೀನ್ ಸೂರಿಂಜೆ ಸಂಪಾದಿಸಿರುವ 'ಸದನದಲ್ಲಿ ಶ್ರೀರಾಮರೆಡ್ಡಿ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಶಾಸಕರಾಗಿದ್ದ ಅವಧಿಯಲ್ಲಿ ವಿಧಾನಸಭೆ ಅಧಿವೇಶನಕ್ಕೆ ರೆಡ್ಡಿ ಅವರು ಯಾವತ್ತೂ ಗೈರಾಗುತ್ತಿರಲಿಲ್ಲ. ಸ್ವಂತ ಕೆಲಸಕ್ಕಾಗಿ ನಮ್ಮ ಬಳಿ ಬಂದವರಲ್ಲ. ಅವರ ಬೇಡಿಕೆಗಳ ಹಿಂದೆ ಸದಾ ಜನಪರ ಕಾಳಜಿ ಇರುತ್ತಿತ್ತು' ಎಂದರು.

ಬೆಂಗಳೂರಿನ ಗಾಂಧಿ ಭವನದಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ 'ಸದನದಲ್ಲಿ ಶ್ರೀರಾಮರೆಡ್ಡಿ' ಕೃತಿ ಬಿಡುಗಡೆ ಮಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾಜಿ ಶಾಸಕ ವೈ.ಎಸ್.ವಿ. ದತ್ತ ಅವರಿಗೆ ಪ್ರತಿ ನೀಡಿದರು. ಕೃತಿಯ ಸಂಪಾದಕ ನವೀನ್ ಸೂರಿಂಜೆ, ವಕೀಲ ಎನ್. ಅನಂತ ನಾಯ್ಕ್, ಕಾರ್ಮಿಕ ಮುಖಂಡ ವಿ.ಜೆ.ಕೆ. ನಾಯರ್, ಹೋರಾಟಗಾರ್ತಿ ವಿ. ಗೀತಾ ಇದ್ದರು – ಪ್ರಜಾವಾಣಿ ಚಿತ್ರ

ರೆಡ್ಡಿ ಅವರು ಒಬ್ಬರೇ ಇದ್ದರೂ ಸರ್ಕಾರದ ವಿರುದ್ಧ ಗಟ್ಟಿ ಧ್ವನಿಯಲ್ಲಿ ಹೋರಾಡುತ್ತಿದ್ದರು. ಅಧಿಕೃತ ವಿರೋಧ ಪಕ್ಷಕ್ಕಿಂತಲೂ ಗಟ್ಟಿಯಾಗಿ ಮಾತನಾಡುವ ಛಾತಿ ಇತ್ತು. ಸೈದ್ಧಾಂತಿಕ ಚೌಕಟ್ಟಿನ ವ್ಯಾಪ್ತಿಯೊಳಗೆ ಅನೇಕ ಜನಪರ ವಿಚಾರಗಳಲ್ಲಿ ಇತರ ಪಕ್ಷಗಳ ಜತೆಗೂ ಹೋರಾಟದಲ್ಲಿ ಭಾಗಿಯಾಗಿದ್ದರು ಎಂದು ಹೇಳಿದರು.

ಮಾಜಿ ಶಾಸಕ ವೈ.ಎಸ್.ವಿ. ದತ್ತ ಅಧ್ಯಕ್ಷತೆ ವಹಿಸಿದ್ದರು. ಕಾರ್ಮಿಕ ಮುಖಂಡ ವಿ.ಜೆ.ಕೆ. ನಾಯರ್, ಹೋರಾಟಗಾರ್ತಿ ವಿ. ಗೀತಾ ಮುಖ್ಯ ಅತಿಥಿಗಳಾಗಿದ್ದರು. ಕೃತಿಯ ಸಂಪಾದಕ ನವೀನ್ ಸೂರಿಂಜೆ, ವಕೀಲ ಎನ್. ಅನಂತ ನಾಯ್ಕ್, ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್ ಉಪಸ್ಥಿತರಿದ್ದರು.

ಎಎಪಿಯತ್ತ ಉತ್ತರ ಕರ್ನಾಟಕದ ನಾಯಕರು

ಬೆಂಗಳೂರು: ಉತ್ತರ ಕರ್ನಾಟಕದ ಹಲವು ರಾಜಕೀಯ ನಾಯಕರು, ಸಾಮಾಜಿಕ ಹೋರಾಟಗಾರ ರು ಗುರುವಾರ ಆಮ್ ಆದ್ಮಿ ಪಕ್ಷ ಸೇರಿದರು.

ಬಾದಾಮಿಯ ಕಾಂಗ್ರೆಸ್ ಮುಖಂಡ ಶಿವರಾಯಪ್ಪ ದೊಡ್ಡರಿಯಪ್ಪ ಜೋಗಿನ್, ಬಾಗಲಕೋಟೆಯ ರೈತ ನಾಯಕ ಮುತ್ತಪ್ಪ ಕೋಮರ್, ಬಿಜೆಪಿ ಮುಖಂಡ ಆನೇಕಲ್ ದೊಡ್ಡಯ್ಯ, ಹಾಲುಮತ ಮಹಾಸಭಾ ಸಂಘದ ಯುವ ಘಟಕದ ಅಧ್ಯಕ್ಷ ಸೋಮಣ್ಣ ಮಲ್ಲೂರು, ಕಾರ್ಮಿಕರ ಒಕ್ಕೂಟದ ಅಧ್ಯಕ್ಷೆ ಗೀತಾ ಮಹಾಂತೇಶ್ ಯಾದಗಿ, ಅಧ್ಯಾಪಕರ ಸಂಘದ ಒಕ್ಕೂಟಗಳ ಅಧ್ಯಕ್ಷ ಶ್ರೀನಿವಾಸ್ ಗೌಡ ಸೇರಿದಂತೆ ನೂರಾರು ಮುಖಂಡರು ಪಕ್ಷದ ರಾಜ್ಯ ಚುನಾವಣಾ ಉಸ್ತುವಾರಿ ದಿಲೀಪ್ ಪಾಂಡೆ, ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ, ಉಪಾಧ್ಯಕ್ಷ ಭಾಸ್ಕರ್ ರಾವ್, ಪ್ರಚಾರ ಸಮಿತಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು.

ಪೃಥ್ವಿ ರೆಡ್ಡಿ

ಪೃಥ್ವಿ ರೆಡ್ಡಿ ಮಾತನಾಡಿ, ರಾಜ್ಯದ ಜನರು ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ಗಳಿಗೆ ಅಧಿಕಾರ ಕೊಟ್ಟರೂ ಉತ್ತರ ಕರ್ನಾಟಕದ ಅಭಿವೃದ್ಧಿ ಸಾಧ್ಯವಿಲ್ಲ. ಅಲ್ಲಿನ ನೀರಾವರಿ ಯೋಜನೆಗಳು ಹಲವು ದಶಕಗಳಿಂದ ನನೆಗುದಿಗೆ ಬಿದ್ದಿವೆ. ಬಿಡುಗಡೆಯಾದ ಸಾವಿರಾರು ಕೋಟಿ ರೂಪಾಯಿ ಭ್ರಷ್ಟ ರಾಜಕಾರಣಿಗಳ ಜೇಬು ಸೇರಿವೆ. ಪಾರದರ್ಶಕ ಆಡಳಿತ ಆಮ್ ಆದ್ಮಿ ಪಕ್ಷದಿಂದ ಮಾತ್ರ ಸಾಧ್ಯವೆಂಬ ಭರವಸೆಯಿಂದ ಪಕ್ಷ ಸೇರುತ್ತಿದ್ದಾರೆ ಎಂದರು.

ಐಪಿಸಿ ಪ್ರಕರಣ: ಎನ್‌ಐಎ ಕೋರ್ಟ್‌ಗೆ ಅಧಿಕಾರ

ಬೆಂಗಳೂರು: 'ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಡಿಯಲ್ಲಿ ದಾಖಲಾದ ಪ್ರಕರಣಗಳ ವಿಚಾರಣೆ ನಡೆಸುವ ಎನ್‌ಐಎ ವಿಶೇಷ ಕೋರ್ಟ್‌ಗಳು ಭಾರತೀಯ ದಂಡ ಸಂಹಿತೆಯಡಿ (ಐಪಿಸಿ) ಆರೋಪ ಎದುರಿಸುತ್ತಿರುವ ಪ್ರಕರಣಗಳನ್ನೂ ವಿಚಾರಣೆ ನಡೆಸುವ ಅಧಿಕಾರ ಹೊಂದಿವೆ' ಎಂದು ಹೈಕೋರ್ಟ್ ಆದೇಶಿಸಿದೆ.

'ನಮ್ಮ ವಿರುದ್ಧ ಕೇವಲ ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದರೂ ಎನ್‌ಐಎ ಕೋರ್ಟ್‌ನಲ್ಲಿ ವಿಚಾರಣೆ ನಡೆಸಲಾಗುತ್ತಿದೆ. ಆದ್ದರಿಂದ, ನಮ್ಮ ವಿರುದ್ಧದ ಪ್ರಕರಣಗಳನ್ನು ಸಾಮಾನ್ಯ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲು ನಿರ್ದೇಶಿಸಬೇಕು' ಎಂದು ಕೋರಿದ್ದ, ಡಿ.ಜೆ.ಹಳ್ಳಿ ಗಲಭೆ ಪ್ರಕರಣದ ಆರೋಪಿ ಸೈಯ್ಯದ್ ಸೊಹೆಲ್ ತೊರವಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ಎನ್‌ಐಎ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರ ವಾದವನ್ನು ಎತ್ತಿಹಿಡಿದಿರುವ ನ್ಯಾಯಪೀಠ, 'ಎನ್‌ಐಎ ಕೋರ್ಟ್ ಐಪಿಸಿ ಅಡಿಯಲ್ಲಿನ ಆರೋಪಿಗಳ ವಿಚಾರಣೆ ನಡೆಸುವ ಅಧಿಕಾರವನ್ನೂ ಹೊಂದಿವೆ' ಎಂದು ಸ್ಪಷ್ಟಪಡಿಸಿದೆ. ನಗರದ ಕೆ.ಜಿ.ಹಳ್ಳಿ-ಡಿ.ಜೆ.ಹಳ್ಳಿ ಪ್ರದೇಶಗಳಲ್ಲಿ 2020ರ ಆಗಸ್ಟ್ 11ರಂದು ಪೊಲೀಸ್ ಠಾಣೆಗಳ ಮೇಲೆ ಉದ್ರಿಕ್ತ ಗುಂಪು ದಾಳಿ ನಡೆಸಿತ್ತು. ಈ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿರುವ ಸೈಯದ್ ವಿರುದ್ಧ ಎನ್‌ಐಎ ಮತ್ತು ಯುಎಪಿಎ ಕಾಯ್ದೆಯಡಿ ಆರೋಪ ಪಟ್ಟಿ ದಾಖಲಿಸಲಾಗಿದೆ.

ನೋಟ್‌ಬುಕ್ ಗಣಪ...

ರಾಜಾಜಿನಗರದ ಗ್ಲೋಬಲ್ ಮಾಲ್‌ನಿಂದ ಗಣೇಶ ಚತುರ್ಥಿ ಅಂಗವಾಗಿ 10 ಸಾವಿರ ನೋಟ್‌ಬುಕ್‌ಗಳಿಂದ ಗಣೇಶ ಮೂರ್ತಿ ನಿರ್ಮಿಸಿದ್ದು, ಆ ನೋಟ್‌ಬುಕ್‌ಗಳನ್ನು ಕಿರುತೆರೆ ನಟ ಮಂಜು ಪಾವಗಡ ಅವರು ವಿದ್ಯಾರ್ಥಿಗಳಿಗೆ ವಿತರಿಸಿದರು

ಸರ್ಕಾರ ಪರ್ಸೆಂಟೇಜ್ ಮೇಲೆ ನಡೆಯುತ್ತಿದೆಯೇ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸೋದ್ಯಮ ಇಲಾಖೆ ಕಟ್ಟಡವೊಂದರ ನವೀಕರಣ ಕಾಮಗಾರಿಯ ಹಣ ಬಿಡುಗಡೆಯಲ್ಲಿ ವಿಳಂಬ ಧೋರಣೆ ಪ್ರದರ್ಶಿಸಿದ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ (ಕೆಎಸ್‌ಟಿಡಿಸಿ) ₹ 2 ಲಕ್ಷ ದಂಡ ವಿಧಿಸಿರುವ ಹೈಕೋರ್ಟ್, 'ಈ ಸರ್ಕಾರ ಪರ್ಸೆಂಟೇಜ್ ಆಧಾರದಲ್ಲಿ ನಡೆಯುತ್ತಿದೆಯೇ?' ಎಂದು ಕಿಡಿ ಕಾರಿದೆ.

ನಗರದ ಪ್ರಥಮದರ್ಜೆ ಗುತ್ತಿಗೆದಾರ ಎಂ.ಚಿರಂಜೀವಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ

ಏಕಸದಸ್ಯ ನ್ಯಾಯಪೀಠ, ಈ ಕುರಿತಂತೆ ಆದೇಶಿಸಿದ್ದು, 'ಸಾರ್ವಜನಿಕ ಹಿತಾಸಕ್ತಿ ಕಡೆಗಣಿಸಿರುವ ಸರ್ಕಾರದ ಅಂಗ ಸಂಸ್ಥೆಗಳು ಉದಾಸೀನತೆಯ ಪ್ರತಿರೂಪವಾಗಿವೆ. ಇಂತಹುದನ್ನು ನ್ಯಾಯಾಲಯ ಸಹಿಸುವುದಿಲ್ಲ' ಎಂದು ಖಡಕ್ ಎಚ್ಚರಿಕೆ ನೀಡಿದೆ.

'ಅರ್ಜಿದಾರರಿಗೆ ₹ 2 ಲಕ್ಷ ದಂಡ ವನ್ನು ಬಡ್ಡಿ ಸಹಿತ ಹಾಗೂ ಬಾಕಿ ಉಳಿಸಿಕೊಂಡಿರುವ ಮೊತ್ತ ₹ 34 ಲಕ್ಷಕ್ಕೆ ವಾರ್ಷಿಕ ಶೇ 12ರಷ್ಟು ಬಡ್ಡಿ ದರಲ್ಲಿ ಪಾವತಿ ಮಾಡಬೇಕು. ಆದೇಶ ಪಾಲಿಸಿದ ಬಗ್ಗೆ 6 ವಾರಗಳಲ್ಲಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ವರದಿ ಸಲ್ಲಿಸಬೇಕು' ಎಂದು ನಿಗಮಕ್ಕೆ ನಿರ್ದೇಶಿಸಿದೆ.

'ಒಂದೊಮ್ಮೆ ಹಣ ಪಾವತಿಸಲು ವಿಳಂಬ ಮಾಡಿದರೆ, ಹೆಚ್ಚುವರಿಯಾಗಿ ಶೇ 1ರಷ್ಟು ಬಡ್ಡಿ ತೆರಬೇಕಾಗುತ್ತದೆ' ಎಂದು ಎಚ್ಚರಿಸಿರುವ ನ್ಯಾಯಪೀಠ, 'ದಂಡದ ಮೊತ್ತ ಮತ್ತು ಬಡ್ಡಿ ಹಣವನ್ನು ವ್ಯವಸ್ಥಾಪಕ ನಿರ್ದೇಶಕರು ಸೇರಿ ಲೋಪ ಎಸಗಿರುವ ಅಧಿಕಾರಿಗಳಿಂದ ವಸೂಲಿ ಮಾಡಿಕೊಳ್ಳಬಹುದು' ಎಂದು ನಿಗಮಕ್ಕೆ ಸೂಚಿಸಿದೆ.

ಒಎಫ್‌ಸಿ ಕೇಬಲ್: ನಾಲ್ಕು ಕಂಪನಿಗಳಿಗೆ ₹80 ಲಕ್ಷ ದಂಡ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಜಯನಗರ ಉಪವಿಭಾಗದ ಪಟ್ಟಾಭಿರಾಮನಗರ ವಾರ್ಡ್‌ನಲ್ಲಿ ಅನಧಿಕೃತವಾಗಿ ಒಎಫ್‌ಸಿ ಕೇಬಲ್ ಅಳವಡಿಸಿದ್ದ ನಾಲ್ಕು ಕಂಪನಿಗಳಿಗೆ ತಲಾ ₹20 ಲಕ್ಷ ದಂಡ ವಿಧಿಸಿ, ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಭಾರ್ತಿ ಏರ್‌ಟೆಲ್, ಜಿಯೊ ಡಿಜಿಟಲ್ ಫೈಬರ್, ಟೆಲಿಸೋನಿಕ್ ನೆಟ್‌ವರ್ಕ್ಸ್, ವ್ಯಾಕ್ ಟೆಲಿಇನ್‌ಫ್ರಾ ಸಲ್ಯೂಷನ್ ಸಂಸ್ಥೆಗಳಿಗೆ ತಲಾ ₹20 ಲಕ್ಷ ದಂಡ ವಿಧಿಸಿ ಜಯನಗರ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸೆ.7ರಂದು ನೋಟಿಸ್ ಜಾರಿ ಮಾಡಿದ್ದಾರೆ. ಏಳು ದಿನಗಳಲ್ಲಿ ದಂಡ ಪಾವತಿಸಲು ಸೂಚಿಸಿದ್ದಾರೆ.

ಒಎಫ್‌ಸಿ ಡಕ್ಟ್‌ಗಳು, ಪಾದಚಾರಿ ಮಾರ್ಗದಲ್ಲಿ ಟೆಲಿಕಾಂ ಟವರ್‌ಗಳು ಮತ್ತು ರಸ್ತೆಗಳಲ್ಲಿರುವ ಮರಗಳ ಮೇಲೆ ಒಎಫ್‌ಸಿ ಕೇಬಲ್‌ಗಳ ಬಂಡಲ್‌ಗಳನ್ನು ಈ ಸಂಸ್ಥೆಗಳು ತೂಗಿಹಾಕಿದ್ದವು. ಇವುಗಳನ್ನು ತೆರವು ಮಾಡಬೇಕು. ಅನಧಿಕೃವಾಗಿ ಕೇಬಲ್ ಅಳವಡಿಸಿರುವ ಬಗ್ಗೆ ದಂಡ ಏಕೆ ಹಾಕಬಾರದು ಎಂದು ನೋಟಿಸ್ ಜಾರಿ ಮಾಡಿ ಉತ್ತರಿಸಲು ಸೂಚಿಸಲಾಗಿತ್ತು. ಇದಕ್ಕೆ ಉತ್ತರ ಬಂದಿರಲಿಲ್ಲ. ಹೀಗಾಗಿ ದಂಡ ವಿಧಿಸಿ, ಎಫ್‌ಐಆರ್ ದಾಖಲಿಸಲು ಆದೇಶ ಹೊರಡಿಸಿದ್ದಾರೆ.

ಅನಧಿಕೃತವಾಗಿ ಒಎಫ್‌ಸಿ ಕೇಬಲ್‌ಗಳನ್ನು ಅಳವಡಿಸಿರುವ ಬಗ್ಗೆ ಬೆಂಗಳೂರು ದಕ್ಷಿಣ ಬಿಜೆಪಿ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ, ದಕ್ಷಿಣ ವಲಯ ಆಯುಕ್ತ, ಒಎಫ್‌ಸಿ ವಿಭಾಗ ಆಯುಕ್ತರಿಗೆ ಆ.28ರಂದು ದಾಖಲೆಸಹಿತ ದೂರು ನೀಡಿದ್ದರು. ಇದರಂತೆ ನೋಟಿಸ್ ಜಾರಿ ಮಾಡಿ, ಇದೀಗ ಅಂತಿಮವಾಗಿ ದಂಡ ವಿಧಿಸಿ, ಎಫ್‌ಐಆರ್ ದಾಖಲಿಸಲಾಗಿದೆ.

ಗಣೇಶನ ಮೂರ್ತಿ ವಿಸರ್ಜನೆ ವೇಳೆ 6 ಸಾವು

ಚಂಡೀಗಡ: ಗಣೇಶನ ಮೂರ್ತಿಗಳನ್ನು ವಿಸರ್ಜನೆ ಮಾಡುವ ಸಂದರ್ಭದಲ್ಲಿ 6 ಮಂದಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಹರಿಯಾಣದ ಮಹೇಂದರ್‌ಗಢ ಹಾಗೂ ಸೋನಿಪತ್ ಜಿಲ್ಲೆಗಳಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಮಹೇಂದರ್‌ಗಢದಲ್ಲಿ 7 ಅಡಿಯ ಮೂರ್ತಿ ವಿಸರ್ಜನೆ ಮಾಡುವಾಗ 9 ಯುವಕರು ನೀರಿನಲ್ಲಿ ಕೊಚ್ಚಿ ಹೋಗಿದ್ದರು. ಈ ವೇಳೆ ರಾಷ್ಟ್ರೀಯ ವಿಪತ್ತು ನಿಗ್ರಹ ದಳ ಕಾರ್ಯಾಚರಣೆ ಕೈಗೊಂಡು, 5 ಯುವಕರನ್ನು ರಕ್ಷಿಸಿದೆ. ಉಳಿದ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದ್ದಾರೆ. ಸೋನಿಪತ್ ಜಿಲ್ಲೆಯ ಯಮುನಾ ನದಿಯಲ್ಲಿ ಇಬ್ಬರು ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

Where stories come alive of
happy bonds and beautiful homes

Raymond Home

bed sheets | towels | bathrobes | pillows | dohars |
carpets | curtains | cushions | blankets | quilts | shawls

The Raymond Shop: Hubli • Belgaum • Mysore • Shimoga • Davanagere

Find Us At: The Raymond Shop And All Leading Furnishing Stores
Commercial Street • Haji Hoomer - 9945096227 • Rajasthan Handloom - 9739868656 • **Malleswaram** • Bharath Furnishing - 9986018789 • Inspiration - 9972040877 • Decorative Homes - 8310757495 • Furnishing House - 08023442981 • **Jayanagar** • Binny Textiles - 9742495652 • Samrudhi - 08026538515 • Hihues - 8095800850 • **Thippasandra** • Lenin House - 9742076060 • Rajastan Handloom - 8073700859 • **Nagarbhavi** • Design & Care - 9964772324 • **Kaggadasapura** • City Style - 8147285727 • **Yeswanthpur** • Saipavans - 08041275158 • **HSR Layout** • Swadeshi – 08022580280 • HSR Handloom - 9844045108 • **MG Road** • Soulspace - 888448840 • **Electronic City** • Home Bureau - 9148585180 • **Rajajinagar** • Gopal Enterprises - 9449788111 • **Vijayanagar** • Manmandhir - 9845887072 • **RR Nagar** • Bhumika - 7676279613 • Handloom Gallery 8123282485 • **Mysore** • Bahusar Trading - 9448062224 • Furnishing Stop - 9845133324 • Vastravybhav - 9342182007 • **Coorg** • Prashanth Furnishing - 9448422317 • **Davangere** B S Channabasappa - 9886821171 • **Belgaum** • Uma -9341101093 • **Dharwad** • Champalal - 9886418220 • **Bellary** • Omgayatri - 9620002274

ADVERTORIAL

ಹೃಷಿಕೇಶ್ ಎನ್ ಗಂಗೂಲೆ – NEET UG 2022 ರಲ್ಲಿ AIR–3 ಮತ್ತು ಕರ್ನಾಟಕದ ರಾಜ್ಯ ಟಾಪರ್ ತಮ್ಮ ಯಶಸ್ಸಿನ ಪ್ರಯಾಣವನ್ನು ಹಂಚಿಕೊಂಡಿದ್ದಾರೆ

ಹೃಷಿಕೇಶ್ ಎನ್ ಗಂಗೂಲೆ
AIR 3
ಕರ್ನಾಟಕದ ರಾಜ್ಯ ಟಾಪರ್

ಹೃಷಿಕೇಶ್ ಎನ್ ಗಂಗೂಲೆ, ಬೆಂಗಳೂರಿನ ಆಕಾಶ್+ಬೈಜೂಸ್ ಇಂದಿರಾನಗರ ಕೇಂದ್ರದಲ್ಲಿ NEET 2 ವರ್ಷದ ತರಗತಿಯ ಕಾರ್ಯಕ್ರಮಕ್ಕೆ ದಾಖಲಾಗಿದ್ದರು. ಹೃಷಿಕೇಶ್ ಪ್ರಾಮಾಣಿಕ ವಿದ್ಯಾರ್ಥಿಯಾಗಿದ್ದು, ಯಾವಾಗಲೂ ತನ್ನ ಶಿಕ್ಷಕರಿಂದ ಗರಿಷ್ಠ ಫಲಿತಾಂಶವನ್ನು ಪಡೆಯಲು ಪ್ರಯತ್ನಿಸುತ್ತಿದ್ದರು. ಅವರ ತಂದೆ-ತಾಯಿ ಇಬ್ಬರೂ ಸಾಫ್ಟ್‌ವೇರ್ ಎಂಜಿನಿಯರ್‌ಗಳಾಗಿದ್ದಾರೆ. ಹೃಷಿಕೇಶ್ ಅವರು 9 ವರ್ಷದವರಾಗಿದ್ದಾಗಲೇ ವೈದ್ಯನಾಗುವ ಕನಸನ್ನು ಬೆಳೆಸಿಕೊಂಡರು! ಅವರ ಪ್ರಕಾರ ಇದು "ಉದಾತ್ತ" ವೃತ್ತಿಯಾಗಿದ್ದು ಅದು ಅವನ ಸುತ್ತಲಿನ ಜನರಿಗೆ ನೇರವಾಗಿ ಸಹಾಯ ಮಾಡುವ ಅವಕಾಶವನ್ನು ನೀಡುತ್ತದೆ ಮತ್ತು ಆ ಮೂಲಕ ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ.

ವೈದ್ಯರಾಗುವ ಈ ಪಯಣ ಯಾವಾಗ ಮತ್ತು ಹೇಗೆ ಆರಂಭವಾಯಿತು?

ಇದು ಅಖಿಲ ಭಾರತ ಮಟ್ಟದ ಸ್ಕಾಲರ್ಶಿಪ್ ಪರೀಕ್ಷೆ – ಆಕಾಶ್ ನ್ಯಾಷನಲ್ ಟ್ಯಾಲೆಂಟ್ ಹಂಟ್ ಪರೀಕ್ಷೆ (ANTHE), ಇದು ನನ್ನ ಕನಸಿನ ವೃತ್ತಿಜೀವನವನ್ನು ನನಸಾಗಿಸಲು ದಾರಿ ಮಾಡಿಕೊಟ್ಟಿತು. ನಾನು 10ನೇ ತರಗತಿಯಲ್ಲಿ ANTHE ಹಾಜರಾದೆ ಮತ್ತು AIR–19 ಅನ್ನು ಪಡೆದುಕೊಂಡೆ ಮತ್ತು ಆಕಾಶ್+ಬೈಜೂಸ್ ನಲ್ಲಿ 2 ವರ್ಷದ NEET ಕಾರ್ಯಕ್ರಮಕ್ಕೆ ಸೇರಿಕೊಂಡೆ.

NEET ತಯಾರಿಗಾಗಿ ನಾನು ಆಕಾಶ್+ಬೈಜೂಸ್ ಜೊತೆ ಸೇರುತ್ತೇನೆ ಎಂಬುದು ನನ್ನ ತಂದೆಯ ನಿರ್ಧಾರವಾಗಿತ್ತು. ಮೊದಲಿನಿಂದಲೂ ಆಕಾಶ್+ಬೈಜೂಸ್ ಆಯ್ಕೆ ಮಾಡುವುದರ ಬಗ್ಗೆ ನನ್ನ ತಂದೆಯು ಆಕಾಶ್+ಬೈಜೂಸ್ ಬಗ್ಗೆ (ಒಳ್ಳೆಯ ಮಾಹಿತಿಗಳನ್ನು) ಅವರ ಅನೇಕ ಸ್ನೇಹಿತರು ಸ್ನೇಹಿತರು ಮತ್ತು ನಿಕಟ ಸಂಪರ್ಕಗಳಿಂದ ಕೇಳಿದ್ದರಂತೆ. ಆರಂಭದಲ್ಲಿ ಸ್ವಲ್ಪ ಆತಂಕಕ್ಕೆ ಒಳಗಾಗಿದ್ದೆ, ಅದು ತುಂಬಾ ಒತ್ತಡವನ್ನುಂಟು ಮಾಡುತ್ತದೆ ಎಂದುಕೊಂಡೆ. ಆದಾಗ್ಯೂ, ಆಕಾಶ್+ಬೈಜೂಸ್ ನಲ್ಲಿ ನನ್ನ 2 ವರ್ಷಗಳ ಅವಧಿಯು ಬಹಳ ಸ್ಮರಣೀಯವಾಗಿದೆ, ಅಲ್ಲಿ ಆಕಾಶ್+ಬೈಜೂಸ್ ನನ್ನ "ಎರಡನೇ ಮನೆ" ಯಂತೆ ಆಯಿತು.

ನಿಮ್ಮ ತಯಾರಿಯ ಸಮಯದಲ್ಲಿ ಹಿನ್ನಡೆಗಳು ಮತ್ತು ನಿರಾಶೆಗಳನ್ನು ನೀವು ಹೇಗೆ ಎದುರಿಸಿದ್ದೀರಿ?

ನಾನು ವೈದ್ಯನಾಗುವ ಬಗ್ಗೆ ನನಗೆ ಯಾವತ್ತೂ ಸಂದೇಹವಿರಲಿಲ್ಲ. ನನ್ನ ತಯಾರಿಯ ಪ್ರಯಾಣದ ಸಮಯದಲ್ಲಿ, ಪರೀಕ್ಷೆಗಳಲ್ಲಿ ತುಲನಾತ್ಮಕವಾಗಿ ಕಡಿಮೆ ಅಂಕಗಳ ಕಾರಣದಿಂದಾಗಿ ನಾನು ನಿರಾಶೆಗೊಂಡಾಗ, ನಾನು ನನ್ನ ಶಿಕ್ಷಕರು ಮತ್ತು ಪೋಷಕರೊಂದಿಗೆ ಮಾತನಾಡುತ್ತಿದ್ದೆ. ಅವರು ಯಾವಾಗಲೂ ಗುರಿಯತ್ತ ಗಮನ ಹರಿಸಲು ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. ಆಕಾಶ್+ಬೈಜೂಸ್ ಒಂದೇ ಒಂದು ಪರೀಕ್ಷೆಯನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. "ಪರೀಕ್ಷೆಗಳು ಕಣ್ಣು ತೆರೆಸುತ್ತವೆ ಮತ್ತು ಅವುಗಳು ಇಲ್ಲಿ ನಮಗೆ ಕೊರತೆಯಿದೆ ಎಂದು ಹೇಳುತ್ತವೆ, ಅವು ನಮ್ಮ ಮನಸ್ಸಿನಲ್ಲಿ ಒಂದು ಪರಿಕಲ್ಪನೆಯನ್ನು ಮುದ್ರಿಸಲು ಸಹಾಯ ಮಾಡುತ್ತವೆ; ಸುಧಾರಣೆಯು ನಿರಂತರ ಪ್ರಕ್ರಿಯೆ ಎಂದು ನೆನಪಿಟ್ಟುಕೊಳ್ಳುವುದು ಮುಖ್ಯ; ಪರೀಕ್ಷೆಯ ಹಿಂದಿನ ದಿನದವರೆಗೂ ನೀವು ಸುಧಾರಿಸುತ್ತಿರುತ್ತೀರಿ. ದಾರಿಯುದ್ದಕ್ಕೂ ಎಲ್ಲೋ ನಾನು ನನ್ನ ಮನಸ್ಸಿನಿಂದ "720/720 ಸ್ಕೋರ್ ಮಾಡುವ ಒತ್ತಡವನ್ನು ತೆಗೆದುಹಾಕಿದೆನು."

ನಿಮ್ಮ ಪೂರ್ವಸಿದ್ಧತಾ ಪ್ರಯಾಣದಲ್ಲಿ ನಿಮ್ಮ ಹೆತ್ತವರ ಪಾತ್ರವೇನು?

ನನ್ನ ತಂದೆ-ತಾಯಿ ಇಬ್ಬರೂ ಸಾಫ್ಟ್ವೇರ್ ಎಂಜಿನಿಯರ್ಗಳು, ಆದರೆ ನಾನು ಯಾವಾಗಲೂ ಜೀವಶಾಸ್ತ್ರವನ್ನು ಒಂದು ವಿಷಯವಾಗಿ ಪ್ರೀತಿಸುತ್ತೇನೆ. ನಾನು ವೈದ್ಯನಾಗಬೇಕೆಂದು ನಿರ್ಧರಿಸುವ ಮೊದಲು ನನಗೆ ನಿಜವಾಗಿಯೂ ಖಚಿತವಾಗಿದ್ದ ಒಂದು ವಿಷಯವೆಂದರೆ ನಾನು ಜೀವಶಾಸ್ತ್ರವನ್ನು ಪ್ರೀತಿಸುತ್ತೇನೆ ಮತ್ತು ಈ ವಿಷಯದಲ್ಲೇ ಮುಂದುವರಿಯಬೇಕೆಂದು ನನಗೆ ತಿಳಿದಿತ್ತು. ನಾನು ಏನಾಗಬೇಕೆಂದು ಬಯಸುತ್ತೇನೋ ಆಗಲು ನನ್ನ ಪೋಷಕರು ಯಾವಾಗಲೂ ನನ್ನನ್ನು ಪ್ರೋತ್ಸಾಹಿಸಿದ್ದಾರೆ ಎಂಬ ಅಂಶವೂ ನನಗೆ ಸಹಾಯ ಮಾಡಿತು.

ನಾನು ಡಾಕ್ಟರ್ ಆಗುತ್ತೇನೆ ಎಂದು ನನ್ನ ತಂದೆಗೆ ತುಂಬಾ ವಿಶ್ವಾಸವಿತ್ತು. ನನ್ನ ಮೇಲಿನ ಅವರ ವಿಶ್ವಾಸವೇ ನನ್ನಲ್ಲಿ ನಂಬಿಕೆಯನ್ನು ಹೆಚ್ಚಿಸಿತು.

ನಿಮ್ಮ ಭವಿಷ್ಯದ ಯೋಜನೆಗಳೇನು?

ನಾನು ಹೃದ್ರೋಗ ತಜ್ಞನಾಗಲು ಬಯಸುತ್ತೇನೆ ಮತ್ತು ನಮ್ಮ ಸಮಾಜದಲ್ಲಿ ಹೃದಯ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿರುವ ಬಹುಸಂಖ್ಯೆಯ ಜನರಿಗೆ ಸಹಾಯ ಮಾಡಲು ನನ್ನ ಕೈಲಾದಷ್ಟು ಮಾಡುತ್ತೇನೆ

ಇತರ NEET ಆಕಾಂಕ್ಷಿಗಳಿಗೆ ನೀವು ಯಾವ ಸಲಹೆಯನ್ನು ನೀಡಲು ಬಯಸುತ್ತೀರಿ?

ನಿಮ್ಮ ಶಿಕ್ಷಕರು ಮತ್ತು ನಿಮ್ಮ ಪೋಷಕರೊಂದಿಗೆ ನಿರಂತರ ಸಂಪರ್ಕದಲ್ಲಿರಲು ಮುಖ್ಯವಾಗಿದೆ. ಅಲ್ಲದೆ, ನಿಯಮಿತ ಪರೀಕ್ಷೆಗಳು ಬಹಳ ಮುಖ್ಯ ಏಕೆಂದರೆ ಅವುಗಳು ನಿಮ್ಮ ದೌರ್ಬಲ್ಯ ಪ್ರದೇಶಗಳನ್ನು ತಿಳಿಯಲು ಮತ್ತು ಸುಧಾರಿಸಲು ಸಹಾಯ ಮಾಡುತ್ತದೆ. ನೀವು ವೈದ್ಯರಾಗಲು ಉತ್ಸಾಹಿಗಳಾಗಿದ್ದರೆ ಮತ್ತು ಅದಕ್ಕೆ ಬೇಕಾದುದನ್ನು ಹಾಕಲು ಸಿದ್ಧರಿದ್ದರೆ, ಅದು ಒತ್ತಡಕ್ಕೆ ಒಳಗಾಗುವುದಿಲ್ಲ. ಆದರೆ ನೀವು ಸಂದೇಹದಲ್ಲಿದ್ದರೆ ಮತ್ತು ಅರೆಮನಸ್ಸಿನಿಂದ ಪ್ರಯಾಣವನ್ನು ಪ್ರವೇಶಿಸಿದರೆ, ಅದು ಒತ್ತಡದಿಂದ ಕೂಡಿರುತ್ತದೆ.



ವತ್ಸ ಆಶಿಶ್ ಬಾತ್ರಾ
AIR 2 (NEET UG 2022), ದೆಹಲಿ (ಎನ್‌ಸಿಟಿ) ಟಾಪರ್

ಆಕಾಶ್ BYJU'S ಸೌತ್ ಎಕ್ಸ್‌ಟೆನ್ಷನ್ ಸೆಂಟರ್‌ನಲ್ಲಿ 2 ವರ್ಷದ ತರಗತಿಯ ಕಾರ್ಯಕ್ರಮದ ವಿದ್ಯಾರ್ಥಿ ದಾಖಲಾಗಿದ್ದಾರೆ, NEET ಗೆ ಸಾಕಷ್ಟು ಕಠಿಣ ಪರಿಶ್ರಮ ಬೇಕಾಗುತ್ತದೆ ಮತ್ತು 'ಸ್ಥಿರತೆ' ಪ್ರಮುಖವಾಗಿದೆ ಎಂದು ವತ್ಸ ನಂಬಿದ್ದಾರೆ.

ಆಕಾಶ್+ಬೈಜೂಸ್ ಕುರಿತು

ಆಕಾಶ್ ಎಜುಕೇಷನಲ್ ಸರ್ವಿಸಸ್ ಲಿಮಿಟೆಡ್ (AESL) ವೈದ್ಯಕೀಯ (NEET) ಮತ್ತು ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳು (JEE), ಶಾಲೆ/ಬೋರ್ಡ್ ಪರೀಕ್ಷೆಗಳು ಮತ್ತು NTSE, KVPY, ಮತ್ತು ಒಲಂಪಿಯಾಡ್‌ಗಳಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಸಮಗ್ರ ಪರೀಕ್ಷಾ ಪೂರ್ವಸಿದ್ಧತಾ ಸೇವೆಗಳನ್ನು ಒದಗಿಸುತ್ತದೆ. "ಆಕಾಶ್" ಬ್ರ್ಯಾಂಡ್ ಗುಣಮಟ್ಟದ ತರಬೇತಿ ಮತ್ತು ವಿವಿಧ ವೈದ್ಯಕೀಯ (NEET) ಮತ್ತು JEE/ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳು, ಸ್ಕಾಲರ್ಶಿಪ್ ಪರೀಕ್ಷೆಗಳು ಮತ್ತು ಒಲಂಪಿಯಾಡ್‌ಗಳಲ್ಲಿ ಸಾಬೀತಾಗಿರುವ ವಿದ್ಯಾರ್ಥಿಗಳ ಆಯ್ಕೆಯ ದಾಖಲೆಯನ್ನು ಹೊಂದಿದೆ.

ಪರೀಕ್ಷಾ ಪೂರ್ವಸಿದ್ಧತಾ ಉದ್ಯಮದಲ್ಲಿ 33 ವರ್ಷಗಳ ಕಾರ್ಯಾಚರಣೆಯ ಅನುಭವದೊಂದಿಗೆ, ಕಂಪನಿಯು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳು ಮತ್ತು ಹಲವಾರು ಫೌಂಡೇಶನ್ ಮಟ್ಟದ ವಿದ್ಯಾರ್ಥಿವೇತನ ಪರೀಕ್ಷೆಗಳು/ಒಲಿಂಪಿಯಾಡ್ಗಳಲ್ಲಿ ಹೆಚ್ಚಿನ ಸಂಖ್ಯೆಯ ಆಯ್ಕೆಗಳನ್ನು ಹೊಂದಿದೆ. ಇದು 285+ ಆಕಾಶ್+ಬೈಜೂಸ್ ಕೇಂದ್ರಗಳ ಪ್ಯಾನ್ ಇಂಡಿಯಾ ನೆಟ್ವರ್ಕ್ (ಫ್ರಾಂಚೈಸಿ ಸೇರಿದಂತೆ) , ಮತ್ತು ವಾರ್ಷಿಕ ವಿದ್ಯಾರ್ಥಿಗಳ ಸಂಖ್ಯೆ 3,30,000 ಕ್ಕಿಂತ ಹೆಚ್ಚು. ಆಕಾಶ್ ಸಮೂಹವು ಥಿಂಕ್ & ಲರ್ನ್ ಪ್ರೈವೇಟ್ ಲಿಮಿಟೆಡ್ (BYJU'S) ಮತ್ತು ವಿಶ್ವದ ಅತಿದೊಡ್ಡ ಖಾಸಗಿ ಇಕ್ವಿಟಿ ಸಂಸ್ಥೆಯಾದ ಬ್ಲಾಕ್‌ಸ್ಟೋನ್‌ನಿಂದ ಹೂಡಿಕೆಯನ್ನು ಹೊಂದಿದೆ.

ನೀವು NEET/JEE ಗಾಗಿ ನಿಮ್ಮ ತಯಾರಿಯನ್ನು ಪ್ರಾರಂಭಿಸಲು ಉತ್ಸುಕರಾಗಿದ್ದರೆ ಮತ್ತು ಹೃಷಿಕೇಶ್‌ನಂತೆಯೆ ಯಶಸ್ಸನ್ನು ಹೊಂದಲು ಆಶಿಸುತ್ತಿದ್ದರೆ, ನಿಮ್ಮ ಕನಸಿನ ವೃತ್ತಿಜೀವನದತ್ತ ಮೊದಲ ಹೆಜ್ಜೆ ಇರಿಸಿ ಮತ್ತು ಇಂದು ಆಕಾಶ್ ನ್ಯಾಷನಲ್ ಟ್ಯಾಲೆಂಟ್ ಹಂಟ್ ಪರೀಕ್ಷೆಗೆ ನೋಂದಾಯಿಸಿ. ವಿವರಗಳಿಗಾಗಿ **aakash.ac.in** ಅನ್ನು ಭೇಟಿ ಮಾಡಿ

ಬಾಬು ರೆಡ್ಡಿ ಬೈರತಿ ನೇಮಕ

ಬೆಂಗಳೂರು: ಕರ್ನಾಟಕ ಕಿಸಾನ್ ಕಾಂಗ್ರೆಸ್ಸಿನ ಬೆಂಗಳೂರು ಕೇಂದ್ರ ಜಿಲ್ಲಾ ಕಿಸಾನ್ ಕಾಂಗ್ರೆಸ್ ಘಟಕದ ಅಧ್ಯಕ್ಷರನ್ನಾಗಿ ಬಾಬು ರೆಡ್ಡಿ ಬೈರತಿ ಅವರನ್ನು ನೇಮಿಸಲಾಗಿದೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಕಿಸಾನ್ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಸಚಿನ್ ಮಿಗಾ, 'ಬಾಬು ರೆಡ್ಡಿ ಬೈರತಿ ಅವರು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದು, ಜಿಲ್ಲಾ ನಾಯಕರ ಶಿಫಾರಸಿನಂತೆ ಈ ನೇಮಕಾತಿ ಮಾಡಲಾಗಿದೆ' ಎಂದಿದ್ದಾರೆ.

WEEKEND CORNER

ಸ್ವಚ್ಛತೆಗೆ ಸಿ.ಎಂ ಸೂಚನೆ

ಬೆಂಗಳೂರು: ನಗರದ ಮಹದೇವಪುರ ಕ್ಷೇತ್ರ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಮಳೆಯಿಂದ ಅಲ್ಲಿನ ನಿವಾಸಿಗಳಿಗೆ ಸಂಕಷ್ಟ ಉಂಟಾಗಿದ್ದು, ತುರ್ತು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಬಿಎಂಪಿ, ಬಿಡಬ್ಲ್ಯುಎಸ್ಎಸ್‌ಬಿ, ಬೆಸ್ಕಾಂಗೆ ಸೂಚಿಸಿದ್ದಾರೆ.

ಬಿಬಿಎಂಪಿ ವತಿಯಿಂದ ಜನವಸತಿ ಪ್ರದೇಶಗಳಲ್ಲಿ ಶೇಖರಣೆಯಾಗಿರುವ ಹೂಳನ್ನು ಹೊರತೆಗೆಯಬೇಕು. ಆ ಪ್ರದೇಶಗಳಲ್ಲಿ ರಾಸಾಯನಿಕ ಪುಡಿಯನ್ನು ಸಿಂಪಡಿಸಿ ಸ್ವಚ್ಛಗೊಳಿಸಬೇಕು. ಜಲಮಂಡಳಿಯವರು ನೆಲಮಹಡಿಗಳಲ್ಲಿ ನೀರು ಶೇಖರಣಾ ಟ್ಯಾಂಕ್‌ಗಳಲ್ಲಿ ತ್ಯಾಜ್ಯ ಹೊರತೆಗೆದು ಸ್ವಚ್ಛಗೊಳಿಸಬೇಕು. ಬೆಸ್ಕಾಂನವರು ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಜನರೇಟರ್‌ಗಳನ್ನು ದುರಸ್ತಿಗೊಳಿಸಿ, ಪುನರ್ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದ್ದಾರೆ.

IN IMAX AT

PVR CINEMAS {Forum Mall, Koramangala, 8:30 a.m., 12:00, 3:30, 7:00, 10:30 p.m. | VR Mall, 8:30 a.m., 12:00, 3:30, 7:00, 10:30 p.m. | Vega City, 8:30 a.m., 12:00, 3:30, 7:00, 10:30 p.m.} | INOX CINEMAS {Mantri Square Mall, Malleshwaram, 12:00, 3:30, 7:00, 10:30 p.m. | RMZ Galleria Mall, Yelahanka, 8:30 a.m., 12:00, 3:30, 7:00, 10:30 p.m.} | CINEPOLIS CINEMAS {Shanthiniketan, 8:10, 11:45 a.m., 3:20, 6:55, 10:30 p.m.}.

IN HINDI AT:- PVR CINEMAS {Bangalore} | INOX CINEMAS {Bangalore} | CINEPOLIS CINEMAS {Bangalore} | GOPALAN {Bangalore} | INNOVATIVE MULTIPLEX {Marathahalli} | ROCKLINE MALL {Jalahalli Cross} | KINO CINEMAS {Seegehalli Road} | SWAGATH SHANKARNAG {M. G. Road} | ABHINAY {KG Road} | AKASH {Laggere} | AMRUTH {Bangalore} | ANAND {Tannary Road} | ANJAN {Magadi Road} | BALAJI {Chikalsandra} | BRUNDHA {Hongasandra} | CAUVERY {Sankey Road} | HMT {Jalahalli} | LAKSHMI {Tavarekere} | LAKSHMI {Ramamurthy Nagar} | MANASA {Konankunte} | MUKUNDA {Maruti Seva Nagar} | NAVRANG {Rajaji Nagar} | POORNIMA {Lalbagh} | PRASANNA {Magadi Road} | PRITHVI {Nagavara} | PUSHPANJALI {Sultan Palaya} | RADHAKRISHNA {RT Nagar} | RAVI {Sarjapura} | RENUKA PRASANNA {J P Nagar} | SANDHYA {Madiwala} | SANTOSH {RPC Layout} | SHREE MAHADESHWARA {Bangalore} | VINAYAKA {DJ Halli} | TIRUMALA {Agrha} | URVASHI {Lalbagh} | VAIBHAV {Sanjay Nagar} | SIDDESHWARA {J P Nagar} | VENKATESHWARA {Kona Agrahara} | VINAYAKA {Marathahalli} | VICTORY {Kamakshipalaya} | COORG {Kushallnagar} | VAIBHAV CINEMA {Dodbelapur} | SRI LEKHA {Chikmangalore} | PRITHVI {Hassan} | MAHAVEER {Mandya} | JAI BHARAT {Tumkur} | DIANA {Udupi} | PVR CINEMAS {Mysore} | INOX CINEMAS {Mysore} | DRC CINEMAS {Mysore} | VISION CINEMAS {Mysore} | BALAJI DELUXE {Mysore} | SANGAM {Mysore} | THIBHADEVI {Mysore} | PVR CINEMAS {Mangalore} | CINEPOLIS CINEMAS {Mangalore} | BHARATH CINEMAS {Mangalore | Manipal | Shivamoga | Kundapura} | BHARATH CINEMAS {Padubidri - Udupi} | LAKSHMI {Shivamoga} | CINE GALAXY {Mangalore} | MOVIETIME {Davanagere} | TRINETRA {Davangere} | NETHRAVATI {Bhadravathi} | SARASWATHI {Hospet} & Other Cinemas.

IN TAMIL AT:- AMRUTH {Lingarajpuram} | VINAYAKA {Mysore Road} | VAINIDHI {Singapur Lay Out } | LAXMI {KGF} & Other Cinemas.

IN KANNADA AT:- POORNIMA {Turuvekere} | VEERBHADRESHWARA {Shivamoga} | VEERBHADRESHWARA {Bhadravathi} | VIJAY LAKSMI {Kadur} | VINAYAKA {Thirtahalli} | MALTESHA {Shikaripura} | SRI SHAILA {Nyamathi} | MARUTHI {Shiralakoppa} | MAHAVEER {Maddur} | MARUTHI {Tumkur} | LAKSHMI {Tiptur} | BRAMARAMBA {Chamarajanagar} | VENKTESHWARA {Chitradurga} | JAI MARUTHI {Sakleshpura} | RAVI {Halgur} | SRI VEERBHADRESHWARA {Ram Pura} | DHANALAXMI {Channarayanapatna} | LAXMI {Pandupura} | BHARATHI {Babu Koppala} | YAJAMANA {Hullahally} | SCVDS {K R Nagar} | SRI VEERBHADRESHWARA {D. M. Kurke} | SRIKANTH {Harihara} | JYOTHI {Mallebennur} | GAYATHRI {Hoovina Hadagali} | SRI GURU {Hassan} | SHREE {Sagar} | BHARATH {Kampli} & Other Cinemas.

IN TELUGU AT:- BHAVANI {Kolar} | NATARAJA {Mulbagilu} | ADARSHA {Chintamani} | KRISHNA {Chickabalapura} | ALANKAR {Pavgada} | PADMA {Challkere} | SRINIVASA {Kadugudi} | RAGHAVENDRA {Bellary} | KRISHNA {Hagaribomanahalli} | BHARATH {Jagalur} | BALA PICTURE PALACE {Hospet} | BALAJI {Siriguppa} | VASAVI {Sandur} | BHARATH {Kampli} | SHOBHA {Bapujinagar} | CHANDRODAYA {Vidhyapeet Circle} & Other Cinemas.

FOR ANY CHANGES OR CANCELLATION IN SHOW TIMINGS, PLEASE CONTACT THE THEATRE

farnaz

ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅಭಿಮತ

'ದೇಶದ ಆರ್ಥಿಕತೆಗೆ ವೇಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ 19 ಸಾಂಕ್ರಾಮಿಕ ಕಾಯಿಲೆಯು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆರ್ಥಿಕ ಬೆಳವಣಿಗೆ ಹಾಗೂ ಸಾಮಾಜಿಕ ಜೀವನಕ್ಕೆ ಭಾರಿ ಹೊಡೆತ ನೀಡಿತು. ಆದರೆ, ಈ ಅವಧಿಯಲ್ಲಿ ನಮ್ಮ ದೇಶದ ಆರ್ಥಿಕತೆ ನಿರೀಕ್ಷೆಗಿಂತಲೂ ವೇಗವಾಗಿ ಬೆಳವಣಿಗೆಯಾಗುತ್ತಿದೆ' ಎಂದು ಕೌಶಲಾಭಿವೃದ್ಧಿ ಹಾಗೂ ಉದ್ಯಮಶೀಲತೆ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದರು.

ಪಿಇಎಸ್ ವಿಶ್ವವಿದ್ಯಾಲಯ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ 7ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ, ಮಾತನಾಡಿದರು.

'ಕೋವಿಡ್ ಬಳಿಕ ಭಾರತದ ಪ್ರಜಾಪ್ರಭುತ್ವ ಅತ್ಯಂತ ಕ್ರಿಯಾತ್ಮಕ ಪ್ರಜಾಪ್ರಭುತ್ವವಾಗಿದೆ. ಆರ್ಥಿಕತೆಯ ಹಲವು ವಲಯಗಳಲ್ಲಿ ಸಕಾರಾತ್ಮಕ ಬೆಳವಣಿಗೆ ಕಾಣಬಹುದಾಗಿದೆ. ಪ್ರಸಕ್ತ ಸಾಲಿನ ಏಪ್ರಿಲ್- ಜೂನ್ ತ್ರೈಮಾಸಿಕದಲ್ಲಿ ಒಟ್ಟು ದೇಶೀಯ ಉತ್ಪನ್ನವು ಶೇ 13.5ರಷ್ಟು ಬೆಳವಣಿಗೆಯಾಗಿದೆ. ಈ ಮೂಲಕ ಭಾರತ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ. ಕೇಂದ್ರ ಸರ್ಕಾರವು ಮೂಲಸೌಕರ್ಯಗಳ ವೃದ್ಧಿಗೆ ₹ 10 ಲಕ್ಷ ಕೋಟಿ ಹೂಡಿಕೆ ಮಾಡಿದೆ. ಇದರಿಂದಾಗಿ ಯುವ ಪದವೀಧರರಿಗೆ ಯಶಸ್ವಿ ಉದ್ಯಮಿಗಳಾಗಲು ಅನುಕೂಲವಾಗುತ್ತದೆ' ಎಂದು ಅವರು ಹೇಳಿದರು.

'ನವೋದ್ಯಮ ಪ್ರಾರಂಭಿಸುವುದು ಈ ಹಿಂದೆ ಸುಲಭವಾಗಿರಲಿಲ್ಲ. ಈಗ ಸರ್ಕಾರವೇ ಅಗತ್ಯ ನೆರವು ನೀಡಿ, ಪ್ರೋತ್ಸಾಹಿಸುತ್ತಿದೆ. ಮುಂದಿನ ದಶಕ ಭಾರತದ ದಶಕವಾಗಲಿದೆ' ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್. ದೊರೆಸ್ವಾಮಿ, 'ಪ್ರತಿಯೊಬ್ಬರ ಜೀವನದಲ್ಲೂ ತಾಯಿ, ಮಾತೃಭಾಷೆ ಹಾಗೂ ತಾಯ್ನಾಡು ಮಹತ್ವದ ಪಾತ್ರವಹಿಸಲಿವೆ. ಆದ್ದರಿಂದ ಈ ಮೂರನ್ನು ಯಾವುದೇ ಕಾರಣಕ್ಕೂ ಮರೆಯಬಾರದು. ಈ ರಾಷ್ಟ್ರಕ್ಕೆ ಯುವಜನರು ದೊಡ್ಡ ಆಸ್ತಿ. ಅವರ ಮೇಲೆ ಹೆಚ್ಚಿನ ಜವಾಬ್ದಾರಿಗಳು ಹಾಗೂ ನಿರೀಕ್ಷೆಯಿದೆ. ಇದನ್ನು ಅರಿತು ಯುವಜನರು ಸಾಗಬೇಕು' ಎಂದು ಹೇಳಿದರು.

'ಗುಣಮಟ್ಟದ ಪಠ್ಯಕ್ರಮ, ಪಠ್ಯೇತರ ಚಟುವಟಿಕೆ ಅಳವಡಿಸಿಕೊಂಡು, ವಿದ್ಯಾರ್ಥಿಗಳ ಯಶಸ್ಸಿಗೆ ವಿಶ್ವವಿದ್ಯಾಲಯ ಪೂರಕ ವಾತಾವರಣ ನೀಡುತ್ತಿದೆ. ಇದರ ಜತೆಗೆ ಸಾಮಾಜಿಕ ಮೌಲ್ಯಗಳು, ನೈತಿಕ ಶಿಕ್ಷಣ ನೀಡುತ್ತಿದ್ದೇವೆ' ಎಂದರು.

ವಿವಿಧ ವಿಭಾಗಗಳಲ್ಲಿ ಚಿನ್ನದ ಪದಕ ಪಡೆದ (ಎಡದಿಂದ) ಪಿ. ಜಯಮ್ಮ, ದೀಕ್ಷಾ ಎ. ಕುಮಾರ್, ಸೃಷ್ಟಿ ಜಯರಾಮು ಮತ್ತು ಮಯೂರ್ ಪಿ.ಎಲ್. ಪರಸ್ಪರ ಅಭಿನಂದಿಸಿದ ಕ್ಷಣ

ಪ್ರಜಾವಾಣಿ ಚಿತ್ರ/ ರಂಜು ಪಿ.

24 ಮಂದಿಗೆ ಚಿನ್ನದ ಪದಕ

ಪಿಇಎಸ್ ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವದಲ್ಲಿ 3,495 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ವಿವಿಧ ವಿಭಾಗಗಳಲ್ಲಿ ರ‍್ಯಾಂಕ್ ಪಡೆದ 92 ಅಭ್ಯರ್ಥಿಗಳಲ್ಲಿ 24 ಮಂದಿಗೆ ಚಿನ್ನದ ಪದಕವನ್ನು ರಾಜೀವ್ ಚಂದ್ರಶೇಖರ್ ಪ್ರದಾನ ಮಾಡಿದರು. ನಾಲ್ವರಿಗೆ ಚಿನ್ನ ಲೇಪಿತ ಬೆಳ್ಳಿ ಪದಕ ಹಾಗೂ ಉಳಿದವರಿಗೆ ಬೆಳ್ಳಿ ಪದಕ ನೀಡಲಾಯಿತು. ದಿವ್ಯಾ ಜೋಸೆಫ್ ಪೆರೇರಾ, ಸಂತಮೀನಾ ಎಸ್., ರಾಜೇಂದ್ರ ಪ್ರಸಾದ್ ಕೆ.ಎಸ್. ಹಾಗೂ ಸುಚಿತ್ರಾ ಸಕ್ಸೆನಾ ಅವರಿಗೆ ಪಿಎಚ್‌.ಡಿ ಪ್ರದಾನ ಮಾಡಲಾಯಿತು.

ಪ್ರಾಧ್ಯಾಪಕರು ಹಾಗೂ ಪಾಲಕರ ಪ್ರೋತ್ಸಾಹದಿಂದ ರ‍್ಯಾಂಕ್ ಪಡೆಯಲು ಸಾಧ್ಯವಾಯಿತು. ಚಿನ್ನದ ಪದಕ ದೊರೆತಿರುವುದು ಸಂತಸ ಮೂಡಿಸಿದೆ

ದೀಕ್ಷಾ ಎ. ಕುಮಾರ್
ಚಿನ್ನದ ಪದಕ ವಿಜೇತೆ

'ನವ ಬೆಂಗಳೂರಿಗೆ ನೀಲನಕ್ಷೆ'

'ನವೋದ್ಯಮ, ತಂತ್ರಜ್ಞಾನ ಆಧಾರಿತ ಕಂಪನಿಗಳಿಗೆ ಬೆಂಗಳೂರು ಉತ್ತಮ ಆಯ್ಕೆ. ಇಲ್ಲಿ ಅಗತ್ಯ ಮೂಲಸೌಕರ್ಯವಿದೆ. ಮಳೆಯಿಂದ ಉಂಟಾದ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಸರ್ಕಾರ ಕ್ರಮ ವಹಿಸಿದೆ. ಬಿಲ್ಡರ್‌ಗಳು ಕಾನೂನು ಉಲ್ಲಂಘನೆ ಮಾಡಿದ್ದೇ ಸಮಸ್ಯೆಗೆ ಕಾರಣ. ನವ ಬೆಂಗಳೂರು ನಿರ್ಮಾಣದ ಬಗ್ಗೆ ತಜ್ಞರ ಜತೆಗೆ ಚರ್ಚಿಸಿ, ನೀಲ ನಕ್ಷೆ ತಯಾರಿಸಲಾಗುತ್ತಿದೆ. ಐಟಿ ಕಂಪನಿಗಳು ಬೆಂಗಳೂರನ್ನು ತೊರೆಯಬಾರದು' ಎಂದು ರಾಜೀವ್ ಚಂದ್ರಶೇಖರ್ ಮನವಿ ಮಾಡಿದರು.

ಕಾಲೇಜಿನಲ್ಲಿ ಕಲಿಕೆಗೆ ಉತ್ತಮ ವಾತಾವರಣ ಇದ್ದಿದ್ದರಿಂದಲೇ ರ‍್ಯಾಂಕ್ ಸಾಧ್ಯವಾಯಿತು. ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಸಿಕ್ಕಿದೆ

ಸೃಷ್ಟಿ ಜಯರಾಮು,
ಚಿನ್ನದ ಪದಕ ವಿಜೇತೆ

ಮಂಥನ: ಕನ್ನಡ ಕಡೆಗಣನೆಗೆ ನಾಗಾಭರಣ ಆಕ್ಷೇಪ

ಬೆಂಗಳೂರು: ಕೇಂದ್ರ ರಸ್ತೆ ಸಾರಿಗೆ ಹಾಗೂ ಭೂ ಹೆದ್ದಾರಿ ಇಲಾಖೆ ನಗರದಲ್ಲಿ ಆಯೋಜಿಸಿದ್ದ ಮಂಥನ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕನ್ನಡ ಕಡೆಗಣಿಸಿರುವುದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದ್ದು, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮಕ್ಕೆ ಆಗ್ರಹಿಸಿದೆ.

ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ಪತ್ರ ಬರೆದಿದ್ದಾರೆ. 'ಕಾರ್ಯಕ್ರಮಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸುವಂತೆ ಸರ್ಕಾರ ಆದೇಶ ಹೊರಡಿಸಿ ಎರಡು ದಿನಗಳಾಗಿವೆ. ಅದಾಗಲೇ ಲೋಕೋಪಯೋಗಿ ಇಲಾಖೆ ಕಾರ್ಯಕ್ರಮದಲ್ಲಿ ಕನ್ನಡ ಕಡೆಗಣಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೂ ಕಾರಣವಾಗಿದೆ. ಆದ್ದರಿಂದ ಕನ್ನಡ ಕಡೆಗಣಿಸಿದವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.



75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ



ನಗರಾಭಿವೃದ್ಧಿ ಇಲಾಖೆ
ಪೌರಾಡಳಿತ ನಿರ್ದೇಶನಾಲಯ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

- ತೀವ್ರ ವೇಗದ ನಗರೀಕರಣವಿರುವ ರಾಜ್ಯದ ಎಲ್ಲಾ ನಗರಗಳು ಹಾಗೂ ಪಟ್ಟಣಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಮಧ್ಯಮ ಮತ್ತು ಸಣ್ಣ ಪಟ್ಟಣಗಳ ಸಮಗ್ರ ಅಭಿವೃದ್ಧಿಯನ್ನು ಕೇಂದ್ರೀಕರಿಸಲು ರಾಜ್ಯ ಸರ್ಕಾರವು ಈ ನಗರ, ಪಟ್ಟಣಗಳಲ್ಲಿ ಪೌರಸೇವೆಗಳನ್ನು ಮೇಲ್ದರ್ಜೆಗೇರಿಸುವುದು ಮತ್ತು ವಿಸ್ತರಿಸುವುದು ಅಗತ್ಯವೆಂದು ಪರಿಗಣಿಸಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಿರುತ್ತದೆ.
- ರಾಜ್ಯ ಸರ್ಕಾರವು 2021-22ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ-4)ಯನ್ನು ಜಾರಿಗೆ ತಂದಿದ್ದು, ತೀವ್ರಗತಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು 2022-23ನೇ ಸಾಲಿನಿಂದ 2024-25ನೇ ಸಾಲಿನವರೆಗೆ 61 ನಗರಸಭೆಗಳು, 124 ಪುರಸಭೆಗಳು ಮತ್ತು 117 ಪಟ್ಟಣ ಪಂಚಾಯಿತಿಗಳು ಸೇರಿ ಒಟ್ಟು 302 ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಪ್ರತಿ ನಗರ ಪಟ್ಟಣದ ಅಭಿವೃದ್ಧಿಯ ಹಾಗೂ ಮೂಲಭೂತ ಸೌಲಭ್ಯದ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಒಟ್ಟಾರೆ ಮೊತ್ತ **ರೂ. 3885.00** ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ.
- ಸದರಿ ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ಒದಗಿಸಿದ ಒಟ್ಟು ಮೊತ್ತದಲ್ಲಿ ಪರಿಶಿಷ್ಟ ಜಾತಿ/ಗಿರಿಜನ ಜನರು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಶೇಕಡ 24.10 ರಷ್ಟು ಮೊತ್ತವನ್ನು ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ ಶೇಕಡ 20 ರಷ್ಟು ಅನುದಾನವನ್ನು ಪೌರಕಾರ್ಮಿಕರಿಗೆ ನಿಗಧಿಪಡಿಸಿದೆ.
- ಶೇಕಡ 5 ರಷ್ಟು ಅನುದಾನವನ್ನು ಅಂಗವಿಕಲರ ಕಲ್ಯಾಣಕ್ಕಾಗಿ ನಿಗದಿಪಡಿಸಿದೆ. ಶೇಕಡ 7.25 ರಷ್ಟು ಅನುದಾನವನ್ನು ಇತರೆ ಬಡಜನರ ಕಲ್ಯಾಣಕ್ಕಾಗಿ ಮೀಸಲಿರಿಸಿದೆ. ಸದರಿ ಮೊತ್ತದಲ್ಲಿ ವೈಯಕ್ತಿಕ ಕಲ್ಯಾಣ ಮತ್ತು ಸಮುದಾಯ ಸಂಬಂಧಿತ ಕಲ್ಯಾಣ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ.



ಮಾನ್ಯ ಪೌರಾಡಳಿತ ಹಾಗೂ ಸಣ್ಣ ಕೈಗಾರಿಕಾ ಸಚಿವರಾದ **ಶ್ರೀ ನಾಗರಾಜು** (ಎಂ. ಟಿ. ಬಿ) ರವರು ಇಲಾಖಾ ಕಾಮಗಾರಿಯನ್ನು ವೀಕ್ಷಿಸುತ್ತಿರುವುದು

ಪ್ರಕಟಣೆ : ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು | ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಮಹದೇವಪುರ ವಲಯ: ಬಿಡಿಎ, ಬಿಬಿಎಂಪಿಯಿಂದಲೇ ನಿರ್ಮಾಣ

ಕೆರೆ, ರಾಜಕಾಲುವೆ ಮೇಲೆ ರಸ್ತೆ

• ಆರ್. ಮಂಜುನಾಥ್

ಬೆಂಗಳೂರು: ರಾಜಕಾಲುವೆಗಳ ಮೇಲೆಯೇ ಬಿಡಿಎ, ಬಿಬಿಎಂಪಿ ರಸ್ತೆಗಳನ್ನು ನಿರ್ಮಾಣ ಮಾಡಿವೆ. ಈ ರಸ್ತೆಗಳಲ್ಲಿ ಒಂದು ಬದಿಯಿಂದ ಮತ್ತೊಂದು ಬದಿಗೆ ನೀರು ಹರಿಯಲು ರಾಜಕಾಲುವೆಗಳಿಲ್ಲ. ಜೊತೆಗೆ ಕೆರೆ ಅಂಗಳದಲ್ಲೂ ಮಣ್ಣು ಸುರಿದು ರಸ್ತೆ ಕಾಮಗಾರಿ ನಡೆಸಲಾಗಿದೆ. ಇದಕ್ಕೆ ಹತ್ತಾರು ವರ್ಷಗಳಿಂದ ಸರ್ಕಾರವೇ ಅನುಮತಿ ನೀಡಿದೆ.

ಸರ್ಜಾಪುರ ಮುಖ್ಯರಸ್ತೆ ಹಾಗೂ ಹೊರ ವರ್ತುಲ ರಸ್ತೆ ನಿರ್ಮಾಣದಲ್ಲೂ ರಾಜಕಾಲುವೆಗಳು ಒತ್ತುವರಿಯಾಗಿವೆ. ಮಳೆನೀರು ಹರಿಯಲು ಈ ರಸ್ತೆಗಳಲ್ಲಿ ವ್ಯವಸ್ಥೆ ಕಲ್ಪಿಸಿಲ್ಲ. ಬಡಾವಣೆ, ಐಟಿ ಕಾರಿಡಾರ್‌ಗಳ ಒಳಗೆ ರಾಜಕಾಲುವೆಗಳ ಒತ್ತುವರಿ, ಕಿರಿದು ಮಾಡಿರುವುದು, ಸ್ಥಳ ಬದಲಾವಣೆ, ಮಾರ್ಪಾಡುಗಳಂತಹ ಪ್ರಕ್ರಿಯೆಗಳು ನಡೆದಿವೆ. ಆದರೆ, ಬಿಡಿಎ, ಬಿಬಿಎಂಪಿ ಎಂಜಿನಿಯರ್‌ಗಳು 'ಸರ್ಕಾರದ ಸಮ್ಮತಿ ಇದೆ' ಎಂದು ಹೇಳಿ ರಾಜಕಾಲುವೆಗಳನ್ನು ಸಂಪೂರ್ಣವಾಗಿ ಒತ್ತುವರಿ ಮಾಡಿರುವುದು ಬೆಂಗಳೂರು ಪೂರ್ವಭಾಗ ಹಾಗೂ ಐಟಿ ಕಾರಿಡಾರ್ ಧಾರಾಕಾರ ಮಳೆ ಸಂದರ್ಭದಲ್ಲಿ ಮುಳುಗಲು ಪ್ರಮುಖ ಕಾರಣ. ಈ ಬಗ್ಗೆ ಗಮನಕ್ಕೆ ತಂದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂಬುದು ಪರಿಸರ ಕಾರ್ಯಕರ್ತರ ಆರೋಪ. ರಾಜಕಾಲುವೆಗೆ ಅನುವು ಮಾಡಿಕೊಡದೆ ರಸ್ತೆ ನಿರ್ಮಿಸಿರುವುದು ನಕ್ಷೆಯಿಂದ ಸಾಬೀತಾಗುತ್ತದೆ.

ಬೆಳ್ಳಂದೂರು, ದೊಡ್ಡನೆಕ್ಕುಂದಿ, ನಲ್ಲೂರಹಳ್ಳಿ, ಹೊರಮಾವು, ವೆಂಗಯ್ಯನಕೆರೆ, ಎಲೆಮಲ್ಲಪ್ಪಶೆಟ್ಟಿಕೆರೆ, ಕಲ್ಕೆರೆ, ಗುಂಜೂರು ಪಾಳ್ಯ, ಶೀಲವಂತನಕೆರೆ, ಪಣತ್ತೂರು, ಪಟ್ಟಂದೂರು ಅಗ್ರಹಾರ ಕೆರೆಗಳ ಬಳಿ ರಸ್ತೆಗಾಗಿ ಕೆರೆ ಅಂಗಳಕ್ಕೆ ಮಣ್ಣು ಸುರಿಯಲಾಗಿದೆ. ಅಲ್ಲದೆ, ಆ ಕೆರೆಗಳಿಗೆ ಹಾಗೂ ಅಲ್ಲಿಂದ ಸಂಪರ್ಕವಿರುವ ರಾಜಕಾಲುವೆಗಳನ್ನು 'ರಸ್ತೆಗೆ ಸಮ' ಮಾಡಿರುವುದು ಜಲಾವೃತ ಸಮಸ್ಯೆಗೆ ಪ್ರಮುಖ ಕಾರಣ.

'ರಸ್ತೆಗಳ ಅಭಿವೃದ್ಧಿಗೆ ನಮಗೆ ಸರ್ಕಾರದಿಂದ ಅನುಮತಿ ಇದೆ. ಸಾರ್ವಜನಿಕರ ಉಪಯೋಗಕ್ಕಾಗಿ ರಾಜಕಾಲುವೆ ಹಾಗೂ ಕೆರೆಯಲ್ಲಿ ರಸ್ತೆ ಮಾಡಬಹುದಾಗಿದೆ' ಎಂದು ಬಿಡಿಎ ಹಾಗೂ ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ.

ನೀರೆಲ್ಲಿ ಹೋಗಬೇಕು...?

'ರಸ್ತೆ ಮಾಡಬೇಕು ನಿಜ. ಆದರೆ, ಮಳೆ ನೀರು ಹೋಗುವುದಾದರೂ ಎಲ್ಲಿಗೆ ಎಂಬುದನ್ನು ಇವರ್‍ಯಾರೂ ಏಕೆ ಯೋಚಿಸಿಲ್ಲ? ಇದ್ಯಾವ ಸೀಮೆ ಎಂಜಿನಿಯರಿಂಗ್? ರಸ್ತೆಯ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ನೀರು ಕಾಲುವೆಯಲ್ಲಿ ಹರಿಯಬೇಕು. ಇದಾಗದಿದ್ದರೆ ರಸ್ತೆ ಹಾಗೂ ಬಡಾವಣೆಗಳಿಗೆ ನೀರು ನುಗ್ಗುತ್ತದೆ. ಇಂತಹ ಸಾಮಾನ್ಯ ಪರಿಜ್ಞಾನ ಇಲ್ಲದೆ ರಸ್ತೆಗಳನ್ನು ನಿರ್ಮಿಸಿರುವುದು ಪರಿಸರದ ಮೇಲೆ ಮಾಡಿರುವ ದೊಡ್ಡ ಆಕ್ರಮಣ. ಇದರಿಂದ ಜನರನ್ನೂ ಸಂಕಷ್ಟಕ್ಕೆ ಸಿಲುಕಿಸಿದಂತಾಗಿದೆ' ಎಂದು ಫ್ರೆಂಡ್ಸ್ ಆಫ್ ಲೇಕ್ಸ್‌ನ ರಾಮ್‌ಪ್ರಸಾದ್ ಹೇಳಿದರು.

ಒತ್ತುವರಿಯಿಂದ ಜಲಾವೃತ

ಸಂದೀಪ್ ಅನಿರುಧನ್

'ನಗರದಲ್ಲಿ ಅತಿಹೆಚ್ಚು ಮಳೆಯಿಂದ ಸಂಕಷ್ಟಕ್ಕೆ ಒಳಗಾಗಿದ್ದು ಹೊರವಲಯ. ಈ ಹಿಂದೆ ಯೋಜನೆ ಮಾಡಿದಾಗ ಪಾಲಿಕೆ ವ್ಯಾಪ್ತಿಯಲ್ಲಿ ಇರಲಿಲ್ಲ. ರಾಜಕಾಲುವೆ, ಕೆರೆಗಳ ಮೇಲೆಲ್ಲ ಅಭಿವೃದ್ಧಿಗೆ ಆಕ್ಷೇಪವನ್ನೇ ಬಿಡಿಎ ಅಧಿಕಾರಿಗಳು ಮಾಡಿಲ್ಲ. ಆರ್‌ಎಂಪಿಯನ್ವಯ ನಕ್ಷೆ ಮಾಡಿದ್ದಾರೆ. ಆದರೆ ಅದು ಅಂತಿಮವಲ್ಲ. ಕಂದಾಯ ನಕ್ಷೆಯನ್ನು ನೋಡಬೇಕು. ಅದರಂತೆ ಎಲ್ಲವೂ ಇಲ್ಲಿ ಒತ್ತುವರಿಯೇ. ಹೀಗಾಗಿ ಜಲಕಂಟಕವಾಗಿದೆ. ಪಟ್ಟಂದೂರು ಕೆರೆಯ ಮೇಲೂ ರಸ್ತೆ ಮಾಡುತ್ತಿದ್ದಾರೆ. ಮೊಕದ್ದಮೆ ಹೂಡಲಾಗಿದೆ' ಎಂದು ಸಿಟಿಜನ್ಸ್ ಅಜೆಂಡಾ ಫಾರ್ ಬೆಂಗಳೂರಿನ ಸಂಚಾಲಕ ಸಂದೀಪ್ ಅನಿರುಧನ್ ಹೇಳಿದರು.

'ಕೆರೆ ಹಾಗೂ ರಾಜಕಾಲುವೆಗಳ ಮೇಲೆ ಬಿಡಿಎ, ಬಿಬಿಎಂಪಿ ಅಧಿಕಾರಿಗಳೇ ರಸ್ತೆ ನಿರ್ಮಿಸಿದ್ದಾರೆ. ಇದರಿಂದಲೇ ಸಾಕಷ್ಟು ಸಮಸ್ಯೆ ಎದುರಾಗಿದೆ. ಸರ್ಕಾರವೇ ಒತ್ತುವರಿ ಮಾಡಿದರೆ ಇನ್ನು ಖಾಸಗಿಯವರು ಕೇಳಬೇಕೆ? ಹೀಗಾಗಿ ನಗರಕ್ಕೆ ಒಂದು ನೀತಿಯಿಲ್ಲ. ಇರುವುದನ್ನು ಪರಿಶೀಲಿಸುವವರಿಲ್ಲ. ಒತ್ತುವರಿ ತೆರವಾಗದ ಹೊರತು ಸಮಸ್ಯೆಗೆ ಪರಿಹಾರ ಇಲ್ಲ' ಎಂದರು.

ಜಿ.ಎಂ.ಹೆಗಡೆ ಅವರಿಗೆ ವಿ.ಕೃ.ಗೋಕಾಕ್ ಪ್ರಶಸ್ತಿಯನ್ನು ಅಜಯ್‌ಕುಮಾರ್ ಸಿಂಗ್ ಪ್ರದಾನ ಮಾಡಿದರು. ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್‌.ಎನ್‌.ಸುರೇಶ್, ಅನಿಲ್ ಗೋಕಾಕ್, ಶಶಿಧರ ತೋಡ್ಕರ ಇದ್ದರು —ಪ್ರಜಾವಾಣಿ ಚಿತ್ರ

'ಪರ ದೇಶ, ಧರ್ಮದ ಬಗ್ಗೆ ಗೌರವ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ದೇಶ, ಭಾಷೆ, ಧರ್ಮ, ಸಂಸ್ಕೃತಿ, ಸಾಹಿತ್ಯದ ಬಗ್ಗೆ ಹೆಮ್ಮೆ ಇರಬೇಕು. ಗರ್ವ ಇದ್ದರೂ ತಪ್ಪಿಲ್ಲ. ಆದರೆ, ಇನ್ನೊಬ್ಬರ ದೇಶ, ಭಾಷೆ, ಧರ್ಮ ಸಂಸ್ಕೃತಿಯನ್ನೂ ಗೌರವಿಸುವುದು ಮುಖ್ಯ' ಎಂದು ನಿವೃತ್ತ ಐಪಿಎಸ್ ಅಧಿಕಾರಿ ಅಜಯ್‌ಕುಮಾರ್ ಸಿಂಗ್ ಹೇಳಿದರು.

ಭಾರತೀಯ ವಿದ್ಯಾಭವನ ಮತ್ತು ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಧಾರವಾಡದ ನಿವೃತ್ತ ಪ್ರಾಧ್ಯಾಪಕ ಜಿ.ಎಂ.ಹೆಗಡೆ ಅವರಿಗೆ ವಿ.ಕೃ. ಗೋಕಾಕ್ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಪರಧರ್ಮ ಸಹಿಷ್ಣುತೆ ಸಾಧ್ಯವಾಗುವುದು ಸಹೃದಯತೆಯಿಂದ ಮಾತ್ರ. ಯಾವ ಮನುಷ್ಯನೂ ಸಂಪೂರ್ಣ ಸ್ವತಂತ್ರವಾಗಿ ಬದುಕಲು ಸಾಧ್ಯವಿಲ್ಲ. ಒಬ್ಬರ ಮೇಲೊಬ್ಬರು ಅವಲಂಬಿತರಾಗಿಯೇ ಜೀವನ ನಡೆಸಬೇಕಿದೆ. ಅದನ್ನು ಅರ್ಥ ಮಾಡಿಕೊಂಡರೆ ಎಲ್ಲರನ್ನೂ ಒಳಗೊಂಡು ಸಹಬಾಳ್ವೆ ನಡೆಸಲು ಸಾಧ್ಯ' ಎಂದು ಪ್ರತಿಪಾದಿಸಿದರು.

ಪ್ರಶಸ್ತಿ ಸ್ವೀಕರಿಸಿದ ಜಿ.ಎಂ.ಹೆಗಡೆ ಮಾತನಾಡಿ, 'ವಿ.ಕೃ.ಗೋಕಾಕ್ ಅವರು ಕನ್ನಡಿಗರ ಪ್ರಾತಃಸ್ಮರಣೀಯರಾಗಿದ್ದರು. ಅವರ ಭಾಷಣ ಕೇಳಲು ವಿದ್ಯಾರ್ಥಿಗಳು ಹಾತೊರೆಯುತ್ತಿದ್ದರು. ಅವರ ಹೆಸರಿನಲ್ಲಿ ನೀಡಿರುವ ಪ್ರಶಸ್ತಿ ನನ್ನ ಜವಾಬ್ದಾರಿ ಹೆಚ್ಚಿಸಿದೆ' ಎಂದರು.

ಧಾರವಾಡದ ಹಿರೇಮಗಳೂರು ಈಶ್ವರನ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಶಶಿಧರ್ ತೋಡ್ಕರ ಅವರು ಅಭಿನಂದನಾ ನುಡಿಗಳನ್ನಾಡಿ, 'ಸಾಹಿತ್ಯ ಕ್ಷೇತ್ರದಲ್ಲಿ ಜಿ.ಎಂ.ಹೆಗಡೆ ಅವರದ್ದು ಸವ್ಯಸಾಚಿ ವ್ಯಕ್ತಿತ್ವ. ಸದ್ದಿಲ್ಲದೆ ಅವರು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡುತ್ತಿದ್ದಾರೆ' ಎಂದು ಬಣ್ಣಿಸಿದರು.

ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಅನಿಲ್ ಗೋಕಾಕ್ ಮಾತನಾಡಿ, 'ಶಿಕ್ಷಣ ಎಂದರೆ ವ್ಯಕ್ತಿಯ ಘನತೆ ಮತ್ತು ಅವರಲ್ಲಿ ಮಾನವೀಯ ಮೌಲ್ಯ ಹೆಚ್ಚಿಸುವ ಉಪಕರಣ ಆಗಬೇಕು. ಆದರೆ, ಇದನ್ನು ಸಾಧಿಸುವಲ್ಲಿ ಇಂದಿನ ಶಿಕ್ಷಣ ಪದ್ಧತಿ ಸಂಪೂರ್ಣ ವಿಫಲವಾಗಿದೆ. ವಿಶ್ವಮಾನವ ಪರಿಕಲ್ಪನೆ ಮತ್ತು ವಿವಿಧತೆಯಲ್ಲಿ ಅಡಗಿರುವ ಏಕತೆಯನ್ನು ಅರಿಯುವ ಸಾಮರ್ಥ್ಯ ಮಕ್ಕಳಿಗೆ ಇಲ್ಲವಾಗಿದೆ. ಆದ್ದರಿಂದ ದೇಶದಲ್ಲಿ ಸಾಮರಸ್ಯ ಸಾಧಿಸಲು ಸಾಧ್ಯವಾಗುತ್ತಿಲ್ಲ, ಆ ನಿಟ್ಟಿನ ಪ್ರಯತ್ನವೂ ಸಾಕಷ್ಟು ಪ್ರಮಾಣದಲ್ಲಿ ಆಗುತ್ತಿಲ್ಲ' ಎಂದು ವಿಷಾದ ವ್ಯಕ್ತಪಡಿಸಿದರು.

'1,141 ಸ್ಮಶಾನ ಜಾಗ ಒತ್ತುವರಿ ಪತ್ತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಾದ್ಯಂತ 1,141 ಸ್ಮಶಾನ ಜಾಗಗಳು ಒತ್ತುವರಿಯಾಗಿರುವುದನ್ನು ಗುರುತಿಸಲಾಗಿದ್ದು, 282 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಇನ್ನೂ 859 ಒತ್ತುವರಿ ತೆರವುಗೊಳಿಸಬೇಕಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಮೊಹಮ್ಮದ್ ಇಕ್ಬಾಲ್ ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ. ವೀರಪ್ಪ ಹಾಗೂ ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರ ಅನುಪಾಲನಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿ, ಶೇ 92ರಷ್ಟು ಸ್ಮಶಾನ ಜಾಗಗಳನ್ನು ಮಂಜೂರು ಮಾಡಲಾಗಿದ್ದು, ಕಾನೂನು ತೊಡಕುಗಳ ಕೆಲ ಕಾರಣಗಳಿಂದಾಗಿ ಒಂದಿಷ್ಟು ಕಡೆ ಸ್ಮಶಾನ ಜಾಗ ಮಂಜೂರು ಮಾಡಲು ವಿಳಂಬವಾಗಿದೆ' ಎಂದು ತಿಳಿಸಿದರು.

'ನ್ಯಾಯಾಲಯದ ಆದೇಶ ಪಾಲನೆಗೆ ಇನ್ನು ಮೂರು ವಾರಗಳ ಕಾಲಾವಕಾಶ ಬೇಕು' ಎಂಬ ಕೋರಿಕೆಯನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ವರದಿಯಲ್ಲಿ ಏನಿದೆ?: ರಾಜ್ಯದಲ್ಲಿರುವ ಒಟ್ಟು 29,616 ಗ್ರಾಮಗಳ ಪೈಕಿ 27,458 ಗ್ರಾಮಗಳಲ್ಲಿ ಸ್ಮಶಾನ ಜಾಗ ಒದಗಿಸಲಾಗಿದೆ. ಅರಣ್ಯ ಸಂರಕ್ಷಣಾ ಕಾಯ್ದೆಯ ಸಮಸ್ಯೆ, ವ್ಯಾಜ್ಯಗಳು ಹಾಗೂ ಜಮೀನು ಖರೀದಿ ಮಾಡಬೇಕಿರುವ ಕಾರಣ 600 ಗ್ರಾಮಗಳಲ್ಲಿ ಜಾಗ ಒದಗಿಸಲು ಆಗಿಲ್ಲ. 403 ಗ್ರಾಮಗಳಲ್ಲಿ ಸ್ಮಶಾನ ಜಾಗ ಒದಗಿಸಬೇಕಾಗಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿದೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಆಹಾರೋತ್ಪಾದನೆ: ಭವಿಷ್ಯದ ಸವಾಲು

ವೃತ್ತಿಯಾಗಿ ಕೃಷಿ: ಯುವಜನರಿಗೆ ಉತ್ತೇಜನ ಅಗತ್ಯ –ಡಾ.ಆರ್‌.ಎಸ್‌.ಪರೋಡ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮ, ಬ್ಲಾಕ್‌ಮಟ್ಟದಲ್ಲಿ ಅಗ್ರಿ ಕ್ಲಿನಿಕ್‌ಗಳನ್ನು ಸ್ಥಾಪಿಸುವುದು ಅಗತ್ಯ' ಎಂದು ನವದೆಹಲಿಯ ಕೃಷಿ ವಿಜ್ಞಾನ ಪ್ರಗತಿ ಟ್ರಸ್ಟ್ ಅಧ್ಯಕ್ಷ ಡಾ.ಆರ್‌.ಎಸ್‌.ಪರೋಡ ಶುಕ್ರವಾರ ಹೇಳಿದರು.

ಇಲ್ಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ (ಜಿಕೆವಿಕೆ) 56ನೇ ಘಟಿಕೋತ್ಸವದಲ್ಲಿ ಅವರು, 'ಕೃಷಿ ಪದವೀಧರರಿಗೆ ಪರಿಕರ, ಯಂತ್ರೋಪಕರಣ, ಹಾಗೂ ಸಲಕರಣೆ ಮಾರಾಟಕ್ಕೆ ವಿಶೇಷ ಪರವಾನಗಿ ನೀಡಬೇಕು' ಎಂದು ಆಗ್ರಹಪಡಿಸಿದರು.

'ಜಗತ್ತಿನ ಜನಸಂಖ್ಯೆಯು 2050ರ ವೇಳೆಗೆ 900 ಕೋಟಿ ತಲುಪುವ ಅಂದಾಜಿದೆ. ಆಗ ಶೇ 70ರಷ್ಟು ಹೆಚ್ಚಿನ ಆಹಾರದ ಅವಶ್ಯವಾಗಲಿದೆ. 2030ರ ವೇಳೆಗೆ ಭಾರತದ ಜನಸಂಖ್ಯೆಗೆ ಆಹಾರ ಒದಗಿಸುವ ದೊಡ್ಡ ಸವಾಲು ಎದುರಾಗಲಿದೆ. 2027ರ ವೇಳೆಗೆ ದೇಶ ಜನಸಂಖ್ಯೆಯಲ್ಲಿ ಮೊದಲ ಸ್ಥಾನಕ್ಕೇರುವ ಸಂಭವವಿದೆ' ಎಂದು ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು, ಭಾರತೀಯ ಕೃಷಿಯು ಇನ್ನೂ ಮಳೆ ಆಧಾರಿತವಾಗಿದೆ. ಒಟ್ಟು ಬೆಳೆ ಪ್ರದೇಶದ 3ನೇ ಎರಡರಷ್ಟು ಪ್ರದೇಶದಲ್ಲಿ ಮಳೆ-ಆಧಾರಿತ ಕೃಷಿಯನ್ನು ಮಾಡಲಾಗುತ್ತದೆ. ಇಸ್ರೇಲ್‌ನಲ್ಲಿ ವಾರ್ಷಿಕ ಕೇವಲ 10 ಸೆಂ.ಮೀ. ಮಳೆಯಾದ ಪ್ರದೇಶದಲ್ಲೂ ನೀರಾವರಿ ವ್ಯವಸ್ಥೆಯಿಂದ ಉತ್ತಮ ಇಳುವರಿ ಪಡೆಯಲಾಗುತ್ತಿದೆ ಎಂದರು.

ಇಸ್ರೇಲ್‌ನ ಹವಾಮಾನ ಕೃಷಿಗೆ ಸೂಕ್ತವಾಗಿಲ್ಲ. ಆದರೆ, ಕೃಷಿ ತಂತ್ರಜ್ಞಾನಗಳಲ್ಲಿ ವಿಶ್ವ ನಾಯಕ. ಹನಿ ನೀರಾವರಿ ತಂತ್ರಜ್ಞಾನವನ್ನು ಬಳಸಿಕೊಂಡು ಇಸ್ರೇಲ್ ಕೃಷಿಯ ಸ್ಮಾರ್ಟ್ ವಿಧಾನವನ್ನು ಅಳವಡಿಸಿಕೊಂಡಿದೆ ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 56ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಚಿನ್ನದ ಪದಕ ಪ್ರದಾನ ಮಾಡಿದರು. ಸಚಿವ ಬಿ.ಸಿ.ಪಾಟೀಲ್, ಡಾ.ಆರ್‌.ಎಸ್‌.ಪರೋಡ ಹಾಗೂ ಡಾ.ಎಸ್‌.ರಾಜೇಂದ್ರಪ್ರಸಾದ್ ಇದ್ದಾರೆ

ಕೃಷಿಯಲ್ಲಿ ದೇಶ ಜಾಗತಿಕ ಶಕ್ತಿಯಾಗಲು ಕೃಷಿ, ಆಹಾರ ಸಂಸ್ಕರಣೆ, ಪಶುಸಂಗೋಪನೆ ಕ್ಷೇತ್ರದ ಆಧುನೀಕರಣಕ್ಕೆ ಆದ್ಯತೆ ಕೊಡಬೇಕು.
ಥಾವರಚಂದ್ ಗೆಹಲೋತ್, ರಾಜ್ಯಪಾಲ

ಬಡತನ, ಹಸಿವು ಮುಕ್ತ ಮಾಡುವುದು ಮೊದಲ ಆದ್ಯತೆ ಆಗಬೇಕಿದೆ.
ಡಾ.ಆರ್‌.ಎಸ್‌.ಪರೋಡ, ಅಧ್ಯಕ್ಷ, ಕೃಷಿ ವಿಜ್ಞಾನ ಪ್ರಗತಿ ಟ್ರಸ್ಟ್, ನವದೆಹಲಿ

ಕೃಷಿ ಸಚಿವ ಬಿ.ಸಿ.ಪಾಟೀಲ ಮಾತನಾಡಿ, 'ರಾಜ್ಯ ಸರ್ಕಾರ ರೈತರ ಮಕ್ಕಳಿಗೆ ರೈತನಿಧಿ ಯೋಜನೆ ಜಾರಿಗೊಳಿಸಿದೆ. ಈಗ ಕೃಷಿ ಕಾರ್ಮಿಕರ ಮಕ್ಕಳಿಗೂ ಯೋಜನೆ ವಿಸ್ತರಿಸಿದ್ದು, ಶೀಘ್ರ ಅನುದಾನ ಬಿಡುಗಡೆ ಮಾಡಲಾಗುವುದು' ಎಂದು ಹೇಳಿದರು.

ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್ ಹಾಜರಿದ್ದರು.

ಪದಕ ವಿವರ	
ಚಿನ್ನದ ಪದಕಗಳು	133
ದಾನಿಗಳ ಚಿನ್ನದ ಪದಕ ಪ್ರಮಾಣ ಪತ್ರ	23
ಒಟ್ಟು	156

10 ಪೇಟೆಂಟ್

ಕೃಷಿಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಕೃಷಿ ವಿವಿಯು 68 ಎಂಒಯುಗಳಿಗೆ ಸಹಿ ಹಾಕಿದೆ. 10 ಪೇಟೆಂಟ್‌ಗಳನ್ನು ಪಡೆದಿದೆ. ತಲಾ ಒಂದು ಗ್ರಾಮವನ್ನು ಕೃಷಿ ವಿವಿ ದತ್ತು ಪಡೆದಿರುವುದು ಶ್ಲಾಘನೀಯ ಎಂದು ರಾಜ್ಯಪಾಲರು ಹೇಳಿದರು.

ಮಾರ್ನಿಂಗ್ ರಾಗಾಸ್ ನಾಳೆ

ಬೆಂಗಳೂರು: ಕೋಟಕ್ ಸಮೂಹ 'ಮಾರ್ನಿಂಗ್ ರಾಗಾಸ್' ಎಂಬ ಮಾಸಿಕ ಸಂಗೀತ ಕಛೇರಿಯ ಸರಣಿಯನ್ನು ಸೆ. 11ರಂದು(ಭಾನುವಾರ) ಬೆಳಿಗ್ಗೆ 9.30ಕ್ಕೆ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಉದ್ಘಾಟನೆ ಮಾಡಲಾಗುವುದು.

ಶಾಸ್ತ್ರೀಯ ಸಂಗೀತ ಮತ್ತು ಭಕ್ತಿಗಳ ಗಾಯಕ ಜಯತೀರ್ಥ ಮೇವುಂಡಿ ಸಂಗೀತ ಪ್ರಿಯರನ್ನು ರಂಜಿಸಲಿದ್ದಾರೆ ಎಂದು ಸಮೂಹದ ಪ್ರಕಟಣೆ ತಿಳಿಸಿದೆ.

ವೈಕುಂಠ ಸಮಾರಾಧನೆ

ಶ್ರೀ ಬಿ.ಟಿ. ಕೃಷ್ಣಪ್ಪರವರು
(ಮಾಜಿ ಅಬ್ಬಿಗೆರೆ ಗ್ರಾ. ಪಂ. ಅಧ್ಯಕ್ಷರು)
ಅಬ್ಬಿಗೆರೆ, ಚಿಕ್ಕಬಾಣಾವರ ಅಂಚೆ, ಬೆಂಗಳೂರು–560090
(ಮಾಜಿ ಕಾರ್ಪೊರೇಟರ್ ಶ್ರೀ ಕೆ. ನಾಗಭೂಷಣ್, ಶ್ರೀ ಕೆ. ವಿಶ್ವನಾಥ್ ಮತ್ತು ಶ್ರೀ ಕೆ. ವಿಜಯ್ ಕುಮಾರ್ ರವರ ತಂದೆಯವರು)

ದಿನಾಂಕ : 31.08.2022 ರಂದು ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ, ಇವರ ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ : 10.09.2022ನೇ ಶನಿವಾರ ಬೆಳಿಗ್ಗೆ 10.00 ಘಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ತಾವುಗಳೆಲ್ಲರೂ ಆಗಮಿಸಿ, ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಬಯಸುತ್ತೇವೆ.

ಇಂತಿ ದುಃಖತಪ್ತರು :
ಪತ್ನಿ – ಶ್ರೀಮತಿ ರಾಮಕ್ಕರವರು ಮತ್ತು ಮಕ್ಕಳು
ಶ್ರೀ ಬಿ.ಟಿ. ರಾಜಶೇಖರ್ (ರಾಜಣ್ಣ) ಮತ್ತು ಮಕ್ಕಳು,
ಶ್ರೀ ಬಿ.ಟಿ. ಪುರುಷೋತ್ತಮ್ (ಪ್ರಭು) ಮತ್ತು ಮಕ್ಕಳು ಹಾಗೂ ಅಬ್ಬಿಗೆರೆ ಕುಟುಂಬದವರು

ಕೃಷಿ ವಿವಿ ಘಟಿಕೋತ್ಸವ: ತುಮಕೂರಿನ ಚಂದನಾಗೆ 16 ಪದಕ

ಚಿನ್ನದ ಪದಕಗಳ ಹೊಳಪಿನಲ್ಲಿ ಚಂದನಾ

• ಆದಿತ್ಯ ಕೆ.ಎ.

ಬೆಂಗಳೂರು: ಕಷ್ಟಗಳ ನಡುವೆಯೂ ಶೈಕ್ಷಣಿಕ ಸಾಧನೆ ತೋರಿದ ವಿದ್ಯಾರ್ಥಿಗಳು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಚಿನ್ನದ ಹೊಳಪಿನಲ್ಲಿ ಕಂಗೊಳಿಸಿದರು.

ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನದಲ್ಲಿ ಶುಕ್ರವಾರ ನಡೆದ 56ನೇ ಘಟಿಕೋತ್ಸವವು ಹಲವು ಸಂಭ್ರಮಗಳಿಗೆ ಸಾಕ್ಷಿ ಆಯಿತು. ವಿದ್ಯಾರ್ಥಿಗಳ ಸಾಧನೆ, ಕನಸು ಅನಾವರಣಗೊಂಡವು.

ಹಾಸನದ ಕೃಷಿ ಮಹಾವಿದ್ಯಾಲಯದಲ್ಲಿ ಓದಿದ ತುಮಕೂರಿನ ಎಚ್.ಎಂ.ಚಂದನಾ ಬಿಎಸ್ಸಿ (ಆನರ್ಸ್) ಕೃಷಿಯಲ್ಲಿ 11 ಚಿನ್ನದ ಪದಕ ದಕ್ಕಿಸಿಕೊಂಡು ಚಿನ್ನದ ಬೆಡಗಿಯಾಗಿ ಕಂಗೊಳಿಸಿದರು. ಜತೆಗೆ, ದಾನಿಗಳ 5 ಚಿನ್ನದ ಪದಕ ಪ್ರಮಾಣ ಪತ್ರಗಳೂ ಸಿಕ್ಕಿವೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಪದಕ ಪ್ರದಾನ ಮಾಡುತ್ತಿದ್ದಂತೆ ತಂದೆ ಸುರೇಶ್, ತಾಯಿ ಶಶಿಕಲಾ ಚಪ್ಪಾಳೆ ತಟ್ಟಿ ಸಂಭ್ರಮಿಸಿದರು. 16 ಪದಕ ಗಳಿಸಿದ ಚಂದನಾ ಸಾಧನೆಗೆ ಸಾಕ್ಷಿಯಾಗಲು ಪ್ರಾಧ್ಯಾಪಕ ಚನ್ನಕೇಶ ಬಂದಿದ್ದರು. ಪುತ್ರಿಯ ಸಾಧನೆಗೆ ತಂದೆ ಚಿನ್ನದ ಬಳೆ ಕೊಡುಗೆಯಾಗಿ ನೀಡಿದರು.

'ಗೂಳೂರಿನಲ್ಲಿ ತಂದೆ ಬಟ್ಟೆ ಅಂಗಡಿ ನಡೆಸುತ್ತಾರೆ. ಅವರ ಕನಸು ನನಸು ಮಾಡಲು ಪರಿಶ್ರಮಿಸಿದ್ದೆ. ಇಷ್ಟು ಪದಕಗಳು ಬರುವ ನಿರೀಕ್ಷೆ ಇರಲಿಲ್ಲ. ಖುಷಿಯಾಗಿದೆ. ರೈತರ ಸ್ಥಿತಿ ಸುಧಾರಣೆ ಆಗಬೇಕಿದೆ. ಐಎಎಸ್ ಮಾಡುವ ಕನಸಿದೆ' ಎಂದರು ಚಂದನಾ.

ರೂಪಾಗೆ 8 ಚಿನ್ನದ ಪದಕ: ಮಂಡ್ಯದ ಹುಡುಗಿ ಎಂ.ಎನ್.ರೂಪಾ ಬಿಎಸ್ಸಿ ಕೃಷಿಯಲ್ಲಿ ಒಟ್ಟು 8 ಚಿನ್ನದ ಪದಕ ಪಡೆದು ಮಿಂಚಿದರು.

'ತಂದೆ ಮಳವಳ್ಳಿಯಲ್ಲಿ ಟೀ ಅಂಗಡಿ ನಡೆಸುತ್ತಿದ್ದಾರೆ. ಊರಿನಲ್ಲಿ 20 ಗುಂಟೆ ಕೃಷಿ ಜಮೀನಿದೆ. ಟೀ ಅಂಗಡಿಯಿಂದ ಬರುವ ಆದಾಯದಲ್ಲೇ ಶಿಕ್ಷಣ ಕೊಡಿಸಿದರು' ಎಂದರು ಮಂಡ್ಯದ ಕೃಷಿ ಕಾಲೇಜಿನಲ್ಲಿ ಕಲಿತ ರೂಪಾ.

'ಕೃಷಿಯಲ್ಲಿ ಲಾಭ ನಿರೀಕ್ಷಿಸಲಾಗದು. ರೈತರ ಬದುಕು ಶಕ್ತವಾದರೆ ದೇಶದ ಭವಿಷ್ಯವೂ ಉತ್ತಮವಾಗಿರಲಿದೆ. ಕೃಷಿ ವಿಜ್ಞಾನಿಯಾಗುವ ಕನಸಿದೆ' ಎಂದರು.

ಕೋಲಾರ ಜಿಲ್ಲೆ ವರದಾನಹಳ್ಳಿಯ ವಿ.ಎ.ಚೇತನ್ ಪೋಷಕರನ್ನು ಕಳೆದುಕೊಂಡ ನೋವಿನ ನಡುವೆ ಬೆಂಗಳೂರಿನ ಕೃಷಿ ಎಂಜಿನಿಯರಿಂಗ್ ಮಹಾವಿದ್ಯಾಲಯದಲ್ಲಿ ಬಿ.ಟೆಕ್ ಪದವಿ ಪೂರೈಸಿದ್ದು, 3 ಚಿನ್ನದ ಪದಕ ಗಳಿಸಿದರು.

ಈಗ ಡೆಹರಾಡೂನ್ ಇಸ್ರೊ ಸಂಶೋಧನಾ ಸಂಸ್ಥೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಕಳೆತೆಗೆಯುವ ಯಂತ್ರವನ್ನು ಚೇತನ್ ಸಂಶೋಧಿಸಿದ್ದಾರೆ. ಇವು ರೈತರ ಗಮನ ಸೆಳೆದಿವೆ. 'ಸಂಬಂಧಿಕರ ಮನೆಯಲ್ಲೇ ಉಳಿದು ಶಿಕ್ಷಣ ಪಡೆದೆ. ರಜೆ ಅವಧಿಯಲ್ಲಿ ಊರಿನಲ್ಲಿ ಕೃಷಿ ಮಾಡುತ್ತಿದ್ದೆ' ಎಂದು ಹೇಳಿದರು.

ಘಟಿಕೋತ್ಸವದಲ್ಲಿ 47 ವಿದ್ಯಾರ್ಥಿನಿಯರು, 18 ವಿದ್ಯಾರ್ಥಿಗಳಿಗೆ ಒಟ್ಟು 156 ಚಿನ್ನದ ಪದಕ ಪ್ರದಾನ ಮಾಡಲಾಯಿತು.

ಕೃಷಿ ವಿ.ವಿ 56ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಗೆದ್ದ (ಎಡದಿಂದ) ವಿ.ಎ.ಚೇತನ್, ಎಂ.ಎನ್‌.ರೂಪಾ, ಎಚ್‌.ಎಸ್‌.ಚಂದನಾ ಅವರ ಸಂಭ್ರಮ

'ಪಟೇಲ್ ಪಸಂದ್' ತಳಿ ಅಭಿವೃದ್ಧಿಕಾರನಿಗೆ ಗೌರವ ಡಾಕ್ಟರೇಟ್

ಇದೇ ಮೊದಲಿಗೆ ಪ್ರಗತಿಪರ ರೈತ, ಬೆಂಗಳೂರು ಉತ್ತರ ತಾಲ್ಲೂಕಿನ ನಾಗದಾಸನಹಳ್ಳಿ ಎನ್.ಸಿ.ಪಟೇಲ್ ಅವರಿಗೆ ಘಟಿಕೋತ್ಸವದಲ್ಲಿ ರಾಜ್ಯಪಾಲರು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.

ಆಧುನಿಕ ನೀರಾವರಿ ತಾಂತ್ರಿಕತೆ, ಸುಧಾರಿತ ಕೃಷಿ ಪದ್ಧತಿಯಲ್ಲಿ ದ್ವಿದಳಧಾನ್ಯ ಹಾಗೂ ತೋಟಗಾರಿಕೆ ಬೆಳೆಯನ್ನು ಪಾಟೀಲ್ ಬೆಳೆಯುತ್ತಿದ್ದಾರೆ. 'ಪಟೇಲ್ ಪಸಂದ್' ಹೆಸರಿನ ಮಾವಿನ ತಳಿ ಅಭಿವೃದ್ಧಿ ಪಡಿಸಿದ್ದಾರೆ.

ಹೋಲಿಕೆ... ಮಾಡೀರಿ ಜೋಕೆ!

ಪತ್ನಿಯನ್ನು ಪರಸ್ತ್ರೀಯೊಂದಿಗೆ ಹೋಲಿಸಿ, ಮೂದಲಿಸುವುದು ಮಾನಸಿಕ ಕ್ರೌರ್ಯಕ್ಕೆ ಸಮ ಎಂದು ಈಚೆಗೆ ಕೇರಳ ಹೈಕೋರ್ಟ್ ಹೇಳಿದೆ. ಹೋಲಿಕೆ ಮೂದಲಿಕೆಯಾಗದಂತೆ ಪತಿ–ಪತ್ನಿಯರು ಪರಸ್ಪರ ಎಚ್ಚರ ವಹಿಸುವುದು ಅಗತ್ಯ.

ಸುಶೀಲಾ ಡೋಣೂರ

ಘಟನೆ–1

ಧೂಮ್ ಮಚಾಲೆ... ಧೂಮ್ ಮಚಾಲೆ... ಧೂಮ್...

ಹಾಡಿಗೆ ಹೆಜ್ಜೆ ಹಾಕುತ್ತಿರುವವಳ ಮೂರಿಂಚಿನ ಹೊಳೆವ ಸೊಂಟವನ್ನು ತದೇಕಚಿತ್ತ ದಿಟ್ಟಿಸುತ್ತಿದ್ದವ, 'ಏನ್ ಫಿಗರ್ರ್ ಅವಳದು... ನೀನೂ ಇದ್ದೀಯ... ನೀರು ತುಂಬಿದ ಡ್ರಮ್ಮಿಗೆ ನೈಟಿ ತೊಡಿಸಿದ ಹಾಗೆ...' ಅಂತನ್ನುತ್ತಾನೆ. ಒಂದು ಮಾತು, ಒಂದೇ ಕ್ಷಣದಲ್ಲಿ ತನ್ನ ಅಸ್ತಿತ್ವವನ್ನು ತಾನೇ ಪ್ರಶ್ನಿಸಿಕೊಳ್ಳುವಂತೆ ಮಾಡಿಬಿಟ್ಟಿತ್ತು.

ಘಟನೆ–2

'ರೀ ಇವತ್ತು ಕಾನ್ಪರನ್ಸ್ ಇದೆ. ನಾ ಬೇಗ ಹೋಗಬೇಕು' ಅಂದವಳ ಮಾತಿಗೆ ಗಹಗಹಿಸಿ ನಗುತ್ತಾನೆ. 'ಇಂಗ್ಲಿಷ್ ಮೇಷ್ಟ್ರ ಮಗಳಾಗಿ ಕಾನ್ಫರೆನ್ಸ್ ಅನ್ನೋಕೂ ಬರಲ್ಲವಲ್ಲ...' ಮತ್ತೊಂದು ಅವಮಾನದ ಪ್ರಸಂಗ. ಅವನಿಗಿಂತ ಮೇಲಿನ ಹುದ್ದೆಯಲ್ಲಿರುವ, ಹೆಚ್ಚು ಸಂಬಳ ತರುವ ಅವಳು, 'ಅಬ್ಬಾ! ಗಂಡಸೆ ನನ್ನದೊಂದು ತಪ್ಪಿಗಾಗಿ ನೀನೂ ಕಾಯುತ್ತಿರುತ್ತಿಯಲ್ಲ!' ಅಂದುಕೊಂಡು ಸುಮ್ಮನಾಗುತ್ತಾಳೆ.

ಘಟನೆ–3

'ನೀನು ನಿಜಕ್ಕೂ ಪುಣ್ಯವತಿ ಕಣೆ, ನಿನ್ನಪ್ಪ ಸರಿಯಾಗಿ ಹೆಸರಿಟ್ಟಿದ್ದಾನೆ... ರಾಣಿ ಥರಾ ಮೂರು ಹೊತ್ತೂ ಮನೆಯಲ್ಲಿ ಕೂತು ತಿಂದು ಹೇಗಾಗಿದ್ದೀಯ ನೋಡು... ನಿನ್ನ ತಂಗಿ ಮನೆ ಹೊರಗೂ–ಮನೆ ಒಳಗೂ ದುಡಿದರೂ ಹ್ಯಾಗೆ ಮೈಮಾಟ ಕಾಪಾಡಿಕೊಂಡಿದ್ದಾಳೆ! ಲವ್ಲಿ ಯು ನೋ?' ಅಂದ ಅವನ ಮಾತಿಗೆ ಬೆಪ್ಪಾಗುತ್ತಾಳೆ ಇವಳು.

ಇವೆಲ್ಲ ಯಾವತ್ತೊ ಒಂದು ಬಾರಿ ಬಂದು ಹೋಗುವ ಮಾತುಗಳಲ್ಲ. ಅವಳನ್ನು ನೋಯಿಸಬೇಕು, ಹಿಂಸಿಸಬೇಕು ಎನ್ನುವ ಉದ್ದೇಶವೂ ಇರುವುದಿಲ್ಲ. ಆದರೆ, ಮತ್ತೆ–ಮತ್ತೆ ಮರುಕಳಿಸುತ್ತಲೇ ಇರುತ್ತವೆ! ಅವಳ ಸೌಂದರ್ಯ, ಸಾಮರ್ಥ್ಯ, ಸಹನಶೀಲತೆಯನ್ನು ಕೆಣಕುತ್ತಿರುತ್ತವೆ. ಒಂದು ಗಾಯ ಆರುವುದರೊಳಗೆ ಮತ್ತೊಂದು ಬಾಣ ಅದೇ ಗಾಯವನ್ನು ಸೋಕಿ ಹೋಗುತ್ತಲೇ ಇರುತ್ತದೆ.

ಇಂಥವನ್ನೆಲ್ಲಾ ಬಗೆಹರಿಸುವ ಬಗೆ ಒಬ್ಬೊಬ್ಬರದೂ ಒಂದೊಂದು ಥರ. ಕೆಲ ಮಹಿಳೆಯರು ಸರಿಯಾದ ತಿರುಗೇಟು ನೀಡಿಯೊ, ತಾವೂ ಅವರೊಂದಿಗೆ ನಕ್ಕೊ ಸುಮ್ಮನಾಗುತ್ತಾರೆ. ಇನ್ನೂ ಕೆಲವರು ಅಣಕಿಸಿದ ಒಂದು ಮಾತನ್ನೇ ಮನಸ್ಸಿನಾಳಕ್ಕೆ ಇಳಿಸಿಕೊಂಡು ಒಳಗೊಳಗೇ ಅಧೀರರಾಗಬಹುದು. ಇಂತಹ ಮಾತುಗಳು ಕೌಟುಂಬಿಕ ಶಾಂತಿಯನ್ನು ಕದಡಿದ, ಮನೋವ್ಯಾಕುಲಕ್ಕೆ ಕಾರಣವಾದ, ಸಂಸಾರಸೂತ್ರವನ್ನೇ ಸಡಿಲಗೊಳಿಸಿದ ಉದಾಹರಣೆಗಳೂ ಉಂಟು.

ಇಂಥ ಹೋಲಿಕೆಗಳು,ಮೂದಲಿಕೆಗಳು, ಅವಮಾನ, ಅಪಹಾಸ್ಯ, ತಿರಸ್ಕಾರಗಳು ಮಾನಸಿಕ ಕ್ರೌರ್ಯಕ್ಕೆ ಸಮಾನ ಎಂದು ಇತ್ತೀಚೆಗಷ್ಟೇ ಕೇರಳ ಹೈಕೋರ್ಟ್ ಒತ್ತಿ ಹೇಳಿರುವುದೂ ಇದೇ ಹಿನ್ನೆಲೆಯಲ್ಲಿ. ಪತ್ನಿಯನ್ನು ಬೇರೆ ಮಹಿಳೆಯರಿಗೆ ಹೋಲಿಸುವುದು, ಮೂದಲಿಸುವುದು ಸಹ ಮಾನಸಿಕ ಕ್ರೌರ್ಯ ಎಂದು ಅದು ಎಚ್ಚರಿಸಿದೆ.

ಅತೀ ನಿರೀಕ್ಷೆ ಬೇಡ



ಗಂಡ/ಹೆಂಡತಿ ಸದಾ ಕಾಲ ತಮ್ಮನ್ನು ಹೊಗಳುತ್ತಾ, ಐ ಲವ್ ಯೂ ಅನ್ನುತ್ತಾ, ಖುಷಿಯಾಗಿಡಬೇಕು ಎಂಬ ನಿರೀಕ್ಷೆಯೇ ತಪ್ಪು! ನಮ್ಮ ಖುಷಿ, ನಮ್ಮ ಕ್ಷೇಮ ನಮ್ಮದೇ ಜವಾಬ್ದಾರಿ. ನಮ್ಮ ಬದುಕನ್ನು ನಾವು ಪ್ರೀತಿಸುತ್ತ, ನಮ್ಮ ಬಗ್ಗೆ ನಾವು ಗೌರವವನ್ನಿಟ್ಟುಕೊಂಡು ಹಾಯಾಗಿದ್ದರೆ ನಾವೂ ಖುಷಿಯಾಗಿರಬಹುದು, ಇತರರಿಗೂ ಖುಷಿ ಹಂಚಬಹುದು.

ಡಾ. ಅರುಣಾ ಯಡಿಯಾಳ್, ಮನೋವೈದ್ಯೆ

ಬೇಡ ಈ ಹೋಲಿಕೆ...

ಹೆಂಡತಿಯನ್ನು ಯಾವುದೋ ಸಿನಿಮಾ ನಾಯಕಿಗೆ ಹೋಲಿಸುವುದು ಅಥವಾ ಅವರ ಮುಂದೆ ಇವರ ದೈಹಿಕ–ಆಂಗಿಕ ರಚನೆಯನ್ನು ಪ್ರಶ್ನಿಸುವುದು ಮೇಲ್ನೋಟಕ್ಕೆ ಕಾಣುವಷ್ಟು ಸಣ್ಣ ವಿಚಾರವಲ್ಲ. ಇಂತಹ ಹೋಲಿಕೆಯನ್ನು ಅವಳು ಹೇಗೆ ಸ್ವೀಕರಿಸುತ್ತಾಳೆ, ಹೇಗೆ ಪ್ರತಿಕ್ರಿಯಿಸುತ್ತಾಳೆ ಎನ್ನುವುದು ಮುಖ್ಯವಾಗುತ್ತದೆ. ಅವನ ಮಾತಿಗೆ ಅವಳು ನಕ್ಕರೆ ಅದು ಸಣ್ಣ ವಿಚಾರ, ಅವಳಿಗದು ನೋವನ್ನುಂಟು ಮಾಡಿದರೆ ಅದು ಗಂಭೀರ ವಿಚಾರ. ಹಾಗೆಯೇ, ಆಡುವವರ ಮಾತಿನ ಆಳ, ಉದ್ದೇಶ ಹಾಗೂ ಪರಿಸ್ಥಿತಿಯ ಮೇಲೂ ಈ ಮಾತಿನ ಅರ್ಥ ಬದಲಾಗುತ್ತ ಹೋಗುತ್ತದೆ.

ಪತ್ನಿ ದಪ್ಪಗಿದ್ದಾಳಾ, ಕಪ್ಪಗಿದ್ದಾಳಾ, ಕುಳ್ಳಗಿದ್ದಾಳಾ... ಅವಳು ಹೇಗೇ ಇದ್ದರೂ ನೀವು ಅವಳನ್ನು ಮೆಚ್ಚಿದ್ದೀರಿ. ನೀವು ಮೆಚ್ಚಿದ್ದಕ್ಕಾಗಿಯೇ ಅವಳು ನಿಮ್ಮ ಮನೆ–ಮನ ಸೇರಿದ್ದಾಳೆ. ಮದುವೆ, ಗರ್ಭಧಾರಣೆ, ಹೆರಿಗೆ, ಬಾಣಂತನದಂತಹ ಪರಿಸ್ಥಿತಿಗಳಲ್ಲಿ ಹೆಣ್ಣಿನ ದೇಹದಲ್ಲಿ ಕ್ಷಿಪ್ರ ಬದಲಾವಣೆಯಾವುದು ಸಾಮಾನ್ಯ. ಅವಳು ಮೊದಲಿನಂತೆಯೇ ಅಂಗಸೌಷ್ಠವವನ್ನು ಕಾಪಾಡಿಕೊಂಡಿರಬೇಕೆಂದು ಬಯಸುವುದು ಮೂರ್ಖತನ. ಹೆಂಡತಿ ಎನ್ನುವುದೊಂದು 'ಆಬ್ಜೆಕ್ಟ್' ಅಲ್ಲ, ಅವಳು ಮನುಷ್ಯಳು, ರಾಗ–ದ್ವೇಷ, ಸಿಟ್ಟು–ಸೆಡವುಗಳೊಂದಿಗೆ ಅಖಂಡ ಪ್ರೇಮವನ್ನೂ ಹೊಂದಿರುವ 'ವ್ಯಕ್ತಿತ್ವ' ಎನ್ನುವುದನ್ನು ಅರ್ಥ ಮಾಡಿಕೊಳ್ಳಲೇಬೇಕು.

ಲಘುಮಾತಿಗೆ ಜಾಗವಿರಲಿ

ದಿನಬೆಳಗಾದರೆ ಇಂತಹ ಮಾತುಗಳನ್ನು ಕಾರಣವಾಗಿಟ್ಟುಕೊಂಡು ಕಾದಾಡಲು ಆಗದು. ಈ ಮಾತುಗಳನ್ನೇ ಆಧಾರವಾಗಿಟ್ಟುಕೊಂಡು ಕೋರ್ಟ್ ಮೆಟ್ಟಿಲು ಹತ್ತಿದರೆ ಕುಟುಂಬಗಳು ಉಳಿಯಲಾರವು. ದಾಂಪತ್ಯಕ್ಕೆ ಒಂದು ಸೊಗಸಾದ–ಸ್ನೇಹಮಯ ಮಣೆ ಹಾಕಿದರೆ ಈ ಸಮಸ್ಯೆ ಬಾರದು. ಹಾಸ್ಯವನ್ನು ಹೇಗೆ ಗ್ರಹಿಸಬೇಕು, ಮನಸ್ಸಿಗೊಪ್ಪದ ಹಾಸ್ಯವನ್ನು ಹೇಗೆ ತಡೆಯಬೇಕು, ಎಲ್ಲಿ ಬ್ರೇಕ್ ಹಾಕಬೇಕು ಎನ್ನುವುದನ್ನು ಪತಿಪತ್ನಿ ತಿಳಿದುಕೊಳ್ಳಬೇಕು.

'ಮದುವೆ ಅಥವಾ ದಾಂಪತ್ಯ ಎನ್ನುವುದು ಒಂದು ಸಹಬಾಳ್ವೆಯ ಪಯಣ! ಈ ಸಂಬಂಧ ಮಧುರವಾಗಿ ಬೆಸೆಯಲು ಸಮಯವೂ ಬೇಕು, ಸಂಯಮವೂ ಬೇಕು' ಎನ್ನುತ್ತಾರೆ ಮನೋವೈದ್ಯೆ ಡಾ. ಅರುಣಾ ಯಡಿಯಾಳ್.

'ಅಹಂ ಈ ಅನುಬಂಧಕ್ಕೆ ಅಡ್ಡ ಬರದಂತೆ ಎಚ್ಚರಿಕೆ ವಹಿಸಬೇಕು. ಪ್ರತಿಮಾತು, ಪ್ರತಿ ನಡವಳಿಕೆಯನ್ನು ತೀರ ಗಂಭೀರವಾಗಿ ಪರಿಗಣಿಸದೇ ಹಗುರವಾಗಿ ತೆಗೆದುಕೊಳ್ಳಲು ಪ್ರಯತ್ನಿಸಬೇಕು. ಒಂದಿಷ್ಟು ಹಾಸ್ಯ ಪ್ರವೃತ್ತಿ ಬೆಳೆಸಿಕೊಂಡರೆ, ಸದಾ ಕಾಲ ಇತರರನ್ನು ಪ್ರೀತಿ–ಗೌರವದಿಂದ ನಡೆಸಿಕೊಂಡರೆ, ಸಂಭಾಷಣೆಗಳನ್ನು ಪ್ರಾಮಾಣಿಕವಾಗಿ ಹಾಗೂ ಮುಕ್ತವಾಗಿಟ್ಟಕೊಂಡರೆ, ಅನಗತ್ಯ ಹೊಯ್ದಾಟಕ್ಕೆ ಆಸ್ಪದ ನೀಡದಂತೆ ಮನಸ್ಸನ್ನು ಶಾಂತವಾಗಿಟ್ಟುಕೊಂಡರೆ ಎಲ್ಲಾ ಸಂಬಂಧಗಳೂ ಗಟ್ಟಿಯಾಗಿ ಬೇರೂರಿ, ನಳನಳಿಸುತ್ತವೆ. ಹಾಗೆಯೇ, ದಾಂಪತ್ಯದಲ್ಲಿ ಪ್ರೀತಿ ಜೊತೆ ಒಂದಿಷ್ಟು ಖಾಸಗೀತನಕ್ಕೂ ಜಾಗವಿರಬೇಕು. ಒಬ್ಬರಿಗೊಬ್ಬರು ಈ ಸ್ಪೇಸ್ ನೀಡುವ ಔದಾರ್ಯವೂ ಇರಬೇಕು. ಸದಾ ಒಬ್ಬರಿಗೊಬ್ಬರು ಅಂಟಿಕೊಂಡಿರುವುದೇ ಪ್ರೀತಿಯಲ್ಲ. ಜೊತೆಗಿದ್ದೂ ಸ್ವತಂತ್ರವಾಗಿರುವುದು ಬಹಳ ಮುಖ್ಯ' ಎನ್ನುತ್ತಾರೆ ಅವರು.

ಇಬ್ಬರದೂ ಜವಾಬ್ದಾರಿ

ಹೋಲಿಕೆ ಮಾಡುವುದು ಮನುಷ್ಯನ ಸಹಜ ಸ್ವಭಾವ. ಆದರೆ, ಆ ಹೋಲಿಕೆ ಯಾರ ಜೊತೆ, ಯಾವ ಸಂದರ್ಭದಲ್ಲಿ ಮತ್ತು ಯಾವ ಉದ್ದೇಶದಿಂದ ಮಾಡಿದ್ದು ಎನ್ನುವುದು ಅದರ ಅರ್ಥವನ್ನು ನಿರ್ಧರಿಸುತ್ತದೆ. ಅದು ಮಾನಸಿಕ ಕಿರುಕುಳವೇ, ದೌರ್ಜನ್ಯವೇ ಅಥವಾ ಹಿಂಸೆಯೇ ಎನ್ನುವುದನ್ನು ನಿರ್ಧರಿಸುವುದು ಬಹಳ ಸೂಕ್ಷ್ಮ ವಿಚಾರ. ಹಿಂಸೆಗೆ, ದೌರ್ಜನ್ಯಕ್ಕೆ ಒಂದು ನಿರ್ದಿಷ್ಟವಾದ ವ್ಯಾಖ್ಯಾನವಿದೆ. ಆದರೆ, ಕಿರುಕುಳ ಎನ್ನುವುದು ವ್ಯಕ್ತಿಯ ಆಗಿನ ಮಾನಸಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಹಾಗೆಯೇ, ಇದನ್ನು ಏಕಮುಖವಾಗಿ ನಿರ್ಣಯಿಸುವ ಅಗತ್ಯವೂ ಇಲ್ಲ. ಏಕೆಂದರೆ, ಗಂಡನನ್ನು ತನ್ನ ಸಹೋದ್ಯೋಗಿಗೆ, ಅಣ್ಣತಮ್ಮಂದಿರಿಗೆ, ಭಾವ ಮೈದುನರಿಗೆ ಹೋಲಿಸಿ ಮೂದಲಿಸುವ ಹೆಣ್ಣಿನ ನಡೆ ಕೂಡ ದೌರ್ಜನ್ಯವೆ! ಹೋಲಿಕೆ ಅವಮಾನಕ್ಕೆ ನಿಂದನೆಗೆ ತಿರುಗದಂತೆ ಎಚ್ಚರಿಕೆ ವಹಿಸುವುದು ಇಬ್ಬರದೂ ಜವಾಬ್ದಾರಿ.

ಅಂಜಲಿ ರಾಮಣ್ಣ, ವಕೀಲೆ

ಸ್ಪಂದನ

ಡಾ. ವೀಣಾ ಎಸ್. ಭಟ್

ಗರ್ಭನಿರೋಧಕ ಮಾತ್ರೆ ವೈದ್ಯರನ್ನು ಸಂಪರ್ಕಿಸಿ

1. ನನಗೀಗ 25 ವರ್ಷಗಳು. ಮದುವೆಯಾಗಿ ಒಂದು ತಿಂಗಳಾಯಿತು. ನನ್ನ ಪತ್ನಿಗೆ 20 ವರ್ಷ. ನಮ್ಮದು ಪ್ರೇಮವಿವಾಹ. ನಮಗೆ ಇನ್ನೂ ಮೂರುವರ್ಷ ಮಕ್ಕಳು ಬೇಡ. ಇಬ್ಬರಿಗೂ ಸಂಭೋಗದಲ್ಲಿ ಆಸಕ್ತಿ ಇದೆ. ಸದ್ಯಕ್ಕೆ ನಿರೋಧ್ ಬಳಸುತ್ತಿದ್ದೇವೆ. ಗರ್ಭ ಧರಿಸದಿರುವುದಕ್ಕೆ ಯಾವ ಕ್ರಮ ಅನುಸರಿಸಬೇಕು. ದಯವಿಟ್ಟು ತಿಳಿಸಿರಿ.

ಹೆಸರು, ಊರು ತಿಳಿಸಿಲ್ಲ

ಜೀವಜಗತ್ತನ್ನ ಮುಂದುವರಿಸಲು, ನಿಮ್ಮದೇ ಕುಟುಂಬ ಹೊಂದಲು ಸಂತಾನೋತ್ಪತ್ತಿ ಅನಿವಾರ್ಯ. ಆದರೂ, ಈ ಪ್ರಕ್ರಿಯೆ ಅಪೇಕ್ಷಿತ ಘಟನೆಯಾಗಬೇಕೆ ಹೊರತು ಅನಪೇಕ್ಷಿತ ಅವಘಡವಾಗಬಾರದು. ಹಾಗಾಗಿ ಕುಟುಂಬವನ್ನು ಉತ್ತಮವಾಗಿ ರೂಪಿಸಿಕೊಳ್ಳಲು ನಿರ್ಣಯಿಸಿರುವ ನಿಮಗೆ ಅಭಿನಂದನೆ.

ತಾತ್ಕಾಲಿಕ ಗರ್ಭನಿರೋಧಕಗಳನ್ನು 3 ವರ್ಷಗಳ ಕಾಲ ಬಳಸಬೇಕಾಗುತ್ತದೆ. ಕಾಂಡೊಮ್ ಬಳಕೆಯು ಪುರುಷರಲ್ಲಿ ಜನಪ್ರಿಯವಾದ ತಾತ್ಕಾಲಿಕ ಸಂತಾನ ನಿಯಂತ್ರಣ ವಿಧಾನ. ಖರ್ಚು ಕಡಿಮೆ. ಕಾಂಡೊಮ್‌ಗಳನ್ನು ಬಳಸಿದಾಗ ವೀರ್ಯವನ್ನು ಸಂಗ್ರಹಿಸಿಕೊಂಡು ಗರ್ಭ ನಿಲ್ಲದಂತೆ ತಡೆಯುತ್ತದೆ. ಹಾಗೆಯೇ ಗರ್ಭಕೊರಳ ಕ್ಯಾನ್ಸರ್ ಕೂಡ ಮಹಿಳೆಯರಲ್ಲಾಗುವ ಸಂಭವವನ್ನು ಕಡಿಮೆ ಮಾಡುತ್ತದೆ. ಆದರೆ ಇದರಲ್ಲಿ ಶೇ 10 ರಿಂದ 14 ರಷ್ಟು ವೈಫಲ್ಯದ ಪ್ರಮಾಣವಿದೆ. ಸರಿಯಾದ ವಿಧಾನದಲ್ಲಿ ಬಳಸಿದರೆ ವೈಫಲ್ಯ ಕಡಿಮೆ.

ಇನ್ನು ನೈಸರ್ಗಿಕ ವಿಧಾನವಾದ ಋತುಫಲಪ್ರದ ದಿನಗಳಲ್ಲಿ ಅಂದರೆ ಪ್ರತಿ ಋತುಚಕ್ರದ 8 ರಿಂದ 18ನೇ ದಿನದವರೆಗೆ ಲೈಂಗಿಕ ಸಂಪರ್ಕ ಮಾಡದೇ ಇರುವುದು. ಇದರಲ್ಲಿ ವೈಫಲ್ಯ ಪ್ರಮಾಣ ಶೇ 25ರಷ್ಟು, ಇನ್ನೂ ಲೈಂಗಿಕ ಸಂಪರ್ಕದ ಸಮಯದಲ್ಲಿ ವೀರ್ಯವನ್ನು ಸ್ತ್ರೀಯ ದೇಹದ ಹೊರಗೆ ಬಿಡುವುದು ಬಳಕೆಯಲ್ಲಿದ್ದರೂ ವೈಫಲ್ಯ ಪ್ರಮಾಣ ಹೆಚ್ಚಿದೆ. ಮಹಿಳೆಯರು ಕೂಡ 'ಡ್ರಯಾಫ್ರಾಮ್' ಎನ್ನುವ ಸಂತಾನನಿಯಂತ್ರಣವನ್ನು ಬಳಸಬಹುದು. ನಮ್ಮ ದೇಶದಲ್ಲಿ ಇದರ ಬಳಕೆ ವ್ಯಾಪಕವಾಗಿಲ್ಲ. ಮಹಿಳೆಯರು ಬಳಸಬಹುದಾದ ಇನ್ನೊಂದು ತಾತ್ಕಾಲಿಕ ಸಂತಾನ ನಿಯಂತ್ರಣ ಕ್ರಮವೆಂದರೆ ವೀರ್ಯನಾಶಕಗಳ ಬಳಕೆ. ಇಲ್ಲಿ ಜೆಲ್ಲಿ, ಕ್ರೀಂ, ಪೆಸರಿ ಇತ್ಯಾದಿಗಳನ್ನು ಲೈಂಗಿಕ ಸಂಪರ್ಕಗಳ ಮೊದಲೇ ಯೋನಿದ್ವಾರದಲ್ಲಿ ಇಟ್ಟುಕೊಳ್ಳುವುದು. ಈ ವಿಧಾನದಲ್ಲಿ ವೈಫಲ್ಯ ಹೆಚ್ಚು.

ವಂಕಿಗಳು ಅಥವಾ ಗರ್ಭಕೋಶದೊಳಗಿಡುವ ಉಪಕರಣಗಳು ಮಹಿಳೆಯರಲ್ಲಿ ಬಳಸಬಹುದಾದ ಅತ್ಯುತ್ತಮ ಸಂತಾನ ನಿಯಂತ್ರಣ ಕ್ರಮವಾದರೂ ಒಂದು ಮಗುವೂ ಆಗದೇ ಇದ್ದವರಲ್ಲಿ ಬಳಸುವುದು ಇವು ಅಷ್ಟು ಸೂಕ್ತವಲ್ಲ. ಒಂದು ಮಗುವಾದ ನಂತರದಲ್ಲಿ, ಎರಡು ಮಕ್ಕಳ ನಡುವಿನ ಅಂತರ ಕಾಯ್ದುಕೊಳ್ಳಲು ಇವುಗಳನ್ನು ಬಳಸಬಹುದು. ನಿಮಗೆ ಕಾಂಡೊಮ್ ಬಳಸುವುದು ನಿರಂತರವಾಗಿ ಕಷ್ಟವೆನಿಸಿದರೆ ಪತ್ನಿ ಕೂಡ ಹಾರ್ಮೋನಿನ ಮಾತ್ರೆ ಬಳಸಬಹುದು. ಇಸ್ಟ್ರೋಜನ್ ಹಾಗೂ ಪ್ರೊಜೆಸ್ಟಿರಾನ್ ಹಾರ್ಮೋನುಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಹೊಂದಿರುವ ಸಮ್ಮಿಶ್ರ ಹಾರ್ಮೋನು ಗುಳಿಗೆಗಳು ತಾತ್ಕಾಲಿಕ ಸಂತಾನ ನಿಯಂತ್ರಣ ಮಾಡುತ್ತದೆ. ಈ ವಿಧಾನದಲ್ಲಿ ಶೇ 0.1 ರಷ್ಟು ಮಾತ್ರ ವೈಫಲ್ಯ ಕಂಡುಬರುತ್ತದೆ.

ಮಾತ್ರೆಗಳನ್ನು ಬಳಸುವ ಮೊದಲು ವೈದರನ್ನು ಭೇಟಿ ಮಾಡಿ. ಕುಟುಂಬದಲ್ಲಿ ಸ್ತನ ಕ್ಯಾನ್ಸರ್, ಎದೆಯಲ್ಲಿ ಗಂಟು , ಏರು ರಕ್ತದೊತ್ತಡವಿದ್ದರೆ ಸಂಯೋಜಿತ ಹಾರ್ಮೋನು ಗುಳಿಗೆಗಳನ್ನು ಬಳಸಬಾರದು. ಇಂತಹ ಮಾತ್ರೆಗಳನ್ನು ನಿಲ್ಲಿಸಿದ ನಾಲ್ಕಾರು ತಿಂಗಳೊಳಗೆ ಫಲವತ್ತತೆ ಮತ್ತೆ ಮರಳಿ ಬರುವುದರಿಂದ ಮಗು ಪಡೆಯುವ ನಾಲ್ಕಾರು ತಿಂಗಳ ಮೊದಲೇ ಮಾತ್ರೆ ನಿಲ್ಲಿಸಿ. ಫೋಲಿಕ್ ಆ್ಯಸಿಡ್ ಮಾತ್ರೆ ಸೇವಿಸಿ. ಸ್ಟೆರಾಯಿಡ್ ರಹಿತ ಗರ್ಭನಿರೋಧಕ ಮಾತ್ರೆ ಸೆಂಟ್ ಕ್ರೋಮನ್ ಸರ್ಕಾರದಿಂದ ಲಭ್ಯವಿದೆ. ನಿಮಗೆ ಸೂಕ್ತವಾದ ವಿಧಾನ ಅನುಸರಿಸಿ.

ಮತ್ತಷ್ಟು ಪ್ರಶ್ನೋತ್ತರಗಳಿಗಾಗಿ www.prajavani.net ನೋಡಿ

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ.
ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು



ಜನರಿಂದ ಜನರಿಗಾಗಿ ಬಿಜೆಪಿ ಜನಸ್ಪಂದನೆ

ದೊಡ್ಡಬಳ್ಳಾಪುರದಲ್ಲಿ ಭಾರಿ ಸಂಖ್ಯೆಯ ಜನಜಾತ್ರೆಗೆ ಸಿದ್ಧತೆ • ಸುಮಾರು 2–3 ಲಕ್ಷ ಜನ ಸೇರುವ ಸಾಧ್ಯತೆ • ಸರಕಾರದ ಸಾಧನೆಗಳ ಮೆರವಣಿಗೆ • ರಾಜಕೀಯ ಎದುರಾಳಿಗಳಿಗೆ ಎಚ್ಚರಿಕೆಯ ಗಂಟೆ

ಬಿಜೆಪಿ ಶಕ್ತಿ ಪ್ರದರ್ಶನಕ್ಕೆ ಕ್ಷಣಗಣನೆ

ದೊಡ್ಡಬಳ್ಳಾಪುರದಲ್ಲಿ ದೊಡ್ಡ ಮಟ್ಟದಲ್ಲಿ ಜನೋತ್ಸವ ನಡೆಸುವ ಮೂಲಕ ಬಿಜೆಪಿಯು ಮುಂದಿನ ವಿಧಾನಸಭಾ ಚುನಾವಣೆಗೆ ರಣಕಹಳೆ ಮೊಳಗಿಸಲು ಸರ್ವ ಸನ್ನದ್ಧವಾಗಿದೆ. ಗಟ್ಟಿ ನೆಲೆ ಇಲ್ಲದ ಪ್ರದೇಶದ ಮೂಲಕ ದೊಡ್ಡ ಮಟ್ಟದಲ್ಲಿ ಜನೋತ್ಸವ ನಡೆಸುವ ಮೂಲಕ ಬಿಜೆಪಿ ತನ್ನ ನೆಲೆ ವಿಸ್ತರಣೆಯತ್ತ ಕಣ್ಣು ಹಾಯಿಸಿದೆ. ಬರುವ ದಿನಗಳಲ್ಲಿ ಇದು ಇನ್ನಷ್ಟು ವ್ಯಾಪಕವಾದ ರೀತಿಯಲ್ಲಿ ನಡೆಯಲಿದೆ.

ಬೆಂಗಳೂರಿನ ಬಾಜೂಕ್ಕಿರುವ ಜಿಲ್ಲೆಗಳ ಜನರನ್ನು ಗಮನದಲ್ಲಿಟ್ಟುಕೊಂಡು ಆಯೋಜನೆ ಮಾಡಲಾಗಿರುವ ಈ ಜನೋತ್ಸವವನ್ನು ಬಿಜೆಪಿ ತನ್ನ ಜನಶಕ್ತಿಯ ಪ್ರದರ್ಶನಕ್ಕೆ ವೇದಿಕೆ ಮಾಡಿಕೊಳ್ಳಲಿದೆ. ಅನಿವಾರ್ಯ ಕಾರಣಗಳಿಂದಾಗಿ ಮೂರು ಬಾರಿ ಮುಂದೂಡಿಕೆಯಾಗಿದ್ದ ಜನೋತ್ಸವವು ಕೊನೆಗೂ ಶನಿವಾರ ನಡೆಯಲಿದ್ದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸೇರಿದಂತೆ ಪಕ್ಷದ ಎಲ್ಲ ಹಿರಿ-ಕಿರಿ ನಾಯಕರು, ಕಾರ್ಯಕರ್ತರ ಸಮಾಗಮಕ್ಕೆ ಸಾಕ್ಷಿ ಆಗಲಿದೆ.

ಭರ್ಜರಿ ತಯಾರಿ ಸುಮಾರು 15 ಎಕರೆ ಪ್ರದೇಶದಲ್ಲಿ ಹಮ್ಮಿಕೊಳ್ಳಲಾಗಿರುವ ಜನೋತ್ಸವ ಕಾರ್ಯಕ್ರಮಕ್ಕೆ ಎಲ್ಲ ಅಗತ್ಯ ಸಿದ್ಧತೆ

ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಬಿ.ಎಲ್. ಸಂತೋಷ್ ಅವರೊಂದಿಗೆ ಸಚಿವ ಡಾ. ಸುಧಾಕರ್

ಮುಗಿದಿದ್ದು ಸಮಾವೇಶದ ಯಶಸ್ಸಿಗೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಟೊಂಕಕಟ್ಟಿ ನಿಂತಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಸುಧಾಕರ್ ಅವರು ಪ್ರತಿ ಹಂತದಲ್ಲಿಯೂ ಸಮಾವೇಶದ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ.

ಕಾರ್ಯಕ್ರಮಕ್ಕೆ ಬರಲು ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶ ದಿಂದ ಸುಮಾರು ನಾಲ್ಕು ಸಾವಿರ ಬಸ್ಸುಗಳನ್ನು ವಿವಿಧ ಕಡೆಗಳಿಂದ ಸಮಾವೇಶ ಕೇಂದ್ರಕ್ಕೆ ಸಂಚರಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರದಿಂದ ಬಸ್ ವ್ಯವಸ್ಥೆ ಮಾಡಲಾಗಿದೆ.

ಬೃಹತ್ ವೇದಿಕೆ

ಜರ್ಮನ್ ತಂತ್ರಜ್ಞಾನವನ್ನು ಬಳಸಿಕೊಂಡು ವಿಶಾಲವಾದ ಪ್ರದೇಶದಲ್ಲಿ ಲಕ್ಷಾಂತರ ಜನರಿಗೆ ಅವಕಾಶ ಒದಗಿಸುವ ಬೃಹತ್ ಪೆಂಡಾಲ್ ನಿರ್ಮಾಣವಾಗಿದೆ. ಸಮಾವೇಶಕ್ಕಾಗಿ

ಜನಸ್ಪಂದನದ ಪ್ರಮುಖಾಂಶಗಳು

- **140x50** ಅಡಿ ವಿಸ್ತೀರ್ಣದ ಪೆಂಡಾಲ್ ಅಳವಡಿಕೆ
- **2** ಲಕ್ಷಕ್ಕೂ ಅಧಿಕ ಮಂದಿಗೆ ಉಪಾಹಾರ ಮತ್ತು ಭೋಜನದ ವ್ಯವಸ್ಥೆ
- **40** ಸಾವಿರಕ್ಕೂ ಹೆಚ್ಚಿನ ವಾಹನಗಳ ನಿಲುಗಡೆಗೆ ಸ್ಥಳಾವಕಾಶ
- ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಉಪಸ್ಥಿತಿ
- ಭದ್ರತೆಗೆ **14** ಸಾವಿರ ಪೊಲೀಸರ ನಿಯೋಜನೆ
- ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರಿನಿಂದ **4,000** ಬಸ್ ಸಂಚಾರ

ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. 100x140 ಅಡಿ ಉದ್ದ ಮತ್ತು ಅಗಲದ ಈ ವೇದಿಕೆಯ ಮೇಲೆ 300 ಗಣ್ಯರಿಗೆ ಆಸನದ ವ್ಯವಸ್ಥೆಯಿದೆ. ಸಮಾವೇಶದಲ್ಲಿ ಲಕ್ಷಾಂತರ ಜನರು ಭಾಗವಹಿಸುವ ನಿರೀಕ್ಷೆಯಿದ್ದು, ವೇದಿಕೆಯ ಹಿಂಭಾಗದಲ್ಲಿ 15 ಅಡಿ ಎತ್ತರ, 90 ಅಡಿ ಅಗಲದ ಬೃಹತ್ ಎಲ್ಇಡಿ ಸ್ಕ್ರೀನ್‌ಗಳನ್ನು ಅಳವಡಿಸಲಾಗಿದೆ. ವೇದಿಕೆ ಕಾಣದವರು ಎಲ್ಇಡಿ ಪರದೆ ಮೂಲಕ ವೀಕ್ಷಣೆ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ.

ಇಷ್ಟು ದೊಡ್ಡ ಕಾರ್ಯಕ್ರಮಕ್ಕೆ ಆಗಮಿಸುವವರ ಅನುಕೂಲಕ್ಕಾಗಿ ಸುಮಾರು 40 ಸಾವಿರ ವಾಹನಗಳಿಗೆ ನಿಲುಗಡೆ ವ್ಯವಸ್ಥೆ ಮಾಡಲಾಗಿದ್ದು, ಇಡೀ ಪ್ರದೇಶದಲ್ಲಿ ಪೊಲೀಸರ ಸರ್ಪಗಾವಲು ಹಾಕಲಾಗಿದೆ. ಕಾರ್ಯಕ್ರಮದಲ್ಲಿ ಯಾವುದೇ ಭದ್ರತಾ ಲೋಪ ಉಂಟಾಗದಂತೆ ನೋಡಿಕೊಳ್ಳಲು ಸುಮಾರು 14 ಸಾವಿರ ಪೊಲೀಸರನ್ನು ಕಾರ್ಯಕ್ರಮದ ಸ್ಥಳದಲ್ಲಿ ನಿಯೋಜನೆ ಮಾಡಲಾಗಿದೆ.

ಬೆಂಗಳೂರು ನಗರ ಜಿಲ್ಲೆಯ ಕೆಲ ವಿಧಾನಸಭಾ ಕ್ಷೇತ್ರಗಳು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಯ ಮಧುಗಿರಿ ಭಾಗದ ಕೆಲ ಕ್ಷೇತ್ರಗಳನ್ನೂ ಒಳಗೊಂಡಂತೆ 19ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ ಜನರು ಹಾಗೂ ಪಕ್ಷದ ಕಾರ್ಯಕರ್ತರು ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ.

ಗಣ್ಯರ ದಂಡು: ಜನೋತ್ಸವದಲ್ಲಿ ಬಿಜೆಪಿಯ ಗಣ್ಯ ನಾಯಕರ ದಂಡೇ ಇಲ್ಲಿಗ ಬರುವ ನಿರೀಕ್ಷೆ ಇದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರು ಬರುವ ಸಾಧ್ಯತೆ ಇದ್ದು, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ, ರಾಜ್ಯದ ಸಚಿವರು, ಈ ಭಾಗದ ಮತ್ತು ರಾಜ್ಯದ ಉಳಿದೆಡೆಗಳಿಂದ ಬಿಜೆಪಿ ಶಾಸಕರು ಮತ್ತು ಪ್ರಮುಖ ನಾಯಕರು ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ. ಇದೇ ವೇಳೆ

ದೊಡ್ಡಬಳ್ಳಾಪುರದಲ್ಲಿ ಶನಿವಾರ ನಡೆಯಲಿರುವ ಜನಸ್ಪಂದನ ಕಾರ್ಯಕ್ರಮದ ಅಂಗವಾಗಿ ಮುಖ್ಯದ್ವಾರದಲ್ಲಿ ಕಟ್ಟಲಾಗಿರುವ ನಾಯಕರ ಬೃಹತ್ ಕಟೌಟ್‌ಗಳು.

ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಬಿಜೆಪಿ ಜನಕಲ್ಯಾಣ ಯೋಜನೆಗಳ ಫಲಾನುಭವಿಗಳು ಸಹ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಎಲ್ಲಿ ನೋಡಿದರೂ ಕೇಸರಿ

ಜನೋತ್ಸವದ ಅಂಗವಾಗಿ ದೊಡ್ಡಬಳ್ಳಾಪುರ ಸಂಪೂರ್ಣ ಕೇಸರಿಮಯವಾಗಿದೆ. ವೃತ್ತಗಳು, ಬೋರ್ಡುಗಳು ಸ್ವಾಗತ ಕಮಾನುಗಳಾಗಿ ಪರಿವರ್ತನೆ ಹೊಂದಿದ್ದು, ಬೆಂಗಳೂರಿನ ಹೊರವಲಯದ ಯಲಹಂಕ ದಾಟುತ್ತಲೇ ಕೇಸರಿ ಬಾವುಟಗಳ ಆವುಟ ಜೋರಾಗಿದೆ. ಇನ್ನು ದೊಡ್ಡಬಳ್ಳಾಪುರದ ಪ್ರತಿಯೊಂದು ರಸ್ತೆ, ಗಲ್ಲಿ, ತಿರುವುಗಳಲ್ಲಿ ಸಮಾವೇಶಕ್ಕೆ ಬರುವ ಗಣ್ಯರಿಗೆ ಸ್ವಾಗತ ಕೋರುವ ಕಟೌಟು, ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದು, ಇಡೀ ಪಟ್ಟಣ ಕೇಸರಿ ಬಣ್ಣದಲ್ಲಿ ಮುಳುಗಿಹೋಗಿದೆ ಎಂದರೆ ತಪ್ಪಲ್ಲ.

ಬಿಜೆಪಿಯ ಪಾಲಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿರುವ ಈ ಸಮಾವೇಶ ಯಾವುದೇ ಕಾರಣಕ್ಕೂ ಯಾವುದೇ ಚ್ಯುತಿ ಉಂಟಾಗದಂತೆ ಸಾಂಗವಾಗಿ ನೆರವೇರುವಂತಾಗಲು ಕೊನೆಯ ಕ್ಷಣದ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ದೊಡ್ಡಬಳ್ಳಾಪುರವೇ ಏಕೆ?

ಬಿಜೆಪಿಯು ತನ್ನ ಚೊಚ್ಚಲ ಜನೋತ್ಸವಕ್ಕೆ ದೊಡ್ಡಬಳ್ಳಾಪುರವನ್ನೇ ಏಕೆ ಆಯ್ಕೆ ಮಾಡಿಕೊಂಡಿದೆ ಎಂಬ ಪ್ರಶ್ನೆಗೆ ಉತ್ತರ ಸುಲಭ. ಒಂದು, ದೊಡ್ಡಬಳ್ಳಾಪುರವು ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸುಲಲಿತ ಸಂಪರ್ಕ ಹೊಂದಿರುವುದು. ಮತ್ತೊಂದು ಇಲ್ಲಿ ಬಿಜೆಪಿ ಸಂಘಟನೆ ಅಷ್ಟೇನೂ ಪ್ರಭಾವಿ ಆಗಿಲ್ಲದಿರುವುದು. ಈ ಕಾರಣಗಳಿಂದಾಗಿಯೇ ಪಕ್ಷವು ತನ್ನ ಮೊದಲ ಜನೋತ್ಸವಕ್ಕೆ ಈ ಪಟ್ಟಣವನ್ನೇ ಆಯ್ಕೆ ಮಾಡಿಕೊಂಡಿದೆ.

ದೊಡ್ಡ ಮಟ್ಟದಲ್ಲಿ ರಾಜ್ಯ ಸರಕಾರದ ಸಾಧನೆಗಳ ಪ್ರಚಾರ: ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರಿಂದ ಹೊಸ ಕಾರ್ಯಕ್ರಮಗಳ ಘೋಷಣೆ ಸಂಭವ

ದೊಡ್ಡಬಳ್ಳಾಪುರದಲ್ಲಿ ಶನಿವಾರ ನಡೆಯಲಿರುವ ಜನೋತ್ಸವ ಸಮಾವೇಶದ ಮೂಲಕ ಬಿಜೆಪಿ ಸರ್ಕಾರವು ತನ್ನ ಆಡಳಿತದ ಅವಧಿಯಲ್ಲಿನ ಮಹತ್ಸಾಧನೆಗಳನ್ನು ಜನರ ಮುಂದಿಡಲು ತವಕದಿಂದಿದೆ. ರಾಜ್ಯ ಮತ್ತು ಕೇಂದ್ರ ಬಿಜೆಪಿ ಸರಕಾರಗಳ ಜನಪರ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ವಿಸ್ತೃತವಾಗಿ ತಿಳಿಹೇಳುವುದರ ಜೊತೆಗೆ ಡಬಲ್ ಎಂಜಿನ್ ಸರಕಾರದ ಲಾಭ ಮತ್ತು ಬಿಜೆಪಿಯ ಜನಪರ ನಿಲುವನ್ನು ಪ್ರಚಾರ ಮಾಡಲು ಈ ಸಭೆ ಅಗತ್ಯ ವೇದಿಕೆಯಾಗಿದೆ.

ಕೇಂದ್ರದಲ್ಲಿ ನರೇಂದ್ರ ಮೋದಿ ಅವರ ಎಂಟು ವರ್ಷಗಳ ಆಡಳಿತ ಮತ್ತು ರಾಜ್ಯದಲ್ಲಿ ಮೂರು ವರ್ಷಗಳ ಬಿಜೆಪಿ ಆಡಳಿತದಲ್ಲಿ ಕೈಗೊಳ್ಳಲಾಗಿರುವ ಹಲವಾರು ಜನಕಲ್ಯಾಣ ಯೋಜನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಈ ಕಾರ್ಯಕ್ರಮ ವೇದಿಕೆಯಾಗಲಿದೆ. ಒಂದು ವರ್ಷದ ಹಿಂದೆ ಅಧಿಕಾರಕ್ಕೆ ಬಂದ ಬಸವರಾಜ ಬೊಮ್ಮಾಯಿ ಸರಕಾರದ ಅನೇಕ ಜನಪರ ಕಾರ್ಯಕ್ರಮಗಳನ್ನು ಕೂಡ ಈ ಸಮಾವೇಶದ ಮೂಲಕ ಹೈಲೈಟ್ ಮಾಡಲಾಗುತ್ತಿದೆ.

ಇದೇ ವೇಳೆ ಮುಖ್ಯಮಂತ್ರಿ ಬೊಮ್ಮಾಯಿ ಅವರು ಕೆಲ ಹೊಸ ಕಾರ್ಯಕ್ರಮಗಳನ್ನು ಘೋಷಣೆ ಮಾಡುವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ.

ಬಿಜೆಪಿ ನೆಲೆ ವಿಸ್ತರಣೆ: ಕೈ-ದಳಕ್ಕೆ ಚಿಂತೆ ಹಳೆ ಮೈಸೂರು ಭಾಗದ ರಾಜಕಾರಣವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡವರಂತೆ ಮೆರೆಯುತ್ತಿದ್ದ ಕಾಂಗ್ರೆಸ್ ಮತ್ತು ಜನತಾದಳ ನಾಯಕರಿಗೆ ಶನಿವಾರ ದೊಡ್ಡಬಳ್ಳಾಪುರದಲ್ಲಿ ನಡೆಯಲಿರುವ ಜನೋತ್ಸವ ಸಾಕಷ್ಟು ತಲೆಬಿಸಿ ಉಂಟು ಮಾಡಲಿದೆ. ರಾಜ್ಯವು ಅಸೆಂಬ್ಲಿ ಚುನಾವಣೆಯ ಹೊಸ್ತಿಲಲ್ಲಿ ನಿಂತಿರುವ ಸಂದರ್ಭದಲ್ಲಿ ಮೂರೂ ಪ್ರಮುಖ ರಾಜಕೀಯ ಪಕ್ಷಗಳೂ ಜನರತ್ತ ಸಾಗುತ್ತಿವೆ. ಕಾಂಗ್ರೆಸ್ ಪಕ್ಷವು ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಪ್ರಯುಕ್ತ ದಾವಣಗೆರೆಯಲ್ಲಿ ಬೃಹತ್ ಸಮಾವೇಶ ಏರ್ಪಡಿಸಿದ್ದಲ್ಲದೇ ಅಂತಹ ಇನ್ನೂ ಅನೇಕ ಸಮಾವೇಶಗಳಿಗೆ ಸಿದ್ಧತೆ ಮಾಡಿಕೊಳ್ಳುತ್ತಿದೆ.

ಅತ್ತ ಮಾಜಿ ಸಿಎಂ ಎಚ್‌ಡಿ ಕುಮಾರಸ್ವಾಮಿ ಅವರು ಜನತಾ ಜಲಧಾರೆ ಎಂಬ ಕಾರ್ಯಕ್ರಮದ ಮೂಲಕ ಜಾತ್ಯತೀತ ಜನತಾ ದಳ ಮತ್ತು ತಮ್ಮ ಸರಕಾರದ ಯೋಜನೆಗಳನ್ನು ಜನರಿಗೆ ನೆನಪಿಸುವ ಕೆಲಸ ಮಾಡಿದ್ದಾರೆ.

ಇದಕ್ಕೆಲ್ಲ ಬಿಜೆಪಿಯು ಈಗ ಜನೋತ್ಸವದ ಮೂಲಕ ಉತ್ತರ ಕೊಡಲು ಮುಂದಾಗಿದೆ. ರಾಜ್ಯದಾದ್ಯಂತ ಇಂತಹ ಹಲವಾರು ಬೃಹತ್ ಸಮಾವೇಶಗಳನ್ನು ಏರ್ಪಡಿಸಿ ಜನರ ಬಳಿಗೆ ಹೋಗುವ ಚಿಂತನೆಯಲ್ಲಿದೆ. ಅಂತಹ ಚಿಂತನೆಯ ಮೊದಲ ಪ್ರಯತ್ನವೇ ದೊಡ್ಡಬಳ್ಳಾಪುರದಲ್ಲಿ ನಡೆಯುತ್ತಿರುವ ಈ ಸಮಾವೇಶ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಬಿಜೆಪಿಗೆ ಹಳೆ ಮೈಸೂರು ಪ್ರದೇಶದ ಮಹತ್ವ ಬಿಜೆಪಿ ಪಾಲಿಗೆ ಹಳೆ ಮೈಸೂರು ಪ್ರದೇಶ ಒಂದು ರೀತಿಯಲ್ಲಿ ಕಬ್ಬಿಣದ ಕಡಲೆಯಾಗಿದೆ. ಇಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪ್ರಾಬಲ್ಯವೇ ಹೆಚ್ಚಿದ್ದು ಬಿಜೆಪಿ ಇದ್ದೂ ಇಲ್ಲದಂತಹ ಸ್ಥಿತಿಯಲ್ಲಿದೆ. ಅದರಲ್ಲಿಯೂ ಬೆಂಗಳೂರು ಗ್ರಾಮಾಂತರ, ಕೋಲಾರದಲ್ಲಿ ಪಕ್ಷದ ಸಂಘಟನೆ ಕಳೆಗುಂದಿದ್ದು ಕಾರ್ಯಕರ್ತರನ್ನು ಸೆಳೆಯುವ ಕೆಲಸಲದಲ್ಲಿ ಬಿಜೆಪಿ ಕಾರ್ಯೋನ್ಮುಖವಾಗಿದೆ. ಈ ಹಿನ್ನೆಲೆಯಲ್ಲಿ ಸಮಾವೇಶಕ್ಕೆ ಹೆಚ್ಚಿನ ಮಹತ್ವ ಬಂದಿದೆ.

ಮುಂಬರುವ ಚುನಾವಣೆಯಲ್ಲಿ ಕನಿಷ್ಠ 150 ಸ್ಥಾನ ಗೆಲ್ಲಲೇಬೇಕು ಎಂಬ ಹೈಕಮಾಂಡ್ ಕಟ್ಟಪ್ಪಣೆಯ ಹಿನ್ನೆಲೆಯಲ್ಲಿ ಬಿಜೆಪಿ ಹಳೆ ಮೈಸೂರು ಭಾಗದಲ್ಲಿ ಗಟ್ಟಿ ನೆಲೆ ಕಂಡುಕೊಳ್ಳುವುದು ಅನಿವಾರ್ಯವಾಗಿದೆ. ಅದರಲ್ಲಿಯೂ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಬಿಜೆಪಿ ತನ್ನ ಸಂಘಟನೆಯನ್ನು ಗಟ್ಟಿಗೊಳಿಸಬೇಕಾದ ಅಗತ್ಯತೆ ಬಹಳಷ್ಟಿದೆ.

ಉಪಚುನಾವಣೆಯಲ್ಲಿ ಪಡೆದ ಗೆಲುವಿನ ಮಹತ್ವದ ಅರಿವಿರುವ ಬಿಜೆಪಿಗೆ ಈ ಕ್ಷೇತ್ರಗಳಲ್ಲಿ ತನ್ನ ಹೊಸ ಚಿಗುರನ್ನು ಹಳೆ ಬೇರಾಗಿಸುವ ಆಶಯ ತೀವ್ರವಾಗಿದೆ. ಅದಕ್ಕೆ ಸಾಕ್ಷಿ ಎನ್ನುವಂತೆಯೇ ಸರಕಾರದ ಸಾಧನೆಗಳ ಮೆರವಣಿಗೆ ದೊಡ್ಡಬಳ್ಳಾಪುರದಿಂದ ಆರಂಭವಾಗುತ್ತಿದೆ. ಇದು ಒಂದು ರೀತಿಯಲ್ಲಿ ಬಿಜೆಪಿ ನೆಲೆ ವಿಸ್ತರಣೆಯ ಪ್ರಯತ್ನ ಎನ್ನುವುದರಲ್ಲಿ ಎರಡು ಮಾತಿಲ್ಲ. ಸಹಜವಾಗಿಯೇ ಬಿಜೆಪಿಯ ಈ ನಡೆ ಎದುರಾಳಿಗಳನ್ನು ಆತಂಕಕ್ಕೆ ದೂಡಿದೆ.

ಈ ಪ್ರದೇಶದಲ್ಲಿ ಒಂದು ವೇಳೆ ಬಿಜೆಪಿ ತನ್ನ ಗುರಿ ಸಾಧಿಸಿಕೊಳ್ಳುವಲ್ಲಿ ಸಫಲವಾದರೇ ತಮಗೆ ಉಳಿಗಾಲವಿಲ್ಲ ಎಂಬುದನ್ನು ಜೆಡಿಎಸ್ ಮತ್ತು ತಕ್ಕ ಮಟ್ಟಿಗೆ ಕಾಂಗ್ರೆಸ್ ಕೂಡ ಅರಿತುಕೊಂಡಿದೆ. ಹೀಗಾಗಿ ಅವರೂ ಸಹ ಜನರತ್ತ ದೌಡಾಯಿಸುವ ಸಾಧ್ಯತೆಗಳು ದಟ್ಟವಾಗಿವೆ. ಏನೇ ಆಗಲಿ ಚುನಾವಣೆ ಪೂರ್ವದಲ್ಲಿ ಹೆಚ್ಚಿನ ಸಂಖ್ಯೆಯ ಜನರನ್ನು ತಲುಪುವ ನಿಟ್ಟಿನಲ್ಲಿ ಬಿಜೆಪಿ ತನ್ನ ಕಾಲುಗಳಿಗೆ ಚಕ್ರ ಕಟ್ಟಿಕೊಂಡು ಸನ್ನದ್ಧವಾಗಿದೆ ಎಂಬುದಂತೂ ಸತ್ಯ.

ರಾಜ್ಯ ರಾಜಕೀಯಕ್ಕೆ ದಿಕ್ಸೂಚಿ: ಬಸವರಾಜ ಬೊಮ್ಮಯಿ ನೇತೃತ್ವದ ಬಿಜೆಪಿ ಸರಕಾರವು ಚುನಾವಣೆ ಮತ್ತು ಪಕ್ಷ ಸಂಘಟನೆ ಜೊತೆಗೆ ತಮ್ಮ ಸಾಧನೆಗಳ ಪುಸ್ತಕವನ್ನು ಜನರ ಮುಂದೆ ತೆರೆದಿಡುವ ದೃಷ್ಟಿಯಿಂದ ಆಯೋಜಿಸಿರುವ ಜನೋತ್ಸವವು ಒಂದು ರೀತಿಯಲ್ಲಿ ಮುಂಬರುವ ರಾಜಕೀಯ ಬೆಳವಣಿಗೆಗಳಿಗೆ ದಿಕ್ಸೂಚಿ ಆಗುವ ಎಲ್ಲ ಲಕ್ಷಣಗಳು ಗೋಚರಿಸಿವೆ.

ಯಾವುದೇ ಸರಕಾರವಿರಲಿ ತನ್ನ ಸಾದನೆಗಳನ್ನು ಜನರ ಮುಂದೆ ಬಿಚ್ಚಿಟಟು ಮತ್ತೆ ವಿಶ್ವಾಸ ಕೋರುವುದು ನಡೆದುಕೊಂಡು ಬಮದಿರುವ ಪದ್ಧತಿ. ಬಿಜೆಪಿ ಸಹ ಅದನ್ನೇ ಮಾಡಲು ಹೊರಟಿದೆ. ಮುಂದೆ ಬರಲಿರುವ ದಿನಗಳಲ್ಲಿ ಮೂರು ಪಕ್ಷಗಳು ಜನರ ಮುಂದೆ ಬರಲು ಹವಣಿಕೆ ನಡೆಸುತ್ತಿದ್ದರೂ ಎಷ್ಟರ ಮಟ್ಟಿಗೆ ಅವು ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗುತ್ತವೆ ಎಂಬುದರ ಮೇಲೆ ಚುನಾವಣೆಯ ದಿಕ್ಸೂಚಿ ಅವಲಂಬಿತ ಆಗಿರಲಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕೈಹಿಡಿಯುವಂತಾಗಲು ಇಂತಹ ಸಮಾವೇಶಗಳು ಬಹಳ ಪ್ರಾಮುಖ್ಯತೆ ಪಡೆದಿದೆ.

ಬಿಜೆಪಿ ಹೈಕಮಾಂಡ್ ಈ ಸಮಾವೇಶಗಳತ್ತ ನೆಟ್ಟ ನೋಟ ಬೀರಿದೆ. ಖುದ್ದು ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರು ಬಂದು ಸಮಾವೇಶ ಉದ್ಘಾಟನೆ ಮಾಡುವ ಸಾಧ್ಯತೆ ಇದೆ ಎಂದರೆ ಪಕ್ಷವು ಈ ಸಮಾವೇಶಕ್ಕೆ ಕೊಟ್ಟಿರುವ ಮಹತ್ವ ಏನು ಎಂಬುದು ತಿಳಿಯುತ್ತದೆ. ಬೃಹತ್ ಸಮಾವೇಶಗಳನ್ನು ಆಯೋಜಿಸಿ ಅಲ್ಲಿ ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರಕಾರಗಳು ಇರುವುದರ ಪ್ರಯೋಜನ ಮತ್ತು ಮೋದಿ ಸರಕಾರದ ಸಾಧನೆಗಳನ್ನು ಬಿಂಬಿಸುವ ಮೂಲಕ ಜನಾಶೀರ್ವಾದ ಸಂಪಾದಿಸುವುದು ಬಿಜೆಪಿ ಹೈಕಮಾಂಡಿನ ಲೆಕ್ಕಾಚಾರವಾಗಿದೆ.

ಮಂದಿನ ವರ್ಷ ನಡೆಯಲಿರುವ ರಾಜ್ಯ ಅಸೆಂಬ್ಲಿ ಚುನಾವಣೆಯನ್ನು ತೀರಾ ಗಂಭಿರವಾಗಿ ಪರಿಗಣಿಸಿರುವ ಬಿಜೆಪಿ ಹೈಕಮಾಂಡ್ ತನ್ನ ಗುರಿಯನ್ನು 150ಕ್ಕೂ ಹೆಚ್ಚು ಸ್ಥಾನಗಳತ್ತ ನೆಟ್ಟಿದೆ. ಈ ಗುರಿ ತಲುಪುವಲ್ಲಿ ಯಾವುದೇ ಕೊರತೆ ಬಾರದಂತೆ ಕಟ್ಟೆಚ್ಚರ ವಹಿಸಲು ಹೈಕಮಾಂಡ್ ರಾಜ್ಯ ನಾಯಕರಿಗೆ ಸ್ಪಷ್ಟ ಸೂಚನೆ ನೀಡಿದೆ.

ಈ ಪ್ರದೇಶದಿಂದ ಕನಿಷ್ಠ ಎಂದರೂ 15 ಮಂದಿಗೆ ಟಿಕೆಟ್ ಕೊಟ್ಟು ಗೆಲ್ಲಿಸಿಕೊಂಡು ಬರಬೇಕೆನ್ನುವುದು ಬಿಜೆಪಿ ಕೇಂದ್ರ ನಾಯಕರ ಚಿಂತನೆಯಾಗಿದೆ. ಇದಕ್ಕೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳುವಂತೆ ಪಕ್ಷವು ರಾಜ್ಯ ನಾಯಕರಿಗೆ ಸಂದೇಶ ರವಾನೆ ಆಗಿದೆ. ಹೀಗಾಗಿಯೇ ಜನೋತ್ಸವ ಕಾರ್ಯಕ್ರಮ ಯಶಸ್ವಿಗೊಳಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ. ಸುಧಾಕರ್, ತೋಟಗಾರಿಕಾ ಸಚಿವ ಮುನಿರತ್ನ ಹಾಗೂ ಪೌರಾಡಳಿತ ಸಚಿವ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್ ಮತ್ತು ಇತರ ಮುಖಂಡರು

ಜನೋತ್ಸವದತ್ತ ಬಿಜೆಪಿ ಹೈಕಮಾಂಡ್ ನೆಟ್ಟ ನೋಟ ಮೂರು ವರ್ಷಗಳ ಹಿಂದೆ ರಾಜ್ಯದಲ್ಲಿ ಅಧಿಕಾರದ ಗದ್ದುಗೆಗೆ ಏರಿದ ಭಾರತೀಯ ಜನತಾ ಪಕ್ಷವು 2023ರ ಅಸೆಂಬ್ಲಿ ಚುನಾವಣೆಯಲ್ಲಿ ಮತ್ತೆ ಅಧಿಕಾರ ಸ್ಥಾನದಲ್ಲಿ ತನ್ನನ್ನು ಸ್ಥಾಪಿಸಿಕೊಳ್ಳಲು ಉದ್ದೇಶಿಸಿ ನಡೆಸುತ್ತಿರುವ ಜನೋತ್ಸವ ಸಮಾವೇಶವು ಕೇವಲ ಸಂಘಟಕರು ಮತ್ತು ಸಚಿವರು ಮಾತ್ರವಲ್ಲದೇ ಇಡೀ ಪಕ್ಷವೇ ಎದುರುನೋಡುವಂತಹ ಕಾರ್ಯಕ್ರಮವಾಗಿದೆ.

ಅದರಲ್ಲಿಯೂ ಹಳೆಯ ಮೈಸೂರು ಭಾಗದಲ್ಲಿ ಭದ್ರ ನೆಲೆ ಕಂಡುಕೊಳ್ಳಬೇಕು ಎಂಬ ಹೈಕಮಾಂಡಿನ ಮಹದಾಸೆಗೆ ಈ ಜನೋತ್ಸವ ಉತ್ತರವಾಗಲಿದೆ. ಅಷ್ಟು ಮಾತ್ರವಲ್ಲದೇ ಸಂಘಟನೆಯ ಕೊರತೆಯಿಂದ ಸೊರಗಿರುವ ಈ ಭಾಗದ ಬಿಜೆಪಿ ನಾಯಕರಿಗೆ ಸಮಾವೇಶ ಸಂಜೀವಿನಿಯಾಗಿ ಬಂದಿದೆ. ಸಂಘಟನೆಯ ಕೊರತೆಯಿಂದಾಗಿ ಬಿಜೆಪಿಯತ್ತ ಹೊರಳದ ಅನೇಕ ನಾಯಕರು ಮುಂಬರುವ ದಿನಗಳಲ್ಲಿ ಬಿಜೆಪಿ

ಎಂ.ಟಿ.ಬಿ ನಾಗರಾಜ್ ಸಮಾವೇಶದ ಉಸ್ತುವಾರಿ ಜವಾಬ್ದಾರಿ ವಹಿಸಿಕೊಂಡಿದ್ದು, ಮೂವರು ಸಚಿವರು ಸಮಾವೇಶದ ಯಶಸ್ಸಿಗಾಗಿ ನಿರಂತರ ಪ್ರಯತ್ನ ನಡೆಸಿದ್ದಾರೆ.

ಎದುರಾಳಿಗಳಿಗೆ ಸ್ಪಷ್ಟ ಸಂದೇಶ ರವಾನೆ: ಈ ಸಮಾವೇಶವನ್ನು ದೊಡ್ಡಬಳ್ಳಾಪುರದಲ್ಲಿ ನಡೆಸುವ ಮೂಲಕ ಬಿಜೆಪಿ ಈ ಭಾಗದ ಜನರನ್ನು ಸೆಳೆಯಲು ಎಲ್ಲಿಲ್ಲದ ಮಹತ್ವ ನೀಡಿದೆ ಎಂಬ ಸ್ಪಷ್ಟ ಸಂದೇಶ ರವಾನೆ ಮಾಡುವುದು ಪಕ್ಷದ ಯೋಜನೆಯಾಗಿದೆ. ಸಾಗರೋಪಾದಿಯಲ್ಲಿ ಜನರನ್ನು ಒಟ್ಟುಗೂಡಿಸುವ ಮೂಲಕ ಈ ಭಾಗದಲ್ಲಿ ತನ್ನ ಗಟ್ಟಿ ಇರುವಿಕೆಯ ಬಗ್ಗೆ ಕಾಂಗ್ರೆಸ್ ಹಾಗೂ ಜೆಡಿಎಸ್‌ಗೆ ರಾಜಕೀಯ ಸಂದೇಶ ರವಾನಿಸಲು ಬಿಜೆಪಿಗೆ ಈ ಸಮಾವೇಶ ವೇದಿಕೆ ಕಲ್ಪಿಸಲಿದೆ.

ತನ್ನ ಸಂಘಟನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಮೂಲಕ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಈ ಭಾಗದಲ್ಲಿ ಹೊಂದಿರುವ ಪ್ರಾಬಲ್ಯಕ್ಕೆ ಸೆಡ್ಡು ಹೊಡೆಯಲು ಈ ಸಮಾವೇಶವು ಬಿಜೆಪಿಗೆ ನೆರವಾಗಲಿದೆ. ಹಳೆ ಮೈಸೂರು ಭಾಗದ ಇನ್ನೂ ಹಲವೆಡೆ ಇಂತಹ ಸಮಾವೇಶಗಳನ್ನು ಆಯೊಜಸಿವ ಮೂಲಕ ಸಂಘಟನೆಗೆ ಬಲ ತುಂಬಲು ಪಕ್ಷ ಯೋಚಿಸಿದೆ. ಇದಲ್ಲದೇ ರಾಜ್ಯಾದ್ಯಂತ ಸಹ ಜನೋತ್ಸವದಂತಹ ಸಮಾವೇಶಗಳು ಆಯೋಜನೆ ಆಗಲಿವೆ.

ಬೊಮ್ಮಾಯಿ ಸರಕಾರದ ಕೆಲವು ಪ್ರಮುಖ ಘೋಷಣೆಗಳು

- ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಯೋಜನೆಯಡಿ 9.48 ಲಕ್ಷ ವಿದ್ಯಾರ್ಥಿಗಳಿಗೆ 387.213 ಕೋಟಿ ರೂ ವಿದ್ಯಾರ್ಥಿ ವೇತನ ವಿತರಣೆ
- ರೈತರ ಆದಾಯ ಹೆಚ್ಚಿಸಲು ದೇಶದಲ್ಲಿಯೇ ಮೊದಲ ಬಾರಿ ಸೆಕಂಡರಿ ಕೃಷಿ ನಿರ್ದೇಶನಾಲಯ ಸ್ಥಾಪನೆ
- 750 ಅಂನವಾಡಿ ಕೇಂದ್ರಗಳ ಮೂಲಸೌಕರ್ಯ ಉನ್ನತೀಕರಣಕ್ಕೆ ಪ್ರತಿ ಅಂಗನವಾಡಿಗೆ ಒಂದು ಲಕ್ಷ ರೂ ನೆರವು.
- ಅಮೃತ ಯೋಜನೆಯಡಿ 750 ಗ್ರಾಮಪಂಚಾಯ್ತಿಗಳ ಸಮಗ್ರ ಅಭಿವೃದ್ಧಿ
- 750 ಅಮೃತ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ
- 7500 ಸ್ವಸಹಾಯ ಗುಂಪುಗಳಿಗೆ ತಲಾ ಇಂದು ಲಕ್ಷದಂತೆ 75 ಕೋಟಿ ರೂ ಅನುದಾನ ನೀಡುವ ಮೂಲಕ ಅವುಗಳನ್ನು ಕಿರು ಇದ್ದಿಮೆ ಸಂಸ್ಥೆಗಳನ್ನಾಗಿ ಪರಿವರ್ತನೆ
- 750 ಸರಕಾರಿ ಶಲೆಗಳ ಉನ್ನತೀಕರಣಕ್ಕೆ 75 ಕೋಟಿ ರೂ ಅನುದಾನ
- ಅಮೃತ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ 112 ಕೋಟಿ ರೂಗಳ ವೆಚ್ಚದಲ್ಲಿ ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತ ಸಮುದಾಯಗಳ 75 ಸಾವಿರ ಯುವಕ/ಯುವತಿಯರಿಗೆ ತರಬೇತಿ
- ರೈತ ಶಕ್ತಿ ಯೋಜನೆ ಅಡಿಯಲ್ಲಿ ರೈತರಿಗೆ ಪ್ರತಿ ಎಕರೆಗೆ 250 ರೂ ಡೀಸೆಲ್ ಸಬ್ಸಿಡಿ
- ಕೋವಿಡ್ ಮೂರನೇ ಅಲೆ ಕೈಮೀರದಂತೆ ಎಚ್ಚರಿಕೆ ವಹಿಸುವಲ್ಲಿ ಯಶಸ್ವಿ

ದೊಡ್ಡಬಳ್ಳಾಪುರದಲ್ಲಿ ಶನಿವಾರ ನಡೆಯಲಿರುವ ಜನಸ್ಪಂದನ ಕಾರ್ಯಕ್ರಮದ ಅಂಗವಾಗಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್ ಮಾತನಾಡಿದರು. ಸಚಿವ ಎಂಟಿಬಿ ನಾಗರಾಜ್ ಹಾಗೂ ಬಿಜೆಪಿ ಮುಖಂಡರು ಇದ್ದರು

ದೊಡ್ಡಬಳ್ಳಾಪುರದಲ್ಲಿ ಶನಿವಾರ ನಡೆಯಲಿರುವ ಜನಸ್ಪಂಧನ ಕಾರ್ಯಕ್ರಮದ ವಿಘ್ನ ನಿವಾರಣೆಗಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸುಧಾಕರ್ ಅವರು ಸಮಾರಂಭ ನಡೆಯುವ ಮುಖ್ಯವೇದಿಕೆಯಲ್ಲಿ ಗಣ ಹೋಮ ನಡೆಸಿದರು

ಷೇರುಪೇಟೆ ವಹಿವಾಟು 105



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,798
ಇಂದಿನ ಅಂತ್ಯ	17,833
▲	35
ದಿನದ ಗರಿಷ್ಠ	17,925

ವಿನಿಮಯ ದರ

$ ಡಾಲರ್	79.57
£ ಪೌಂಡ್	92.5
€ ಯುರೊ	80.34
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹450
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹452

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1620)
ಸೋಯಾ (ರಿಫೈನ್ಡ್)	₹1185 (1180)
ಸೂರ್ಯಕಾಂತಿ (ರಿಫೈನ್ಡ್)	₹1385 (1340
ಪಾಮೋಲಿನ್	₹950 (947)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹146
ಆರ್‌ಎಸ್‌ಎಸ್-5 ₹136
ಗುಡ್ ಲಾಟ್ ₹130

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹400-630
ದ್ವಿತಳಿ (ಬಿ.ವಿ) ₹435-788

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹800-1200
ಸಣ್ಣ	₹400-800

10 ತಿಂಗಳ ಕನಿಷ್ಠ ಮಟ್ಟಕ್ಕೆ ಈಕ್ವಿಟಿ ಎಂಎಫ್ ಹೂಡಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಸ್ಟ್‌ನಲ್ಲಿ ₹ 6,120 ಕೋಟಿ ಬಂಡವಾಳ ಹೂಡಿಕೆ ಆಗಿದೆ. ಇದು 10 ತಿಂಗಳ ಕನಿಷ್ಠ ಮಟ್ಟ. 2021ರ ಅಕ್ಟೋಬರ್‌ನಲ್ಲಿ ₹ 5,215 ಕೋಟಿ ಬಂಡವಾಳ ಹೂಡಿಕೆ ಆಗಿತ್ತು.

ಸತತ 18ನೇ ತಿಂಗಳಿನಲ್ಲಿಯೂ ಬಂಡವಾಳ ಒಳಹರಿವು ಆಗಿದೆ. ಹೀಗಿದ್ದರೂ ಕೆಲವು ತಿಂಗಳುಗಳಿಂದ ಒಳಹರಿವಿನ ಮೊತ್ತ ಕಡಿಮೆ ಆಗುತ್ತಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್‌ಗಳ ಒಕ್ಕೂಟ (ಎಎಂಎಫ್‌ಐ) ಶುಕ್ರವಾರ ತಿಳಿಸಿದೆ.

ಉದ್ಯಮದ ನಿರ್ವಹಣೆಯಲ್ಲಿ ಇರುವ ಸಂಪತ್ತು ಮೌಲ್ಯವು ಆಗಸ್ಟ್ ತಿಂಗಳ ಅಂತ್ಯಕ್ಕೆ ₹ 39.34 ಲಕ್ಷ ಕೋಟಿಗೆ ತಲುಪಿದೆ. ಇದು ಜುಲೈ ಅಂತ್ಯಕ್ಕೆ ₹ 37.75 ಲಕ್ಷ ಕೋಟಿ ಇತ್ತು.

ಹೂಡಿಕೆದಾರರು ಎಚ್ಚರಿಕೆಯಿಂದ ವಹಿವಾಟು ನಡೆಸುತ್ತಿದ್ದಾರೆ. ಬಡ್ಡಿದರ ಹೆಚ್ಚಳ ಆಗುತ್ತಿರುವುದರಿಂದ ತಾತ್ಕಾಲಿಕವಾಗಿ ಈಕ್ವಿಟಿ ಬದಲಾಗಿ ಸಾಲಪತ್ರಗಳಲ್ಲಿ ಬಂಡವಾಳ ಹೂಡಿಕೆ ಮಾಡುತ್ತಿದ್ದಾರೆ ಎಂದು ಎಲ್‌ಎಕ್ಸ್‌ಎಂಇ ಸಂಸ್ಥೆಯ ಹಣಕಾಸಿನ ಸಲಹೆಗಳನ್ನು ನೀಡುವ ಪ್ರಿಯಾ ಅಗರ್ವಾಲ್ ಹೇಳಿದ್ದಾರೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಆಗಸ್ಟ್‌ನಲ್ಲಿ ಸಾರ್ವಕಾಲಿಕ ಗರಿಷ್ಠವಾದ ₹ 12,693 ಕೋಟಿ ಬಂಡವಾಳ ಹೂಡಿಕೆ ಆಗಿದೆ. ಎಸ್‌ಐಪಿ ಖಾತೆಗಳ ಸಂಖ್ಯೆಯು 5.61 ಕೋಟಿಯಿಂದ 5.71 ಕೋಟಿಗೆ ದಾಖಲೆಯ ಏರಿಕೆ ಕಂಡಿದೆ.

ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಸ್ಟ್‌ನಲ್ಲಿ ₹ 49,164 ಕೋಟಿ ಹೂಡಿಕೆ ಆಗಿದೆ. ಜುಲೈನಲ್ಲಿ ₹ 4,930 ಕೋಟಿ ಹೂಡಿಕೆ ಆಗಿತ್ತು. ಹೈಬ್ರಿಡ್ ಯೋಜನೆಗಳಿಂದ ₹ 6,601 ಕೋಟಿ ಹಿಂತೆಗೆತ ಆಗಿದೆ.

ಬಂಡವಾಳ ಒಳಹರಿವು (₹ಕೋಟಿಗಳಲ್ಲಿ)



ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ಸಭೆ

ಸಾಲ ಆ್ಯಪ್: ಕೇಂದ್ರ ಮೂಗುದಾರ

ನವದೆಹಲಿ (ಪಿಟಿಐ): ಡಿಜಿಟಲ್ ವೇದಿಕೆಗಳ ಮೂಲಕ ಸಾಲ ಕೊಡಲು ಪರವಾನಗಿ ಇರುವ ಆ್ಯಪ್‌ಗಳ ಪಟ್ಟಿಯೊಂದನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಿದ್ಧಪಡಿಸಲಿದೆ. ಈ ಆ್ಯಪ್‌ಗಳು ಮಾತ್ರ ಆ್ಯಪ್ ಸ್ಟೋರ್‌ಗಳಲ್ಲಿ ಲಭ್ಯವಿರುವಂತೆ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ನೋಡಿಕೊಳ್ಳಲಿದೆ.

ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳ ಕುರಿತು ಚರ್ಚಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ಗುರುವಾರ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಇಂತಹ ಆ್ಯಪ್‌ಗಳಿಗೆ

ಕಡಿವಾಣ ಹಾಕಲು ತೀರ್ಮಾನಿಸಲಾಗಿದೆ.

ಸಾಲ ನೀಡುವ ಬಹುತೇಕ ಆ್ಯಪ್‌ಗಳು ಆರ್‌ಬಿಐನಲ್ಲಿ ನೋಂದಣಿ ಆಗಿಲ್ಲ. ಇಂತಹ ಆ್ಯಪ್‌ಗಳ ಮೂಲಕ ಸಾಲ ಪಡೆದವರು, ಸಾಲ ಕೊಟ್ಟವರ ಕಿರುಕುಳ ತಡೆಯಲು ಆಗದೆ ಆತ್ಮಹತ್ಯೆ ಮಾಡಿಕೊಂಡ ವರದಿಗಳು ಇವೆ.

ಹಣದ ಅಕ್ರಮ ವರ್ಗಾವಣೆಗೆ ಬಳಕೆಯಾಗುವ ಖಾತೆಗಳ ಮೇಲೆ ಆರ್‌ಬಿಐ ನಿಗಾ ಇರಿಸಲಿದೆ. ಅಲ್ಲದೆ, ಬ್ಯಾಂಕೇತರ ಹಣಕಾಸು ಸಂಸ್ಥೆಗಳು ನಿಷ್ಕ್ರಿಯವಾಗಿದ್ದರೆ ಅವು ದುರ್ಬಳಕೆ ಆಗದಂತೆ ನೋಡಿಕೊಳ್ಳಲು ಅವುಗಳ ಪರವಾನಗಿ ರದ್ದು ಮಾಡುವ ಅಥವಾ ಪರವಾನಗಿಯನ್ನು ಪುನರ್‌ಪರಿಶೀಲಿಸುವ ಕೆಲಸವನ್ನೂ ಮಾಡಲಿದೆ.

ಸಾಲವನ್ನು ಅಕ್ರಮವಾಗಿ ನೀಡುವ ಆ್ಯಪ್‌ಗಳ ಸಂಖ್ಯೆ ಹೆಚ್ಚಾಗುವುದನ್ನು ತಡೆಯಲು ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಶೆಲ್ ಕಂಪನಿಗಳನ್ನು (ಸಕ್ರಿಯವಾಗಿ ಇಲ್ಲದ ಕಂಪನಿಗಳು) ಗುರುತಿಸುವ ಹಾಗೂ ಅವುಗಳ ನೋಂದಣಿ ಹಿಂಪಡೆಯುವ ಕೆಲಸ ಮಾಡಲಿದೆ. ಅಲ್ಲದೆ, ಗ್ರಾಹಕರು, ಬ್ಯಾಂಕ್ ನೌಕರರು, ಕಾನೂನು ಜಾರಿ ಸಂಸ್ಥೆಗಳ ನೌಕರರಲ್ಲಿ ಸೈಬರ್ ಅರಿವು ಹೆಚ್ಚಿಸುವ ಕೆಲಸವನ್ನೂ ಮಾಡಲಿದೆ.

ಅಕ್ರಮವಾಗಿ ಸಾಲ ನೀಡುವ ಆ್ಯಪ್‌ಗಳು ಕಡಿಮೆ ಆದಾಯ ಇರುವವರಿಗೆ ಹಾಗೂ ಹೆಚ್ಚು ಅರಿವು ಇಲ್ಲದವರಿಗೆ ಭಾರಿ ಬಡ್ಡಿಗೆ ಸಾಲ ಕೊಟ್ಟು, ಸಾಲ ವಸೂಲಿ ವೇಳೆ ಬೆದರಿಕೆ ಹಾಕುವ ನಿದರ್ಶನಗಳು ಹೆಚ್ಚುತ್ತಿರುವ ಬಗ್ಗೆ ನಿರ್ಮಲಾ ಅವರು ಸಭೆಯಲ್ಲಿ ಕಳವಳ ವ್ಯಕ್ತಪಡಿಸಿದರು ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಮುಂಬೈ ಧಾರಣೆ

ಶೇಂಗಾ

9–9–2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1630)
ಒಂದು ವಾರದ ಡೆಲಿವರಿ	1645 (1625)
ಸೋಯಾ ಕಚ್ಚಾ	1105 (1100)
ಪಾಮ್ ವಾರದ ಡೆಲಿವರಿ	948 (945)
ಸೂರ್ಯಕಾಂತಿ ಎಣ್ಣೆ ಕಚ್ಚಾ	1325 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,600 (50,600)
ಬೆಳ್ಳಿ ಕೆ.ಜಿ 54,650 (54,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-47500
ಹಳತು	46000-56000

ಕುಮಟ

ಚಿಪ್ಪು	29509-34169
ಕೋಕ	21169-33999
ಫ್ಯಾಕ್ಟರಿ	13169-24169
ಹಳೆಚಾಲಿ	44509-47649
ಹೊಸಚಾಲಿ	39019-44009

ಪುತ್ತೂರು

ಹೊಸತು	34500-47500

ಶಿವಮೊಗ್ಗ

ಬೆಟ್ಟೆ	51799-55909
ರಾಶಿ	47609-54009
ಸರಕು	58009-81114

ಸಿದ್ದಾಪುರ

ಬಿಳಿಗೋಟು	30109-35699
ಚಾಲಿ	39269-44309
ಕೋಕ	27669-35800
ರಾಶಿ	50089-52222
ತಟ್ಟಿಬೆಟ್ಟೆ	42349-50699

ಶಿರಸಿ

ಬೆಟ್ಟೆ	38199-48889
ಬಿಳಿಗೋಟು	25199-37899
ಚಾಲಿ	38699-44999
ಕೆಂಪುಗೋಟು	24700-41899
ರಾಶಿ	44160-53499

ಯಲ್ಲಾಪುರ

ಬಿಳಿಗೋಟು	27699-36812
ಚಾಲಿ	38412-45169
ಕೋಕ	19612-33099
ಕೆಂಪುಗೋಟು	28969-37710
ರಾಶಿ	48612-57218

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16250	15800	16250	223.25 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9900	9800	9850	ಲಂಡನ್
ಆರ್‌ಸಿ	4800	4500	4700	2238 ಡಾಲರ್ಸ್

ಅಕ್ಕಿ ಉತ್ಪಾದನೆ 70 ಲಕ್ಷ ಟನ್ ತಗ್ಗುವ ಸಂಭವ

ನವದೆಹಲಿ (ಪಿಟಿಐ): ದೇಶದಲ್ಲಿ ಅಕ್ಕಿಯ ಉತ್ಪಾದನೆಯು ಮುಂಗಾರು ಹಂಗಾಮಿನಲ್ಲಿ ಗರಿಷ್ಠ 70 ಲಕ್ಷ ಟನ್‌ನಷ್ಟು ಕಡಿಮೆಯಾಗಬಹುದು ಎಂದು ಕೇಂದ್ರ ಆಹಾರ ಸಚಿವಾಲಯ ಹೇಳಿದೆ. ಆದರೂ, ದೇಶಕ್ಕೆ ಅಗತ್ಯವಿರುವುದಕ್ಕಿಂತ ಹೆಚ್ಚು ಅಕ್ಕಿಯ ಉತ್ಪಾದನೆ ಆಗಲಿದೆ ಎಂದು ತಿಳಿಸಿದೆ.

ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆಯು ಶೇಕಡ 6ರಷ್ಟು ಜಾಸ್ತಿಯಾಗಿದ್ದು, ಬೆಲೆ ಏರಿಕೆ ತಡೆಯುವ ಉದ್ದೇಶದಿಂದ ಕೇಂದ್ರವು ಅಕ್ಕಿ ರಫ್ತಿಗೆ ಶೇ 20ರಷ್ಟು ತೆರಿಗೆ ವಿಧಿಸಿದೆ.

ಹಲವು ರಾಜ್ಯಗಳಲ್ಲಿ ಮಳೆ ಕಡಿಮೆ ಆಗಿರುವ ಕಾರಣ ಈ ಬಾರಿ ಭತ್ತ ಬಿತ್ತನೆ ಕಡಿಮೆ ಆಗಿದೆ ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸುಧಾಂಶು ಪಾಂಡೆ ಹೇಳಿದ್ದಾರೆ. 'ತೀರಾ ಕೆಟ್ಟ ಸನ್ನಿವೇಶದಲ್ಲಿ ಅಕ್ಕಿಯ ಉತ್ಪಾದನೆಯು 1.2 ಕೋಟಿ ಟನ್ ಕಡಿಮೆ ಆಗಬಹುದು' ಎಂದು ಅವರು ಈ ಮೊದಲು ತಿಳಿಸಿದ್ದರು.

ಆದರೆ, ಇದು ಭತ್ತ ಬಿತ್ತನೆ ಪ್ರದೇಶದಲ್ಲಿ ಆಗಿರುವ ಇಳಿಕೆಯನ್ನು ಆಧರಿಸಿದ ಪ್ರಾಥಮಿಕ ಲೆಕ್ಕಾಚಾರ ಮಾತ್ರ. ಚೆನ್ನಾಗಿ ಮಳೆಯಾಗಿರುವ ರಾಜ್ಯಗಳಲ್ಲಿ ಉತ್ತಮ ಬೆಳೆ ಬಂದು, ಅಕ್ಕಿ ಉತ್ಪಾದನೆಯ ಕುಸಿತ ಪ್ರಮಾಣ ತಗ್ಗಬಹುದು ಎಂದು ಕೂಡ ಅವರು ಹೇಳಿದ್ದರು.

ನಂತರ ಹೇಳಿಕೆಯೊಂದನ್ನು ಹೊರಡಿಸಿದ ಆಹಾರ ಸಚಿವಾಲಯವು, 'ಉತ್ಪಾದನೆಯು 70 ಲಕ್ಷ ಟನ್‌ನಷ್ಟು ಕಡಿಮೆ ಆಗಬಹುದು. ಆದರೆ, ಕೆಲವೆಡೆ ಉತ್ತಮ ಮಳೆಯಾಗಿರುವ ಕಾರಣ ಉತ್ಪಾದನೆಯಲ್ಲಿನ ಕುಸಿತವು 50 ಲಕ್ಷ ಟನ್‌ಗೆ ಸೀಮಿತವಾಗಬಹುದು' ಎಂದು ಹೇಳಿತು.

15 ದಿನಗಳ ಹಳೆಯ ಅಂಕಿ–ಅಂಶ ಆಧರಿಸಿ, ಅಕ್ಕಿ ಉತ್ಪಾದನೆಯು 1.2 ಕೋಟಿ ಟನ್‌ನಷ್ಟು ಕಡಿಮೆಯಾಗಬಹುದು ಎಂಬ ಮಾಹಿತಿ ನೀಡಲಾಗಿತ್ತು ಎಂದು ಸರ್ಕಾರದ ಅಧಿಕಾರಿಯೊಬ್ಬರು ಸ್ಪಷ್ಟನೆ ನೀಡಿದ್ದಾರೆ.

ನುಚ್ಚಕ್ಕಿ ರಫ್ತು ನಿಷೇಧ

ನವದೆಹಲಿ (ಪಿಟಿಐ): ನುಚ್ಚಕ್ಕಿಯ ರಫ್ತನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. ಈ ಕ್ರಮವು ಶುಕ್ರವಾರದಿಂದಲೇ ಜಾರಿಗೆ ಬಂದಿದೆ. ವಿದೇಶ ವ್ಯಾಪಾರ ಮಹಾನಿರ್ದೇಶನಾಲಯವು ಈ ಸಂಬಂಧ ಅಧಿಸೂಚನೆ ಹೊರಡಿಸಿದೆ.

ಪ್ರಯಾಣಿಕ ವಾಹನ ಸಗಟು ಮಾರಾಟ ಶೇ 21ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನಗಳ ಸಗಟು ಮಾರಾಟವು 2021ರ ಆಗಸ್ಟ್‌ಗೆ ಹೋಲಿಸಿದರೆ 2022ರ ಆಗಸ್ಟ್‌ನಲ್ಲಿ ಶೇಕಡ 21ರಷ್ಟು ಏರಿಕೆ ಆಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ಶುಕ್ರವಾರ ತಿಳಿಸಿದೆ.

ಸೆಮಿಕಂಡಕ್ಟರ್ ಚಿಪ್ ಪೂರೈಕೆಯಲ್ಲಿ ಸುಧಾರಣೆ ಮತ್ತು ಹಬ್ಬದ ಬೇಡಿಕೆಯ ಕಾರಣಗಳಿಂದಾಗಿ ಪ್ರಯಾಣಿಕ ವಾಹನಗಳ ಸಗಟು ಮಾರಾಟವು 2.32 ಲಕ್ಷದಿಂದ 2.81 ಲಕ್ಷಕ್ಕೆ ಏರಿಕೆ ಆಗಿದೆ ಎಂದು ಅದು ಹೇಳಿದೆ.

ದ್ವಿಚಕ್ರ ಮಾರಾಟ ಶೇ 16ರಷ್ಟು, ತ್ರಿಚಕ್ರ ವಾಹನ ಮಾರಾಟ ಶೇ 63ರಷ್ಟು ಹೆಚ್ಚಾಗಿದೆ. ಎಲ್ಲಾ ವಿಭಾಗಗಳ ಒಟ್ಟು ಮಾರಾಟವು ಕಳೆದ ಆಗಸ್ಟ್‌ಗೆ ಹೋಲಿಸಿದರೆ ಶೇ 18ರಷ್ಟು ಹೆಚ್ಚಾಗಿದ್ದು, 18.77 ಲಕ್ಷಕ್ಕೆ ತಲುಪಿದೆ.

'ಉತ್ತಮ ಮುಂಗಾರು ಮತ್ತು ಹಬ್ಬಗಳ ಋತುವಿನಿಂದಾಗಿ ವಾಹನಗಳ ಬೇಡಿಕೆ ಹೆಚ್ಚಾಗುವ ನಿರೀಕ್ಷೆ ಮಾಡಲಾಗಿದೆ. ಹೀಗಾಗಿ ಪೂರೈಕೆ ವ್ಯವಸ್ಥೆಯಲ್ಲಿ ಇರುವ ಸವಾಲುಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ' ಎಂದು ಒಕ್ಕೂಟದ ಪ್ರಧಾನ ನಿರ್ದೇಶಕ ರಾಜೇಶ್ ಮೆನನ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ರೈಲು ಗಾಲಿ ತಯಾರಿಕೆಗೆ ಟೆಂಡರ್

ನವದೆಹಲಿ (ಪಿಟಿಐ): 'ಮೇಕ್ ಇನ್ ಇಂಡಿಯಾ' ಯೋಜನೆ ಅಡಿಯಲ್ಲಿ ರೈಲು ಗಾಲಿ ತಯಾರಿಕಾ ಘಟಕಗಳನ್ನು ನಿರ್ಮಿಸುವುದಕ್ಕಾಗಿ ರೈಲ್ವೆ ಇಲಾಖೆಯು ಶುಕ್ರವಾರ ಟೆಂಡರ್ ಕರೆದಿದೆ. ಖಾಸಗಿ ಕಂಪನಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಇದೇ ಮೊದಲ ಬಾರಿಗೆ ಅವಕಾಶ ನೀಡಲಾಗಿದೆ.

'ಗಾಲಿ ತಯಾರಿಕಾ ಘಟಕಗಳಲ್ಲಿ ₹600 ಕೋಟಿ ವೆಚ್ಚದಲ್ಲಿ ಪ್ರತಿ ವರ್ಷ 80 ಸಾವಿರ ಗಾಲಿಗಳನ್ನು ತಯಾರಿಸಲಾಗುತ್ತಿದೆ' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

'ರೈಲ್ವೆ ಇಲಾಖೆಗೆ ಪ್ರತಿ ವರ್ಷ ಎರಡು ಲಕ್ಷ ಗಾಲಿಗಳ ಅಗತ್ಯ ಇದೆ. ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಒಂದು ಲಕ್ಷ ಗಾಲಿಗಳನ್ನು ತಯಾರಿಸಲಿದೆ. ಇನ್ನುಳಿದ ಗಾಲಿಗಳನ್ನು 'ಮೇಕ್ ಇನ್ ಇಂಡಿಯಾ' ಅಡಿಯಲ್ಲಿ ತಯಾರಿಸಲು ಉದ್ದೇಶಿಸಲಾಗಿದೆ' ಎಂದರು. 1960ರಿಂದ ಐರೋಪ್ಯ ದೇಶಗಳಿಂದ ಫೋರ್ಜ್ಡ್ ಗಾಲಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಈಗ ಭಾರತದಲ್ಲಿಯೇ ಗಾಲಿಗಳನ್ನು ತಯಾರಿಸಲು, ರಫ್ತು ಮಾಡಲು ನಿರ್ಧರಿಸಿದ್ದೇವೆ ಎಂದು ತಿಳಿಸಿದ್ದಾರೆ.

ಇದೇ ತಿಂಗಳಲ್ಲಿ ಟಿಯಾಗೊ ಇ.ವಿ.

ನವದೆಹಲಿ (ಪಿಟಿಐ): ಟಿಯಾಗೊ ಕಾರಿನ ಇ.ವಿ. (ವಿದ್ಯುತ್ ಚಾಲಿತ) ಆವೃತ್ತಿಯನ್ನು ಈ ತಿಂಗಳ ಕೊನೆಯಲ್ಲಿ ಬಿಡುಗಡೆ ಮಾಡಲಾಗುವುದು ಎಂದು ಟಾಟಾ ಮೋಟರ್ಸ್ ಶುಕ್ರವಾರ ತಿಳಿಸಿದೆ. ಪರಿಸರ ಸ್ನೇಹಿ ವಾಹನಗಳು ಗ್ರಾಹಕರ ಕೈಗೆಟಕುವಂತೆ ಆಗಬೇಕು ಎಂಬ ಉದ್ದೇಶದಿಂದ ಕಂಪನಿ ಈ ಕಾರನ್ನು ಬಿಡುಗಡೆ ಮಾಡಲಿದೆ.

ಟಾಟಾ ಮೋಟರ್ಸ್ ಕಂಪನಿಯು ನೆಕ್ಸಾನ್ ಹಾಗೂ ಟಿಗಾರ್ ಇ.ವಿ. ಆವೃತ್ತಿಗಳನ್ನು ಈಗಾಗಲೇ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಮುಂದಿನ ಐದು ವರ್ಷಗಳಲ್ಲಿ ಒಟ್ಟು 10 ವಿದ್ಯುತ್ ಚಾಲಿತ ವಾಹನ ಮಾದರಿಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಗುರಿಯನ್ನು ಕಂಪನಿ ಹೊಂದಿದೆ.

ವಿದ್ಯುತ್ ಚಾಲಿತ ಪ್ರಯಾಣಿಕ ವಾಹನ ಮಾರುಕಟ್ಟೆಯಲ್ಲಿ ಈಗ ಟಾಟಾ ಮೋಟರ್ಸ್ ಸಿಂಹಪಾಲು (ಶೇಕಡ 88ರಷ್ಟು) ಹೊಂದಿದೆ.

ಜಿಜೆಇಪಿಸಿ ದಕ್ಷಿಣ ವಲಯ ಅಧ್ಯಕ್ಷರಾಗಿ ಜೋಸ್

ಬೆಂಗಳೂರು: ಮುತ್ತು ಮತ್ತು ಆಭರಣ ರಫ್ತು ಉತ್ತೇಜನಾ ಮಂಡಳಿಯ (ಜಿಜೆಇಪಿಸಿ) ದಕ್ಷಿಣ ವಲಯದ ಅಧ್ಯಕ್ಷರಾಗಿ ಪ್ರಿನ್ಸ್ ಜುವೆಲರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಅಧ್ಯಕ್ಷ ಪ್ರಿನ್ಸನ್ ಜೋಸ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅವರು ಈ ಸ್ಥಾನಕ್ಕೆ ಆಯ್ಕೆ ಆಗುತ್ತಿರುವುದು ಐದನೆಯ ಬಾರಿ ಎಂದು ಪ್ರಕಟಣೆ ತಿಳಿಸಿದೆ. 'ಈ ಸ್ಥಾನಕ್ಕೆ ಆಯ್ಕೆಯಾಗಿರುವುದು ವಿಶೇಷ ಗೌರವ. ಉದ್ಯಮಕ್ಕೆ ಪೂರಕವಾದ ನೀತಿ ರೂಪಿಸಲು ನಾನು ಉದ್ಯಮ ಹಾಗೂ ಸರ್ಕಾರದ ಜೊತೆ ನಿಕಟವಾಗಿ ಕೆಲಸ ಮಾಡುವೆ' ಎಂದು ಜೋಸ್ ಅವರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

12ರಂದು ಟ್ರಯಲ್ಸ್

ಬೆಂಗಳೂರು: ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುವ ಕರ್ನಾಟಕ ಜೂನಿಯರ್ ಮಹಿಳಾ ತಂಡದ ಆಯ್ಕೆಯಾಗಿ ಇದೇ 12ರಂದು ಟ್ರಯಲ್ಸ್ ನಡೆಯಲಿದೆ.

ಇಲ್ಲಿಯ ಶಾಂತಿನಗರದ ಕೆ.ಎಂ. ಕಾರ್ಯಪ್ಪ ಹಾಕಿ ಅರೆನಾದಲ್ಲಿ ಟ್ರಯಲ್ಸ್ ನಡೆಯಲಿದೆ ಎಂದು ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಕೂಟವು ಅಕ್ಟೋಬರ್ 2ರಿಂದ ಗುಜರಾತ್‌ನಲ್ಲಿ ನಿಗದಿಯಾಗಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಟಿ–ಶರ್ಟ್ ಮೇಲೆ ಶಾ ವ್ಯಂಗ್ಯ ಚಿತ್ರ ಮುದ್ರಿಸಿ ಟಿಎಂಸಿ ಅಣಕ

ಕೋಲ್ಕತ್ತ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ವಿರುದ್ಧ ದಾಳಿ ನಡೆಸಲು ತೃಣಮೂಲ ಕಾಂಗ್ರೆಸ್ (ಟಿಎಂಸಿ) ತನ್ನ ಕಾರ್ಯಕರ್ತರಿಗೆಂದು ಟಿ–ಶರ್ಟ್ ವಿನ್ಯಾಸಗೊಳಿಸಿದೆ.

ಟಿ–ಶರ್ಟ್‌ನಲ್ಲಿ ಶಾ ಅವರ ವ್ಯಂಗ್ಯ ಚಿತ್ರವಿದ್ದು ಅದರ ಕೆಳಗೆ 'ಭಾರತದ ಅತಿದೊಡ್ಡ ಪಪ್ಪು' ಎಂದು ಬರೆದಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಬಿಜೆಪಿ 'ಪಪ್ಪು' ಎಂದು ಕರೆಯುವ ಮೂಲಕ ಅಪಹಾಸ್ಯ ಮಾಡುತ್ತಿತ್ತು. ಸದ್ಯ ಟಿಎಂಸಿ, ಶಾ ಅವರನ್ನು ಅದೇ ಹೆಸರಿನಿಂದ ಕರೆಯುವ ಮೂಲಕ ಅಣಕ ಮಾಡಲು ಮುಂದಾಗಿದೆ. ದುರ್ಗಾ ಪೂಜೆಯ ಸಂದರ್ಭದಲ್ಲೇ ಈ ಪ್ರಚಾರ ಆಂದೋಲನ ನಡೆಸಲು ಪಕ್ಷ ಉತ್ಸುಕವಾಗಿದೆ.

'ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಂದ ಈ ರೀತಿಯ ಅಣಕ ಆರಂಭವಾಯಿತು' ಎಂದು ಟಿಎಂಸಿ ರಾಜ್ಯಸಭಾ ನಾಯಕ ಡೆರೆಕ್ ಓಬ್ರಿಯಾನ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸೆ. 15ಕ್ಕೆ ಸಿಯುಇಟಿ–ಯುಜಿ ಫಲಿತಾಂಶ

ನವದೆಹಲಿ (ಪಿಟಿಐ): 'ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ–ಯುಜಿ) ಫಲಿತಾಂಶವು ಸೆಪ್ಟೆಂಬರ್ 15ರಂದು ಪ್ರಕಟವಾಗಲಿದೆ' ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷ ಜಗದೀಶ್ ಕುಮಾರ್ ಶುಕ್ರವಾರ ಹೇಳಿದರು.

'ಇದೇ ಮೊದಲ ಬಾರಿಗೆ ಸಿಯುಇಟಿ–ಯುಜಿ ಪರೀಕ್ಷೆಯನ್ನು ನಡೆಸಲಾಗಿತ್ತು. ಶೇ 60ರಷ್ಟು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು' ಎಂದರು.

ರೆಸ್ಟೋರೆಂಟ್ ನೆಲಸಮ ಮುಂದುವರಿಕೆ

ನವದೆಹಲಿ(ಪಿಟಿಐ): ಗೋವಾದ ಅಂಜುನಾ ಪ್ರದೇಶದಲ್ಲಿರುವ ಕರ್ಲೀಸ್ ರೆಸ್ಟೋರೆಂಟ್‌ನ ನೆಲಸಮ ಕಾರ್ಯಾಚರಣೆ ಶುಕ್ರವಾರ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ ಕಾರಣ ಅಲ್ಪ ಕಾಲ ಸ್ಥಗಿತಗೊಂಡಿದ್ದು, ಬಳಿಕ ಮುಂದುವರಿದಿದೆ.

'ನೆಲಸಮ ಕಾರ್ಯಾಚರಣೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದ ಕಾರಣ ಕೆಲವು ಗಂಟೆಗಳ ಕಾಲ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ ನ್ಯಾಯಾಲಯದ ಆದೇಶವು ನಿರ್ದಿಷ್ಟ ಸರ್ವೆ ನಂಬರ್‌ನಲ್ಲಿರುವ ರೆಸ್ಟೋರೆಂಟ್‌ನ ಭಾಗಕ್ಕೆ ಮಾತ್ರ ಸೀಮಿತವಾಗಿದೆ' ಎಂದು ಗೋವಾ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ (ಜಿಸಿಝೆಡ್‌ಎಂಎ) ಅಧಿಕಾರಿಗಳು ತಿಳಿಸಿದ್ದಾರೆ.

12ರೊಳಗೆ ಸೇನಾ ವಾಪಸಾತಿ ಪ್ರಕ್ರಿಯೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನ ಗೋಗ್ರಾ– ಹಾಟ್ ಸ್ಪ್ರಿಂಗ್ಸ್ ಗಡಿ ಪ್ರದೇಶದಿಂದ ಭಾರತ ಮತ್ತು ಚೀನಾದ ಸೇನಾ ವಾಪಸಾತಿ ಪ್ರಕ್ರಿಯೆ ಸೆಪ್ಟೆಂಬರ್ 12ರೊಳಗೆ ಪೂರ್ಣಗೊಳ್ಳಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಶುಕ್ರವಾರ ತಿಳಿಸಿದ್ದಾರೆ.

'ಚುನಾವಣೆ ವೇಳೆ ನಿರ್ಧಾರ ಬಹಿರಂಗ'

ನಾಗರ್‌ಕೋಯಿಲ್ (ತಮಿಳುನಾಡು): ಮುಂದಿನ ತಿಂಗಳು ನಡೆಯಲಿರುವ ಎಐಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ 'ತುಂಬಾ ಸ್ಪಷ್ಟವಾಗಿ ನಿರ್ಧರಿಸಿದ್ದೇನೆ'. ಚುನಾವಣೆ ವೇಳೆ ಇದನ್ನು ಬಹಿರಂಗ ಪಡಿಸುತ್ತೇನೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ, ಮಾಧ್ಯಮ ಪ್ರತಿನಿಧಿಗಳು ಎಐಸಿಸಿ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸುವುದಿಲ್ಲವೇ ಎಂಬ ಪ್ರಶ್ನೆಯನ್ನು ಪದೇ ಪದೇ ರಾಹುಲ್ ಗಾಂಧಿಯವರ ಮುಂದಿರಿಸಿದಾಗ 'ನನ್ನ ನಿರ್ಧಾರ ಸ್ಪಷ್ಟ. ನಾನು ಪಕ್ಷದ ಅಧ್ಯಕ್ಷನಾಗುತ್ತೀನೊ ಅಥವಾ ಇಲ್ಲವೊ ಎನ್ನುವುದು ಪಕ್ಷದ ಚುನಾವಣೆ ವೇಳೆ ಸ್ಪಷ್ಟವಾಗಲಿದೆ. ದಯವಿಟ್ಟು ಆ ದಿನಕ್ಕಾಗಿ ಕಾಯಿರಿ' ಎಂದು ಪ್ರತಿಕ್ರಿಯಿಸಿದರು.

'ಆರೆಸ್ಸೆಸ್ ಮತ್ತು ಬಿಜೆಪಿ ದೇಶದಲ್ಲಿ ಮಾಡಿರುವ ಹಾನಿ ಸರಿಪಡಿಸಿ, ಭಾರತ ಜೋಡಿಸುವುದು ಈ ಯಾತ್ರೆಯ ಉದ್ದೇಶ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬಿಜೆಪಿಯ 'ಪರಿವಾರ್ ಬಚಾವೋ' ಟೀಕೆಗೆ ತಿರುಗೇಟು ನೀಡಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ಉದ್ಯೋಗಾವಕಾಶ

General

✓ ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 8197650569, 7204396011

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225388/ 9611225266

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

DH ಪ್ರಜಾವಾಣಿ Book Your Classifieds Ads Online Log in to dhclassifieds.com
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

ಭವಿಷ್ಯ

Astrology

★||ಶ್ರೀಚಾಮುಂಡೇಶ್ವರಿ||★ ಜ್ಯೋತಿಷ್ಯರು ಸ್ತ್ರೀಪುರುಷ ಪ್ರೇಮವಿಚಾರ, ಪ್ರೀತಿಯಲ್ಲಿಮೋಸ, ಆರೋಗ್ಯ, ದಾಂಪತ್ಯ, ಸಾಲಭಾದೆ, ಸಂತಾನಫಲ, ಮದುವೆ, ಇನ್ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. 8050061378

ಪ್ರವಾಸ

Travel

17.09.2022, 01.11.2022 13ದಿನಗಳು ವಿಮಾನದಲ್ಲಿ ಕಾಶಿ, ಗಯಾ, ಆಗ್ರಾ, ಅಲಹಬಾದ್, ಅಯೋಧ್ಯೆ, ನೈಮಿಷ್ಯಾರಣ್ಯ ಪ್ರವಾಸ. ಆರ್.ಗಾಂಧಿ ಟೂರ್ಸ್ 9945445809 9902433500

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/13 ದಿನಗಳು. 29.09.2022 ನವಗ್ರಹ ದರ್ಶನಸೇರಿ 18 ಕ್ಷೇತ್ರಗಳು. 06.10.2022 ರಾಮೇಶ್ವರ ಕನ್ಯಾಕುಮಾರಿ ಇತ್ಯಾದಿ. 27.10.2022 ಕಾರ್ತಿಕ ಮಾಸದಲ್ಲಿ ಶ್ರೀಶೈಲ,ಮಹಾನಂದಿ, ಅಹೋಬಲ,ಮಂತ್ರಾಲಯಾ. 07.11.2022 ವೈಷ್ಣೋದೇವಿ ಇತ್ಯಾದಿ. 22.11.2022 ಕಾಶಿ,ಅಯೋಧ್ಯ ಇತ್ಯಾದಿ. 9448390735 9449721678 9731159966

ವೈಯಕ್ತಿಕ

Change of Name

ನಾನು. ಡಿ.ಗೀತಾ ಬಿನ್ ದಿವಾಕರಯ್ಯ ಕೋಂ.ರಂಗನಾಥ, ಕರ್ಲಮಂಗಲ ಗ್ರಾಮ ಮತ್ತು ಅಂಚೆ, ಮಾಡಬಲ್ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ನಿವಾಸಿಯಾಗಿದ್ದು, ಇದೀಗ ನಾನು ನನ್ನ ಹೇಮಲತಾ. ಡಿ ಎಂಬ ಹೆಸರನ್ನು ಡಿ. ಗೀತಾ ಎಂಬುದಾಗಿ ಬದಲಾಯಿಸಿಕೊಂಡಿದ್ದು, ಈ ಕುರಿತಾಗಿ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ನೋಟರಿಗಳಾದ ಹರೀಶ್.ಆರ್ ರವರ ಎದುರು ಪ್ರತಿಜ್ಞಾ ಪೂರ್ವಕವಾಗಿ ಪ್ರಮಾಣೀಕರಿಸಿದ್ದೇನೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಭಾರತ–ನ್ಯೂಜಿಲೆಂಡ್ 'ಎ' ತಂಡಗಳ ನಡುವಿನ 'ಟೆಸ್ಟ್'

ಪ್ರಿಯಾಂಕ್ ಪಾಂಚಾಲ್, ಭರತ್ ತಾಳ್ಮೆಯ ಆಟ

● ಬಸೀರಅಹ್ಮದ್ ನಗಾರಿ

ಹುಬ್ಬಳ್ಳಿ: ನಾಯಕ ಪ್ರಿಯಾಂಕ್ ಪಾಂಚಾಲ್ (87) ಹಾಗೂ ವಿಕೆಟ್ ಕೀಪರ್ ಕೆ.ಎಸ್.ಭರತ್ (ಬ್ಯಾಟಿಂಗ್ 74) ಅವರ ತಾಳ್ಮೆಯ ಆಟದ ಬಲದಿಂದ ಭಾರತ 'ಎ' ತಂಡವು ಶುಕ್ರವಾರ ಆರಂಭವಾದ ನ್ಯೂಜಿಲೆಂಡ್ 'ಎ' ತಂಡದ ವಿರುದ್ಧದ 'ಟೆಸ್ಟ್' ಪಂದ್ಯದಲ್ಲಿ ಸಾಧಾರಣ ಮೊತ್ತ ಕಲೆಹಾಕಿದೆ.

ಇಲ್ಲಿನ ರಾಜನಗರ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಆತಿಥೇಯ ತಂಡ 66 ಓವರ್‌ಗಳಲ್ಲಿ 6 ವಿಕೆಟ್‌ಗೆ 229 ರನ್ ಗಳಿಸಿದೆ.

ಟಾಸ್ ಗೆದ್ದ ಕಿವೀಸ್ ತಂಡದ ನಾಯಕ ಟಾಮ್ ಬ್ರೂಸ್ ಫೀಲ್ಡಿಂಗ್ ಆಯ್ದುಕೊಂಡರು. ಅವರ ನಿರ್ಧಾರ ಸಮರ್ಥಿಸುವಂತೆ ಕಿವೀಸ್ ಬೌಲರ್‌ಗಳು ಪ್ರಭಾವಿ ಬೌಲಿಂಗ್ ಮಾಡಿದರು. ಊಟದ ವಿರಾಮಕ್ಕೂ ಮುನ್ನವೇ ಲೋಗಾನ್ ಬೀಕ್ ಎರಡು ವಿಕೆಟ್ ಕಬಳಿಸಿದರು.

ಬೀಕ್ ಬೌಲ್ ಮಾಡಿದ 12ನೇ ಓವರ್‌ನಲ್ಲಿ ಅಭಿಮನ್ಯು ಈಶ್ವರನ್ (22 ರನ್, 36 ಎ, 4X5) ಔಟಾದರು. ಎರಡನೇ ಸ್ಲಿಪ್‌ನಲ್ಲಿದ್ದ ಟಾಮ್ ಬ್ರೂಸ್‌ಗೆ ಕ್ಯಾಚಿತ್ತರು. ನಂತರ ಬಂದ ಋತುರಾಜ ಗಾಯಕವಾಡ (5 ರನ್, 15ಎ, 1ಬೌಂಡರಿ) ತುಂಬ ಹೊತ್ತು ನಿಲ್ಲಲಿಲ್ಲ. ಬೀಕ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಕ್ಯಾಮ್ ಫ್ಲೆಚರ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ಭಾರತ 'ಎ' ತಂಡದ ನಾಯಕ ಪ್ರಿಯಾಂಕ್ ಪಾಂಚಾಲ್ ಆಟದ ವೈಖರಿ –ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ರಜತ್ ಪಾಟೀದಾರ್ (4 ರನ್, 17ಎ, 1ಬೌಂಡರಿ) ಅವರನ್ನು ವೇಗಿ ಜಾಕೋಬ್ ಡಫಿ ಹೆಚ್ಚುಹೊತ್ತು ನಿಲ್ಲಲು ಬಿಡಲಿಲ್ಲ. ತಿಲಕ್ ವರ್ಮಾ(0) ಬಂದಷ್ಟೇ ವೇಗವಾಗಿ ಮರಳಿದರು. ಅವರು ಡಫಿ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು.

ತಾಳ್ಮೆಯ ಆಟ: ಒಂದೆಡೆ ನಿರಂತರವಾಗಿ ವಿಕೆಟ್ ಉರುಳುತ್ತಿದ್ದರೂ, ದೃಢವಾಗಿ ನಿಂತು ತಾಳ್ಮೆಯ ಇನಿಂಗ್ಸ್ ಕಟ್ಟಿದ್ದು ಪ್ರಿಯಾಂಕ್ ಪಾಂಚಾಲ್. ಅವರಿಗೆ ಕೆ.ಎಸ್.ಭರತ್ ಉತ್ತಮ ಸಾಥ್ ನೀಡಿದರು. ಇವರು 152 ಎಸೆತಗಳಲ್ಲಿ 117 ರನ್ ಕಲೆಹಾಕಿದರು.

ಪಾಂಚಾಲ್ ವಿಕೆಟ್ ಪಡೆದ ಸೀನ್ ಸೋಲಿಯಾ ಈ ಜತೆಯಾಟ ಮುರಿದರು. 238 ನಿಮಿಷ ಕ್ರೀಸ್‌ನಲ್ಲಿದ್ದ ಅವರು 148 ಎಸೆತಗಳಲ್ಲಿ 87 ರನ್ (4x12, 6x2) ಕಲೆಹಾಕಿದರು.

ಶಾರ್ದೂಲ್ ಠಾಕೂರ್ (25 ರನ್, 57ಎ, 4x4) ಕೂಡ ಬೇಗ ಔಟಾದರು. ದಿನದಾಟದ ಅಂತ್ಯಕ್ಕೆ ಭರತ್ (74 ರನ್, 104ಎ, 4x10) ಹಾಗೂ ರಾಹುಲ್ ಚಾಹರ್ (4 ರನ್, 14ಎ,4x1) ಕ್ರೀಸ್‌ನಲ್ಲಿದ್ದರು.

ಕಾಡಿದ ಮಳೆ: ನಾಲ್ಕು ದಿನಗಳ ಈ ಪಂದ್ಯದ ಮೊದಲ ದಿನದಾಟ ಮಳೆಯಿಂದ ರದ್ದುಗೊಂಡಿತ್ತು. 2ನೇ ದಿನವಾದ ಶುಕ್ರವಾರವೂ ಆಗಾಗ ಮಳೆ ಕಾಡಿತು. ಇದರಿಂದ 66 ಓವರ್‌ಗಳ ಆಟವಷ್ಟೇ ನಡೆಯಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಭಾರತ 66 ಓವರ್‌ಗಳಲ್ಲಿ 6 ವಿಕೆಟ್‌ಗೆ 229 ಪ್ರಿಯಾಂಕ್ ಪಾಂಚಾಲ್ 87, ಕೆ.ಎಸ್.ಭರತ್ ಬ್ಯಾಟಿಂಗ್ 74ರನ್, ಲೋಗಾನ್ ಬೀಕ್ 39ಕ್ಕೆ2, ಜಾಕೋಬ್ ಡಫಿ 55ಕ್ಕೆ 2.

ಅಮೆರಿಕ ಓಪನ್ ಟೆನಿಸ್: ಸೆಮಿಯಲ್ಲಿ ಎಡವಿದ ಗಾರ್ಸಿಯಾ, ಸಬಲೆಂಕಾ

ಪ್ರಶಸ್ತಿಗೆ ಸ್ವಟೆಕ್– ಜಬೇರ್ ಸೆಣಸು

ಪ್ರಜಾವಾಣಿ ವಾರ್ತೆ

ಆನ್ಸ್ ಜಬೇರ್ (ಎಡ) ಮತ್ತು ಇಗಾ ಸ್ವೆಟೆಕ್ ಅವರ ಸಂಭ್ರಮ –ಎಎಫ್‌ಪಿ ಚಿತ್ರಗಳು

ನ್ಯೂಯಾರ್ಕ್ (ಎಪಿ): ಪೋಲೆಂಡ್‌ನ ಇಗಾ ಸ್ವಟೆಕ್ ಮತ್ತು ಟ್ಯುನಿಷಿಯಾದ ಆನ್ಸ್ ಜಬೇರ್ ಅವರು ಅಮೆರಿಕ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಗೆ ಪೈಪೋಟಿ ನಡೆಸಲಿದ್ದಾರೆ.

ವಿಶ್ವದ ಅಗ್ರ ರ್‍ಯಾಂಕ್‌ನ ಆಟಗಾರ್ತಿ ಸ್ವಟೆಕ್ ಅವರು ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 3-6, 6-1, 6-4 ರಲ್ಲಿ ಬೆಲಾರಸ್‌ನ ಅರಿನಾ ಸಬಲೆಂಕಾ ಎದುರು ಗೆದ್ದರು. ಜಬೇರ್ 6-1, 6-3 ರಲ್ಲಿ ಫ್ರಾನ್ಸ್‌ನ ಕರೊಲಿನ್ ಗಾರ್ಸಿಯಾ ಅವರನ್ನು ಮಣಿಸಿದರು.

ಸ್ವಟೆಕ್ ಮತ್ತು ಜಬೇರ್, ಅಮೆರಿಕ ಓಪನ್‌ನಲ್ಲಿ ಫೈನಲ್ ಪ್ರವೇಶಿ ಸಿದ್ದು ಇದೇ ಮೊದಲು. ಆದ್ದ ರಿಂದ ಶನಿವಾರ ಯಾರೇ ಗೆದ್ದರೂ ಈ ಬಾರಿ ಹೊಸಬರಿಗೆ ಚಾಂಪಿಯನ್‌ಪಟ್ಟ ಲಭಿಸಲಿದೆ.

ಅಮೆರಿಕ ಓಪನ್‌ನಲ್ಲಿ ಫೈನಲ್ ಪ್ರವೇಶಿಸಿದ ಆಫ್ರಿಕಾದ ಮೊದಲ ಮಹಿಳೆ ಎಂಬ ಗೌರವ ಜಬೇರ್‌ಗೆ ಒಲಿಯಿತು. ಎರಡು ತಿಂಗಳ ಹಿಂದೆ ವಿಂಬಲ್ಡನ್ ಟೂರ್ನಿಯ ಫೈನಲ್ ಪ್ರವೇಶಿಸಿದ್ದ ಅವರು ಟ್ರೋಫಿ ಗೆಲ್ಲಲು ವಿಫಲರಾಗಿದ್ದರು. ಆ ನಿರಾಶೆಯನ್ನು ಮರೆಸುವ ಅವಕಾಶ ದೊರೆತಿದೆ.

ಸೆಮಿಫೈನಲ್‌ನಲ್ಲಿ ಸೊಗಸಾದ ಆಟವಾಡಿದ ಅವರು ಕೇವಲ 66 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು. ಮೊದಲ ಸೆಟ್ ಗೆಲ್ಲಲು 23 ನಿಮಿಷಗಳನ್ನು ತೆಗೆದುಕೊಂಡರು. ಪಂದ್ಯದಲ್ಲಿ ನಾಲ್ಕು ಗೇಮ್‌ಗಳನ್ನು ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟರು.

ಗಾರ್ಸಿಯಾ ಅವರ 13 ಪಂದ್ಯಗಳ ಗೆಲುವಿನ ಓಟ ಈ ಸೋಲಿನೊಂದಿಗೆ ಕೊನೆಗೊಂಡಿತು. ಇಲ್ಲಿಗೆ ಬರುವ ಮುನ್ನ ಅವರು ಸಿನ್ಸಿನಾಟಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದರು.

ಮುಖ್ಯಾಂಶಗಳು

- ಇಬ್ಬರಿಗೂ ಇದು ಮೊದಲ ಫೈನಲ್
- ಇಲ್ಲಿ ಫೈನಲ್ ಪ್ರವೇಶಿಸಿದ ಆಫ್ರಿಕಾದ ಮೊದಲ ಮಹಿಳೆ ಜಬೇರ್
- ವಿಂಬಲ್ಡನ್ ಫೈನಲ್‌ನಲ್ಲಿ ಸೋತಿದ್ದ ಟ್ಯುನಿಷಿಯಾ ಆಟಗಾರ್ತಿ

'ವಿಂಬಲ್ಡನ್ ಫೈನಲ್‌ನಲ್ಲಿ ಸೋಲು ಎದುರಾದ ಬಳಿಕ ನನ್ನ ಮೇಲಿನ ಒತ್ತಡ ಹೆಚ್ಚಿತ್ತು. ಇಲ್ಲಿ ಫೈನಲ್ ಪ್ರವೇಶಿಸಿರುವುದರಿಂದ ಅಲ್ಪ ನಿರಾಳ ಆಗಿದ್ದೇನೆ' ಎಂದು ಜಬೇರ್ ಪ್ರತಿಕ್ರಿಯಿಸಿದ್ದಾರೆ.

ಸ್ವಟೆಕ್ ಅವರು ಫೈನಲ್ ಪ್ರವೇಶಿಸಲು ಅಲ್ಪ ಪರಿಶ್ರಮಪಡಬೇಕಾಯಿತು. ಸಬಲೆಂಕಾ ಮೊದಲ ಸೆಟ್‌ಅನ್ನು 6–3 ರಲ್ಲಿ ಜಯಿಸಿ ಉತ್ತಮ ಆರಂಭ ಪಡೆದರು. ಎರಡನೇ ಸೆಟ್‌ನಲ್ಲಿ ಶಿಸ್ತಿನ ಆಟವಾಡಿದ ಪೋಲೆಂಡ್‌ನ ಆಟಗಾರ್ತಿ ಸಮಬಲ ಸಾಧಿಸಿದರು.

ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಜಿದ್ದಾಜಿದ್ದಿನ ಹೋರಾಟ ನಡೆಯಿತು. ಎದುರಾಳಿಯ ಸರ್ವ್ ಬ್ರೇಕ್ ಮಾಡಿದ ಸಬಲೆಂಕಾ 4–2 ರಲ್ಲಿ ಮುನ್ನಡೆ ಪಡೆದರು. ಒತ್ತಡಕ್ಕೆ ಒಳಗಾದರೂ ಧೃತಿಗೆಡದೆ ಮರುಹೋರಾಟ ನಡೆಸಿದ ಸ್ವಟೆಕ್ ಮುಂದಿನ ನಾಲ್ಕೂ ಗೇಮ್‌ಗಳನ್ನು ಗೆದ್ದುಕೊಂಡು ಫೈನಲ್‌ಗೆ ಲಗ್ಗೆಯಿಟ್ಟರು. ಕೊನೆಯ 20 ಪಾಯಿಂಟ್‌ಗಳಲ್ಲಿ 16ನ್ನು ಕೂಡಾ ಸ್ವಟೆಕ್ ತಮ್ಮದಾಗಿಸಿಕೊಂಡರು.

ಪುರುಷರ ಸೆಮಿ ಹೋರಾಟ: ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್– ಅಮೆರಿಕದ ಫ್ರಾನ್ಸೆಸ್ ಟೈಫೊ ಹಾಗೂ ನಾರ್ವೆಯ ಕಾಸ್ಪರ್ ರೂಡ್– ರಷ್ಯಾದ ಕರೆನ್ ಕಚನೊವ್ ಅವರು ಪೈಪೋಟಿ ನಡೆಸಲಿದ್ದಾರೆ.

ಸೆಮಿ ಮೇಲೆ ಬಿಎಫ್‌ಸಿ ಕಣ್ಣು

ಕೋಲ್ಕತ್ತ: ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ನಾಲ್ಕರ ಘಟ್ಟದ ಮೇಲೆ ಕಣ್ಣಿಟ್ಟಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡಕ್ಕೆ ಶನಿವಾರ ಒಡಿಶಾ ಎಫ್‌ಸಿ ಸವಾಲು ಎದುರಾಗಿದೆ.

ಇಲ್ಲಿನ ಕಿಶೋರ ಭಾರತಿ ಕ್ರೀಡಾಂಗಣದಲ್ಲಿ ನಡೆಯುವ ಕ್ವಾರ್ಟರ್‌ಫೈನಲ್‌ನಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ.

ಎ ಗುಂಪಿನಲ್ಲಿ ಆಡಿದ ನಾಲ್ಕು ಪಂದ್ಯಗಳ ಪೈಕಿ ಮೂರರಲ್ಲಿ ಬಿಎಫ್‌ಸಿ ಜಯ ಸಾಧಿಸಿದೆ. ಇದರೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿದೆ. ಎರಡು ಪಂದ್ಯಗಳನ್ನು ಇದೇ ಕ್ರೀಡಾಂಗಣದಲ್ಲಿ ಆಡಿರುವುದರಿಂದ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಗೆಲುವಿನ ಛಲದಲ್ಲಿದೆ. ಒಡಿಶಾ ಡಿ ಗುಂಪಿನಲ್ಲಿ ಆಡಿದ ನಾಲ್ಕೂ ಪಂದ್ಯಗಳನ್ನು ಗೆದ್ದು ಅಗ್ರಸ್ಥಾನ ಗಳಿಸಿತ್ತು.

ಉಭಯ ತಂಡಗಳು ಫಾರ್ವರ್ಡ್ ಆಟಗಾರರನ್ನು ಹೆಚ್ಚು ಅವಲಂಬಿಸಿವೆ. ಗುಂಪು ಹಂತದಲ್ಲಿ ಬಿಎಫ್‌ಸಿಯ ಎಂಟು ಗೋಲುಗಳ ಪೈಕಿ ಏಳು ಗೋಲುಗಳನ್ನು ಸ್ಟ್ರೈಕರ್‌ಗಳಾದ ಚೆಟ್ರಿ, ರಾಯ್ ಕೃಷ್ಣ ಮತ್ತು ಶಿವ ಶಕ್ತಿ ಹಂಚಿಕೊಂಡಿದ್ದು ಈ ಪಂದ್ಯದಲ್ಲಿಯೂ ಅದೇ ರೀತಿಯ ಸಾಮರ್ಥ್ಯ ತೋರುವ ವಿಶ್ವಾಸ ದಲ್ಲಿದ್ದಾರೆ.

ಪಂದ್ಯ ಆರಂಭ: ಸಂಜೆ 6

ನೇರ ಪ್ರಸಾರ: ಸ್ಪೋರ್ಟ್ಸ್ 18, ವೂಟ್ ಆ್ಯಪ್

ಇಂಗ್ಲೆಂಡ್ –ದಕ್ಷಿಣ ಆಫ್ರಿಕಾ ಟೆಸ್ಟ್ 3 ದಿನಕ್ಕೆ ಸೀಮಿತ

ಲಂಡನ್ (ಎಪಿ): ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಮೂರನೇ ಹಾಗೂ ನಿರ್ಣಾಯಕ ಟೆಸ್ಟ್ ಮೂರು ದಿನಕ್ಕೆ ಸೀಮಿತಗೊಂಡಿದೆ.

ಗುರುವಾರ ಮಳೆಯಿಂದಾಗಿ ಮೊದಲ ದಿನದಾಟ ರದ್ದಾಗಿತ್ತು. ಶುಕ್ರವಾರ 2ನೇ ದಿನ ಬ್ರಿಟನ್ ರಾಣಿ ಎರಡನೇ ಎಲಿಜಬೆತ್ ಅವರ ನಿಧನದ ಕಾರಣ ರದ್ದುಗೊಂಡಿದೆ.

ಏಷ್ಯಾ ಕಪ್ ಕ್ರಿಕೆಟ್: ಹಸರಂಗ, ನಿಸಾಂಕ ಮಿಂಚು

ಲಂಕಾಕ್ಕೆ ಮಣಿದ ಪಾಕಿಸ್ತಾನ

ವಿಕೆಟ್ ಪಡೆದ ವನಿಂದು ಹಸರಂಗ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಏಷ್ಯಾ ಕಪ್ ಯುಎಇ 2022

ದುಬೈ (ಪಿಟಿಐ): ಏಷ್ಯಾಕಪ್ ಟಿ20 ಟೂರ್ನಿಯ ಫೈನಲ್‌ನ 'ರಿಹರ್ಸಲ್' ಎನಿಸಿದ್ದ ಸೂಪರ್ ಫೋರ್ ಹಂತದ ಕೊನೆಯ ಪಂದ್ಯದಲ್ಲಿ ಶ್ರೀಲಂಕಾ ತಂಡ, ಪಾಕಿಸ್ತಾನ ವಿರುದ್ಧ ಐದು ವಿಕೆಟ್‌ಗಳ ಜಯ ಸಾಧಿಸಿತು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಇವೆರಡು ತಂಡಗಳು ಮತ್ತೆ ಮುಖಾಮುಖಿಯಾಗಲಿವೆ. ಈ ಗೆಲುವು ದಸುನ್ ಶನಕ ಬಳಗದ ಆತ್ಮವಿಶ್ವಾಸ ಹೆಚ್ಚಿಸಿದೆ.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬಾಬರ್ ಅಜಂ ಬಳಗ 19.1 ಓವರ್‌ಗಳಲ್ಲಿ 121 ರನ್‌ಗಳಿಗೆ ಆಲೌಟಾಯಿತು. ಲಂಕಾ 17 ಓವರ್‌ಗಳಲ್ಲಿ 5 ವಿಕೆಟ್‌ಗೆ 124 ರನ್ ಗಳಿಸಿ ಜಯಿಸಿತು.

ವನಿಂದು ಹಸರಂಗ (21ಕ್ಕೆ 3) ಮತ್ತು ತಲಾ ಎರಡು ವಿಕೆಟ್ ಪಡೆದ ಮಹೀಶ್ ತೀಕ್ಷಣ ಹಾಗೂ ಪ್ರಮೋದ್ ಮದು ಶನ್ ಅವರು ಲಂಕಾ ಪರ ಚುರುಕಿನ ದಾಳಿ ನಡೆಸಿದರು. ಆರಂಭಿಕ ಬ್ಯಾಟರ್ ಪಥುಮ್ ನಿಸಾಂಕ (ಔಟಾಗದೆ 55, 48 ಎ) ಅವರು ಜವಾಬ್ದಾರಿಯುತ ಆಟವಾಡಿ ತಂಡದ ಗೆಲುವಿನ ಹಾದಿ ಸುಗಮಗೊಳಿಸಿದರು.

ಟಾಸ್ ಗೆದ್ದ ಲಂಕಾ ಮೊದಲು ಬೌಲಿಂಗ್ ನಡೆಸಲು ನಿರ್ಧರಿಸಿತು. ಬಾಬರ್ ಅಜಂ (30, 29 ಎ., 4X2) ಮತ್ತು ಮೊಹಮ್ಮದ್ ನವಾಜ್ (26 ರನ್, 18 ಎ) ಮಾತ್ರ ಪಾಕ್ ಪರ ಉತ್ತಮ ಆಟವಾಡಿದರು. ಉಳಿದವರಿಗೆ ಲಂಕಾ ಬೌಲಿಂಗ್ ದಾಳಿಯನ್ನು ಎದುರಿಸಲು ಆಗಲಿಲ್ಲ.

ಸಂಕ್ಷಿಪ್ತ ಸ್ಕೋರ್: ಪಾಕಿಸ್ತಾನ 19.1 ಓವರ್‌ಗಳಲ್ಲಿ 121 (ಮೊಹಮ್ಮದ್ ರಿಜ್ವಾನ್ 14, ಬಾಬರ್ ಅಜಂ 30, ಮೊಹಮ್ಮದ್ ನವಾಜ್ 26, ವನಿಂದು ಹಸರಂಗ 21ಕ್ಕೆ 3, ಮಹೀಶ್ ತೀಕ್ಷಣ 21ಕ್ಕೆ 2, ಪ್ರಮೋದ್ ಮದುಶನ್ 21ಕ್ಕೆ 2, ಧನಂಜಯ ಡಿಸಿಲ್ವಾ 18ಕ್ಕೆ 1, ಚಮಿಕ ಕರುಣರತ್ನೆ 4ಕ್ಕೆ 1)

ಶ್ರೀಲಂಕಾ: 17 ಓವರ್‌ಗಳಲ್ಲಿ 5 ವಿಕೆಟ್‌ಗೆ 124 (ಪಥುಮ್ ನಿಸಾಂಕ ಔಟಾಗದೆ 55, ಭಾನುಕ ರಾಜಪಕ್ಸ 24, ದಸುನ್ ಶನಕ 21, ಮೊಹಮ್ಮದ್ ಹಸನೈನ್ 21ಕ್ಕೆ 2, ಹ್ಯಾರಿಸ್ ರವೂಫ್ 19ಕ್ಕೆ 2) ಫಲಿತಾಂಶ: ಶ್ರೀಲಂಕಾಕ್ಕೆ 5 ವಿಕೆಟ್ ಗೆಲುವು

ಕೆಎಸ್‌ಸಿಎ ಇಲೆವನ್‌ಗೆ ಅಭಿನವ್ ನಾಯಕ

ಪ್ರಜಾವಾಣಿ ವಾರ್ತೆ



ಅಭಿನವ್

ಬೆಂಗಳೂರು: ಛತ್ತೀಸಗಡದ ರಾಯಪುರದಲ್ಲಿ ಇದೇ 14ರಿಂದ ನಡೆಯಲಿರುವ ಟ್ವೆಂಟಿ–20 ಕಪ್ ಟೂರ್ನಿಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಇಲೆವನ್ ತಂಡವನ್ನು ಪ್ರಕಟಿಸಲಾಗಿದ್ದು, ಅಭಿನವ್ ಮನೋಹರ್ ನಾಯಕರಾಗಿ ಆಯ್ಕೆಯಾಗಿದ್ದಾರೆ.

ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಪ್ರಕಟಿಸಿದ ತಂಡ ಇಂತಿದೆ: ಅಭಿನವ್ ಮನೋಹರ್ (ನಾಯಕ), ಲವನೀತ್ ಸಿಸೋಡಿಯಾ, ಶರತ್ ಬಿ.ಆರ್. (ಇಬ್ಬರೂ ವಿಕೆಟ್ ಕೀಪರ್), ಚೇತನ್ ಎಲ್.ಆರ್, ರೋಹನ್ ಪಾಟೀಲ್, ನಿಕಿನ್ ಜೋಸ್ ಎಸ್.ಜೆ, ಶುಭಾಂಗ್ ಹೆಗ್ಡೆ (ಉಪನಾಯಕ), ರಿಷಿ ಬೋಪಣ್ಣ, ಅವಿನಾಶ್ ಡಿ, ವಿದ್ಯಾಧರ್ ಪಾಟೀಲ, ವೈಶಾಖ ವಿ, ವಿದ್ವತ್ ಕಾವೇರಪ್ಪ, ಜಸ್ವಂತ್ ಆಚಾರ್ಯ, ಪ್ರಣವ್ ಭಾಟಿಯಾ, ಮತ್ತು ಆದಿತ್ಯ ಗೋಯಲ್.

ಕೋಚ್: ಪಿ.ವಿ.ಶಶಿಕಾಂತ್, ಫಿಸಿಯೊ: ಗೌತಮ್ ಎಚ್.ಎಸ್, ಮ್ಯಾನೇಜರ್: ಅನುತೋಷ್ ಪೋಳ್, ವಿಡಿಯೊ ಅನಲಿಸ್ಟ್: ರಾಜೀವ್ ಪಿ, ಮಸಾಜ್ ತಜ್ಞ: ಸೋಮಸುಂದರ್ ಸಿ.ಎಂ.

'ಚುನಾವಣೆ ನಡೆಸದಿದ್ದರೆ ಐಒಎ ಅಮಾನತು'

ನವದೆಹಲಿ (ಪಿಟಿಐ): 'ಡಿಸೆಂಬರ್ ಒಳಗಾಗಿ ಚುನಾವಣೆ ನಡೆಸದಿದ್ದರೆ ಅಮಾನತು ಕ್ರಮ ಜರುಗಿಸಲಾಗುವುದು' ಎಂದು ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ), ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಎಚ್ಚರಿಸಿದೆ.

ಸ್ವಿಟ್ಜರ್‌ಲೆಂಡ್‌ನ ಲಾಸನ್‌ನಲ್ಲಿ ಗುರುವಾರ ನಡೆದ ಐಒಸಿ ಆಡಳಿತ ಮಂಡಳಿ ಸಭೆಯಲ್ಲಿ ಸಮಿತಿಯು ಈ ನಿಲುವು ತೆಗೆದುಕೊಂಡಿದೆ.

'ಆಂತರಿಕ ಕಚ್ಚಾಟದಿಂದ ಐಒಎ ಆಡಳಿತದಲ್ಲಿ ಗೊಂದಲ ಉಂಟಾಗಿರುವುದು ಮತ್ತು ಈ ಪ್ರಕರಣ ನ್ಯಾಯಾಲಯದಲ್ಲಿರುವುದು ಐಒಸಿ ಗಮನಕ್ಕೆ ಬಂದಿದೆ. ಆದ್ದರಿಂದ ಅಂತಿಮ ಎಚ್ಚರಿಕೆ ನೀಡಲು ನಿರ್ಧರಿಸಿದೆ. ಐಒಸಿಯ ಮುಂದಿನ ಆಡಳಿತ ಮಂಡಳಿ ಸಭೆ 2022ರ ಡಿಸೆಂಬರ್‌ನಲ್ಲಿ ನಡೆಯಲಿದ್ದು, ಅದಕ್ಕೂ ಮುನ್ನ ಚುನಾವಣೆ ನಡೆಸದಿದ್ದರೆ ತಕ್ಷಣದಿಂದಲೇ ಅಮಾನತು ಕ್ರಮ ಜರುಗಿಸಲಾಗುವುದು' ಎಂದು ಐಒಎಗೆ ಬರೆದ ಪತ್ರದಲ್ಲಿ ತಿಳಿಸಿದೆ.

'ಹೊಸ ಆಡಳಿತ ಬರುವವರೆಗೆ ಐಒಸಿಯು ಐಒಎ ಕಾರ್ಯದರ್ಶಿ ರಾಜೀವ್ ಮೆಹ್ತಾ ಅವರೊಂದಿಗೆ ಮಾತ್ರ ಅಧಿಕೃತವಾಗಿ ಸಂವಹನ ನಡೆಸಲಿದೆ. ಹಂಗಾಮಿ ಅಧ್ಯಕ್ಷರನ್ನು ನೇಮಿಸಿದರೆ ಅವರನ್ನು ಅಂಗೀಕರಿಸುವುದಿಲ್ಲ' ಎಂದು ಪತ್ರದಲ್ಲಿ ಸ್ಪಷ್ಟಪಡಿಸಿದೆ.

ಕಿಕ್‌ಸ್ಟಾರ್ಟ್, ಪಿಂಕ್ ಪ್ಯಾಂಥರ್ಸ್‌ಗೆ ಜಯ

ಬೆಂಗಳೂರು: ಕಿಕ್‌ಸ್ಟಾರ್ಟ್ ಮತ್ತು ಪಿಂಕ್ ಪ್ಯಾಂಥರ್ಸ್ ತಂಡಗಳು ಕರ್ನಾಟಕ ವಿಮೆನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದವು.

ಶುಕ್ರವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ 5–0ಯಿಂದ ಮಾಡರ್ನ್ ಗರ್ಲ್ಸ್ ಎದುರು ಗೆದ್ದಿತು. ಇನ್ನೊಂದು ಪಂದ್ಯದಲ್ಲಿ ಪಿಂಕ್ ಪ್ಯಾಂಥರ್ಸ್ 4–0ಯಿಂದ ರೆಬೆಲ್ಸ್ ವಿಮೆನ್ಸ್ ಎಫ್‌ಸಿ ಎದುರು ಜಯ ಸಾಧಿ ಸಿತು. ಮತ್ತೊಂದು ಹಣಾ ಹಣಿಯಲ್ಲಿ ಕೆಂಪ್ 3–1ರಿಂದ ಪರಿಕ್ರಮ ಎದುರು ಜಯ ಸಾಧಿಸಿತು.

ಜೂರಿಕ್‌ನಲ್ಲಿ ನಡೆದ ಡೈಮಂಡ್ ಲೀಗ್ ಫೈನಲ್ಸ್‌ನಲ್ಲಿ ಗೆದ್ದ ಭಾರತದ ನೀರಜ್ ಚೋಪ್ರಾ

ಚಿನ್ನದ ಹುಡುಗನಿಗೆ 'ವಜ್ರ'ದ ಹೊಳಪು

ಜೂರಿಕ್, ಸ್ವಿಟ್ಜರ್‌ಲೆಂಡ್ (ಪಿಟಿಐ): ವಿಶ್ವದ ಘಟಾನುಘಟಿ ಅಥ್ಲೀಟ್‌ಗಳ ಹೋರಾಟಕ್ಕೆ ವೇದಿಕೆಯೊದಗಿಸುವ ಡೈಮಂಡ್ ಲೀಗ್ ಫೈನಲ್ಸ್‌ನಲ್ಲಿ ಗೆದ್ದ ಭಾರತದ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ, ಮತ್ತೊಂದು ಚಾರಿತ್ರಿಕ ಸಾಧನೆಗೆ ಭಾಜನರಾದರು.

ಸ್ವಿಟ್ಜರ್‌ಲೆಂಡ್‌ನ ಜೂರಿಕ್‌ನಲ್ಲಿ ಗುರುವಾರ ನಡೆದ ಜಿದ್ದಾಜಿದ್ದಿನ ಸ್ಪರ್ಧೆಯಲ್ಲಿ 'ಚಿನ್ನದ ಹುಡುಗ' ನೀರಜ್, 88.44 ಮೀ. ದೂರ ಎಸೆದು ಚಾಂಪಿಯನ್‌ಪಟ್ಟ ತಮ್ಮದಾಗಿಸಿಕೊಂಡರು. ಭಾರತದ ಅಥ್ಲೀಟ್‌ವೊಬ್ಬರು ಡೈಮಂಡ್ ಲೀಗ್ ಫೈನಲ್ಸ್‌ನಲ್ಲಿ ಗೆದ್ದದ್ದು ಇದೇ ಮೊದಲು.

24 ವರ್ಷದ ನೀರಜ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದರಲ್ಲದೆ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಜಯಿಸಿದ್ದರು. ಇದೀಗ ಡೈಮಂಡ್ ಲೀಗ್‌ನಲ್ಲಿ ಚಾಂಪಿಯನ್ ಆಗಿದ್ದಾರೆ. 13 ತಿಂಗಳ ಅವಧಿಯಲ್ಲಿ ಈ ಎಲ್ಲ ಸಾಧನೆ ಮೂಡಿ ಬಂದಿದೆ.

ನೀರಜ್ ಅವರ ಮೊದಲ ಥ್ರೋ ಫೌಲ್ ಆಯಿತು. ಎರಡನೇ ಪ್ರಯತ್ನದಲ್ಲಿ 88.44 ಮೀ. ದೂರ ಎಸೆದರು. ಈ ಸಾಧನೆ ಅಗ್ರಸ್ಥಾನ ತಂದುಕೊಟ್ಟಿತು.

ಮುಖ್ಯಾಂಶಗಳು

- ಆರು ಸ್ಪರ್ಧಿಗಳಲ್ಲಿ ಅಗ್ರಸ್ಥಾನ
- ಋತುವಿನ ಕೊನೆಯ ಕೂಟದಲ್ಲಿ ಮಿಂಚಿನ ಪ್ರದರ್ಶನ
- ಯಾಕುಬ್ ವಾಡ್ಲೇಖ್‌ಗೆ ಎರಡನೇ ಸ್ಥಾನ

ಅವರ ವೃತ್ತಿಜೀವನದ ನಾಲ್ಕನೇ ಅತ್ಯುತ್ತಮ ಪ್ರದರ್ಶನ ಇದಾಗಿದೆ. ಬಳಿಕದ ನಾಲ್ಕು ಪ್ರಯತ್ನಗಳಲ್ಲಿ 88 ಮೀ., 86.11 ಮೀ., 87 ಮೀ., ಮತ್ತು 83.60 ಮೀ. ದೂರವನ್ನು ಕಂಡುಕೊಂಡರು.

ಒಲಿಂಪಿಕ್ ಬೆಳ್ಳಿ ಪದಕ ವಿಜೇತ ಜೆಕ್ ರಿಪಬ್ಲಿಕ್‌ನ ಯಾಕುಬ್ ವಾಡ್ಲೇಖ್ 86.94 ಮೀ. ಸಾಧನೆಯೊಂದಿಗೆ ಎರಡನೇ ಸ್ಥಾನ ಪಡೆದರೆ, ಜರ್ಮನಿಯ ಜೂಲಿಯನ್ ವೆಬರ್ (83.73 ಮೀ.) ಮೂರನೆಯವರಾದರು.

ನೀರಜ್ ಅವರು ಮಿರುಗುವ ಡೈಮಂಡ್ ಟ್ರೋಫಿಯ ಜತೆಗೆ ₹ 23.86 ಲಕ್ಷ ನಗದು ಬಹುಮಾನ ತಮ್ಮದಾಗಿಸಿಕೊಂಡರು. 2023ರಲ್ಲಿ ಹಂಗರಿಯ ಬುಡಾಪೆಸ್ಟ್‌ನಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು 'ವೈಲ್ಡ್‌ಕಾರ್ಡ್' ಕೂಡಾ ಪಡೆದುಕೊಂಡರು.

'90 ಮೀ. ಸಾಧನೆ ನಿರೀಕ್ಷಿಸಿದ್ದೆ'

'ಈ ಸ್ಪರ್ಧೆಯಲ್ಲಿ 90 ಮೀಟರ್ಸ್ ಗಡಿ ದಾಟುವ ನಿರೀಕ್ಷೆ ಇಟ್ಟುಕೊಂಡಿದ್ದೆ. ಅದು ಸಾಧ್ಯವಾಗಲಿಲ್ಲ. ಆದರೂ ನಿರಾಸೆಯಾಗಿಲ್ಲ. ಡೈಮಂಡ್ ಟ್ರೋಫಿ ನನ್ನ ಕೈಸೇರಿದೆ. ಇಲ್ಲಿ ಗೆಲ್ಲುವುದು ಮುಖ್ಯವಾಗಿತ್ತು' ಎಂದು ನೀರಜ್ ಪ್ರತಿಕ್ರಿಯಿಸಿದ್ದಾರೆ.

'ಕುಟುಂಬ ಸದಸ್ಯರ ಮುಂದೆ ಈ ಸಾಧನೆ ಮಾಡಿದ್ದೇನೆ. ನನ್ನ ಅಂತರರಾಷ್ಟ್ರೀಯ ಸ್ಪರ್ಧೆಯನ್ನು ನೋಡಲು ಅವರು ಇದೇ ಮೊದಲ ಬಾರಿ ಬಂದಿದ್ದರು. ರಜಾದಿನಗಳನ್ನು ಕಳೆಯಲು ಅವರ ಜತೆ ಪ್ಯಾರಿಸ್‌ಗೆ ತೆರಳುವೆ' ಎಂದರು.

ನೀರಜ್ ಚೋಪ್ರಾ ಟ್ರೋಫಿಯೊಂದಿಗೆ ಸಂಭ್ರಮಿಸಿದರು– ಎಪಿ ಚಿತ್ರ

ಇದು ಅವರ ಮೂರನೇ ಡೈಮಂಡ್ ಲೀಗ್ ಫೈನಲ್ಸ್ ಆಗಿತ್ತು. 2017 ಮತ್ತು 2018 ರಲ್ಲಿ ಪಾಲ್ಗೊಂಡಿದ್ದ ಅವರು ಕ್ರಮವಾಗಿ ಏಳು ಹಾಗೂ ನಾಲ್ಕನೇ ಸ್ಥಾನ ಗಳಿಸಿದ್ದರು.

ಫೈನಲ್ಸ್‌ನಲ್ಲಿ ಆರು ಸ್ಪರ್ಧಿಗಳು ಕಣದಲ್ಲಿದ್ದರು. ವಿಶ್ವ ಚಾಂಪಿಯನ್ ಗ್ರೆನಾಡದ ಆ್ಯಂಡರ್‌ಸನ್ ಪೀಟರ್ಸ್ ಅವರು ಪಾಲ್ಗೊಂಡಿರಲಿಲ್ಲ. ಕಳೆದ ತಿಂಗಳು ಅವರ ಮೇಲೆ ಹಲ್ಲೆ ನಡೆದು ಗಾಯಗೊಂಡಿದ್ದರು. ಇನ್ನೂ ಚೇತರಿಸಿಕೊಳ್ಳದ ಕಾರಣ ಈ ಪ್ರತಿಷ್ಠಿತ ಕೂಟದಿಂದ ಹಿಂದೆ ಸರಿದಿದ್ದರು.

ಇದರಿಂದ ಚೋಪ್ರಾ ಮತ್ತು ವಾಡ್ಲೇಖ್ ನಡುವೆ ನೇರ ಪೈಪೋಟಿ ಏರ್ಪಟ್ಟಿತ್ತು. ಭಾರತದ ಸ್ಪರ್ಧಿ 31 ವರ್ಷದ ವಾಡ್ಲೇಖ್ ಅವರನ್ನು ಈ ಋತುವಿನಲ್ಲಿ ಆರನೇ ಬಾರಿ ಹಿಂದಿಕ್ಕಿದ್ದಾರೆ.

ನೀರಜ್ ಈ ವರ್ಷ ಆರು ಬಾರಿ 88 ಮೀ. ಗಿಂತ ಹೆಚ್ಚು ದೂರ ಕಂಡುಕೊಂಡಿದ್ದಾರೆ. ಅವರ ಶ್ರೇಷ್ಠ ಸಾಧನೆ 89.94 ಮೀ. ಆಗಿದೆ.

ಅಮೆರಿಕದ ಯೂಜಿನ್‌ನಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್ ವೇಳೆ ಗಾಯಗೊಂಡಿದ್ದ ಅವರು ಬರ್ಮಿಂಗ್‌ಹ್ಯಾಂ ಕಾಮನ್‌ವೆಲ್ತ್ ಕೂಟದಿಂದ ಹಿಂದೆ ಸರಿದಿದ್ದರು. ಆ ಬಳಿಕ ಚೇತರಿಸಿಕೊಂಡು ಆ.26 ರಂದು ನಡೆದಿದ್ದ ಲಾಸನ್ ಡೈಮಂಡ್ ಲೀಗ್ ಕೂಟದಲ್ಲಿ ಸ್ಪರ್ಧಿಸಿದ್ದರು. ಅಲ್ಲಿ ಗೆದ್ದು, ಜೂರಿಕ್ ಫೈನಲ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡಿದ್ದರು.

ಇಂಡೊನೇಷ್ಯಾ ತಂಡದ ಎಂಜೆಲಿಕಾ ಜೆನ್ನಿಫರ್ (ಎಡ) ಮತ್ತು ನೇತನಿಯಾ ನಿಕೋಲ್ (ಬಲ) ಅವರು ಭಾರತದ ಮನ್‌ಮೀತ್ ಕೌರ್ ಅವರಿಂದ ಚೆಂಡು ಕಸಿದುಕೊಳ್ಳಲು ಯತ್ನಿಸಿದರು– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಬ್ಯಾಸ್ಕೆಟ್‌ಬಾಲ್: ಭಾರತಕ್ಕೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊನೆಯವರೆಗೂ ರೋಚಕತೆ ಉಳಿಸಿಕೊಂಡ ಪಂದ್ಯದಲ್ಲಿ ಇಂಡೊನೇಷ್ಯಾ ಎದುರು ಎಡವಿದ ಭಾರತ ತಂಡವು 18 ವರ್ಷದೊಳಗಿನವರ ಮಹಿಳಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಎ ಡಿವಿಷನ್‌ನಲ್ಲಿ ಎಂಟನೇ ಸ್ಥಾನ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಹಣಾಹಣಿಯಲ್ಲಿ ಭಾರತ 45–48ರಿಂದ ನಿರಾಸೆ ಅನು ಭವಿಸಿತು.

ಮೊದಲ ಕ್ವಾರ್ಟರ್‌ನಲ್ಲಿ ಇಂಡೊನೇಷ್ಯಾ ಆಟಗಾರ್ತಿಯರು 15–5ರಿಂದ ಮುನ್ನಡೆ ಗಳಿಸಿದ್ದರು. ಆದರೆ ಎರಡನೇ ಕ್ವಾರ್ಟರ್ ಅಂತ್ಯದ ವೇಳೆಗೆ ಭಾರತ 27–22ರ ಮೇಲುಗೈ ಗಳಿಸಿತು. 3ನೇ ಕ್ವಾರ್ಟರ್‌ನಲ್ಲೂ 41–38ರಿಂದ ಮುನ್ನಡೆ ಉಳಿಸಿಕೊಂಡಿತು. ಕೊನೆಯ ಕ್ವಾರ್ಟರ್‌ನಲ್ಲಿ ಪಂದ್ಯ 45–45ರಿಂದ ಸಮಬಲವಾಗಿದ್ದ ವೇಳೆ ಕೇವಲ 2 ಸೆಕೆಂಡು ಉಳಿದಿತ್ತು. ಈ ಹಂತದಲ್ಲಿ ಚುರುಕಿನ ಆಟವಾಡಿದ ಇಂಡೊನೇಷ್ಯಾ, ಜಯ ಕಸಿಯಿತು.ಇನ್ನೊಂದು ಪಂದ್ಯದಲ್ಲಿ ಚೀನಾ ತೈಪೆ 77–67ರಿಂದ ನ್ಯೂಜಿಲೆಂಡ್ ತಂಡವನ್ನು ಮಣಿಸಿತು.

ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್

ಅನೀಶ್, ಧೀನಿಧಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಗುವಾಹಟಿ: ಕರ್ನಾಟಕದ ಅನೀಶ್ ಎಸ್.ಗೌಡ ಮತ್ತು ಧೀನಿಧಿ ದೇಸಿಂಗು ಅವರು 75ನೇ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಚಿನ್ನ ಜಯಿಸಿದರು.

ಡಾ.ಜಾಕೀರ್ ಹುಸೇನ್ ಈಜು ಕೇಂದ್ರದಲ್ಲಿ ನಡೆಯುತ್ತಿರುವ ಕೂಟದ ಪುರುಷರ 800 ಮೀ. ಫ್ರೀಸ್ಟೈಲ್ ವಿಭಾಗದಲ್ಲಿ ಅನೀಶ್ 8 ನಿ. 23.17ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ಉತ್ತರ ಪ್ರದೇಶದ ಅನುರಾಗ್ ಆರ್ ಸಿಂಗ್ ಬೆಳ್ಳಿ ಹಾಗೂ ಆರ್‌ಎಸ್‌ಪಿಬಿಯ ಸುಶ್ರೂತ್ ಸೂರ್ಯ ಕಾಂತ್ ಅವರು ಕಂಚು ಗೆದ್ದುಕೊಂಡರು.

ಮಹಿಳೆಯರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಧೀನಿಧಿ 2 ನಿ. 9.29 ಸೆ.ಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದುಕೊಂಡರು. ಅಸ್ಸಾಂನ ಶಿವಾಂಗಿ ಶರ್ಮ ಎರಡನೇ ಹಾಗೂ ಕರ್ನಾಟಕದ ಎಸ್.ರುಜುಲಾ (2:10.52 ಸೆ.) ಅವರು ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ 4X200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕ ಚಿನ್ನ ಜಯಿಸಿತು. ತನಿಷಿ ಗುಪ್ತಾ, ಎಸ್. ರುಜುಲಾ, ಅದಿತಿ ಮತ್ತು ಧೀನಿಧಿ ಅವರನ್ನೊಳಗೊಂಡ ತಂಡ 8 ನಿ. 59.70 ಸೆ.ಗಳಲ್ಲಿ ಗುರಿ ತಲುಪಿತು. ಮಹಾರಾಷ್ಟ್ರ ಮತ್ತು ತಮಿಳುನಾಡು ಕ್ರಮವಾಗಿ 2 ಹಾಗೂ 3ನೇ ಸ್ಥಾನ ಗಳಿಸಿ ದವು.

ತನಿಷಿ ಗುಪ್ತಾ ಮಹಿಳೆಯರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ (1 ನಿ. 3.66 ಸೆ.) ಎರಡನೇ ಸ್ಥಾನ ಪಡೆದರು. ಅಸ್ಸಾಂನ ಆಸ್ತಾ ಚೌಧರಿ (1 ನಿ. 3.07 ಸೆ.) ಅವರು ಈ ವಿಭಾಗದಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಪುರುಷರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಆರ್.ಸಂಭವ್, ಕರ್ನಾಟಕಕ್ಕೆ ಕಂಚಿನ ಪದಕ ತಂದು ಕೊಟ್ಟರು. ಅವರು 55.69 ಸೆ.ಗಳಲ್ಲಿ ಗುರಿ ತಲುಪಿದರು. ಈ ಸ್ಪರ್ಧೆ ಯಲ್ಲಿ ಹರಿಯಾಣದ ಹರ್ಷ ಮತ್ತು ಅಸ್ಸಾಂನ ಬಿಕ್ರಮ್ ಚಾಂಗ್‌ಮಯ್ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದುಕೊಂಡರು.

ಶನಿವಾರ ಕೊನೆಯ ದಿನವಾಗಿದ್ದು, ಕರ್ನಾಟಕ ತಂಡ ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಧೀನಿಧಿ ದೇಸಿಂಗು

ಅನೀಶ್ ಗೌಡ

ಕ್ರಿಕೆಟ್: ರಹಾನೆ, ಜೈಸ್ವಾಲ್ ದ್ವಿಶತಕ

ಚೆನ್ನೈ (ಪಿಟಿಐ): ಅಜಿಂಕ್ಯ ರಹಾನೆ (ಬ್ಯಾಟಿಂಗ್ 207) ಮತ್ತು ಯಶಸ್ವಿ ಜೈಸ್ವಾಲ್ (228) ಅವರ ಭರ್ಜರಿ ದ್ವಿಶತಕ ನೆರವಿನಿಂದ ಪಶ್ಚಿಮ ವಲಯ ತಂಡ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಈಶಾನ್ಯ ವಲಯದ ವಿರುದ್ಧ ಬೃಹತ್ ಮೊತ್ತ ಕಲೆಹಾಕಿದೆ.

ಚೆನ್ನೈನಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಶುಕ್ರವಾರದ ಆಟದ ಅಂತ್ಯಕ್ಕೆ ಪಶ್ಚಿಮ ವಲಯ ಮೊದಲ ಇನಿಂಗ್ಸ್‌ನಲ್ಲಿ 2ಕ್ಕೆ 590 ರನ್ ಗಳಿಸಿದೆ. ರಹಾನೆ ಮತ್ತು ಜೈಸ್ವಾಲ್ ಎರಡನೇ ವಿಕೆಟ್‌ಗೆ 333 ರನ್ ಸೇರಿಸಿದರು.

ಪುದುಚೇರಿಯಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಪೂರ್ವ ವಲಯ ತಂಡ ಉತ್ತರ ವಲಯ ವಿರುದ್ಧ ಮೊದಲ ಇನಿಂಗ್ಸ್‌ನಲ್ಲಿ 397 ರನ್ ಪೇರಿಸಿದೆ. ವಿರಾಟ್ ಸಿಂಗ್ (117) ಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಶ್ಚಿಮ ವಲಯ 123 ಓವರ್‌ಗಳಲ್ಲಿ 2ಕ್ಕೆ 590 (ಪೃಥ್ವಿ ಶಾ 113, ಯಶಸ್ವಿ ಜೈಸ್ವಾಲ್ 228, ಅಜಿಂಕ್ಯ ರಹಾನೆ ಬ್ಯಾಟಿಂಗ್ 207, ರಾಹುಲ್ ತ್ರಿಪಾಠಿ ಬ್ಯಾಟಿಂಗ್ 25)

ಪುದುಚೇರಿ ಪಂದ್ಯ: ಮೊದಲ ಇನಿಂಗ್ಸ್: ಪೂರ್ವ ವಲಯ 136.4 ಓವರ್‌ಗಳಲ್ಲಿ 397 (ವಿರಾಟ್ ಸಿಂಗ್ 117, ಶಹಬಾಜ್ ಅಹ್ಮದ್ 62, ನವದೀಪ್ ಸೈನಿ 83ಕ್ಕೆ 3) ಉತ್ತರ ವಲಯ 13 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 65

ಎಐಟಿಎ ಟೆನಿಸ್: ವಂಶಿತಾಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ವಂಶಿತಾ ಪಠಾನಿಯಾ ಅವರು ಟಾಪ್‌ಸ್ಪಿನ್ ಎಐಟಿಎ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ವಂಶಿತಾ

ಇಲ್ಲಿಯ ಟಾಪ್ ಸ್ಪಿನ್ ಅಕಾಡೆಮಿಯಲ್ಲಿ ಶುಕ್ರವಾರ ನಡೆದ ₹ 1 ಲಕ್ಷ ಬಹುಮಾನ ಮೊತ್ತದ ಟೂರ್ನಿ ಯ ಫೈನಲ್‌ನಲ್ಲಿ ವಂಶಿತಾ ಅವರು 6-0, 6-2ರಿಂದ ಹೈದರಾ ಬಾದ್‌ನ ಅದಿತಿ ಅವರನ್ನು ಪರಾಭವಗೊಳಿಸಿದರು.

ಮಹಾರಾಷ್ಟ್ರದ ಬೇಲಾ ತಮಾಕರ್ ಮತ್ತು ಪೂಜಾ ಇಂಗಳೆ ಅವರು ಮಹಿಳಾ ಡಬಲ್ಸ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಫೈನಲ್‌ನಲ್ಲಿ ಈ ಜೋಡಿಯು 6-2, 7-6 (1) ರಿಂದ ಕರ್ನಾಟಕದ ಅವಳಿ ಸಹೋದರಿಯರಾದ ಪ್ರಗತಿ ಮತ್ತು ಪ್ರತಿಭಾ ಪ್ರಸಾದ್ ನಾರಾಯಣ್ ಎದುರು ಗೆದ್ದರು.